ವ್ಯಕ್ತಿತ್ವ ವಿಕಸನ ಅಧ್ಯಾತ್ಮ ಮಾಸಪತ್ರಿಕೆ

# ಮಲ್ಲಾರ

ಶ್ರೀ ಶಾರ್ವರಿ ಸಂವತ್ಸರ
ಚೈತ್ರ_ವೈಶಾಖ
ಏಪ್ರಿಲ್ 2020
₹ 12.00



ವಿಶೇಷ ಲೇಖನ

## ಶ್ರೀರಾಮಾ ನೀ ನಾಮಮು





## ಒಳ ಪುಟಗಳಲ್ಲಿ...


**ಶ್ರೀರಾಮಾ ನೀ ನಾಮಮು**
● ಶ್ರೀ. ಕೆ. ಭೀಮರಾವ್


6


**ಮೇಲುಕೋಟೆಯಿಂದ ಶ್ರೀರಂಗಂಗೆ...**
● ಡಾ. ಬಾಬು ಕೃಷ್ಣಮೂರ್ತಿ


10

**ಬಲಿ ವಿಜ್ಞಾನ ಪ್ರಾಪ್ತಿ**
● ನಂ. ನಾಗಲಕ್ಷ್ಮೀ


18

**ಕಶ್ಯಪ**
● ಡಾ. ಎಸ್. ಹೇಮಲತಾ


20




ಏಪ್ರಿಲ್–೨೦೨೦
ಶಾರ್ವರಿ ಸಂವತ್ಸರ
ಚೈತ್ರ–ವೈಶಾಖ


ಸಂಪುಟ ೨೦ ● ಸಂಚಿಕೆ ೪




**ಭಗೀರಥ ಚರಿತ್ರೆ**
● ವಾನರಾಶಿ ಬಾಲಕೃಷ್ಣ ಭಾಗವತರ್.


24

**ಕೀರ್ತಿಸೇನೆ**
● ಡಾ. ಎಸ್.ಆರ್. ಲೀಲಾ


28

**'ದಿಟವಾಗಿ ಹಸು ತಾಯಿಗಿಂತಲೂ ಹೆಚ್ಚು'**
● ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ


60



ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
**ಡಾ. ಎಂ.ಆರ್. ಜಯರಾಮ್**

ನಿರ್ವಾಹಕ ಸಂಪಾದಕರು
**ಡಾ. ಬಾಬು ಕೃಷ್ಣಮೂರ್ತಿ**

ಸಂಪಾದಕೀಯ ವಿಳಾಸ:
**ಶ್ರೀ ಯೋಗಿ ನಾರೇಯಣ ಅಧ್ಯಯನ ಕೇಂದ್ರ**
ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಸಂಕೀರ್ಣ,
ಎಂ.ಎಸ್.ಆರ್.ಐ.ಟಿ. ಪೋಸ್ಟ್, ನ್ಯೂ ಬಿಇಎಲ್ ರಸ್ತೆ,
ಬೆಂಗಳೂರು–560 054. ☎: 080–40502965 /7204095848
E-mail: mallaramagazine@hotmail.com

ಮುದ್ರಕರು:
**ಲಾವಣ್ಯ ಮುದ್ರಣ,**
ವಿದ್ಯಾಪೀಠ,
ಬೆಂಗಳೂರು–560 050.

ವಿನ್ಯಾಸ: **ಕಿಶೋರ್ ಕೆ.ಟಿ.,** ಮಂಡ್ಯ


# ನಿಮ್ಮೊಡನೆ...

**ಆತ್ಮೀಯ ಮಲ್ಲಾರ ಓದುಗರೇ ನಮಸ್ಕಾರ.**

ಮಲ್ಲಾರದ ಎಲ್ಲ ಓದುಗರಿಗೂ ಶ್ರೀರಾಮನವಮಿ ಶುಭಾಕಾಂಕ್ಷೆಗಳು.

ಏಪ್ರಿಲ್ ತಿಂಗಳು ಸಾಂಸ್ಕೃತಿಕ ಹಾಗೂ ಧಾರ್ಮಿಕ ದೃಷ್ಟಿಯಿಂದ ಒಂದು ಮಹತ್ತ್ವದ ತಿಂಗಳು.

ಮರ್ಯಾದಾ ಪುರುಷೋತ್ತಮ ಪ್ರಭು ಶ್ರೀರಾಮಚಂದ್ರನ ಹುಟ್ಟಿದ ದಿನದಿಂದ (ಶ್ರೀರಾಮನವಮಿ, ಏಪ್ರಿಲ್ 2) ಆರಂಭಗೊಳ್ಳುವ ಈ ತಿಂಗಳು ಅನೇಕ ಮಹಾನುಭಾವರ ಜನ್ಮದಿನಗಳಿಂದ ತುಂಬಿಕೊಂಡಿದೆ. ತ್ರೇತಾಯುಗದಿಂದ ಇಂದಿನವರೆಗೂ ಭಾರತೀಯ ಧರ್ಮ, ಸಂಸ್ಕೃತಿ, ಸಮಾಜ ಹಾಗೂ ಜೀವನ ಮೌಲ್ಯಗಳ ಮೇಲೆ ಅಪಾರ ಪ್ರಭಾವ ಬೀರಿರುವ ಶ್ರೀರಾಮ ಹಾಗೂ ರಾಮಾಯಣದ ಇತರ ಪಾತ್ರಗಳು ಇಂದಿಗೂ ಭಾರತೀಯರ ಜನಮಾನಸದಲ್ಲಿ ಜೀವಂತ. ಜೊತೆಗೆ ಈ ಶ್ರೀರಾಮನವಮಿಯ ಸಮಯಕ್ಕೆ ಸರಿಯಾಗಿ ಅಯೋಧ್ಯೆಯಲ್ಲಿ ರಾಮ ಜನಿಸಿದ ರಾಮಜನ್ಮಭೂಮಿಗೆ ಸಂಬಂಧಿಸಿದ ವಿವಾದಗಳೆಲ್ಲವೂ ಸಮಾಪ್ತಗೊಂಡು ಅಲ್ಲಿ ಶ್ರೀರಾಮ ಮಂದಿರದ ನಿರ್ಮಾಣದ ಶುಭ ಸೂಚನೆಗಳು ಕಂಡುಬರುತ್ತಿವೆ. ಈ ವರ್ಷದ ಶ್ರೀರಾಮನವಮಿ ಈ ಕಾರಣಕ್ಕಾಗಿಯೇ ಐತಿಹಾಸಿಕ ಮಹತ್ತ್ವ ಪಡೆದಿರುವಂತಹುದು.



ಇನ್ನು ಜೈನ ತೀರ್ಥಂಕರ ಮಹಾವೀರರ ಜಯಂತಿ (ಏಪ್ರಿಲ್ 6), ಸ್ವತಂತ್ರ ಭಾರತದ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಏಪ್ರಿಲ್ (14), ಅಕ್ಷ ತದಿಗೆ (ಏಪ್ರಿಲ್ 22), ಪರಶುರಾಮ ಜಯಂತಿ (ಏಪ್ರಿಲ್ 25) ಬಸವಣ್ಣನವರ ಜಯಂತಿ (ಏಪ್ರಿಲ್ 26), ಶ್ರೀ ಶಂಕರ ಜಯಂತಿ ಹಾಗೂ ಶ್ರೀ ರಾಮಾನುಜಾಚಾರ್ಯರ ಜಯಂತಿ (ಏಪ್ರಿಲ್ 28) ಭಗೀರಥ ಜಯಂತಿ (ಏಪ್ರಿಲ್ 29) ಮುಂತಾದವುಗಳಿಂದ ತುಂಬಿರುವ ಈ ತಿಂಗಳು ಬಹಳ ಪವಿತ್ರವಾದ ಮಾಸ.

ಮಲ್ಲಾರವು ಅದರ ಪ್ರಧಾನ ಸಂಪಾದಕರೂ ಕೈವಾರ ಶ್ರೀ ಯೋಗಿನಾರೇಯಣ ಮಠದ ಧರ್ಮಾಧಿಕಾರಿಗಳೂ ಆದ ಡಾ. ಎಂ.ಆರ್. ಜಯರಾಮ್‌ರವರ ಆಶಯಗಳಂತೆ ಮೂಡಿಬರುತ್ತಿರುವ ಮಾಸಪತ್ರಿಕೆ. ಅವರಿಗೆ ನಮ್ಮ ಧರ್ಮ, ಸಂಸ್ಕೃತಿ, ಪರಂಪರೆ, ಇತಿಹಾಸ, ಸಾಹಿತ್ಯಗಳ ಬಗ್ಗೆ ಬಹಳ ಆಸ್ಥೆ, ಕೈವಾರ ತಾತಯ್ಯನವರ ಅವಿಚ್ಛಿನ್ನ ಭಕ್ತರಾದ ಧರ್ಮಾಧಿಕಾರಿಗಳು ಮೇಲಿನ ವಿಷಯಗಳನ್ನು ಕುರಿತು ಕನ್ನಡಿಗರಿಗೆ ತಿಳಿಸಬೇಕೆನ್ನುವ ಕಾರಣದಿಂದಲೇ ಮಲ್ಲಾರ ಪತ್ರಿಕೆಯನ್ನು ನಡೆಸುತ್ತಿರುವುದು. ಇಂಥ ಮಹಾನುಭಾವರ ಆಶಯ ಈಡೆರುವಂತೆ ಮಾಡುವುದು ಎಲ್ಲ ಭಗವದ್ಭಕ್ತರ, ಸನಾತನ ಧರ್ಮ ಅನುಯಾಯಿಗಳ ಮುಖ್ಯ ಗುರಿಯಾಗಬೇಕು. ಮಲ್ಲಾರ ಪತ್ರಿಕೆ ಹೆಚ್ಚು ಹೆಚ್ಚು ಜನರಿಗೆ ತಲಪುವಂತೆ ಮಾಡಲು ನಿಮ್ಮ ಸಹಕಾರ ಬೇಕು. ನೀವು ಒಬ್ಬೊಬ್ಬರೂ ಒಬ್ಬೊಬ್ಬ ಮಲ್ಲಾರ ಚಂದಾದಾರರನ್ನು ಮಾಡಿ ನಿಮ್ಮ ಅಳಿಲು ಸೇವೆ ಸಲ್ಲಿಸಬೇಕೆಂದು ವಿನಂತಿ.

ನಿಮ್ಮ ವಿಶ್ವಾಸಿ
**ನಿರ್ವಾಹಕ ಸಂಪಾದಕ**


# ಪ್ರತಿಸ್ಪಂದನ

● ಮಾರ್ಚ್ ೨೦೨೦ರ ಸಂಚಿಕೆಯಲ್ಲಿ ಶ್ರೀ ಕೆ. ಭೀಮರಾವ್ ಅವರ 'ಶಾರ್ವರಿ ಸಂವತ್ಸರ' ಕುರಿತಾದ ಲೇಖನ ಬಹಳ ಸೊಗಸಾಗಿ, ಜನಸಾಮಾನ್ಯರ ಮನಮುಟ್ಟುವಂತೆ ಅತ್ಯುತ್ತಮವಾಗಿ ಮೂಡಿಬಂದಿದೆ. ಮಲ್ಲಾರ ಓದುಗರಿಗೆ ಸರಳವಾದ ರೀತಿಯಲ್ಲಿ "ಯುಗಾದಿ" ಹಬ್ಬದ ಆಚರಣೆಯ ಮಹತ್ತ್ವವನ್ನು ಉತ್ತಮವಾಗಿ ತಿಳಿಸಿಕೊಟ್ಟಿದ್ದಾರೆ. ಧನ್ಯವಾದಗಳು.

■ **ಶ್ರೀ ಮೋಹನ್ ಭೈರಶೆಟ್ಟಿ,** ಬೆಂಗಳೂರು–೫೬೦ ೦೬೧.

● ಡಾ. ಬಾಬು ಕೃಷ್ಣಮೂರ್ತಿ ಅವರು ಹೀಗೊಂದು ಅನಿಸಿಕೆಯಲ್ಲಿ ಬರೆದಿರುವ 'ಕಾಮನ ಹಬ್ಬದ ಹಿನ್ನೆಲೆ'ಯಲ್ಲಿ ದುಷ್ಟಶಕ್ತಿಯ ವಿರುದ್ಧ ದೈವೀಶಕ್ತಿಯ ಗೆಲುವಿನ ಸಂಕೇತವೆಂದು ಹೋಳಿ ಆಚರಿಸಲು ಪೌರಾಣಿಕ ಕಥೆಯೂ ಒಂದು ಕಾರಣ ಎಂದು ಬಹಳ ಅರ್ಥಪೂರ್ಣವಾಗಿ ಓದುಗರಿಗೆ ತಿಳಿಸಿದ್ದಾರೆ. ಅವರಿಗೆ ಅಭಿನಂದನೆ. ಪತ್ರಿಕೆಯ ಮುಖಪುಟದಲ್ಲಿ ಶಿವ–ಪಾರ್ವತಿಯ ಚಿತ್ರ ಚೆನ್ನಾಗಿ ಮೂಡಿ ಬಂದಿದೆ. ಪತ್ರಿಕೆಯು ಬಹಳ ಉತ್ತಮ ಲೇಖನಗಳೊಂದಿಗೆ ಪ್ರಸಾರವಾಗುತ್ತಿದೆ.
ಶ್ರೀ ಎಸ್. ಮಹದೇವಶೆಟ್ಟಿ,

■ **ಟಿ. ನರಸೀಪುರ ತಾಲ್ಲೂಕ್,** ಮೈಸೂರು ಜಿಲ್ಲೆ–೫೭೧ ೧೨೦




● ಪ್ರತಿ ತಿಂಗಳೂ ಧಾರಾವಾಹಿಯಂತೆ ಪ್ರಕಟಗೊಳ್ಳುತ್ತಿರುವ ತೆಲುಗು ಮೂಲ: ಪಿ.ವಿ.ಆರ್.ಕೆ ಪ್ರಸಾದ್, ಕನ್ನಡಾನುವಾದ ಸೂರ್ಯವಂಶಿ ಅವರ ತಿರುಮಲೆಯ ಚರಿತಾಮೃತ ಪುಸ್ತಕದಿಂದ ಆಯ್ದ ಲೇಖನಗಳೂ ತಿರುಮಲೆಯ ಚರಿತ್ರೆಯ ಕುರಿತು ಆಸಕ್ತಿಕರ ಹಾಗೂ ಕುತೂಹಲಕಾರಿಯಾದ ಐತಿಹಾಸಿಕ ಸತ್ಯಗಳನ್ನು ಓದುಗರಿಗೆ ತಿಳಿಸುತ್ತಿರುವುದು ತುಂಬ ಉಪಯೋಗಕಾರವಾಗಿದೆ.

■ **ಶ್ರೀ ನಾರಾಯಣಸ್ವಾಮಿ,** ಆನೇಕಲ್–೫೬೨ ೧೦೬

● 'ಯೋಗಾಭ್ಯಾಸದ ಮೂಲಕ ನಮ್ಮ ಶ್ವಾಸವನ್ನು ನಿಯಂತ್ರಿಸಿ ಪರಮಾತ್ಮನ ಶ್ವಾಸಕ್ಕೆ ಸಂಪರ್ಕ ಕಲ್ಪಿಸಿಕೊಳ್ಳುವುದು ಸಾಧ್ಯ' ಎಂಬ ವೈಚಾರಿಕವಾದ ವಿಚಾರಗಳನ್ನು ಓದುಗರಿಗೆ ಮನದಟ್ಟಾಗಿವಂತೆ ತಿಳಿಸುತ್ತಿರುವ ಶ್ರೀ ಕಂಚಿ ಚಂದ್ರಶೇಖರೇಂದ್ರ ಸರಸ್ವತೀ ಸ್ವಾಮಿಗಳ 'ದೈವವಾಣಿ'ಯ ಲೇಖನಗಳನ್ನು ಓದುತ್ತಿದ್ದರೆ ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನ ವಾಣಿಯನ್ನು ಕೇಳಿದಂತಾಗುತ್ತಿದೆ.

■ **ಶ್ರೀ ಅಮರೇಂದ್ರನಾಥ್,** ಮೈಸೂರು–೫೭೦ ೦೦೯

● ಮಲ್ಲಾರ ಮಾಸಪತ್ರಿಕೆಯಲ್ಲಿ ಮುದ್ರಣಗೊಳ್ಳುತ್ತಿರುವ ವಿದುಷಿ ನಂ. ನಾಗಲಕ್ಷ್ಮೀ ಅವರ 'ಯೋಗ ವಾಸಿಷ್ಠ ಕಥೆಗಳು' ಸರಳ ಭಾಷೆಯಲ್ಲಿ ಓದುಗರನ್ನು ಓದಿಸಿಕೊಂಡು ಹೋಗುತ್ತಿವೆ. ಕಥೆಗಳಂತೂ ತುಂಬ ಸ್ವಾರಸ್ಯಕರವಾಗಿವೆ. ಕಥೆಯನ್ನು ಓದುವ ಓದುಗರ ಮನಸ್ಸನ್ನು ಒಂದು ಕಡೆ ಸೆಳೆದು, ಆಯಾ ಕಥೆಯ ವಿಷಯದಲ್ಲಿ ಮಗ್ನರನ್ನಾಗಿಸುತ್ತಿದೆ.

■ **ಶ್ರೀಮತಿ ಸರೋಜ,** ಚಿಕ್ಕಬಳ್ಳಾಪುರ–೫೬೨ ೧೦೧

● ನಾನು 'ಶ್ರೀ ರಾಮಾನುಜ ವೈಭವ' ಧಾರಾವಾಹಿಯನ್ನು ತಪ್ಪದೇ ಓದುತ್ತಿದ್ದೇನೆ. ಶ್ರೀ ರಾಮಾನುಜಾಚಾರ್ಯರನ್ನು ಕುರಿತು ಅನೇಕ ಪುಸ್ತಕಗಳನ್ನು ಕನ್ನಡ, ತೆಲುಗು, ತಮಿಳು ಮತ್ತು ಆಂಗ್ಲ ಭಾಷೆಗಳಲ್ಲಿ ನಾನು ಓದಿದ್ದೇನೆ. ಆದರೆ ಡಾ. ಬಾಬು ಕೃಷ್ಣಮೂರ್ತಿ ಅವರು ತಿಳಿಸಿರುವ ವಿಷಯಗಳೂ ಎಲ್ಲೂ ಸಿಗುವುದಿಲ್ಲ. ಅಷ್ಟು ವಿಚಾರಗಳನ್ನು ಈ ಲೇಖನಗಳಲ್ಲಿ ನಾನು ಓದಿದ್ದೇನೆ. ಡಾ. ಬಾಬು ಕೃಷ್ಣಮೂರ್ತಿ ಅವರಿಗೆ ಅಭಿನಂದನೆಗಳು.

■ **ವಿದ್ವಾನ್ ಶೇಷಾದ್ರಿ ಅಯ್ಯಂಗಾರ್,** ಹಾಸನ–೫೭೩ ೨೦೧

● ಮಾರ್ಚ್ ೨೦೨೦ರ ಸಂಚಿಕೆಯಲ್ಲಿ ಶ್ರೀ ಕೆ. ಭೀಮರಾವ್‌ರವರು ಪ್ರಸ್ತುತಪಡಿಸಿರುವ "ಶಾರ್ವರಿ ಸಂವತ್ಸರ" ಲೇಖನದಲ್ಲಿ ಮನುಷ್ಯ ಒಂದು ಶಾರ್ವರಿ ನೋಡುವುದೇ ಭಾಗ್ಯ, ಇನ್ನು ಎರಡು ಶಾರ್ವರಿ ಸಂವತ್ಸರಗಳನ್ನು ನೋಡುವುದೇ ಸೌಭಾಗ್ಯವೆಂದು ತಿಳಿಸುತ್ತಾ, ಮೂರು ಶಾರ್ವರಿ ಸಂವತ್ಸರಗಳನ್ನು ಕಂಡ ಆಚಾರ್ಯ ಶ್ರೀ ವಾದಿರಾಜ ತೀರ್ಥರನ್ನು ಉಲ್ಲೇಖಿಸಿ ಅವರ ೪೨೦ನೇ ಪುಣ್ಯತಿಥಿಯ ಆಚರಣೆಯು ಮುಂಬರುವ ಶಾರ್ವರಿ ಸಂವತ್ಸರದಲ್ಲಿ ಬಂದಿರುವುದು ಒಂದು ಪರಮಾಶ್ಚರ್ಯದ ಸಂಗತಿ ಎಂದು ತಿಳಿಸಿರುವುದು ಈ ವರ್ಷದ ಶಾರ್ವರಿ ಸಂವತ್ಸರದ ಮಹತ್ತ್ವವನ್ನು ಹೆಚ್ಚಿಸಿದೆ.

■ **ಶ್ರೀ ಎಲ್.ಎಸ್. ಮುರಳೀಧರ,** ಬೆಂಗಳೂರು–೫೬೦ ೦೯೬

● ಪ್ರಾಚೀನ ಭಾರತದ ಮಹರ್ಷಿಗಳನ್ನು ಕುರಿತು ಪ್ರಕಟಗೊಳ್ಳುತ್ತಿರುವ ಪ್ರತಿಯೊಂದು ಲೇಖನವೂ ಉತ್ತಮ ಮಾಹಿತಿಯನ್ನು ಒಳಗೊಂಡಿದೆ. ಅತ್ರಿ ಮಹರ್ಷಿ ತಪಸ್ಸನ್ನಾಚರಿಸಿ ಮನೆಯ ಒಳಗೆ ಪ್ರವೇಶಿಸುತ್ತಿರುವಾಗ, ಮಹಾನ್ ಪತಿವ್ರತೆ, ಸಾಧ್ವಿ ಹಾಗೂ ಭಕ್ತಳಾದ ಅನಸೂಯೆಯು ಬ್ರಹ್ಮ–ವಿಷ್ಣು–ಮಹೇಶ್ವರನ್ನು ಮಕ್ಕಳಾಗಿಸಿರುವ ಚಿತ್ರವು ಮನೋಜ್ಞವಾಗಿದೆ.

■ **ಶ್ರೀ ರಾಜಶೇಖರ್,** ಮಾಲೂರು–೫೬೩ ೧೩೦.

● ನಾವು ಸಾಧನೆಯನ್ನು ಶ್ರದ್ಧೆ, ಭಕ್ತಿ, ಅಕ್ಕರೆಗಳಿಂದ ಮಾಡಿದರೆ ನಮ್ಮಲ್ಲಿ ಅಸುರನಂತೆ ಇರುವ ಅಜ್ಞಾನವು ಹಂತ ಹಂತವಾಗಿ ಕ್ರಮೇಣ ಕಡಮೆಯಾಗುತ್ತಾ, ಸುರರಂತೆ ಇರುವ ಜ್ಞಾನವು ಅಧಿಕಗೊಂಡು ಜ್ಞಾನದ ಪರಾಕಾಷ್ಠೆಯನ್ನು ಮುಟ್ಟಬಹುದೆಂಬ ವಿಷಯವನ್ನು ಓದುಗರಿಗೆ ಮನಮುಟ್ಟುವಂತೆ ತಿಳಿಸುತ್ತಿರುವ 'ಕಶ್ಯಪ ಸೂತ್ರಗಳ' ಲೇಖನಗಳು ಅತ್ಯುತ್ತಮವಾಗಿವೆ.

■ **ಶ್ರೀ ಸಂತೋಷ್ ಕುಮಾರ್,** ಶಿವಮೊಗ್ಗ–೫೭೭ ೪೦೧.





# ಹೀಗೊಂದು ಅನಿಸಿಕೆ...

● ಡಾ। ಬಾಬು ಕೃಷ್ಣಮೂರ್ತಿ

**ಕ್ರಿ**.ಶ. ಹನ್ನೆರಡನೆಯ ಶತಮಾನದಲ್ಲಿ ಈ ಪ್ರಚಂಡ ಬುದ್ಧಿಶಾಲಿ, ಆದರ್ಶವಾದಿ, ಸಮಾಜ ಸುಧಾರಕ, ವಚನಕಾರ, ಕ್ರಾಂತಿಕಾರಿ ಧಾರ್ಮಿಕ ನಾಯಕ ಬಸವಣ್ಣನವರು ಉದಯಿಸಿದರು. ಅವರು ಭಕ್ತಿ ಭಂಡಾರಿ ಬಸವಣ್ಣನವರೆಂದೇ ಹೆಸರುವಾಸಿ.

ಸಮಾಜ ಎಂಬುದು ನಿಂತ ನೀರಲ್ಲ. ಸದಾ ಪರಿವರ್ತನಶೀಲವಾದುದು. ಹೀಗಾಗಿ ಸಮಾಜದಲ್ಲಿ ಕಾಲ ಕಾಲಕ್ಕೆ ಕೆಲವು ಬದಲಾವಣೆಗಳುಂಟಾಗುವುದು ಕೂಡ ಸಹಜವೇ. ಸಾಮಾನ್ಯವಾಗಿ ಸಮಾಜದಲ್ಲಿ ದುಷ್ಟ ಪದ್ಧತಿಗಳು, ಪ್ರವೃತ್ತಿಗಳು ತಲೆದೋರುವುದುಂಟು. ಅಂಥ ಸಮಯದಲ್ಲಿ ಸಮತೋಲನವನ್ನು ತೂಗಿಸಲು ಕೆಲವರು ಚಿಂತನಶೀಲರು ಮುಂದಾಗುವುದುಂಟು.

## ಭಕ್ತಿ ಭಂಡಾರಿ ಬಸವಣ್ಣನವರು



ಹನ್ನೆರಡನೆಯ ಶತಮಾನದಲ್ಲಿ ಕರುನಾಡಿನಲ್ಲಿ ಇದ್ದಂತಹ ಸಾಮಾಜಿಕ ಪರಿಸ್ಥಿತಿ ಕುಲಗೆಟ್ಟು ಹೋಗಿತ್ತು. ಹನ್ನೊಂದನೆಯ ಶತಮಾನದ ಅಂತಿಮ ಭಾಗದಿಂದ ಹನ್ನೆರಡನೆಯ ಶತಮಾನದ ಆದಿ ಭಾಗಗಳ ನಡುವೆ ಸಮಾಜ ಹಾಗೂ ರಾಜಕೀಯ ಸ್ಥಿತಿಗತಿಗಳು ಅಧೋಗತಿ ತಲಪಿದ್ದವು. ಉಚ್ಚ ವರ್ಣದವರು ಕೆಳ ವರ್ಗದವರನ್ನು ಕಡೆಗಣಿಸಿ ನೋಡುತ್ತಿದ್ದರು. ಈ ಭೇದಭಾವಕ್ಕೆ ಮೂಲ ಕಾರಣ ನಮ್ಮ ಹಿಂದಿನ ಋಷಿಮುನಿಗಳು ತಿಳಿಸಿರುವ ಅರಿಷಡ್ವರ್ಗ. ಮನುಷ್ಯನಲ್ಲಿ ಮನೆಮಾಡಿರುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ದೋಷಗಳು ಮನುಷ್ಯನನ್ನು ಸ್ವಾರ್ಥಕೇಂದ್ರಿತನನ್ನಾಗಿ ಮಾಡುತ್ತವೆ. ಪ್ರಪಂಚದ ಎಲ್ಲ ಸಮಸ್ಯೆಗಳಿಗೂ ಅರಿಷಡ್ವರ್ಗವೇ ಮೂಲ ಕಾರಣ. ಆದ್ದರಿಂದಲೇ ನಮ್ಮ ಮುನಿ ಮುನೀಷಿಗಳು ಅರಿಷಡ್ವರ್ಗಗಳನ್ನು ಜಯಿಸಬೇಕೆಂದೂ ನಿರ್ಮೂಲ ಮಾಡಬೇಕೆಂದೂ ಮತ್ತೆ ಮತ್ತೆ ಹೇಳಿರುವುದು. ಇವುಗಳ ಕಾರಣ ಮನುಷ್ಯ ಮನುಷ್ಯರ ನಡುವೆ ದ್ವೇಷಾಸೂಯೆಗಳು, ಮದ ಮಾತ್ಸರ್ಯಗಳು, ಲೋಭ ಮೋಹಗಳು ಉಂಟಾಗಿ ಸಾಮಾಜಿಕ ಆರೋಗ್ಯ ಕೆಡುವುದು. 11–12ನೇ ಶತಮಾನಗಳ ಈ ವರ್ಷಗಳಲ್ಲಿ ಇಂತಹುದೇ ಪರಿಸ್ಥಿತಿ ಉಂಟಾಗಿತ್ತು. ಈ ಬಗೆಯ ವಾತಾವರಣದಲ್ಲಿ ಜನಿಸಿದವರೇ ಜಗಜ್ಯೋತಿ ಬಸವೇಶ್ವರರು.

ಇಂದಿನ ವಿಜಯಪುರ ಜಿಲ್ಲೆಯ ಬಾಗೇವಾಡಿ ಎಂಬ ಗ್ರಾಮದಲ್ಲಿ ಕ್ರಿ.ಶ. 1137ರಲ್ಲಿ ಜನಿಸಿದವರು ಬಸವಣ್ಣ. ಮಾದರಸ ಮತ್ತು ಮಾದಲಾಂಬಿಕೆ ಆತನ ಮಾತಾಪಿತೃಗಳು. ಬಹು ಕಾಲ ಈ ಬ್ರಾಹ್ಮಣ ದಂಪತಿಗೆ ಮಕ್ಕಳಿರಲಿಲ್ಲ. ಅವರು ಶಿವನ ವಾಹನವಾದ ನಂದಿಕೇಶ್ವರನನ್ನು ಸೇವಿಸಿದ ಪರಿಣಾಮ ಮಗು ಹುಟ್ಟಿತಂತೆ. ನಂದಿ ಎಂದರೆ ಬಸವ. ಆದ್ದರಿಂದ ಆ ಮಗುವಿಗೆ ಬಸವಣ್ಣ ಎಂಬ ಹೆಸರಿಟ್ಟರು. ವೇದೋಪನಿಷತ್ತುಗಳ ಪಠಣದ ವಾತಾವರಣದಲ್ಲಿ ಬಸವಣ್ಣನವರ ಬಾಲ್ಯ ಕಳೆಯಿತು.

ಹೀಗಾಗಿ ಸನಾತನ ಧರ್ಮದ ಮೂಲಭೂತ ವಿಚಾರಗಳು ಅವರಿಗೆ ರಕ್ತಗತವಾದವು. ಆದರೆ ಸ್ವತಂತ್ರ ಚಿಂತಕರಾಗಿದ್ದ ಬಸವಣ್ಣನವರಿಗೆ ಬ್ರಾಹ್ಮಣಿಕೆಯ ಆಚಾರಗಳು ಇಷ್ಟವಾಗದೆ ದ್ವಿಜರಿಗೆ ಅನಿವಾರ್ಯವಾದ ಯಜ್ಞೋಪವೀತ ಧಾರಣೆ ಸಮಯದಲ್ಲಿ ಜನಿವಾರವನ್ನು ತುಂಡರಿಸಿ ಮನೆಯಿಂದ ಹೊರಬಿದ್ದು ಹಳೆಯ ಕಂದಾಚಾರಗಳ ವಿರುದ್ಧ ಸಾಂಕೇತಿಕವಾಗಿ ಸಮರ ಸಾರಿದರು. ಅವರಿಗೆ ಯಜ್ಞಯಾಗಾದಿಗಳಲ್ಲಿ, ಪ್ರಾಣಿಬಲಿ ಮುಂತಾದವುಗಳಲ್ಲಿ ವಿಶ್ವಾಸವಿರಲಿಲ್ಲ.

ಅತೀವ ಬುದ್ಧಿಶಾಲಿಯಾಗಿದ್ದರಿಂದ ಶಾಸ್ತ್ರಗಳನ್ನೆಲ್ಲ ಓದಿ ಅರ್ಥಮಾಡಿಕೊಂಡು ಸತ್ಯದರ್ಶನ ಪಡೆದರು. ಆಗ ಅವರಿಗೆ ಸಮಾಜದಲ್ಲಿ ಉತ್ತಮ ಮೌಲ್ಯಗಳು ಸ್ಥಾಪನೆಯಾಗಬೇಕಾದರೆ ಹೊಸ ಮಾರ್ಗಾನ್ವೇಷಣೆ ಅನಿವಾರ್ಯ ಅನಿಸಲಾರಂಭಿಸಿತು. ಈ ನಡುವೆ ಆತನ ತಂದೆ ತಾಯಿ ಕಾಲವಾದರು. ಬಸವಣ್ಣನವರಿಗಿದ್ದ ಆಗಿನ ಸಾಂಸಾರಿಕ ಬಂಧನ ಕಡಿದು ಹೋಗಿತ್ತು. ಆಗ ಬಾಗೇವಾಡಿಯ ಮನೆ ತೊರೆದು ಕೃಷ್ಣ ಮತ್ತು ಮಲಪ್ರಭಾ ನದಿಗಳ ಸಂಗಮ ಸ್ಥಾನದಲ್ಲಿರುವ ಕಪ್ಪಡಿ ಸಂಗಮ ಎಂಬಲ್ಲಿಗೆ ಹೋಗಿ ನೆಲೆಸಿದರು. ಅಲ್ಲಿ ಶಿವನ ಪೂಜೆಯಲ್ಲಿ ನಿರತರಾದರು. ಅಲ್ಲಿಯೇ ಇದ್ದ ಈಶಾನ್ಯ ಗುರು ಎಂಬ ಸಂತರು ಬಸವಣ್ಣನವರ ಶಿವಭಕ್ತಿಯನ್ನು ನೋಡಿ ಆನಂದಭರಿತರಾಗಿ ಇಷ್ಟಲಿಂಗ ಪೂಜೆಯನ್ನು ಮಾಡುವಂತೆ ಉಪದೇಶಿಸಿದರು.

ಆ ಸಮಯದಲ್ಲಿ ಚಾಲುಕ್ಯ ರಾಜರ ಸಾಮಂತನಾಗಿದ್ದ ಬಿಜ್ಜಳನು ಕ್ರಿ.ಶ. 1157–62ರ ಕಾಲದಲ್ಲಿ ಚಾಲುಕ್ಯ ದೊರೆಗಳ ವಿರುದ್ಧ ಬಂಡೆದ್ದು ಅವರನ್ನು ಬೀಳಿಸಿ ಸಿಂಹಾಸವನ್ನು ಆಕ್ರಮಿಸಿಕೊಂಡಿದ್ದ. ಒಂದು ದಿನ ಶಿವನುವಣ್ಣನವರಿಗೆ ಸ್ವಪ್ನದರ್ಶನ ನೀಡಿ ರಾಜಾ ಬಿಜ್ಜಳನನ್ನು ಕಾಣುವಂತೆ ಹೇಳಿದನಂತೆ. ಶಿವನಾಣತಿಯಂತೆ ಅವರು ಬಿಜ್ಜಳನನ್ನು ನೋಡಲು ಹೋದಾಗ ಅವರ ಆಕರ್ಷಕ ವ್ಯಕ್ತಿತ್ವ, ಅತೀವ ಬುದ್ಧಿಮತ್ತೆ ಮತ್ತು ಚುರುಕುತನವನ್ನು ಕಂಡು ಪ್ರಭಾವಿತನಾದ ಬಿಜ್ಜಳ ಅವರನ್ನು ತನ್ನ ಆಡಳಿತ ವ್ಯವಸ್ಥೆಯಲ್ಲಿ ಕೋಶಾಗಾರದ ಒಬ್ಬ ಲೆಕ್ಕಿಗನನ್ನಾಗಿ ಆರಿಸಿದನಂತೆ. ಬಸವಣ್ಣನವರ ಆಗಿನ ಮೇಲಧಿಕಾರಿ ಸಿದ್ಧ ದಂಡಾದಿಪ.

ಸಿದ್ಧ ದಂಡಾದಿಪ ಕಾಲವಾದ ಅನಂತರ ಬಸವಣ್ಣನವರೇ ಕೋಶಾಧಿಪತಿಯಾದರು. ಅದರ ಹಿಂದೆಯೇ ವಿವಾಹವೂ ನೆರವೇರಿತು. ಗಂಗಾದೇವಿ ಮತ್ತು ನೀಲಲೋಚನೆ ಎಂಬಿಬ್ಬರು ಅವರ ಹೆಂಡತಿಯರಾದರು.

ಬಸವಣ್ಣನವರಿಗೆ ರಾಜಾಸ್ಥಾನದ ಉನ್ನತ ಸ್ಥಾನವಾಗಲೀ, ಸುಖೀ ಸಂಸಾರ ಜೀವನವಾಗಲೀ ಅವರ ಸ್ವೀಕೃತ ಗುರಿಯಿಂದ ವಿಚಲಿತರನ್ನಾಗಿಸಲಿಲ್ಲ. ಶಿವಪೂಜೆ ಮತ್ತು ವೀರಶೈವ ಜಂಗಮರ, ಶಿವಶರಣರ ಆರಾಧನೆಯನ್ನು ತಡೆಯಲಾಗಲಿಲ್ಲ. ಬಸವಣ್ಣನವರ ಅತಿಥಿ ಸೇವೆ, ಅನ್ನ ದಾಸೋಹ, ಕರುಣಾರ್ದ್ರ ಹೃದಯಗಳ ಪ್ರಚಾರ ಎಲ್ಲೆಡೆ ಆಗಿ ಅವರ ಮನೆಗೆ ಎಲ್ಲ ಬಗೆಯ ಜನರೂ ಮುತ್ತಿಕೊಳ್ಳಲಾರಂಭಿಸಿದರು. ಆದರೆ ಅತೀವ ತಾಳ್ಮೆಯ ಅವರು

▶▶ 23ನೇ ಪುಟಕ್ಕೆ



# ಶ್ರೀರಾಮಾ ನೀ ನಾಮಮು



ಏಪ್ರಿಲ್ 2ರಂದು ಶ್ರೀರಾಮನವಮಿ. ಪರಮರಾಮಭಕ್ತ ಶ್ರೀ ಕೈವಾರ ತಾತಯ್ಯನವರು ಶ್ರೀರಾಮನನ್ನು ಕುರಿತಾದ ಕೀರ್ತನೆಗಳ ಪರಿಚಯವನ್ನು ನೀಡಿದ್ದಾರೆ ಶ್ರೀ. ಕೆ. ಭೀಮರಾವ್.

ಶ್ರೀರಾಮ ನಾಮದ ಮಹಿಮೆಯನ್ನು ಕುರಿತು ಉಪನಿಷತ್ತಿನ ಋಷಿಗಳಿಂದ ಹಿಡಿದು ಆಧುನಿಕ ಕವಿಗಳವರೆವಿಗೂ ಅನೇಕರು ವರ್ಣಿಸಿದ್ದಾರೆ. ಶ್ರೀರಾಮ ಶಬ್ದದ ವ್ಯುತ್ಪತ್ತಿಯನ್ನು ಕುರಿತು ಹಲವು ವೈಯಾಕರಣಿಗಳು ವ್ಯಾಖ್ಯಾನ ಮಾಡಿದ್ದಾರೆ. ಆದರೆ ಆ ವರ್ಣನೆಗಳು, ವ್ಯಾಖ್ಯಾನಗಳು ಪಂಡಿತ ಮಾನ್ಯ. ಪಾಮರರಿಗೆ–ಅದರಲ್ಲಿಯೂ ಗ್ರಾಮೀಣ ಬಂಧುಗಳಿಗೆ ಅದರ ಅರ್ಥ ಕಬ್ಬಿಣದ ಕಡಲೆ. ಅಂತಹ ಜನಸಮೂಹಕ್ಕೆ, ಗ್ರಾಮಸ್ಥರಿಗೆ ಅರ್ಥವಾಗುವ ಪರಿಯಲ್ಲಿ ಪದಗಳನ್ನು, ಕೀರ್ತನೆಗಳನ್ನು, ಹಾಡುಗಳನ್ನು ರಚಿಸಿದವರು ಅತ್ಯಲ್ಪ. ಆ ಅತ್ಯಲ್ಪ ಜನಪದ ಕವಿಗಳಲ್ಲಿ, ದಾಸರುಗಳಲ್ಲಿ, ಯತಿಗಳಲ್ಲಿ ಅಗ್ರಗಣ್ಯರು ನಮ್ಮ ಕೈವಾರದ ಸದ್ಗುರು ಶ್ರೀ ನಾರೇಯಣರು.

ತಾತಯ್ಯನವರಿಗೂ ಶ್ರೀರಾಮನಿಗೂ ಬಹು ನಂಟು. ಕೈವಾರದ ಅಮರನಾರೇಯಣ ಅವರಿಗೆ ಶ್ರೀರಾಮ ರೂಪಿಯೇ. ಆ ದೇಗುಲದ ಸನಿಹದಲ್ಲಿರುವ ಶ್ರೀರಾಮ, ಸೀತೆ ಮತ್ತು ಲಕ್ಷ್ಮಣರ ಶಿಲ್ಪ ಸಾಂಕೇತಿಕ ಮಾತ್ರ. ತ್ರೇತಾಯುಗದಲ್ಲಿ ಕಿಷ್ಕಿಂಧೆಗೆ ಹೋಗುವ ಮಾರ್ಗದಲ್ಲಿ ಶ್ರೀರಾಮ ತಂಗಿದ್ದ ಜಾಗ ಈ ಕೈವಾರ ದೇಶೀಯ ಸಂಸ್ಥಾನವೆಂಬುದು ಬಹುಶ್ರುತ ವಿದ್ವಾಂಸರ ಅಭಿಪ್ರಾಯ.

ಶ್ರೀರಾಮನ ಪಾದಧೂಳಿಯಿಂದ ಪವಿತ್ರವಾದ ಈ ನೆಲದಲ್ಲಿ ತಾತಯ್ಯನವರು ಜನಿಸಿ ಶ್ರೀರಾಮ ಚರಿತೆಯನ್ನು, ಶ್ರೀರಾಮ ನಾಮದ ಮಹಿಮೆಯನ್ನು ನಿರಕ್ಷರಕುಕ್ಷಿಗಳಿಗೆ ಬೋಧಿಸಿ, ಆ ಅಮಾಯಕ ಜನ ಸಮೂಹವನ್ನು ಲೌಕಿಕ ಬದುಕಿನಿಂದ ಆಧ್ಯಾತ್ಮಿಕ ದೇಗುಲಕ್ಕೆ ಕೊಂಡೊಯ್ದದ್ದು ಅವರು ಅಂಶಪುರುಷರೆಂಬುದಕ್ಕೆ ಸಾಕ್ಷಿ.

ತಾತಯ್ಯನವರು ತಮ್ಮ ಅನೇಕ ಕೀರ್ತನೆಗಳಲ್ಲಿ ಶ್ರೀರಾಮನನ್ನು ಸ್ಮರಿಸಿದ್ದರೂ ಪ್ರಮುಖವಾಗಿ ಹತ್ತು–ಹನ್ನೆರಡು ಪದ್ಯಗಳಲ್ಲಿ ಆ ದೇವನನ್ನು ವಿಶೇಷವಾಗಿ ಸ್ತುತಿಸಿರುವುದನ್ನು ಕಾಣಬಹುದು. ಶ್ರೀರಾಮನವಮಿಯ ಸಂದರ್ಭದಲ್ಲಿ ಈ ಪದಗಳ ಅವಲೋಕನ ಔಚಿತ್ಯಪೂರ್ಣ. ಶ್ರೀರಾಮ ನಾಮಸ್ಮರಣೆಯ ಮಹತ್ತ್ವವನ್ನು ಸಾರಿ ಹೇಳುವ ಈ ಕೆಳಗಿನ ಪದ್ಯ ತುಂಬ ಅರ್ಥಪೂರ್ಣವಾಗಿದೆ.

**ಶ್ರೀರಾಮಾ ನೀ ನಾಮಮು–ಜಿಹ್ವಕು ರುಚಿಗಾ ವುನ್ನದಿ**

**ಎಪ್ಪಡು ಯೇವೇಳಾ ಮನಸು–ಮರುವಕುನ್ನಾದಿ** । ಎಂದು ಆರಂಭವಾಗಿ...

**ಸುಜ್ಞಾನುಲಕು ಯೆರುಕ ಜಾಡ–ಸುಲಭಮನ್ನದಿ**

**ನಾರೇಯಣ ಸ್ವಾಮಿ ಗುರುವಿ–ನಮ್ಮುಮನ್ನದಿ।** ಎಂದು ಕೀರ್ತನೆ ಕೊನೆಗೊಳ್ಳುತ್ತದೆ.

ತಾತಯ್ಯನವರ ಈ ಕೀರ್ತನೆಯ ವಿಶೇಷವೆಂದರೆ ಶ್ರೀರಾಮ ನಾಮದ ಮಹಿಮೆಯನ್ನು ಅವರು ಹೇಳುವ ರೀತಿ ಮತ್ತು ಶೈಲಿ. ತಾತಯ್ಯನವರು ನೇರವಾಗಿ ಶ್ರೀರಾಮನನ್ನೇ ಉದ್ದೇಶಿಸಿ ಸ್ತುತಿಸುವುದು ಹೀಗೆ–'ಶ್ರೀರಾಮಾ, ನಿನ್ನ ಹೆಸರು ನಾಲಗೆಗೆ ಬಹಳ ರುಚಿಯಯ್ಯಾ. ಅದರ ಸ್ವಾದವಾದರೋ ಮನಸ್ಸು ಮರೆಯುವ ಹಾಗೇ ಇಲ್ಲ. ನಿನ್ನ ಹೆಸರು ಮೋಹದ ಬಂಧನವನ್ನು ಚಿಗುರಿನಲ್ಲಿಯೇ ಕತ್ತರಿಸಿ ಹಾಳು ಮಾಡೆನ್ನುತ್ತಿದೆ. ಕಾಮ ಮತ್ತು ಕ್ರೋಧಗಳಿಂದ ಬರುವ ಕಷ್ಟವನ್ನು ಎದುರಿಸು ಎನ್ನುತ್ತಿದೆ. ಉದರ ಪೋಷಣೆ ಬಹಳ ತ್ರಾಸದಾಯಕ, ಕಪಟ ಸಂನ್ಯಾಸಿಗಳ ಮಾತಿಗೆ ಬಲಿಯಾಗಿ ಲೌಕಿಕ ಸುಖಕ್ಕೆ ಬಲಿಯಾಗಬೇಡ. ಸಂಸಾರವೆಂಬ ಹೀನ ವೃತ್ತಿಯನ್ನು ಬಿಡು. ಪರರ ಧನ, ಪರ ಪತ್ನಿಯನ್ನು ಬಯಸಬೇಡ. ಅಜ್ಞಾನಿಗಳ ಸಂಗ ಮಾಡಿ ಜೀವನವನ್ನು ವ್ಯರ್ಥ ಮಾಡದೆ, ಸಜ್ಜನರ ಸಹವಾಸ ಮಾಡಿ ಸುಖದಿಂದಿರು ಎಂದು ನಿನ್ನ ನಾಮ ಹೇಳುತ್ತಿದೆ. ಹೃದಯ ಮತ್ತು ಮನಸ್ಸನ್ನು ಒಂದುಗೂಡಿಸಿ ಮಿನುಗುವ ನಕ್ಷತ್ರಗಳನ್ನು ನೋಡು. ಸುಜ್ಞಾನದಿಂದ ಮಾತ್ರ ಇದು ಸಾಧ್ಯ. ಅಮರನಾರೇಯಣಸ್ವಾಮಿಯಲ್ಲಿ ನಂಬಿಕೆಯನ್ನಿಡು. ಅವನೇ ಗುರು ಎನ್ನುತ್ತಿದೆ ಓ ಶ್ರೀರಾಮಾ.'

ಈ ಪದ್ಯದಲ್ಲಿ ಬರುವ 'ಪಾಪ' ಎಂಬ ಪದದ ಅರ್ಥ ಕರುಣಾ ಸೂಚಕ. ಯಾರನ್ನಾದರೂ ಕಂಡರೆ 'ಅಯ್ಯೋ ಪಾಪ' ಎನ್ನುವುದಿಲ್ಲವೇ ಹಾಗೆ. ಅದು ಪುಣ್ಯದ ವಿರುದ್ಧ ಪದವಲ್ಲ. ಏಕೆಂದರೆ ಪಾಮರರು ಅಥವಾ ಅಜ್ಞಾನಿಗಳು, ಮೂಢರು ಇವರ ಸಹವಾಸ ಮಾಡುವುದು ವ್ಯರ್ಥವೇ ಹೊರತು ಪಾಪದ ಕೆಲಸವೇನಲ್ಲ. ಕಳ್ಳತನ, ಕೊಲೆ ಮಾಡಿದಂತಹ ಅಪರಾಧವಾಗಲಿ 'ಪಾಪ'ವಾಗಲಿ ಅಲ್ಲ. ಹಾಗೆಯೇ ನಮ್ಮ ದೃಷ್ಟಿ ನೆಲದ ಅಥವಾ ಕೆಳ ಹಂತದಲ್ಲಿರದೆ ಮೇಲೆ ಅಥವಾ ಉನ್ನತ ಸ್ಥಾನದಲ್ಲಿರಬೇಕು ಎಂಬುದನ್ನು 'ಚೂಡು ಚುಕ್ಕ ವೆಲಗು' ಎಂಬುದು ಸೂಚಿಸುತ್ತದೆ. ಹೃದಯ ಮತ್ತು ಮನಸ್ಸಿನ ಏಕಾಗ್ರತೆಯಿದ್ದರೆ ಮಾತ್ರ ಆಧ್ಯಾತ್ಮಿಕ ಶಿಖರವನ್ನೇರಲು ಸಾಧ್ಯ ಎಂಬುದು ಇಲ್ಲಿಯ ಭಾವ. ಒಟ್ಟಾರೆಯಾಗಿ, ಶ್ರೀರಾಮ ನಾಮ ಸ್ಮರಣೆಯಿಂದ, ಕಾಮ ಕ್ರೋಧವೆ ಮೊದಲಾದ ಅರಿಷಡ್ವರ್ಗಗಳು ತೊಲಗಿ ಸಂಸಾರದಿಂದ ವಿಮುಕ್ತಿ ಹೊಂದಿ ಮುಕ್ತಿ ಪಥದೆಡೆಗೆ ನಡೆಯುವ ಜಪ ಅತ್ಯಾವಶ್ಯಕ.



ಶ್ರೀರಾಮನ ಪರಮಭಕ್ತ ಕೈವಾರ ತಾತಯ್ಯ

ಶ್ರೀರಾಮ ಜಪವೆಂದರೆ ಒಂದು ತಪಸ್ಸು. ಆ ತಪಸ್ಸು ಮಾಡಲು ಲೌಕಿಕರು ಅರಣ್ಯಕ್ಕೆ ಹೋಗಿ ಮೂಗು ಹಿಡಿದು ಕೂಡಬೇಕಿಲ್ಲ. ತಾವಿದ್ದ ಸ್ಥಳದಲ್ಲಿಯೇ ಭಜನೆ ಮಾಡಿ ಆ ಧನ್ಯತೆಯನ್ನು ಪಡೆಯಬಹುದು. ಅದನ್ನು ಯೋಗಿಶ್ರೇಷ್ಠರು ಹೇಳುವ–ಬೋಧಿಸುವ ಪರಿಯಿದು:

**ರಾಮುನಿ ಭಜನಾ ಶಾಯವೇ ಮನಸಾ**..ಎಂದು ಆರಂಭವಾಗಿ....

**ದಾನ ವತ್ಸಲುನಿ–ಧರ ಪರಿಪಾಲಿನಿ**

**ರಾವಣ ತಮ್ಮುನಿ ರಕ್ಷಿಂಚಿನ ಹರಿ।** ಎಂದು ಕೊನೆಗೊಳ್ಳುತ್ತದೆ.

ಓ ನನ್ನ ಮನಸ್ಸೇ, ಸದಾ ರಾಮನ ನಾಮಸ್ಮರಣೆ ಮಾಡು. ಸೀತಾಪತಿಯ ಭಜನೆ ಮಾಡು. ನಮ್ಮ ಪಾಪಗಳನ್ನೆಲ್ಲ ಪರಿಹರಿಸುವ ಪರಮ ಪುರುಷ ಶ್ರೀರಾಮ. ಲೌಕಿಕ ಜೀವನ ನಶ್ವರ. ಈ ಜಗದ ಸಂಸಾರ ಸಾರವಿಲ್ಲದ್ದು. ಅದನ್ನು ನಂಬಬೇಡ. ಭಕ್ತ ರಕ್ಷಕನಾದ ರಾವಣ ಸೋದರ ವಿಭೀಷಣನನ್ನು ಸಂರಕ್ಷಿಸಿದವನ ಜಪಿಸಿ ಕೃತಾರ್ಥನಾಗು.

ಶ್ರೀರಾಮನ ಸ್ಮರಣೆ ಅನುದಿನವೂ ಮಾಡುವ ಮನಸ್ಸನ್ನು ಕೊಡು, ರಕ್ಷಿಸು ಎಂಬ ಕೋರಿಕೆ ಇಲ್ಲಿದೆ.

ಇದೇ ಪದ್ಯದ ಮುಂದಿನ ಸಾಲುಗಳಲ್ಲಿ ಶ್ರೀರಾಮನ ಇತರ ಅವತಾರಗಳನ್ನು ಸ್ಮರಿಸುತ್ತಾ ಲಕ್ಷ್ಮೀನಾಥನನ್ನು ಸ್ತುತಿಸುತ್ತಾರೆ. ಪ್ರಸಿದ್ಧ ಗಾಯಕರು ಕೈವಾರದಲ್ಲಿ ಧನ್ಯಾಸಿ ರಾಗದ ಈ ಕೀರ್ತನೆಯನ್ನು ಹಾಡುವುದನ್ನು ಕೇಳಿದಾಗ ತಾತಯ್ಯನವರು ಭಜನಾ ತಂಡದ ನೇತಾರರಾಗಿ ಅಮರನಾರೇಯಣಸ್ವಾಮಿಯ ಚಿತ್ರಪಟವನ್ನು ಹಿಡಿದು ಪಾದಯಾತ್ರೆ ಮಾಡುತ್ತಿರುವ ದೃಶ್ಯ ಕಣ್ಮುಂದೆ ಬಂದು ನಿಲ್ಲುತ್ತದೆ. ಆ ಹಾಡಿನ ಎರಡು ಪಾದಗಳು ಗಮನಾರ್ಹ.

**'ಮಾರ್ತಾಂಡ ತೇಜುನಿ–ಮನ್ಮಥ ಜನಕುನಿ**

**ವೈಕುಂಠ ವಾಸಿನಿ–ವಾಸವ ಸ್ತೋತ್ರುನಿ'**

ವಾಸವನಿಂದ ಸ್ತುತಿಸಲ್ಪಡುವ ಶ್ರೀಹರಿ ಎಂದಾಗ ಸಹಜವಾಗಿಯೇ 'ವಾಸವ'ನೆಂದರೆ ಯಾರು ಎಂಬ ಪ್ರಶ್ನೆ ಉದ್ಭವಿಸುತ್ತದೆ. ವಾಸವನೆಂದರೆ ಬೇರೆ ಯಾರೂ ಅಲ್ಲ–ಅವನು ದೇವತೆಗಳ ಅರಸನಾದ ಇಂದ್ರ. ಇಂದ್ರನಿಗೆ ವಾಸವ ಎಂಬ ಹೆಸರು ಬಂದದ್ದಾದರೂ ಹೇಗೆ?

ಕಶ್ಯಪ ಮತ್ತು ಅದಿತಿಯ ಮಕ್ಕಳಲ್ಲಿ ಆದಿತ್ಯರು ಮತ್ತು ವಸುಗಳು ಎಂದು ಎರಡು ಬಗೆ. ಆದಿತ್ಯರ ಗುಂಪಿಗೆ ಸೇರಿದವರಲ್ಲಿ ಸ್ವರ್ಗಲೋಕದ ದೊರೆ ದೇವೇಂದ್ರನೂ ಒಬ್ಬ. ವಸುಗಳ ಗುಂಪಿನಲ್ಲಿ ಅಗ್ನಿ ಪ್ರಮುಖ. ಅಸುರರಲ್ಲಿ ಅಜೇಯನೆನಿಸಿದ್ದ ವೃತ್ರಾಸುರನನ್ನು ಜಯಿಸಿದ ಹಿರಿಮೆ ಅವನದು. ಆ ಸಂಹಾರ ಕಾಲದಲ್ಲಿ ವಸು ಕುಲವನ್ನೂ ಇಂದ್ರನೇ ಕಾಪಾಡಿದುದರಿಂದ ಅಗ್ನಿ ಅವನನ್ನು ತಮ್ಮ ಗುಂಪಿಗೂ ಅರಸನೆಂದು ಪರಿಗಣಿಸುತ್ತಾನೆ. ಅಂತಹ ಇಂದ್ರನು ಪೂಜಿಸುವುದು, ಸ್ತುತಿಸುವುದು ಪುರುಷೋತ್ತಮನಾದ ವಾಸುದೇವನನ್ನೆ. ದೇವತೆಗಳ ಅರಸ ದೇವೇಂದ್ರನೇ ಶ್ರೀರಾಮನನ್ನು ಪೂಜಿಸುತ್ತಾನೆ ಎಂದ ಮೇಲೆ ಮಿಕ್ಕ ದೇವತೆಗಳ ವಿಷಯ ಹೇಳಬೇಕಾಗಿಯೇ ಇಲ್ಲ. ತ್ರಿಲೋಕ ವಂದಿತನಾದ ಶ್ರೀಮನ್ನಾರಾಯಣನ ವಾಸ ವೈಕುಂಠದಲ್ಲಿ.

ಸೂರ್ಯನ ತೇಜಸ್ಸು ಹಾಗೂ ಮನ್ಮಥನ ರೂಪ ಶ್ರೀರಾಮನದಾದುರಿಂದ ಇಲ್ಲಿ ಅವುಗಳ ಉಲ್ಲೇಖ.

ಇಂದ್ರನೂ ಮಹಾವಿಷ್ಣುವಿನ ಒಂದು ರೂಪಿಯೇ. ಭಗವದ್ಗೀತೆಯ ಕೆಳಗಿನ ಶ್ಲೋಕ ಇಲ್ಲಿ ಪ್ರಸ್ತುತ:

**ವೇದಾನಾಂ ಸಾಮವೇದೋಽಸ್ಮಿ ದೇವಾನಾಮಸ್ಮಿ ವಾಸವಃ ।**

**ಇಂದ್ರಿಯಾಣಾಂ ಮನಶ್ಚಾಸ್ಮಿ ಭೂತಾನಾಮಸ್ಮಿ ಚೇತನಾ ॥**

"ವೇದಗಳಲ್ಲಿ ನಾನು ಸಾಮವೇದ, ದೇವತೆಗಳಲ್ಲಿ ನಾನು ಸ್ವರ್ಗರಾಜನಾದ ಇಂದ್ರ, ಇಂದ್ರಿಯಗಳಲ್ಲಿ ನಾನು ಮನಸ್ಸು ಮತ್ತು ಜೀವಿಗಳಲ್ಲಿ ನಾನು ಚೇತನ."

ದೇವೇಂದ್ರನ ಹೆಸರನ್ನು 'ವಾಸವ ಸ್ತೋತ್ರುನಿ' ಎಂದು ಕೈವರದ ಜ್ಞಾನಿ ಉಲ್ಲೇಖಿಸಲು ಮತ್ತೂ ಒಂದು ಕಾರಣವೆಂದರೆ ಅಮರನಾರೇಯಣಸ್ವಾಮಿ ನೆಲೆಸಿರುವ ಕೈವಾರದ ಸ್ಥಳ ಪುರಾಣ. ಆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೃತಯುಗದ ಪುರಾಣ ಕಥೆಯಲ್ಲಿ, ಇಂದ್ರ ಮೇಲೆ ಹೇಳಿದಂತೆ, ದಧೀಚಿ ಎಂಬ ಋಷಿಯ ಬೆನ್ನುಮೂಳೆಯನ್ನು ವಜ್ರಾಯುಧವನ್ನಾಗಿ ಮಾಡಿಕೊಂಡು ವೃತ್ರಾಸುರನೆಂಬ ರಾಕ್ಷಸನನ್ನು ಸಂಹರಿಸಿದನಷ್ಟೆ. ಆ ಹತ್ಯೆಯ ದೋಷ ನಿವಾರಣೆಗಾಗಿ ಮುನಿವರ್ಯರ ಸಲಹೆಯನ್ನು ಕೇಳಿದಾಗ ಅವರು 'ವಾಸವ, ಭೂಲೋಕದಲ್ಲಿ ಪವಿತ್ರವಾದ ಗಿರಿಧಾಮವೊಂದಿದೆ. ಅದರ ಸಮೀಪದ ಅರಣ್ಯ ಪ್ರದೇಶದಲ್ಲಿ ಅಮರನಾರೇಯಣ ಮೂರ್ತಿಯನ್ನು ಪ್ರತಿಷ್ಠಾಪಿಸು' ಎಂದು ಸೂಚಿಸಿದರಂತೆ. ಅವರ ಆದೇಶದಂತೆ ವಾಸವನು ನಾರಾಯಣನನ್ನು ಶ್ರೀದೇವಿ, ಭೂದೇವಿಯರ ಸಮೇತ ಪ್ರತಿಷ್ಠಾಪಿಸಿದನಂತೆ. ಉತ್ತರೋತ್ತರ ತ್ರೇತಾಯುಗದಲ್ಲಿ ವನವಾಸ ಕಾಲದಲ್ಲಿ ಶ್ರೀರಾಮ, ಲಕ್ಷ್ಮಣ ಮತ್ತು ಸೀತಾದೇವಿಯು ಇಲ್ಲಿ

ಕೆಲಕಾಲ ವಿಶ್ರಮಿಸಿ ಮುಂದೆ ಹೋದರಂತೆ. ಕೈವಾರದಲ್ಲಿರುವ 'ಲಕ್ಷ್ಮಣ ತೀರ್ಥ' ಶ್ರೀರಾಮನ ಅನುಜನ ಶರದಿಂದ ಉದ್ಭವಿಸಿದ ಚಿಲುಮೆಯೆಂದು ಹೇಳುತ್ತಾರೆ. ಹೀಗಾಗಿ ತಾತಯ್ಯನವರಿಗೆ ರಾಮ ಭಜನೆ ಮಾಡುತ್ತಿರುವಾಗ ಈ ಅಂಶಗಳೆಲ್ಲ ನೆನಪಿಗೆ ಬಂದು ಕೀರ್ತನೆಯಲ್ಲಿ ಹಾಸು ಹೊಕ್ಕಾಗಿರಬೇಕು.

ಗ್ರಾಮದ ಪರಿಸರದಲ್ಲಿ ಹುಟ್ಟಿ, ಅಲ್ಲಿಯೇ ಬೆಳೆದು, ಹೆಚ್ಚಿನ ವಿದ್ಯಾಭ್ಯಾಸವಿಲ್ಲದಿದ್ದರೂ ಸ್ವಂತ ಅಧ್ಯಯನದಿಂದ, ಅನುಭವದಿಂದ, ಕಾವ್ಯ ರಚನೆಗೆ ತೊಡಗಿದವರು ನಾರೇಯಣಪ್ಪನವರು. ಅಂದಿನ ಇತರ ಕವಿಗಳಂತೆ ರಾಜಾಶ್ರಯ ಬಯಸಿದವರಲ್ಲ. ಅವರಿಗೆ ಶ್ರೀರಾಮನ ಹೊರತು ಅನ್ಯ ಪ್ರಭುಗಳಿಲ್ಲ. ಲೌಕಿಕ ಸಿರಿವಂತಿಕೆಗಾಗಿ ಯಾವ ಶಾನುಭೋಗರ ಮಾಂಡಲೀಕರ ಸ್ತುತಿ ಮಾಡದ ಅವರು ನಂಬಿದ ಏಕೈಕ ದೇವ ಶ್ರೀರಾಮ–ಅಮರನಾರೇಯಣರೂಪಿ ಶ್ರೀರಾಮ. ಆ ಪ್ರಭುವನ್ನು ಅವರು ಯಾಚಿಸುವುದು, ಕೊಂಡಾಡುವುದು ಹೀಗೆ:

**ಪಾಹಿ ರಾಮಪ್ರಭೋ–ಪಾಹಿ ರಾಮಪ್ರಭೋ**
ಪಾಹಿ ಗಗನಾದ್ರಿ ಪರಮಾತ್ಮ ರಾಮಪ್ರಭೋ
ಎನ್ನಿ ವಿಧಮುಲನೈನ–ನಿನ್ನೇ ಬ್ರಸ್ತುತಿ ಜೇತು
ಕಂದರ್ಪಜನಕ ಕರಿ–ವರದ ರಾಮಪ್ರಭೋ

ಆನಂದ ಭೈರವಿ ರಾಗದಲ್ಲಿ ಗಾಯಕರು ಸುಶ್ರಾವ್ಯವಾಗಿ ಹಾಡುತ್ತಿದ್ದರೆ ಶ್ರೋತೃಗಳು ಮೈ ಮನ ಮರೆಯುವುದನ್ನು ಇಂದಿಗೂ ಕಾಣಬಹುದು.

ಈ ಪದ್ಯ ಭಕ್ತ ನಾರೇಯಣಪ್ಪನವರ ಹೃದಯಾಂತರಾಳದಿಂದ ಬಂದಿರುವುದು ಪ್ರತಿ ಸಾಲಿನಲ್ಲಿಯೂ ವೇದ್ಯವಾಗುತ್ತದೆ. ಶ್ರೀರಾಮ ರಾಜ ರಾಜಾಗ್ರಣಿಯಂತೆ, ರಾಜ ಚಿಂತಾಮಣಿಯಂತೆ. ಆ ದೇವನನ್ನು ಸಂರಕ್ಷಣೆಗಾಗಿ ಪದೇ ಪದೇ ಯಾಚಿಸುತ್ತಾ ಅಪರಾಧಗಳನ್ನು ಮನ್ನಿಸು ಎಂದು ಬೇಡುತ್ತಾ ಪದೇ ಪದೇ ವಂದನೆ ಸಮರ್ಪಿಸುತ್ತಾರೆ ಸದ್ಗುರುಗಳು.

**ವಂದನಮು ಮಾಧವ–ವಂದನಮು ಹೃಷೀಕೇಶ**
**ವಂದನಮು ಗೋಪಾಲ ಬಾಲ ರಾಮಪ್ರಭೋ**
**ವಿನ್ನಪಮು ಮುಕುಂದ – ವಿನ್ನಪಮು ಗೋವಿಂದ**
**ವಿನ್ನಪಮು ಶ್ರೀ ವೇಂಕಟೇಶ–ರಾಮಪ್ರಭೋ**

ಇಲ್ಲಿ ತಾತಯ್ಯನವರು 'ವಿನ್ನಪಮು ವೇಂಕಟೇಶ' –ಅಂದರೆ 'ನನ್ನ ಮೊರೆಯನ್ನು ಕೇಳು ತಿರುಪತಿಯ ವೆಂಕಟರಮಣ' ಎಂದು ಹೇಳಿರುವುದರ ಔಚಿತ್ಯವಿಷ್ಟೆ. ಅವರಿಗೆ ಶ್ರೀರಾಮ ಬೇರೆಯಲ್ಲ, ಅಮರನಾರೇಯಣ ಬೇರೆಯಲ್ಲ, ತಿರುಪತಿಯ ಶ್ರೀನಿವಾಸ ಬೇರೆಯಲ್ಲ. 'ದೇವನೊಬ್ಬ ನಾಮ ಹಲವು' ಎಂಬ ನಿಲುವು ಅವರದು. ಕೈವಾರದ ಅಮರನಾರೇಯಣನನ್ನು, ತಿರುಪತಿಯ ಶ್ರೀನಿವಾಸನನ್ನು ಏಕತ್ರವಾಗಿ ಪರಿಗಣಿಸಿ, ಏಕ ಕಾಲದಲ್ಲಿ ಪೂಜಿಸಿ ಧನ್ಯರಾದ ಏಕೈಕ ಯೋಗಿ ಅವರೆಂದರೆ ಅದು ಉತ್ಪ್ರೇಕ್ಷೆಯ ಮಾತೇನೂ ಅಲ್ಲ. ಈ ಮಾತಿಗೆ ಪೂರಕವಾಗಿ ಅವರ ಜೀವನದಲ್ಲಿ ನಡೆದ ಅನೇಕ ಘಟನೆಗಳನ್ನು ಉದಾಹರಿಸಬಹುದು. ಸಾಂದರ್ಭಿಕವಾಗಿ ಒಂದನ್ನು ಮಾತ್ರ ಇಲ್ಲಿ ನಿರೂಪಿಸುತ್ತಿದ್ದೇನೆ.

ಬ್ರಾಹ್ಮೀ ಮುಹೂರ್ತದಲ್ಲಿ–ಅಂದರೆ ಮುಂಜಾನೆ ಸುಮಾರು 4 ಗಂಟೆಯ ಸಮೀಪದಲ್ಲಿ ಯತೀಂದ್ರರು ದೇಗುಲದ ಸಮೀಪದಲ್ಲಿದ್ದ ಕೊಳವೊಂದಕ್ಕೆ ತಮ್ಮ ಆಪ್ತ ಶಿಷ್ಯರೊಂದಿಗೆ ನೀರಿಗೆ ಇಳಿಯುತ್ತಾರೆ. ಶಿಷ್ಯರೆಲ್ಲರೂ ಸ್ನಾನ ಮುಗಿಸಿ ಮೇಲೆ ಬಂದರೂ ಗುರುಗಳು ಮಾತ್ರ ನೀರಿನಿಂದ ಮೇಲೆ ಬರುವುದೇ ಇಲ್ಲ. ನೀರಿನಲ್ಲಿ ಮುಳುಗಿದ ಗುರುಗಳು ಮೇಲೆದ್ದು ಬರುವರೆಂದು ತಮ್ಮ ಶಿಷ್ಯರು ಸುಮಾರು ಗಂಟೆಗಳ ಕಾದು ಕುಳಿತುರುತ್ತಾರೆ. ಆದರೆ ಎಷ್ಟೋ ಹೊತ್ತಾದರೂ ಬಾರದ ಗುರುಗಳು, ನೀರಿನಲ್ಲಿ ಮುಳುಗಿ ಹೋಗಿರಬೇಕೆಂದು ಭಾವಿಸಿ ಭಯ ಭೀತರಾಗುತ್ತಾರೆ. ಸುದ್ದಿ ಕೈವಾರದ ಊರಿನಲ್ಲಿ ಬಿತ್ತರವಾಗಿ ಊರ ಜನ ಕೊಳದ ಬಳಿ ಜಮಾಯಿಸುತ್ತಾರೆ. ಆಗ ಎಲ್ಲರ ಸಮ್ಮುಖದಲ್ಲಿ ನೀರಿನಿಂದ ಮೇಲೆದ್ದು ಬಂದು, 'ಏಕೆ ಗಾಬರಿಯಾಗಿದ್ದೀರಿ' ಎಂದು ಕೇಳುತ್ತಾರೆ. ಆಗ ಶಿಷ್ಯರು, 'ಗುರುಗಳು ಒಂದು ಗಂಟೆಗೂ ಹೆಚ್ಚು ಕಾಲ ನೀರಿನಲ್ಲಿದ್ದುದನ್ನು ಹೇಳಿದ್ದಾಗ. ಅವರು ಉತ್ತರಿಸಿದ್ದು, 'ನಾನು ತಿರುಪತಿಗೆ ಹೋಗಿದ್ದೆ' ಎಂದು. ಇದನ್ನು ತಮಾಷೆಯ ಮಾತೆಂದು ತಿಳಿದ ಜನರಿಗೆ ಒಂದು ಅಚ್ಚರಿಯೆ ಕಾದಿತ್ತು. ಗುರುಗಳು ನಿಜಕ್ಕೂ ಅಂದು ತಿರುಪತಿಗೆ ಹೋಗಿ ಶ್ರೀನಿವಾಸನ ದರ್ಶನ ಮಾಡಿಬಂದಿದ್ದರು. ಈ ಅಂಶವನ್ನು ಊರ ಹಿರಿಯರು ಸ್ವತಃ ತಿರುಪತಿಯ ದೇಗುಲದ ಸಮೀಪವರ್ತಿಗಳಿಂದ ಖಾತರಿಪಡಿಸಿಕೊಂಡರಂತೆ.



ತಾತಯ್ಯನವರಂತಹ ಯೋಗಿಗಳಿಗೆ, ಶ್ರೀರಾಮ ಭಕ್ತರಿಗೆ ಯಾವುದು ತಾನೇ ಅಸಾಧ್ಯ–'ಕಿಮಲಭ್ಯಂ ಭಗವತೀ ಪ್ರಸನ್ನೇ ಶ್ರೀ ನಿಕೇತನೆ?'

ಹೀಗೆಂದ ಮಾತ್ರಕ್ಕೆ ತಾತಯ್ಯನವರು ತಿರುಪತಿಗೆ ಹೋಗಿರಲಿಲ್ಲವೆಂದಲ್ಲ. ಅವರು ಮುಳಬಾಗಿಲಿನ ಮೂಲಕ ತಿರುಪತಿಗೆ ಪ್ರಯಾಣ ಮಾಡಿದ್ದುಂಟು. ಅಂದಿನ ಕಾಲದಲ್ಲಿ ತಿರುಪತಿಗೆ ಹೋಗಲು ಪೂರ್ವ ದಿಕ್ಕಿನ ಮಾರ್ಗವೆಂದರೆ ಅದು ಮೂಡಣ ಬಾಗಿಲು ಅಥವಾ ಮುಳಬಾಗಿಲು. ಆ ಸ್ಥಳದ ವಿದ್ಯಾ ಕೇಂದ್ರವೆ ಶ್ರೀಪಾದರಾಜರ ಮಠ. ಶ್ರೀಪಾದರಾಜರೆಂದರೆ ಮಾಧ್ವ ಪರಂಪರೆಯಲ್ಲಿ ಬಂದ ಶ್ರೇಷ್ಠ ಯತಿವರ್ಯರು. ಆಚಾರ್ಯ ಶ್ರೀ ಮಧ್ವರ ಪ್ರಥಮ ಶಿಷ್ಯರಲ್ಲೊಬ್ಬರಾದ ಪದ್ಮನಾಭತೀರ್ಥರ ಪೀಳಿಗೆಯಲ್ಲಿ ಬಂದು ಶ್ರೀರಂಗಂನ ಮಾಧ್ವ ಪೀಠದ ಯತಿಗಳಾಗಿದ್ದವರು. ಅವರ ಮೂಲ ಬೃಂದಾವನ ಮುಳಬಾಗಿಲಿನ ಸಮೀಪದ ನರಸಿಂಹ ತೀರ್ಥ ಎಂಬ ಸ್ಥಳದಲ್ಲಿದೆ. ನಮ್ಮ ಯತೀಂದ್ರರು ತಿರುಪತಿಗೆ ಹೋಗುವ ಸಮಯದಲ್ಲಿ ಅಲ್ಲಿಗೆ ಭೇಟಿಯಿತ್ತು ಕೀರ್ತನವೊಂದನ್ನು ಹೇಳಿದರಂತೆ. ಅದನ್ನು ಕೇಳಿದ ಜನ ಆ ಕೃತಿ 'ಕನಕಸಾದರದೋ ಪುರಂದರದಾಸರದೋ ಇರಬೇಕೆಂದು ಭಾವಿಸಿದರಂತೆ. ಕುತೂಹಲ ತಡೆಯದೆ ಕೆಲವರು ತಾತಯ್ಯನವರನ್ನೇ ಕೇಳಿದಾಗ, ವಿನಯಿಗಳಾದ ಅವರು ಹೇಳಿದ್ದು, 'ಅಯ್ಯಾ, ನಾನೆಲ್ಲಿ, ಅವರೆಲ್ಲಿ? ನಾನು 'ಕನಕದಾಸರ ಮನೆಯ ಕಸ ಗುಡಿಸೋ ಬಡದಾಸ, ಪುರಂದರದಾಸರಿಗೆ ಮಡಿ ಮಾಡೋ ದಾಸ.' ಗುರು ನಾರೇಯಣರ ಸರಳತೆಯ ಸಜ್ಜನಿಕೆಯನ್ನು ನೋಡಿ ತಾವು ಯಾರೆಂದು ಕೇಳಿದಾಗ ಅವರು ಕೊಟ್ಟ ಮಾರ್ಮಿಕ ಉತ್ತರ 'ನಾನೊಬ್ಬ ಬಡದಾಸ. ಅಂಗನೆಯರ ಮುಂಗೈಗೆ ಬಂಗಾರ ತೊಡಿಸಿದ ಕುಂದಣಗಾರ ನಾನು. ಮಲ್ಲಾರ ಹೊತ್ತ ಬಳೆಗಾರ ನಾನು.'

ಅಲ್ಲಿಂದ ಮುಂದೆ ಹೊರಟಾಗ ಸಮೀಪದ ಕಪ್ಪಲ ಮಡವು ಎಂಬ ಗ್ರಾಮದ ಕಟ್ಟೆಯೊಂದರ ಮೇಲೆ ಅವರು ಕಂಡದ್ದು ಶ್ರೀರಾಮ, ಲಕ್ಷ್ಮಣ, ಸೀತೆಯರ ಸಣ್ಣ ವಿಗ್ರಹಗಳು. ವಿಶ್ರಾಂತಿಗಾಗಿ ಕಟ್ಟೆಯ ಮೇಲೆ ಕುಳಿತ ತಾತಯ್ಯನವರ ಬಾಯಿಯಿಂದ ಹೊರಟ ಭಕ್ತಿಗೀತ–'ರಾಮಾ ನಿನ್ನೇ ನಮ್ಮಿನಾನುರಾ' ಅದರ ಆರಂಭದ ನಾಲ್ಕು ಸಾಲು ಓದುಗರ ನೆನಪಿಗಾಗಿ:

**ರಾಮಾ ನಿನ್ನೇ ನಮ್ಮಿನಾನುರಾ – ಮಾಪಾಲಿ ಸೀತಾ–**
**ರಾಮಾ ನಿನ್ನೇ ನಮ್ಮಿನಾನುರಾ**
**ರಾಮಾ ನಿನ್ನೇ ನಮ್ಮಿನಾನು–ಕಲ್ಲಲಾಡಲೇನು ನೇನು ।**
**ಭಜಿಯಿಂತು ಯೇ ವೇಳ ನಿನ್ನ–ಕಾಚಿ ರಕ್ಷಿಂಚು ನನ್ನೂ ॥**

(ಹೇ ರಾಮಾ, ನಾನು ನಿನ್ನನ್ನೇ ನಂಬಿದ್ದೇನೆ. ಇದು ಸುಳ್ಳಲ್ಲ. ಸದಾ ನಿನ್ನನ್ನೆ ಭಜಿಸುತ್ತಿರುವ ನನ್ನನ್ನು ಕಾಪಾಡು, ರಕ್ಷಿಸು.)

ಹೀಗೆ ದಾರಿಯುದ್ದಕ್ಕೂ ಶ್ರೀರಾಮನನ್ನು ಭಜಿಸುತ್ತಾ ತಿರುಪತಿಯನ್ನು ಸೇರಿದ ನಮ್ಮ ತಾತಯ್ಯನವರಿಗೆ ವೇಂಕಟರಮಣ ದರ್ಶನ ಕೊಟ್ಟ ಪರಿಯಾದರೂ ಎಂತಹುದು?

ತಿರುಪತಿಯಲ್ಲಿ ಅದು ಬ್ರಹ್ಮೋತ್ಸವದ ಸಮಯ. ಭಕ್ತರು ಅಪಾರ ಸಂಖ್ಯೆಯಲ್ಲಿ ನೆರೆದಿದ್ದಾರೆ. ದೇಗುಲ ಪ್ರವೇಶವಂತೂ ಕಷ್ಟತಮವೇ. ಆ ನೂಕು ನುಗ್ಗಲಿನಲ್ಲಿ ತಾತಯ್ಯನವರು ತಮ್ಮ ಶಿಷ್ಯನೊಬ್ಬನೊಂದಿಗೆ ಬಾಗಿಲ ಬಳಿ ಬಂದಿದ್ದಾರೆ. ಅಲ್ಲಿಯ ಕಾವಲುಗಾರರಿಗೆ ಇವರು ಕಂಡಿದ್ದು ಭಿಕ್ಷುಕರ ಹಾಗೆ. ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ ಹಳ್ಳಿಯಿಂದ ಬಂದ ಅವರ ಮೊಗ ಕ್ಷೌರವಿಲ್ಲದ್ದು. ಹಾಕಿದ್ದ ಬಟ್ಟೆ ಅಂದ ಚೆಂದವಿಲ್ಲ ದೊಗಲು. ಕಾವಲುಗಾರರು ಈ 'ಭಿಕ್ಷುಕ'ರನ್ನು ಗದರಿಸಿ ಓಡಿಸಿ ಬಿಡುತ್ತಾರೆ. ಮನನೊಂದ 'ಭಿಕ್ಷುಕರು' ದೇವಸ್ಥಾನದ ಹಿಂಬದಿಗೆ ಬಂದು ನಿಸ್ಸಹಾಯಕರಾಗಿ ಧ್ಯಾನಕ್ಕೆ ತೊಡಗುತ್ತಾರೆ.

**ವೇಂಕಟಾಚಲರಮಣ–ಸಾಮಜಪ್ರಿಯ ಕರುಣಾ ।**
**ಮಕರಕುಂಡಲಾಭರಣಾ–ಮಾರೀಚ ಮದಹರಣಾ ॥**

ಇಲ್ಲಿ ಇವರ ಸ್ತುತಿ ಹೀಗೆ ಸಾಗಿರಲು ಅತ್ತ, ದೇಗುಲದ ಮುಂದೆ ಉತ್ಸವ ಮೂರ್ತಿಯನ್ನು ತಂದು ರಥದಲ್ಲಿ ಅಲಂಕರಿಸಲಾಗಿದೆ. ಜೀಯಾರುಗಳು ಅರ್ಚಿಸಿ ರಥವನ್ನು ಭಕ್ತರು ಎಳೆಯಲು ಆರಂಭಿಸುತ್ತಾರೆ. ನೂರಾರು ಭಕ್ತರು ದೂಡಿದರೂ ರಥ ಒಂದಿನಿತು ಮುಂದೆ ಸಾಗುವುದಿಲ್ಲ. ಇದರಿಂದ ಅರ್ಚಕರಿಗೆ, ದೇವಸ್ಥಾನದ ಉಸ್ತುವಾರಿದಾರರಿಗೆ ಏನೋ ಅಪಚಾರ ನಡೆದಿದೆ. ತಿಮ್ಮಪ್ಪನಿಗೆ ಯಾರೋ ಮನ ನೋಯಿಸಿದ್ದಾರೆ ಎಂದು ಮನವರಿಕೆಯಾಗಿ ಕಾವಲುಗಾರರನ್ನು ವಿಚಾರಿಸಿದಾಗ ಅವರು ತಮ್ಮಿಂದ ಏನು ಪ್ರಮಾದವಾಗಿಲ್ಲವೆಂದು ತಾವು ಈರ್ವರು ಭಿಕ್ಷುಕರನ್ನು ಬಿಟ್ಟು ಬೇರೆ ಯಾರನ್ನೂ ನಿಂದಿಸಲಿಲ್ಲವೆಂದು ಹೇಳುತ್ತಾರೆ. 'ಭಿಕ್ಷುಕ'ರಿಗಾಗಿ ಹುಡುಕಾಟ ನಡೆದು, ತಾತಯ್ಯನವರನ್ನು ಹಾಗೂ ಅವರ ಶಿಷ್ಯನನ್ನು ರಥದ ಮುಂದೆ ತಂದು ನಿಲ್ಲಿಸಲಾಗುತ್ತದೆ. ತಾತಯ್ಯನವರ ಕಣ್ಣುಗಳಿಂದ ಕೃತಜ್ಞತೆಯ ಆನಂದಾಶ್ರುಗಳು ಸುರಿಯಲಾರಂಭಿಸುತ್ತವೆ. ತಿಮ್ಮಪ್ಪ ತನ್ನ ಕೈ ಬಿಡಲಿಲ್ಲವೆಂಬ ಸಂತಸದಿಂದ

'ಗೋವಿಂದ, ಗೋವಿಂದ–ಯಾರಿಗೂ ಬೇಡವಾದ ಈ ಭಿಕ್ಷುಕನಿಗೆ ನೀನೆ ಭಿಕ್ಷೆ ನೀಡಿದೆಯಾ' ಎಂದು ಸ್ತುತಿಸಲಾರಂಭಿಸುತ್ತಾರೆ. ಏನಾಶ್ಚರ್ಯ? ಯಾರೂ ಎಳೆಯದಿದ್ದರೂ ರಥ ಚಲಿಸಲಾರಂಭಿಸುತ್ತದೆ. ತಾತಯ್ಯನವರ ಹಿರಿಮೆಯನ್ನು ಮೂಢ ಜನರಿಗೆ ತೋರಿಸಲು ಭಗವಂತನಾಡಿದ ಲೀಲೆ ಇದೆಂದರೆ ತಪ್ಪಾಗಲಾರದು.

ತಾತಯ್ಯನವರ ಜನಪ್ರಿಯ ಕೀರ್ತನೆ ಕಾಂಬೋಧಿ ರಾಗದ 'ರಾಮ ರಾಮ ಮುಕುಂದ ಮಾಧವ–ರಾಮ ಸದ್ಗುರು ಕೇಶವಾ ರಾಮ ದಶರಥ ತನಯ ದೇವಾ–ರಾಮ ಶ್ರೀ ನಾರೇಯಣಾ'ವನ್ನು ಜನಪ್ರಿಯ ಗಾಯಕರ ದನಿಯಲ್ಲಿ ಕೇಳುವುದೇ ಚೆಂದ. ಅದರಂತೆಯೇ,

'ಕುಂಡಲೀಶಯನಾ – ಕೋ–ದಂಡ ಪಾಣಿ । ವು
ದ್ದಂಡ ಪರಾಕ್ರಮ –ನಿಂಡ ದಯ ಚೂಡರಾ॥'
'ಜಯಸೀತಾರಾಮ–ಜಗನ್ನಾಥ–ಜಯಸೀತಾರಾಮ
ಜಯನವಗುಣಹಾರ–ಜಯಸುಂದರಾಕಾರ ।
ಜಯಭಕ್ತಮಂದಾರ–ಜಯ ವಿಠಲೇಶ್ವರ ॥'

'ರಾಘವ ನಾಮ ಜಪಂ–ಸದ್ಗುರು' 'ದೈವ ಶಿಖಾಮಣಿರಾಮಾ–ಭಕ್ತಪಾಲನ ಶ್ರೀರಂಗಧಾಮಾ' 'ರಾಮಂ ಭಜೇ–ಕೃಷ್ಣ–ರಾಮಂ ಭಜೇ । ರಘು ರಾಮಂ ಭಜೇ॥' ಮುಂತಾದ ಕೀರ್ತನೆಗಳು–ಅವುಗಳ ಗಾಯನ ನಮ್ಮನ್ನು ಬೇರೊಂದೆ ಲೋಕಕ್ಕೆ ಒಯ್ಯುತ್ತದೆ.

ಕೈವಾರದ ತಾತಯ್ಯನವರ ಸಮಾಧಿಯನ್ನು, ದೇಗುಲದ ಹಿಂದಿರುವ ಕಿಂಡಿಯಿಂದ ನೋಡುತ್ತಿದ್ದೇನೆ. ಸುಶ್ರಾವ್ಯವಾದ ನಾಮಜಪವೊಂದು ಕೇಳಿಬರುತ್ತಿದೆ. ಆ ಗಾಯನ ಸಮಾಧಿಯಲ್ಲಿ ಯೋಗ ನಿದ್ರೆಯಲ್ಲಿರುವ ತಾತಯ್ಯನವರ ಬಾಯಿಂದ ಬರುತ್ತಿದೆಯೋ ಅಥವಾ ಹೊರಗೆ ನಾದಸುಧಾರಸ ಮಂಟಪದಲ್ಲಿರುವ ನಾರೇಯಣ ಭಕ್ತರು ಉಸುರುತ್ತಿದ್ದಾರೆಯೋ ತಿಳಿಯದಾಗಿದೆ. ಆ ಮಧುರ ಗೀತೆಯಾದರೂ ಯಾವುದು? ಯಾರ ನಾಮಸ್ತುತಿ ಮಾಡುತ್ತಿದ್ದಾರೆ ಗುರುಗಳು? ಯಾರ ನಾಮ ಜಪಿಸಬೇಕೆಂದು ಹೇಳುತ್ತಿದ್ದಾರೆ ನಮಗೆ?

"ಆತ್ಮ ಧ್ಯಾನಿಸೋ ಮನುಜ–ಹರಿ ಪುಣ್ಯನಾಮ...." ಈ ಕೀರ್ತನೆಯೇ ಜಪಿಸೆಂದು ಹೇಳುತ್ತಿರುವುದು.

**೪೨೨, 'ಚಂದ್ರಿಕ' ೫ನೇ ರಸ್ತೆ, ಹೆಚ್.ಬಿ.ಆರ್. ಲೇಔಟ್,**
**ಬೆಂಗಳೂರು–೫೬೦ ೦೪೩.**



ಶ್ರೀ ರಾಮಾನುಜ ವೈಭವ-48

● ಡಾ. ಬಾಬು ಕೃಷ್ಣಮೂರ್ತಿ

# ಮೇಲುಕೋಟೆಯಿಂದ ಶ್ರೀರಂಗಂಗೆ...

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

ನಿಶ್ಚಯವಾದ ಅನಂತರ ಶ್ರೀನರಸಿಂಹಸ್ವಾಮಿಯ ದೇವಸ್ಥಾನವಿದ್ದ ಬೆಟ್ಟವನ್ನು ಹತ್ತಿ ಸ್ವಾಮಿಯ ಅರ್ಚನೆ ಮಾಡಿ, ತೀರ್ಥ ಪ್ರಸಾದಗಳನ್ನು ಸ್ವೀಕರಿಸಿ ತಾವು ಶ್ರೀರಂಗಕ್ಕೆ ಹಿಂದಿರುಗುತ್ತಿರುವ ಸಂಗತಿಯನ್ನು ಸ್ವಾಮಿಗೆ ನಿವೇದಿಸಿದರು.

ರಾಮಾನುಜರ ಸುದೀರ್ಘ ಸಂಪೂರ್ಣ ಭಕ್ತಿ, ಪ್ರಪತ್ತಿಗಳ ಫಲವಾಗಿ ಅವರಿಗೆ ಶ್ರೀಹರಿಯೊಂದಿಗೆ ಮಾನಸಿಕ ಅನುಸಂಧಾನ ಸಾಧ್ಯವಾಗಿತ್ತು. ಯಾವುದೇ ಭಾಷೆಯ ಸಹಾಯವಿಲ್ಲದೆ ರಾಮಾನುಜರ ಹೃದಯದಿಂದ ಶ್ರೀಹರಿಯ ಹೃದಯಕ್ಕೆ ಭಾವನೆಗಳು, ವಿಚಾರಗಳೂ ಸಂವಹನಗೊಳ್ಳುತ್ತಿದ್ದವು. ಅಂತೆಯೇ ಅವರ ನಿವೇದನೆಯನ್ನು ಆಲಿಸಿದ ಶ್ರೀನರಸಿಂಹಸ್ವಾಮಿ ಆ ಮೂಲಕವೇ ಅವರನ್ನು ಅನುಮತಿಸಿ ಆಶೀರ್ವದಿಸಿದ.

ಅನಂತರ ಚೆಲುವನಾರಾಯಣನನ್ನು ಅರ್ಚಿಸಿ, ಸೇವಿಸಿ 'ಐಂಬತ್ತಿರುವರ್'ರಿಗೆ ಕರೆ ಕಳಿಸಿದರು.

"ನಾವು ಈಗ ಮೇಲುಕೋಟೆಯನ್ನು ತೊರೆದು ಶ್ರೀರಂಗಕ್ಕೆ ಹಿಂದಿರುಗಲು ನಿಶ್ಚಯಿಸಿದ್ದೇವೆ. ನಾವು ಇಲ್ಲಿ ಇಲ್ಲ ಎಂಬ ಕಾರಣಕ್ಕೆ ಇಲ್ಲಿ ತಿರುನಾರಾಯಣಸ್ವಾಮಿ ಮತ್ತು ಚೆಲುವನಾರಾಯಣರ ಪೂಜಾ ಕೈಂಕರ್ಯಕ್ಕೆ ಯಾವುದೇ ರೀತಿಯ ಅಡಚಣೆಯಾಗಲಿ ಅಪಚಾರವಾಗಲಿ ಆಗ ಕೂಡದು. ಅದು ನಿಮ್ಮ ಹೊಣೆಗಾರಿಕೆ...ಇಲ್ಲಿ ನೀವು ಅನುಸರಿಸಬೇಕಾದ ಎಲ್ಲ ಕ್ರಮಗಳ ಬಗ್ಗೆ, ಆಚಾರ ವಿಚಾರಗಳ ಬಗ್ಗೆ, ಆದಾಯ ಖರ್ಚುಗಳ ಬಗ್ಗೆ ಎಲ್ಲವನ್ನೂ ಲಿಖಿತಬದ್ಧಗೊಳಿಸುತ್ತೇವೆ. ಶ್ರೀಮನ್ನಾರಾಯಣನ ಸನ್ನಿಧಾನಕ್ಕೆ ಬರುವ ದಾನ, ದತ್ತಿಗಳು ಬಹು ಪವಿತ್ರವಾದವು. ಒಂದೊಂದು ಕಾಸೂ ಮಹತ್ತ್ವದ್ದು. ಪೂಜಾ ಸೇವಾದಿ ಕಾರ್ಯಗಳಿಗೆ ಇಲ್ಲಿನ ಪರಿವಾರದ ಖರ್ಚುಗಳಿಗೆ, ಪ್ರಸಾದಕ್ಕೆ, ಅಲಂಕಾರಗಳಿಗೆ ಮುಂತಾದ ಪ್ರತಿಯೊಂದು ಸಂಗತಿಗು ವೆಚ್ಚವಾಗುವ ಹಣದ ಲೆಕ್ಕಾಚಾರವನ್ನು ಲಿಖಿತಬದ್ಧಗೊಳಿಸಿ ಆ ತಾಳೆಗರಿಗಳನ್ನು ಸಂಗ್ರಹಿಸಿಡಬೇಕು. ಇದು ಪಾರುಪತ್ತೆಗಾರರ ಕೆಲಸ. ಈ ಕರ್ತವ್ಯದಲ್ಲಿ ಎಳ್ಳಷ್ಟು ಅಪಚಾರವಾದರೂ ತಿರುನಾರಾಯಣನಿಗೆ ದ್ರೋಹ ಬಗೆದಂತೆ. ಅದು ಅಕ್ಷಮ್ಯ ಅಪರಾಧ! ಹಾಗೆ ಮಾಡಿದವರಿಗೆ ರೌರವ ನರಕ ಪ್ರಾಪ್ತಿ. ಆ ಕೆಲಸವನ್ನು ಶ್ರದ್ಧೆ ಭಕ್ತಿ ಪ್ರಪತ್ತಿಗಳಿಂದ ಮಾಡಿದವರಿಗೆ ವೈಕುಂಠವಾಸ ನಿಶ್ಚಿತ..." ಎಂದು ಎಲ್ಲವನ್ನೂ ವಿಶದವಾಗಿ ವಿವರಿಸಿ, ತಮ್ಮ ಹಸ್ತಲಿಪಿಯಲ್ಲೇ ಎಲ್ಲ ಸೂಚನೆಗಳನ್ನು ಬರೆದುಕೊಟ್ಟರು.

ರಾಮಾನುಜರು ಮೇಲುಕೋಟೆಯನ್ನು ತೊರೆಯುವರೆಂಬ ಸುದ್ದಿ ಕೇಳಿ ಅಲ್ಲಿನ ಪುರವಾಸಿಗಳಿಗೆ ಭರಿಸಲಾಗದಷ್ಟು ದುಃಖವಾಯಿತು. ಎಲ್ಲರೂ ಗುಂಪು ಕಟ್ಟಿಕೊಂಡು ಅವರ ಬಳಿಗೆ ಬಂದರು. ಅವರನ್ನು ಅಗಲಿರಲಾರರೆಂದು ಮೊರೆ ಇಟ್ಟರು. ಅವರು ಮೇಲುಕೋಟೆ ಬಿಟ್ಟು ಹೋಗಬಾರದೆಂದು ದುಂಬಾಲು ಬಿದ್ದರು. ರಾಮಾನುಜರಿಗೆ ಅವರನ್ನು ಸಮಾಧಾನಪಡಿಸದೆ ಅಲ್ಲಿಂದ ತೆರಳುವುದು ಕಷ್ಟಕರವಾಯಿತು.



ಕೊನೆಗೆ ತಮ್ಮ ಬದಲಾಗಿ ತಮ್ಮ ಅರ್ಚಾಮೂರ್ತಿಯೊಂದನ್ನು ನಿರ್ಮಿಸಲು ತಿಳಿಸಿ, "ನನ್ನ ಬದಲು ಈ ಮೂರ್ತಿ ಇಲ್ಲಿರುತ್ತದೆ. ನಮ್ಮ ವೈಷ್ಣವ ಪರಂಪರೆಯಲ್ಲಿ ಮೂರ್ತಿಪೂಜೆಗೆ ಬಹಳ ಮಹತ್ತ್ವವಿದೆ. ಜಡ ವಿಗ್ರಹಗಳಲ್ಲಿ ನಾವು ಭಗವಂತನನ್ನೇ ಕಾಣುವವರು. ಹೀಗಾಗಿ ನೀವೆಲ್ಲರೂ ನಾವೇ ಈ ಮೂರ್ತಿಯಲ್ಲಿ ನೆಲೆಸಿದ್ದೇವೆ ಎಂದು ಭಾವಿಸಿ ಸಮಾಧಾನ ತಂದುಕೊಳ್ಳಬೇಕು."

ಮೂರ್ತಿಯು ರಾಮಾನುಜರಿರುವಾಗಲೇ ನಿರ್ಮಾಣವಾಯಿತು. ಅವರೇ ತಮ್ಮ ಮೂರ್ತಿಯಲ್ಲಿ ಪ್ರಾಣ ಪ್ರತಿಷ್ಠೆ ಮಾಡಿದರು. ಅದರ ಪರಿಣಾಮ ಅವರ ಶಕ್ತಿಯಲ್ಲಿ ಸ್ವಲ್ಪ ಕುಸಿತ!

ಸುಮಾರು ಹದಿನೆಂಟು ವರ್ಷಗಳ ಕಾಲ ತಿರುನಾರಾಯಣನ ಸನ್ನಿಧಿಯಲ್ಲಿ ಕಳೆದಿದ್ದ ರಾಮಾನುಜರಿಗೆ ಮೇಲುಕೋಟೆಯ ಪರಿಸರ, ಬೆಟ್ಟದ ಮೇಲಿನ ನರಸಿಂಹ, ಅಲ್ಲಿನ ಕಲ್ಯಾಣಿ, ತಿರುನಾರಾಯಣ–ಚೆಲುವನಾರಾಯಣ ಸನ್ನಿಧಿಗಳನ್ನು ಬಿಟ್ಟುಹೋಗುವುದು ಬಹು ಕಷ್ಟಸಾಧ್ಯವಾಯಿತು. ವಿಷ್ಣುವರ್ಧನ ಮಹಾರಾಜನು ಅವರ ಪ್ರಯಾಣಕ್ಕೆ ಅನುಕೂಲವಾಗುವಂತೆ ಪಲ್ಲಕ್ಕಿ, ಅದನ್ನು ಹೊರಲು ವಾಹಕರಾದ ಬೋಯಿಗಳು, ಪಹರೆಯ ಸೈನಿಕರು ಹಾಗೂ ಇತರ ಸಿಬ್ಬಂದಿವರ್ಗವನ್ನು ನಿಯುಕ್ತಿಗೊಳಿಸಿದರು.

ರಾಮಾನುಜರು ಕೊನೆಯ ಬಾರಿ ತಿರುನಾರಾಯಣ–ಚೆಲುವನಾರಾಯಣರಿಗೆ ನಮಿಸಿ ಭಾವಗರ್ಭಿತರಾಗಿ ಕಣ್ಣೀರ್ಗರೆಯುತ್ತಾ ಗರ್ಭಗುಡಿಯಿಂದ ಹೊರಬಂದಾಗ ಇಡೀ ಮೇಲುಕೋಟೆಯೇ ಅಲ್ಲಿ ನೆರೆದಿತ್ತು. ಅದರಲ್ಲೂ ರಾಮಾನುಜರ ವಿಶೇಷ ಪ್ರೀತಿಗೆ ಪಾತ್ರರಾಗಿದ್ದ ಪಂಚಮರು, ಅಂತ್ಯಜರು ಅಥವಾ ಚಂಡಾಲರು ಎಂದು ಕರೆಸಿಕೊಂಡಿದ್ದ ಮುಗ್ಧ ಜನರೂ ಅಲ್ಲಿಗೆ ಬಂದಿದ್ದರು. ರಾಮಾನುಜರು ಪಲ್ಲಕ್ಕಿ ಹತ್ತುವವರೆಗೆ ಅವರ ಪ್ರತಿ ಹೆಜ್ಜೆಗೂ ಎಲ್ಲರೂ ಅಡ್ಡ ಬೀಳುವವರೇ. ಬಹು ಕಷ್ಟದಿಂದ ಹೆಜ್ಜೆ ಇರಿಸುತ್ತಾ ಪಲ್ಲಕ್ಕಿಯ ಬಳಿಗೆ ಹೋಗಿ ಪಲ್ಲಕ್ಕಿ ಹತ್ತಿ 'ಜೈ ಶ್ರೀಮನ್ನಾರಾಯಣ' ಎಂದರು. ಎಲ್ಲರೂ ಅದನ್ನು ಪ್ರತಿಧ್ವನಿಸಿದರು.

ರಾಮಾನುಜರ ಶಿಷ್ಯರಾದ ದಾಶರಥಿ, ಗೋವಿಂದ, ತೊಂಡನೂರು ನಂಬಿ, ಆಂಧ್ರಪೂರ್ಣ ಮುಂತಾದವರೂ ಪಲ್ಲಕ್ಕಿಯನ್ನು ಹಿಂಬಾಲಿಸಿದರು. ಎಲ್ಲರೂ ಏಕಕಂಠದಿಂದ 'ಭಜ ಯತಿರಾಜಂ ಭಜ ಯತಿರಾಜಂ ಭಜ ಯತಿರಾಜಂ ಭವ ಭೀರೋ' ಎಂದು ಭಜಿಸುತ್ತಾ ಹೆಜ್ಜೆ ಹಾಕಿದರು.

ಇಪ್ಪತ್ತು ವರ್ಷಗಳ ಹಿಂದೆ ಶ್ವೇತ ವಸ್ತ್ರಧಾರಿಯಾಗಿ, ಗೃಹಸ್ಥನ ವೇಷದಲ್ಲಿ ಅನಾಮಧೇಯರಂತೆ ಶ್ರೀರಂಗಂ ತೊರೆದಿದ್ದ ರಾಮಾನುಜರು ಆಗ ಹೊಯ್ಸಳ ರಾಜ ವಿಷ್ಣುವರ್ಧನ ರಾಜ ಲಾಂಛನಗಳೊಡನೆ ಪುರ ಪ್ರವೇಶ ಮಾಡಿದರು. ಈಗ ವಿಜೃಂಭಣೆಯಿಂದಿಲ್ಲದಿದ್ದರೂ ನಿರಾತಂಕವಾಗಿ ಶ್ರೀರಂಗನಾಥನ ಸನ್ನಿಧಿಯನ್ನು ಸೇರಿದರು.

ರಂಗನಾಥನ ಪೂಜಾ ಕೈಂಕರ್ಯಗಳು ದೇವಸ್ಥಾನದಲ್ಲಿ ನಡೆಯುತ್ತಿದ್ದರೂ ಅರ್ಚಕರು ಯಾಂತ್ರಿಕವಾಗಿ ಅದನ್ನು ನೆರವೇರಿಸುತ್ತಿದ್ದರು. ರಾಮಾನುಜರಿದ್ದ ಕಾಲದಲ್ಲಿನ ಉತ್ಸಾಹ, ಸಂಭ್ರಮ, ಚಟುವಟಿಕೆಯ ನಡೆ ನುಡಿ ಅದೃಶ್ಯವಾಗಿತ್ತು. ಅದೆಲ್ಲವನ್ನು ಗಮನಿಸಿದ ರಾಮಾನುಜರು ಮನಸ್ಸಿನಲ್ಲಿಯೇ ನೊಂದುಕೊಂಡರು.

ಪರಮ ಸಾತ್ತ್ವಿಕರಾದ ರಾಮಾನುಜರು ಈಗ ಶತಾಯುಗಳಾಗಿದ್ದರು. ದೇಹಶಕ್ತಿ ಉಡುಗಿಹೋಗಿತ್ತು. ಬರಬರುತ್ತಾ ಪ್ರವಾಸ ಮಾಡುವುದೂ ಕಷ್ಟಕರವಾಗಿ ಅವರು ಬಹುಪಾಲು ಶ್ರೀರಂಗಂ ಶ್ರೀಮಠದಲ್ಲಿಯೇ ಕಾಲಯಾಪನೆ ಮಾಡುತ್ತಿದ್ದರು. ಬರವಣಿಗೆಯನ್ನು ಮುಂದುವರಿಸಿದರು. ವಿಷ್ಣು ಚಿತ್ತರೆಂಬ ಶಿಷ್ಯರು ಗುರುಗಳ ಮಾತುಗಳನ್ನು ಬರೆದುಕೊಳ್ಳುತ್ತಿದ್ದರು. ರಾಮಾನುಜರು ಹೀಗೆ ಶರಣಾಗತಿ ಗದ್ಯ, ಶ್ರೀರಂಗ ಗದ್ಯ, ಶ್ರೀವೈಕುಂಠ ಗದ್ಯಗಳೆಂಬ ಗದ್ಯತ್ರಯವನ್ನು ರಚಿಸಿದರು.

ಹಿಂದೆ ಕೂರೇಶ ಲಿಪಿಬದ್ಧಗೊಳಿಸಿದ ಶ್ರೀಭಾಷ್ಯವು ರಾಮಾನುಜರಿಗೆ ಅಪೂರ್ಣವೆನ್ನಿಸಿ ಉಳಿದ ಭಾಗವನ್ನು ಶ್ರೀ ವಿಷ್ಣು ಚಿತ್ತರಿಗೆ ಉಕ್ತ ಲೇಖನ ಹೇಳಿ ಬರೆಯಿಸಿದರು.

ರಾಮಾನುಜರು ಮಠ ಪ್ರವೇಶ ಮಾಡಿದಾಗಿನಿಂದ ಭಕ್ತ ಜನರು ಹೆಚ್ಚಿನ ಸಂಖ್ಯೆಯಲ್ಲಿ ಅವರ ದರ್ಶನಕ್ಕಾಗಿ ಬರಲಾರಂಭಿಸಿದರು. ಹೀಗೆ ಮತ್ತೊಮ್ಮೆ ರಂಗನಾಥಸ್ವಾಮಿ ದೇವಾಲಯದಲ್ಲಿ ನವಚೈತನ್ಯ ಕಂಡು ಬಂತು.

ರಾಮಾನುಜರು ಶ್ರೀಮಠಕ್ಕೆ ಬಂದ ಕೂಡಲೇ ಮಾಡಿದ ಮೊದಲ ಕೆಲಸಗಳಲ್ಲಿ ಒಂದೆಂದರೆ ತಿರುಮಲಿರುಂಚೋರ್ಲೈಯಿಂದ ಧಾವಿಸಿ ಬಂದು ಶ್ರೀರಂಗಂನಲ್ಲಿಯೇ ನೆಲೆಸಿದ್ದ ಕೂರೇಶನನ್ನು ಕಂಡಿದ್ದು. ತಮ್ಮ ಸಲುವಾಗಿ ಅಂಧರಾದ ಕೂರೇಶನನ್ನು ಕಾಣಲು ಅವರಿದ್ದ ಮನೆಗೆ ತಾವೇ ಹೋದರು. ಮನೆಯೊಳಗೆ ಒಂದು ಮೂಲೆಯಲ್ಲಿ ನಾಲಾಯಿರಂ ಹೇಳುತ್ತ ಕುಳಿತಿದ್ದ ಕೂರೇಶ ವಯೋವೃದ್ಧರಾಗಿದ್ದರು. ದುರ್ಬಲತೆ ಅವರನ್ನು ಆವರಿಸಿತ್ತು. ಪತ್ನಿ ಆಂಡಾಳಮ್ಮನೂ ವೃದ್ಧೆಯೇ. ಆದರೆ ಪತಿ ಸೇವೆಯಲ್ಲಿ ನಿರತಳಾದ ಆಕೆಗೆ ಎಲ್ಲಿಂದಲೋ ಶಕ್ತಿ ಸಂಚಯನವಾಗುತ್ತಿತ್ತು. ಈ ದಂಪತಿ ಜನ್ಮ ನೀಡಿದ ಇಬ್ಬರು ಗಂಡುಮಕ್ಕಳು ಶ್ರೀಹರಿಯ ಸೇವೆಗೆ ಮುಡಿಪಾದುದರಿಂದ ಈಗ ಅವರಿಬ್ಬರು ಸ್ವಂತ ಕಾಲಿನ ಮೇಲೆ ನಿಲ್ಲಬೇಕಾಗಿ ಬಂದಿತ್ತು. ಒಮ್ಮೆ ಆಗರ್ಭ ಶ್ರೀಮಂತರೂ ಮಹಾನ್ ದಾನಿಗಳೂ ಆಗಿದ್ದ ಕೂರೇಶ ದಂಪತಿ, ಸ್ವಯಂಪ್ರೇರಣೆಯಿಂದ ಸರ್ವಸ್ವವನ್ನು ತ್ಯಾಗ ಮಾಡಿ ಶ್ರೀಹರಿಯ ಸೇವೆಗಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದರು. ಇಂಥ ಮಹಾನ್ ಭಕ್ತ ದಂಪತಿಯನ್ನು ಕಾಣಲು ಸ್ವತಃ ರಾಮಾನುಜರೇ ಬಂದಿದ್ದರಲ್ಲಿ ವಿಶೇಷವಿರಲಿಲ್ಲ.

ರಾಮಾನುಜರು ಕಂಪಿಸುವ ದನಿಯಲ್ಲಿ "ಕೂರೇಶಾ....ನನ್ನ ಪ್ರೀತಿಯ ಕೂರೇಶಾ...." ಎನ್ನುತ್ತಾ ನಡುಗುತ್ತಾ ಪ್ರವೇಶ ಮಾಡುತ್ತಿದ್ದಂತೆ "ಅಡೆಯೇನ್ ಮಮ ಗುರುದೇವಾ... ಅಡಿಯೇನ್" ಎನ್ನುತ್ತಾ ಅಂದಾಜಿನ ಮೇಲೆ ಎದ್ದು ಬಂದ ಕೂರೇಶ ರಾಮಾನುಜರ ಕಾಲಿಗೆ ಬಿದ್ದು ಪಾದಗಳನ್ನು ಹಿಡಿದುಕೊಂಡರು.

ಕ್ಷಣಕಾಲ ರಾಮಾನುಜರ ಗಂಟಲು ಕಟ್ಟಿಹೋಯಿತು. ಗದ್ಗದವಾಯಿತು. ಅನಂತರ ಅವರು ಸಾವರಿಸಿಕೊಂಡು "ಅಪ್ಪಾ...ಕೂರೇಶ...ನೀನು ತ್ಯಾಗಮೂರ್ತಿ ಕಣಪ್ಪ....ಶ್ರೀಹರಿಗಾಗಿ ನಿನ್ನ ಸರ್ವಸ್ವವನ್ನೂ ತ್ಯಾಗ ಮಾಡಿದೆ. ನೀನು ನನಗಾಗಿ ನಿನ್ನ ಕಣ್ಣುಗಳನ್ನೇ ತ್ಯಾಗ ಮಾಡಿದೆ. ನಿನ್ನ ತ್ಯಾಗಕ್ಕೆ ಎಣೆಯುಂಟೆ ಮಗುವೇ.... ಅಂದು ನೀನು ನನಗೆ ತಿಳಿಸದೆ ಹೋಗಿ ಚೋಳ ಆಸ್ಥಾನದಲ್ಲಿ ಸಿಲುಕಿಕೊಂಡೆಯಲ್ಲ..

ಅದು ನಿನ್ನ ತಪ್ಪು."

"ಮಹಾಸ್ವಾಮಿ, ಯಾವುದು ತಪ್ಪು? ಅಂದು ನಾನು ಸರಿಯಾದುದನ್ನೇ ಮಾಡಿದೆ. ಅಕಸ್ಮಾತ್ ನನ್ನ ಬದಲು ಆ ದುಷ್ಟರು ನಿಮ್ಮನ್ನೇ ಕರೆದೊಯ್ದಿದ್ದರೆ ನಿಮ್ಮ ಗತಿ ಏನಾಗುತ್ತಿತ್ತು. ನೀವೂ ಕಣ್ಣು ಕಳೆದುಕೊಳ್ಳುತ್ತಿದ್ದಿರಿ. ನಾನು ಕಣ್ಣುಗಳನ್ನು ಕಳೆದುಕೊಂಡಿದ್ದರಿಂದ ನನ್ನ ದೃಷ್ಟಿ ಹೋಯಿತೇ ಹೊರತು ನಿಮ್ಮಿಂದ ಆಗಾಧ ವಿಷ್ಣು ಸೇವೆಯಾಯಿತು...."

"ಏನು ನಿನ್ನ ಮಾತಿನ ಅರ್ಥ ಕೂರೇಶ?"

ಕೂರೇಶರಿಗೆ ಈವರೆಗೆ ಹೊಯ್ಸಳ ಸಾಮ್ರಾಜ್ಯದಲ್ಲಿ ಗುರುಗಳು ಸಾಧನೆಯ ಎಲ್ಲ ವಿವರಗಳೂ ತಿಳಿದಿದ್ದವು.

"ನನ್ನ ಮಾತಿನ ಅರ್ಥವೇ? ನೀವು ಕಣ್ಣು ಕಳೆದುಕೊಂಡು ಮೂಲೆಗುಂಪಾಗಿದ್ದರೆ ಇಡೀ ಹೊಯ್ಸಳ ಸಾಮ್ರಾಜ್ಯದಲ್ಲಿ ಎಲ್ಲೆಡೆ ವೈಷ್ಣವ ಪತಾಕೆಯನ್ನು ಹಾರಿಸಲು ಸಾಧ್ಯವಾಗುತ್ತಿತ್ತೆ? ಬಿಟ್ಟಿದೇವ ಮಹಾರಾಜರನ್ನು ವಿಷ್ಣುವರ್ಧನರನ್ನಾಗಿ ಮಾಡಿ ಅವರಿಂದ ಅವರ ರಾಜ್ಯಾದ್ಯಂತ ವಿಷ್ಣು ದೇವಾಲಯಗಳನ್ನು ನಿರ್ಮಿಸಲು ಸಾಧ್ಯವಾಗುತ್ತಿತ್ತೇ? ಇಪ್ಪತ್ತು ವರ್ಷಗಳ ಕಾಲ ಎಲ್ಲ ವರ್ಗಗಳ, ಜಾತಿಗಳಲ್ಲೂ ವಿಷ್ಣು ಭಕ್ತಿಯನ್ನು ಬಿತ್ತಿ ವೈಷ್ಣವರನ್ನಾಗಿ ಮಾಡಿದ್ದು ಸಾಧ್ಯವಾಗುತ್ತಿತ್ತೇ ಮಹಾಸ್ವಾಮಿ?"

ಕೂರೇಶರು ರಾಮಾನುಜರನ್ನು ನಿರುತ್ತರರನ್ನಾಗಿ ಮಾಡಿದ್ದರು.

"ಕೂರೇಶ! ನಾನು ಶ್ರೀರಂಗನಾಥಸ್ವಾಮಿಯನ್ನು ಪ್ರಾರ್ಥಿಸಿ ನಿನ್ನ ದೃಷ್ಟಿಯನ್ನು ಬರುವಂತೆ ಮಾಡುವೆ..."

ಮಧ್ಯೆ ಬಾಯಿ ಹಾಕಿದ,

"ತಂದೆ, ವೈಕುಂಠದ ದಾರಿಯನ್ನು ಕಾಯುತ್ತಿರುವ ನನಗೆ ಈ ಬಾಹ್ಯ ದೃಷ್ಟಿಯಿಂದ ಆಗಬೇಕಾದುದೇನಿದೆ. ಅಂತಃಚಕ್ಷುಗಳಿಂದ ಶ್ರೀಹರಿಯನ್ನು ನಿಮ್ಮನ್ನೂ ನೋಡುತ್ತಿದ್ದೀನಿ. ಅಷ್ಟು ಸಾಕು. ಇನ್ನೆಷ್ಟು ಕಾಲ ಇಲ್ಲಿರುತ್ತೀನಿ ಹೇಳಿ."

ಹೀಗೆ ಬಹು ವಿನಮ್ರತೆಯಿಂದ ಗುರುಗಳ ಅಭಿಮತವನ್ನು ನಿರಾಕರಿಸಿದ ಕೂರೇಶ. "ನನ್ನ ಗುರುಗಳಾದ ಮಹಾಪೂರ್ಣರು ಕೂಡ ಅನ್ಯಾಯವಾಗಿ ಕಣ್ಣು ಕಳೆದುಕೊಂಡರು. ಅವರು ತೀರಿಕೊಂಡಾಗ ನೀನು ಅವರ ಜೊತೆಯಲ್ಲಿ ಇದ್ದೆಯಲ್ಲವೇ?"

"ಹೌದು ಗುರುಸ್ವಾಮಿ. ನಾನೇ ಅವರ ಅಂತ್ಯ ಸಂಸ್ಕಾರದ ವ್ಯವಸ್ಥೆ ಮಾಡಿದೆ."

ರಾಮಾನುಜರು ಇದನ್ನು ಕೇಳಿ ಭಾವಾವಿಷ್ಟರಾದರು. ಎಂಥ ದುರ್ವಿಧಿ! ಶಿಷ್ಯನ ಸಲುವಾಗಿ ಹಿರಿಯ ಜೀವ ಗುರು ಮಹಾಪೂರ್ಣರು ಮಾಡಿದ ತ್ಯಾಗಕ್ಕೆ ಎಣೆಯುಂಟೆ ಎಂದು ರಾಮಾನುಜರು ಕಣ್ಣೀರು ಸುರಿಸಿದರು.

ಹೀಗೇ ಕೆಲ ಸಮಯ ಸಂದಿತು. ಒಂದು ದಿನ ಕೂರೇಶರು ರಂಗನಾಥನ ಸನ್ನಿಧಿಗೆ ಹೋಗಿ ತಮಗೆ ಇಹಲೋಕದ ಜೀವನ ಸಾಕುಸಾಕಾಗಿದೆ ಎಂದೂ ತನ್ನ ಸನ್ನಿಧಿಗೆ ಶೀಘ್ರ ಕರೆಸಿಕೊಳ್ಳಬೇಕೆಂದೂ ಕಳಕಳಿಯಿಂದ ವಿನಂತಿಸಿದರು. ಕಣ್ಣುಗಳನ್ನು ಕಳೆದುಕೊಂಡ ಸಮಯದಿಂದ ಐಹಿಕ ಜೀವನದಲ್ಲಿ ಪಡಬಾರದ ಕಷ್ಟಗಳನ್ನು ಅನುಭವಿಸಿದ್ದ ಕೂರೇಶರಿಗೆ 'ಈ ಜೀವನ ಸಾಕಪ್ಪಾ'



ಎನಿಸಿದರಲ್ಲಿ ವಿಶೇಷವೇನಿರಲಿಲ್ಲ. ಭಕ್ತಿಯಲ್ಲಿ ಮುಳುಗಿ ತೇಲಿದ್ದ ಅವರಿಗೆ ಅಂತಃಚಕ್ಷುಗಳಿಂದ ರಂಗನಾಥನ ದರ್ಶನ ಪಡೆದು ಅವನೊಂದಿಗೆ ಸಂಭಾಷಿಸುವುದು ಅಸಾಧ್ಯವಾದುದೇನಾಗಿರಲಿಲ್ಲ. ಅವರ ಪ್ರಾರ್ಥನೆಯನ್ನು ಮನ್ನಿಸಿ ಅವರಿಗೂ ಅವರ ಬಂದುಬಾಂಧವರಿಗೂ ಗುರುಹಿರಿಯರಿಗೂ ಮೋಕ್ಷವನ್ನು ಕರುಣಿಸಿರುವುದಾಗಿ ಮೌನ ಭಾಷೆಯಲ್ಲಿಯೇ ಅವರಿಗೆ ಮುಟ್ಟಿಸಿದರು.

ಮಹಾನ್ ತಪೋನಿಷ್ಠರಾದ ರಾಮಾನುಜರಿಗೆ ಅವರ ಜ್ಞಾನ ಚಕ್ಷುಗಳಿಂದ ರಂಗನಾಥನು ಕೂರೇಶರು ಮತ್ತು ಅವರ ಸಮೀಪಸ್ಥರಿಗೆ ಮೋಕ್ಷವನ್ನು ಕರುಣಿಸಿದುದನ್ನು ಅರಿತುಕೊಂಡರು. ಆ ವಿಷಯವನ್ನು ಕೇಳಿ ಅವರಿಗೆ ಪರಮಾನಂದವಾಗಿ ಬಳಿಯಲ್ಲಿದ್ದ ಶಿಷ್ಯರಿಗೆ "ಇಂದು ರಂಗನಾಥಸ್ವಾಮಿ ಕೂರೇಶ ಮತ್ತು ಅವನ ಆಪ್ತರಿಗೆ ಮೋಕ್ಷವನ್ನು ಕರುಣಿಸಿರುವುದು ಅರಿವಿಗೆ ಬಂತು. ಅವನ ಆಚಾರ್ಯನಾದ ನನಗೂ ಮೋಕ್ಷ ಖಚಿತವಾಯಿತು. ನನಗೆ ಇನ್ನೇನು ಬೇಕು?.... ನಡೆಯಿರಿ ಕೂರೇಶನ ಮನೆಗೆ ಹೋಗೋಣ" ಎಂದು ಶಿಷ್ಯರೊಂದಿಗೆ ಅವರ ಮನೆಗೆ ಹೋದರು.

"ಕೂರೇಶ ಇದೇನು ಮಾಡಿದೆ ನೀನು? ನೀನೊಬ್ಬನೇ ಹೋಗಿ ರಂಗನಾಥಸ್ವಾಮಿಯಿಂದ ಮೋಕ್ಷದ ಅನುಗ್ರಹ ಪಡೆದು ಬಂದೆಯಲ್ಲವೇ? ಇದು ಸ್ವಾರ್ಥವಲ್ಲವೇ?" ಎಂದು ಲಘುವಾಗಿ ಛೇಡಿಸಿ ಮಾತನಾಡಿದರು.

"ನಾನೇನು ಸ್ವಾರ್ಥಿಯಲ್ಲ" ತನ್ನನ್ನು ತಾನೇ ರಕ್ಷಿಸಿಕೊಳ್ಳುವ ಶೈಲಿಯಲ್ಲಿ,

"ನಾನು ನನ್ನ ಆತ್ಮೀಯರಿಗೂ ಮೋಕ್ಷವನ್ನು ಕರುಣಿಸಿ ಎಂದೇ ಕೇಳಿಕೊಂಡಿದ್ದು. ಸ್ವಾಮಿ ಅನುಗ್ರಹಿಸಿದ್ದು. ಸ್ವಾರ್ಥಿ ಹೇಗಾದೇನು?"

ರಾಮಾನುಜರು ನಕ್ಕು ಕೂರೇಶರ ಭುಜವನ್ನು ಸ್ಪರ್ಶಿಸಿ

"ನಿಜ...ನಿಜ.. ನೀನು ಖಂಡಿತ ಸ್ವಾರ್ಥಿಯಲ್ಲ...ಸುಮ್ಮನೆ ನಿನ್ನನ್ನು ಛೇಡಿಸಿದೆನಷ್ಟೆ."

"ಇಷ್ಟಕ್ಕೂ ಗುರುಸ್ವಾಮಿ, ತಿರುವಾಯ್‌ಮೋಳಿಯಲ್ಲಿ 'ಹೊಸದಾಗಿ ವೈಕುಂಠಕ್ಕೆ ಹೋದ ಮುಕ್ತರನ್ನು ಮೊದಲೇ ಅಲ್ಲಿ ತಲಪಿರುವ ಮುಕ್ತರು ಎದಿರ್ಗೊಂಡು ಮರ್ಯಾದೆಯಿಂದ ಎದುರುಗೊಳ್ಳುವರು' ಎಂದು ಹೇಳಿದೆ. ನಾನು ನಿಮಗಿಂತಲೂ ಮೊದಲು ಅಲ್ಲಿಗೆ ತಲಪಿ ನಿಮ್ಮ ಆಗಮನದ ವೇಳೆಗೆ ತಮ್ಮನ್ನು ಸಕಲ ಮರ್ಯಾದೆಗಳಿಂದ ಬರಮಾಡಿಕೊಳ್ಳುವೆನು. ಎಷ್ಟಾದರೂ ನಾನು ನಿಮ್ಮ ಎರಡನೆಯ ಮುಖ್ಯ ಶಿಷ್ಯನಲ್ಲವೇ..." ಎಂದು ಕೂರೇಶರೂ ಉತ್ತರಿಸಿದರು.

ಶಿಷ್ಯ ಕೂರೇಶ ವೈಕುಂಠ ಯಾತ್ರೆಗೆ ಸಿದ್ಧನಾಗಿ ನಿಂತಿದ್ದ. ಗುರು ಆಪ್ಯಾಯಮಾನದಿಂದ ಶಿಷ್ಯನ ಬೆನ್ನನ್ನು ತಡವಿ ಅವನ ಕಿವಿಯಲ್ಲಿ 'ಶ್ರೀಮನ್ನಾರಾಯಣ ಚರಣೌ ಶರಣಂ ಪ್ರಪದ್ಯೇ ಶ್ರೀಮತೇ ನಾರಾಯಣಾಯ ನಮಃ' ಎಂದು ದ್ವಯಮಂತ್ರವನ್ನು ಹೇಳಿ ಭಾರವಾದ ಹೃದಯದಿಂದ ಅಲ್ಲಿಂದ ನಿಷ್ಕ್ರಮಿಸಿದರು.

ಕೂರೇಶರು ಮತ್ತು ಆಂಡಾಳಮ್ಮರಿಗೆ ಇಬ್ಬರು ಮಕ್ಕಳು. ಆ ದಿನಗಳು ರಾಮಾನುಜರಿಗೆ ನೆನಪಿಗೆ ಬಂದವು. ಇಬ್ಬರೂ ಒಂದೇ ವೇಳೆ ಹುಟ್ಟಿದವರು. ಅದೇ ದಿವಸ ರಾಮಾನುಜರು ಗೋವಿಂದನ ಜೊತೆ ಕೂರೇಶರ ಮನೆಗೆ ತೆರಳಿದ್ದರು. ಮಕ್ಕಳನ್ನು ತೋರಿಸಲು ಎತ್ತಿಕೊಂಡು ಬರುವಂತೆ ಹೇಳಿದ್ದರು. ಗೋವಿಂದ ಆ ಎರಡು ಹಸುಗೂಸುಗಳನ್ನು ಎದೆಗೆ ಅವಚಿಕೊಂಡು ಕರೆತಂದಿದ್ದ. ಆ ಶಿಶುಗಳನ್ನು ಎತ್ತಿಕೊಂಡ ರಾಮಾನುಜರು "ಗೋವಿಂದ, ಈ ಶಿಶುಗಳ ಶರೀರಗಳಿಂದ ದ್ವಯಮಂತ್ರ ತರಂಗಗಳು ಹರಿಯುತ್ತಿರುವುದು ನನ್ನ ಅನುಭವಕ್ಕೆ ಬರುತ್ತಿದೆ. ಅದು ಹೇಗೆ ಸಾಧ್ಯವಾಗಿದೆ? ನೀನೇನಾದರೂ ಮಾಡಿದೆಯಾ?" ಎಂದು ಪ್ರಶ್ನಿಸಿದರು.

"ನಾನು ಅವನ್ನು ಎದೆಗವಚಿಕೊಂಡು ದೃಷ್ಟಿದೋಷ ಪರಿಹಾರಾರ್ಥವಾಗಿ ದ್ವಯಮಂತ್ರವನ್ನು ಜಪಿಸುತ್ತಾ ಬಂದೆ" ಎಂದ ಗೋವಿಂದ.

"ಓಹ್! ಒಳ್ಳೆಯದೇ ಆಯಿತು ಬಿಡು ಗೋವಿಂದ. ನೀನು ಹೀಗೆ ಮಾಡಿದುದರಿಂದ ಈ ಮಕ್ಕಳ ಗುರುವಿನ ಪದವಿಯನ್ನು ಸ್ವಯಂ ನೀನೇ ವಹಿಸಿಕೊಂಡಂತಾಗಿದೆ. ಇವರು ನಿನಗೆ ಈಗಲೇ ಶಿಷ್ಯರಾಗಿಬಿಟ್ಟರು!" ಎಂದ ನಗುತ್ತಾ ರಾಮಾನುಜರು ಹೇಳಿ, ಶಿಶುಗಳಲ್ಲಿ ಕೆಲ ಕ್ಷಣಗಳು ಮೊದಲು ಜನಿಸಿದ ದೊಡ್ಡ ಮಗುವಿಗೆ ಪರಾಶರ ಎಂದೂ ಚಿಕ್ಕ ಮಗುವಿಗೆ ವ್ಯಾಸ ಅಥವಾ ರಾಮಪಿಳ್ಳೆ ಎಂದೂ ಹೆಸರುಗಳನ್ನು ಸೂಚಿಸಿದ್ದರು.

ಅಂದಿನಿಂದ ಪರಾಶರಭಟ್ಟರ ಪುರೋಭಿವೃದ್ಧಿಯನ್ನು ಸ್ವತಃ ರಾಮಾನುಜರೇ ಗಮನಿಸುತ್ತಾ ಬಂದರು. ಅವರ ಅವಗಾಹನೆಯಲ್ಲಿಯೇ ಗೋವಿಂದ ಪರಾಶರನಿಗೆ ವೇದಾಧ್ಯಯನವೇ ಮುಂತಾದ ಆ ವಯಸ್ಸಿಗೆ ಸಹಜವಾದ ಎಲ್ಲ ವಿದ್ಯೆಯನ್ನೂ ಬೋಧಿಸಿದರು. ತೀಕ್ಷ್ಣಮತಿಯಾದ ಪರಾಶರ ಏಕಸಂಧಿಗ್ರಾಹಿಯಂತೆ ಹೇಳಿಕೊಟ್ಟಿದ್ದನ್ನೆಲ್ಲ ಒಡನೆಯೇ ಕಲಿಯುತ್ತಿದ್ದ. ಪರಾಶರನಿಗೆ ಹೆಣ್ಣು ಹುಡುಕಿ ವಿವಾಹ ಮಾಡಿಸಿದ್ದು ರಾಮಾನುಜರೇ. ತಮ್ಮ ಗುರು ಮಹಾಪೂರ್ಣರ ಸಮೀಪದ ಸಂಬಂಧಿಕರಾದ ಒಬ್ಬ ಶ್ರೀ ವೈಷ್ಣವ ಗೃಹಸ್ಥರ ಮಗಳನ್ನು ಪ್ರಾಪ್ತ ವಯಸ್ಸಿನಲ್ಲಿ ಅವನಿಗೆ ವಿವಾಹವನ್ನೂ ಮಾಡಿಸಿದ್ದರು.

ಕೂರೇಶರು ರಂಗನಾಥಸ್ವಾಮಿಯನ್ನು ಪ್ರಾರ್ಥಿಸಿ ಮೋಕ್ಷದ ಅನುಗ್ರಹವನ್ನು ಪಡೆದ ಅನಂತರ ಎಲ್ಲ ಕೆಲಸಗಳನ್ನೂ ಮುಗಿಸಿ ತಮ್ಮ ವೈಕುಂಠಯಾತ್ರೆಗೆ ಸಿದ್ಧರಾದರು. ಪರಾಶರ ಮತ್ತು ರಾಮಪಿಳ್ಳೆ 'ವ್ಯಾಸ'ರನ್ನು ಬಳಿ ಕರೆದು, ಅವರಿಬ್ಬರಿಗೂ ಆವೇಳೆಗಾಗಲೇ ಐವತ್ತಾರು ಐವತ್ತೇಳು ವರ್ಷಗಳಾಗಿದ್ದರೂ ಅಂತಿಮ ಉಪದೇಶ ಮಾಡಿದರು, "ನಿಮಗೆ ಅಂತಿಮವಾಗಿ ರಾಮಾನುಜರ ಪಾದಗಳೇ ಗತಿ. ಅವರ ಆಜ್ಞಾನುವರ್ತಿಗಳಾಗಿ ನಿಮ್ಮ ಇಡೀ ಜೀವನವನ್ನು ಸವೆಸಿ." ಹೆಂಡತಿ ಮಕ್ಕಳೂ ರೋದಿಸುತ್ತಿರಲು ಕೂರೇಶರು ಆಂಡಾಳಮ್ಮನವರ ಮಡಿಲಲ್ಲಿ ಶಿರವನ್ನಿರಿಸಿ ಪರಾಶರ ಮತ್ತು ವ್ಯಾಸರ ತೊಡೆಗಳ ಮೇಲೆ ಕಾಲುಗಳನ್ನರಿಸಿ ದ್ವಯಮಂತ್ರವನ್ನು ಜಪಿಸುತ್ತಾ ಶ್ರೀ ವಿಷ್ಣುವಿನ ಪಾದಗಳನ್ನು ಸೇರಲು ಅಂತಿಮ ಯಾತ್ರೆ ಹೊರಟರು. ಹೀಗೆ ಮಹಾ ಭಾಗವತ ಕೂರೇಶರ ಇಹಲೋಕ ಯಾತ್ರೆ ಮುಗಿಯಿತು.

ತಮ್ಮ ಪ್ರಿಯ ಶಿಷ್ಯನ ಅಂತ್ಯೇಷ್ಟಿಯನ್ನು ಸ್ವತಃ ರಾಮಾನುಜರ ಮಾರ್ಗದರ್ಶನದಲ್ಲೇ ಮಾಡಲಾಯಿತು. ಬ್ರಹ್ಮಮೇಧ ಕ್ರಮದಿಂದ ಶಾಸ್ತ್ರೋಕ್ತವಾಗಿ ನಡೆಯಿಸಲಾಯಿತು.

31ನೇ ಪುಟಕ್ಕೆ

ಶ್ರೀ ರಾಮಾನುಜ
ಜನ್ಮ ಸಹಸ್ರಮಾನೋತ್ಸವ ವಿಶೇಷ





ಕಳೆದ 28 ಸಂಚಿಕೆಗಳಿಂದ ಶ್ರೀ ವಿಷ್ಣು ಸಹಸ್ರನಾಮ ಕುರಿತು ಶ್ರೀ ಯತಿರಾಜ್ ವೀರಾಂಬುಧಿಯವರು ಲೇಖನ ಮಾಲೆಯನ್ನು ಬರೆದರು. ಈ ಸಂಚಿಕೆಯಿಂದ ಶ್ರೀ ವಿಷ್ಣುವಿನ ಮಹಾತ್ಮೆಯನ್ನು ಕುರಿತು ಮಹಾಭಾರತ, ಪದ್ಮಪುರಾಣ ಮತ್ತು ಗರುಡ ಪುರಾಣಗಳಲ್ಲಿ ದೊರೆಯುವ ಮಾಹಿತಿಗಳನ್ನು ಆಧರಿಸಿ ಇನ್ನು ಮುಂದೆ ಲೇಖನ ಮಾಲೆ ಬರೆಯುತ್ತಾರೆ. –ಸಂ



# ಸಾಷ್ಟಾಂಗ ನಮಸ್ಕಾರ

**ನಮಾಮಿ ನಾರಾಯಣ ಪಾದಪಙ್ಕಜಂ ।**
**ಕರೋಮಿ ನಾರಾಯಣ ಪೂಜನಂ ಸದಾ ॥**
**ವದಾಮಿ ನಾರಾಯಣ ನಾಮ ನಿರ್ಮಲಂ ।**
**ಸ್ಮರಾಮಿ ನಾರಾಯಣ ತತ್ತ್ವಮವ್ಯಯಮ್ ॥**

ಕುಲಶೇಖರಾಳ್ವಾರ್ ಮಹಾರಾಜರು ಹನ್ನೆರಡು ಜನ ಆಳ್ವಾರರುಗಳಲ್ಲಿ ಒಬ್ಬರು. ಈತ ಕವಿಯೂ ಕೂಡ. ಈತ ರಚಿಸಿದ 'ಮುಕುಂದಮಾಲಾ' ಸ್ತೋತ್ರವು ಬಹು ಪ್ರಸಿದ್ಧ. ನಾರಾಯಣನನ್ನು ಈತ 'ಮುಕುಂದ' ಎಂದು ಸಂಬೋಧಿಸಿ ತನ್ನನ್ನು ಸಂಸಾರದಿಂದ ಮುಕ್ತನಾಗಿಸೆಂದು ಕೇಳಿಕೊಂಡಿದ್ದಾರೆ. ಆತ್ಮವು ಈ ಪ್ರಪಂಚದಲ್ಲಿ ಸಿಲುಕಿಕೊಂಡಿದೆ, ಅದನ್ನು ಬಿಡಿಸಲು ಶ್ರೀಕೃಷ್ಣನನ್ನು ಬೇಡಿಕೊಂಡು, ಅವನನ್ನು ಜೀವನ್ಮುಕ್ತನನ್ನಾಗಿ ಮಾಡೆಂದು ಕೇಳಿಕೊಂಡಿದ್ದಾರೆ.

ಇದರಲ್ಲಿನ ಒಂದು ಶ್ಲೋಕವನ್ನೇ ಮೇಲೆ ಹೇಳಿರುವುದು.

ನಾನು ನಾರಾಯಣದ ಪಾದಕಮಲಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ. ನಾರಾಯಣನ ಪೂಜೆಯನ್ನು ಸದಾ ಮಾಡುತ್ತೇನೆ. ನಾರಾಯಣನ ನಿರ್ಮಲ ನಾಮವನ್ನು ಹೇಳುತ್ತಲೇ ಇರುತ್ತೇನೆ. ನಾರಾಯಣನ ಅವ್ಯಕ್ತ ತತ್ತ್ವಗಳನ್ನು ಯಾವಾಗಲೂ ಸ್ಮರಿಸುತ್ತೇನೆ. ಅವನ ಹೆಸರಿನ ಹಿಂದಿರುವ ಸತ್ಯವನ್ನು ಜಪಿಸುತ್ತೇನೆ.

ನಾರಾಯಣ ಎಂಬ ನಾಮದ ಬೀಜವ ನಾರದ ಬಿತ್ತಿದ ಧರೆಯೊಳಗೆ:

ನಾರಾಯಣನ ಇನ್ನೊಂದು ನಾಮವಾದ ವಿಷ್ಣುವನ್ನು ಕೊಂಡಾಡುವ ಅವನ ಸಾವಿರ ಗುಣವಾಚಕಗಳನ್ನು ಸ್ತುತಿಸುವ ಶ್ಲೋಕಮಾಲೆಯು ವಿಷ್ಣು ಸಹಸ್ರನಾಮ ಎಂಬ ಹೆಸರು ಪಡೆದಿದೆ. ಭೀಷ್ಮ ಶರಶಯ್ಯೆಯಲ್ಲಿರುವಾಗ, ಅವನು ತನ್ನಿಚ್ಛೆಯಿಂದ ಮರಣಿಸುವ ಮೊದಲು ಯುಧಿಷ್ಠಿರನಿಗೆ ರಾಜನೀತಿ ಬೋಧಿಸಲೆಂದು ಶ್ರೀಕೃಷ್ಣ ಯುಧಿಷ್ಠಿರನನ್ನು ಭೀಷ್ಮನ ಬಳಿಗೆ ಕರೆತರುತ್ತಾನೆ. ಆಗ ಭೀಷ್ಮ ಶ್ರೀಕೃಷ್ಣನ ಎದುರೇ ಅವನ ಮೂಲರೂಪವಾದ ವಿಷ್ಣುವನ್ನು ಸಾವಿರ ನಾಮಗಳಿಂದ ಸ್ತುತಿಸುತ್ತಾನೆ. ಅದೇ ಶ್ರೀ ವಿಷ್ಣು ಸಹಸ್ರನಾಮ.

ಅದರಲ್ಲಿನ ಅನೇಕ ಗುಣವಾಚಕಗಳು ಮನುಷ್ಯರಿಗೂ ಅನ್ವಯಿಸುತ್ತವೆ. ಅವನ್ನೆಲ್ಲ ಪಾಲಿಸಿದವರನ್ನು ಬಹುಶಃ ಜನರು, "ದೇವರಂತಹ ಮನುಷ್ಯ" ಎನ್ನುವರು.

ವಿಷ್ಣು ಸಹಸ್ರನಾಮದ ಬಗ್ಗೆ ಒಂದಿಷ್ಟು ಶೋಧ ನಡೆಸಿದಾಗ ಇನ್ನೂ ಅನೇಕ ವಿಷ್ಣು ಸಹಸ್ರನಾಮಗಳು ದೊರೆತವು.

ಅವುಗಳಲ್ಲಿ ಮೂರರ ಬಗ್ಗೆ ಒಂದಿಷ್ಟು.

ಸ್ಕಾಂದ ಪುರಾಣ ಬಹು ವಿಸ್ತಾರವಾದ ಪುರಾಣಗಳಲ್ಲಿ ಒಂದು. ಮಹಾದೇವನ ಸುತನಾದ ಸುಬ್ರಹ್ಮಣ್ಯ ಅಥವಾ ಸ್ಕಂದನ ಜೀವನ ಮತ್ತು ಲೀಲೆಗಳ ಬಗ್ಗೆ ವಿವರಣೆ ಈ ಪುರಾಣದ ಮುಖ್ಯ ವಿಷಯವಾಗಿದೆ. ಶಿವನನ್ನು ಕುರಿತು ಕೂಡ ಕೆಲವು ಕಥೆಗಳಿವೆ. ಇದರಲ್ಲಿ ಒಂದು ವಿಷ್ಣು ಸಹಸ್ರನಾಮವಿದೆ.

ಅದು ಈ ರೀತಿ ಆರಂಭವಾಗುತ್ತದೆ:

**ದೇವಾ ಊಚು:**
**ಬ್ರಹ್ಮನ್ ಕೇನ ಪ್ರಕಾರೇಣ ವಿಷ್ಣು ಭಕ್ತಿಃ ಪರಾಭವೇತ್।**
**ತತ್ ಸರ್ವಂ ಶ್ರೋತುಂ ಇಚ್ಛಾಮಃ ತ್ವತ್ತೋ ಬ್ರಹ್ಮ ವಿದಾಂವರ॥**

ವಿಷ್ಣು ಭಕ್ತಿಯ ಬಗ್ಗೆ ಹೇಳುತ್ತಾ ಆರಂಭವಾಗುವ ಈ ವಿಷ್ಣು ಸಹಸ್ರನಾಮ ಹೆಚ್ಚು ಪ್ರಚಲಿತದಲ್ಲಿಲ್ಲ.

ವ್ಯಾಸರು ಬರೆದಿರುವ ಹದಿನೆಂಟು ಪುರಾಣಗಳಲ್ಲಿ ಪದ್ಮ ಪುರಾಣ ಕೂಡ ಒಂದು. ಇದರಲ್ಲಿ ಐದು ಕಾಂಡಗಳಿವೆ. ಸೃಷ್ಟಿ ಕಾಂಡದಲ್ಲಿ ಭೀಷ್ಮ ಮತ್ತು ಪುಲಸ್ತ್ಯ ಮುನಿ ನಡುವಿನ ಸಂಭಾಷಣೆಯಲ್ಲಿ ಗ್ರಹಗಳು, ಪುಷ್ಕರದ ಬಗ್ಗೆ ವಿವರಗಳಿವೆ. ಭೂಮಿ ಕಾಂಡದಲ್ಲಿ ನಮ್ಮ ಗ್ರಹವಾದ ಭೂಮಿಯ ಬಗ್ಗೆ ವಿವರವಿದೆ. ಸ್ವರ್ಗ ಕಾಂಡದಲ್ಲಿ ಅಂತರಿಕ್ಷ ಮತ್ತು ಜಂಬೂದ್ವೀಪದ ಬಗ್ಗೆ, ಪಾತಾಳ ಕಾಂಡದಲ್ಲಿ ರಾಮ ಮತ್ತು ಕೃಷ್ಣರ ಬಗ್ಗೆ, ಉತ್ತರಕಾಂಡದಲ್ಲಿ ಶಿವ ಪಾರ್ವತಿಯ ಮಧ್ಯೆ ನಡೆಯುವ ಸಂಭಾಷಣೆಯು ಧರ್ಮದಲ್ಲಿನ ವಿವಿಧ ವಿಷಯಗಳ ಕುರಿತು ಇವೆ.

ಪದ್ಮಪುರಾಣದಲ್ಲಿ ಕೂಡ ಒಂದು ವಿಷ್ಣು ಸಹಸ್ರನಾಮವಿದೆ.

ಸಹಸ್ರನಾಮವೆಂದರೇನೇ ಮಹಾಭಾರತದಲ್ಲಿ ಅಡಕವಾಗಿರುವ ಶ್ರೀ ವಿಷ್ಣು ಸಹಸ್ರನಾಮದ ಅಂತ್ಯದ ಫಲಶ್ರುತಿಯಲ್ಲಿ ಪಾರ್ವತಿಯು ಈಶ್ವರನನ್ನು ಸಹಸ್ರನಾಮದ ಬಗ್ಗೆ ಕೇಳಿದಾಗ ಈಶ್ವರ ಅದಕ್ಕೆ ಉತ್ತರಿಸುತ್ತಾನೆ.

**ಪಾರ್ವತ್ಯುವಾಚ**
**ಕೇನೋಪಾಯೇನ ಲಘುನಾ ವಿಷ್ಣೋರ್ನಾಮಸಹಸ್ರಕಮ್।**
**ಪಠ್ಯತೇ ಪಂಡಿತೈರ್ನಿತ್ಯಂ ಶ್ರೋತುಮಿಚ್ಛಾಮ್ಯಹಂ ಪ್ರಭೋ॥**

ಪಾರ್ವತೀದೇವಿ ತನ್ನ ಪತಿದೇವರು ಈಶ್ವರನನ್ನು, "ಹೇ ಪ್ರಭು, ಈ ಪ್ರಪಂಚದ ಪಂಡಿತರು ಈ ಸಹಸ್ರನಾಮವನ್ನು ಬಿಡದೇ ಹೇಳುವ ಬಗೆ ಯಾವುದು? ಆ ಸುಲಭವಾದ ಮತ್ತು ವೇಗ ಗತಿಯ ವಿಧಾನವೇನೆಂದು ಅರಿಯಲು ಕುತೂಹಲಿಯಾಗಿರುವೆನು" ಎಂದು ಕೇಳುತ್ತಾಳೆ.

**ಈಶ್ವರ ಉವಾಚ**
**ಶ್ರೀರಾಮ ರಾಮ ರಾಮೇತಿ ರಮೇ ರಾಮೇ ಮನೋರಮೇ।**
**ಸಹಸ್ರನಾಮ ತತ್ತುಲ್ಯಂ ರಾಮನಾಮ ವರಾನನೇ॥**

ಆಗ ಈಶ್ವರನು, "ಹೇ ಮನೋರಮೇ. ಮೂರು ಸಲ ರಾಮ ರಾಮ ರಾಮ ಎಂದು ಉಚ್ಚರಿಸುವುದು ವಿಷ್ಣು ಸಹಸ್ರನಾಮದ ಸಾವಿರ ನಾಮಗಳನ್ನು ಹೇಳುವುದಕ್ಕೆ ಸಮ ಓ ಸುಂದರ ವದನೆ!" ಎಂದು ಉತ್ತರಿಸುತ್ತಾನೆ.

ಪದ್ಮ ಪುರಾಣದಲ್ಲಿ ಪಾರ್ವತ್ಯುವಾಚದಿಂದಲೇ ವಿಷ್ಣು ಸಹಸ್ರನಾಮ ಆರಂಭವಾಗುತ್ತದೆ.

**ಪಾರ್ವತ್ಯುವಾಚಃ**
**ತನ್ಮೇಕಥಯ ದೇವೇಶ ಯಥಾಹಮಪಿ ಶಂಕರ**
**ಸರ್ವೇಶ್ವರೀ ನಿರುಪಮಾ ತವಸ್ಯಾಂ ಸದೃಶೀ ಪ್ರಭೋ**

ಇಲ್ಲಿ ಈಶ್ವರನ ಬದಲು ಮಹಾದೇವ ಉವಾಚ ಎಂದಿದೆ.

**ಮಹಾದೇವ ಉವಾಚ**
**ಸಾಧುಸಾಧು ತ್ವಯಾ ಪೃಷ್ಟಂ ವಿಷ್ಣೋರ್ಭಗವತಃ ಪ್ರಿಯೇ**
**ನಾಮ್ನಾಂಸಹಸ್ರಂ ವಕ್ಷ್ಯಾಮಿ ಮುಖ್ಯಂ ತ್ರೈಲೋಕ್ ಮುಕ್ತಿದಂ**

ಗರುಡ ಪುರಾಣವನ್ನು ಮಹಾವಿಷ್ಣುವು ತನ್ನ ವಾಹನ ಗರುಡನಿಗೆ ಹೇಳುವ ಉಪದೇಶವೆನ್ನುತ್ತಾರೆ.

ಸಾಮಾನ್ಯವಾಗಿ ಮನೆಯಲ್ಲಿ ಯಾರಾದರೂ ತೀರಿಕೊಂಡರೆ ಅವರ ಶ್ರಾದ್ಧ ನಡೆಯುವ ಹನ್ನೆರಡನೆಯ ದಿನ ಬರುವ ಮೊದಲು, ಸೂತಕ ಇರುವಾಗ ಗರುಡ ಪುರಾಣ ಓದಿಸುತ್ತಾರೆ. ಈಗಿನ ಕಾಲದಲ್ಲಿ ಬಹುಶಃ ಅದರ ಧ್ವನಿಮುದ್ರಣವನ್ನು ಕೇಳುತ್ತಾರೆ.

ಗರುಣ ಪುರಾಣದಲ್ಲಿ ನರಕದಲ್ಲಿ ಸಿಗುವ ಶಿಕ್ಷೆಗಳ ವಿವರಗಳಿವೆ.



ನಮ್ಮಿಂದ ದೂರವಾದವರ ದುಃಖದ ಭಾರವನ್ನು ಹಗುರಗೊಳಿಸಲು ಈ ಪುರಾಣವನ್ನು ಓದುವುದು ಸೂಕ್ತ ಎಂದು ಹಿರಿಯರು ಹೇಳುವುದುಂಟು. ಈ ಗರುಡ ಪುರಾಣದಲ್ಲಿ ಕೂಡ ಒಂದು ವಿಷ್ಣು ಸಹಸ್ರನಾಮವಿದೆ.

ಇದರ ಆರಂಭವೇ ರುದ್ರನಿಂದ.

**ರುದ್ರ ಉವಾಚ:**
**ಸಂಸಾರಸಾಗರಾದ್ ಘೋರಾನ್ಮುಚ್ಯತೇ ಕಿಂ ಜಪನ್ ಪ್ರಭೋ**
**ನರಸ್ತನ್ಮೇ ಪರಂ ಜಪ್ಯಂ ಕಥಯ ತ್ವಂ ಜನಾರ್ದನ**

ಮಹಾಭಾರತದಲ್ಲಿ ಯುಧಿಷ್ಠಿರ ಭೀಷ್ಮ ಪಿತಾಮಹನನ್ನು ಕೇಳುವ ಪ್ರಶ್ನೆಗಳನ್ನು ಒಮ್ಮೆ ನೋಡೋಣ.

**ಯುಧಿಷ್ಠಿರ ಉವಾಚ:**
**ಕಿಮೇಕಂ ದೈವತಂ ಲೋಕೇ ಕಿಂ ವಾಪ್ಯೇಕಂ ಪರಾಯಣಂ**
**ಸ್ತುವಂತಃ ಕಂ ಕಮರ್ಚಂತಃ ಪ್ರಾಪ್ನುಯುರ್ಮಾನವಾಃ ಶುಭಮ್**

ಎಲ್ಲ ಶಾಸ್ತ್ರಗಳೂ ಸಾರುವ ಹಿರಿಯ ದೇವತೆ ಯಾರು? ಒಬ್ಬನೇ ಒಬ್ಬ ಎನ್ನುವ ಆ ಅಂತಿಮ ಆಸರೆ ಯಾರು? ಯಾರನ್ನು ಹಾಡಿ, ಹೊಗಳಿ, ಆರಾಧಿಸುವುದರಿಂದ ಮನುಷ್ಯನಿಗೆ ಒಳ್ಳೆಯದಾಗುತ್ತದೆ?

**ಕೋ ಧರ್ಮ ಸರ್ವಧರ್ಮಾಣಾಂ ಭವತಃ ಪರಮೋ ಮತಃ**
**ಕಿ ಜಪನ್ಮುಚ್ಯತೇ ಜಂತುರ್ಜನ್ಮಸಂಸಾರಬಂಧನಾತ್**

ನಿಮ್ಮ ಪ್ರಕಾರ, ಯಾವುದು ಎಲ್ಲ ಧರ್ಮಗಳಿಗೂ ಮಿಗಿಲಾದ ಧರ್ಮ? ಯಾವುದನ್ನು ಜಪಿಸುವುದರಿಂದ ಮಾನವ ಹುಟ್ಟಿನಿಂದ ಮತ್ತು ಸಂಸಾರ ಬಂಧನದಿಂದ ಮುಕ್ತಿ ಹೊಂದುತ್ತಾನೆ?

ಅರ್ಥಾತ್ ನಾರಾಯಣ ಎಂದರೆ ಅದು ವಿಮುಕ್ತಿಗೆ ಮಾರ್ಗ ಎನ್ನುತ್ತಾರೆ ದಾರ್ಶನಿಕರು.

ನಾರಾಯಣನ ಷೋಡಶನಾಮ ಸ್ತೋತ್ರದಲ್ಲಿ ನಾರಾಯಣಂ ತನುತ್ಯಾಗೇ ಎಂದಿದೆ. ಅಂದರೆ ನಾರಾಯಣ ಎಂಬ ನಾಮವೇ ನಮ್ಮ ಜೀವನ್ಮುಕ್ತಿಗೆ ಸಂಬಂಧಿಸಿದೆ. ಪುರಂದರದಾಸರು ನಾರಾಯಣ ನಿನ್ನ ನಾಮದ ಸ್ಮರಣೆಯ ಎಂಬ ಪದದಲ್ಲಿ ಕೊನೆಯ ಸಾಲಿನಲ್ಲಿ ಎಂತೋ ಪುರಂದರ ವಿಟ್ಠಲರಾಯನ ಅಂತ್ಯಕಾಲದಲ್ಲಿ ಚಿಂತಿಸೋ ಹಾಗೇ ನಾರಾಯಣ ಎಂದಿದ್ದಾರೆ.

ಈಗ ನಾವು ಕಂಡ ನಾಲ್ಕು ವಿಷ್ಣು ಸಹಸ್ರನಾಮಗಳಲ್ಲೂ ಜೀವನ್ಮುಕ್ತಿಗೆ ಸಂಬಂಧಿಸಿದ ವಿಷಯವನ್ನೇ ಕಂಡಿದ್ದೇವೆ.

"ಸೃಷ್ಟಿ, ಸ್ಥಿತಿ, ಲಯ ಕಾರಣ ಗೋವಿಂದ" ಎಂದಿದ್ದಾರೆ ಪುರಂದರದಾಸರು– "ಗೋವಿಂದಾ ನಿನ್ನ ನಾಮವೆ ಚೆಂದ" ಎನ್ನುವ ದಾಸರ ಪದದಲ್ಲಿ.

ಅಂದರೆ ನಮ್ಮ ಜನ್ಮಕಾರಕ ಮತ್ತು ನಮ್ಮ ಮೃತ್ಯುದಾತ ಎರಡೂ ಅವನೇ. ನಮ್ಮ ಹುಟ್ಟು ಸಾವುಗಳ ನಡುವಣ ಪಾಲನೆ ಪೋಷಣೆಯೂ ಅವನದೇ ಎಂದು ಇಲ್ಲಿ ದಾಸರು ಹೇಳುತ್ತಿದ್ದಾರೆ.

ಗರ್ಗ ಸಂಹಿತೆಯಲ್ಲಿ ಇರುವ ನಾರಾಯಣ ಸಹಸ್ರನಾಮದ 84ನೇ ಶ್ಲೋಕದ ಮೊದಲ ಸಾಲಿನಲ್ಲಿ

**ತ್ವಂ ಪರೀಕ್ಷಾ ತಿತಿಕ್ಷಾ ತ್ವಂ ತ್ವಂ ಬುಭುಕ್ಷಾ ಮುಮುಕ್ಷತಾ**

ಎಂದಿದೆ. ಅಂದರೆ ಮತ್ತೆ ಮುಮುಕ್ಷು ಅರ್ಥಾತ್ ಮೋಕ್ಷದ ಬಗ್ಗೆ ಪ್ರಸ್ತಾವ ಇದೆ.

ಶ್ರೀ ಭಗವತ್ಪಾದ ಶಂಕರಾಚಾರ್ಯರು ಅವರ ಭಜಗೋವಿಂದಂನಲ್ಲಿ

**ಗೇಯಂ ಗೀತಾನಾಮಸಹಸ್ರಂ**
**ಧ್ಯೇಯಂ ಶ್ರೀಪತಿರೂಪಮಜಸ್ರಂ**
**ನೇಯಂ ಸಜ್ಜನಸಂಗೇ ಚಿತ್ತಂ**
**ದೇಯಂ ದೀನಜನಾಯ ಚ ವಿತ್ತಂ**

ಎಂದಿದ್ದಾರೆ.

ಭಗವಂತನ ವಾಣಿಯಾದ ಭಗವದ್ಗೀತೆ ಮತ್ತು ವಿಷ್ಣು ಸಹಸ್ರನಾಮಗಳನ್ನು ಹಾಡಬೇಕು. ಸದಾ ಲಕ್ಷ್ಮೀಪತಿಯ ನಾಮಸ್ಮರಣೆ ಮಾಡಬೇಕು. ಸತ್ಸಂಗ ಮಾಡಲು ಮನಸ್ಸನ್ನು ತಿದ್ದಬೇಕು; ಯಾರಿಗೆ ಅಗತ್ಯವಿದೆಯೋ ಅವರಿಗೆ ಧನದ ನೆರವು ನೀಡಬೇಕು.

ಶ್ರೀ ವಿಷ್ಣು ಸಹಸ್ರನಾಮದ ಬಗ್ಗೆ ಹೇಳುವುದೆಂದರೆ ಸಾಗರವನ್ನು ವಿವರಿಸಿದಂತೆ. ಅಷ್ಟು ಚಿಕ್ಕದು, ಅಷ್ಟೇ ವಿಶಾಲ.

ಒಂದೇ ಶಬ್ದದಲ್ಲಿ ನಾರಾಯಣ ಎನ್ನಬಹುದು; ಅಥವಾ ಸಾವಿರಾರು ನಾಮಗಳಿಂದ ಅವನನ್ನು ಸ್ತುತಿಸಬಹುದು.


**ನಂ. ೮೯, 'ಚಿರಸ್ಮಿತ' ಬಸಪ್ಪ ಬಡಾವಣೆ, ಪಟ್ಟಣಗೆರೆ, ವೇರ್‌ಹೌಸ್ ಹಿಂದೆ, ರಾಜರಾಜೇಶ್ವರಿನಗರ, ಬೆಂಗಳೂರು–೫೬೦ ೦೯೮.**




# ಅಮರನಾರೇಯಣ ಶತಕ

■ ನಿರೂಪಣೆ: ನಾರೇಯಣ ದಾಸ

ತಾತಯ್ಯನವರ ದಾರಿದೀಪ

ಲೌಕಿಕವಾಗಿ ಎಷ್ಟೋ ವಿದ್ಯೆಗಳಿವೆ. ತಾತಯ್ಯನವರ ಕಾಲಕ್ಕಿಂತಲೂ ಈಗ ಅಂತಹ ವಿದ್ಯೆಗಳು ಅಸಂಖ್ಯಾತವಾಗಿ ವೃದ್ಧಿಸಿವೆ. ಎಷ್ಟೇ ವೈಜ್ಞಾನಿಕವಾದ ವಿದ್ಯೆಗಳನ್ನು ಕಲಿತರೂ ಎಷ್ಟೇ ವಿವಿಧ ಬಗೆಯ ಅರಿವುಗಳನ್ನು ಪಡೆದರೂ ಅವು ಕೇವಲ ಇಹಲೋಕ ಯಾತ್ರೆಗೆ ಪೂರಕವಾದುವಷ್ಟೇ. ಅವು ಯಾವ ವಿಧದಲ್ಲೂ ಹುಟ್ಟು ಸಾವುಗಳ ಕರ್ಮಚಕ್ರದಿಂದ ಮನುಜನನ್ನು ಪಾರುಗಾಣಿಸಲಾರವು. ಅಂತಹ ವಿದ್ಯೆಗಳನ್ನು ಕಲಿತರೆ ಫಲವೇನು ಬಂತು ಎಂಬುದು ಈ ಪದ್ಯದಲ್ಲಿ ಎತ್ತಲಾಗಿರುವ ಪ್ರಶ್ನೆ. ನಿಜವಾದ ವಿದ್ಯೆ ಎಂದರೆ ಜನನ ಮರಣಗಳ ಚಕ್ರದಿಂದ ಮುಕ್ತಿಗೊಳಿಸುವ ವಿದ್ಯೆಯೇ ಆಗಿದೆ. ಅದನ್ನೇ ವೇದಾಂತದಲ್ಲಿ 'ಸಾ ವಿದ್ಯಾ ಯಾ ವಿಮುಕ್ತಯೇ' ಎಂದು ಸೂಕ್ತಿ ರೂಪದಲ್ಲಿ ಹೇಳಲಾಗಿದೆ.



## ಪದ್ಯ-೧೦೩

ಸಂಗೀತ ಸಾಹಿತ್ಯ ಚದುವುಲು ಬಹು ನೇರ್ಚಿ
ವೇದಮುಲ್ ಗೊಣಿಗಿ ವ್ಯಾಸಾರುವಾರು ।
ಕಲವಿ ಲೇನಿವಿ ಕೊನ್ನಿ – ಕಂಟಮಿ ವಿಂಟಮನಿ
ಪರುಲ ದಗ್ಗರ ಚೇರಿ – ಪಲುಕುವಾರು ।
ಪಲುವ ವಿದ್ಯಲ ನೇರ್ಚಿ – ಪಾಟಲು ಪಾಡುಚು
ಅತಿವೆರೂಪುನ ನಾಟ್ಯಮಾಡುವಾರು ।
ಮಾಯವಿದ್ಯಲು ಚೇಶಿ – ಮನುಜುಲ ಮೆಪ್ಪಿಂಚಿ
ಧನಮುಲಾರ್ಜಿಂಚಿ ಧರ ತಿರುಗುವಾರು ॥
॥ ಯೆನ್ನಿ ವಿದ್ಯಲು ನೇರ್ಚಿನ – ಯೇಮಿ ಫಲಮು ।
ಬ್ರಹ್ಮವಿದ್ಯಕು ಸರಿಸಾಟಿ – ವಿದ್ಯ ಲೇದು ।
ಅಮರನಾರೇಯಣಾಚ್ಯುತ – ಹರಿ ಮುಕುಂದ ।
ಕಲುಷಸಂಹಾರ ಕೈವರಪುರವಿಹಾರಾ ॥ 103 ॥

ಕೈವಾರ ತಾತಯ್ಯನವರು ಬರೆದಿರುವ ಅಮರನಾರೇಯಣ ಶತಕದ ಈ 103ನೇ ಪದ್ಯವು ಅತ್ಯಂತ ಅದ್ಭುತವಾದುದು. ಅಮೂಲ್ಯವಾದುದು. ಅರ್ಥಗರ್ಭಿತವಾದುದು. ಜಗತ್ತಿನಲ್ಲಿ ಹಲವು ಹತ್ತು ವಿದ್ಯೆಗಳಿವೆ. ಲೌಕಿಕೋನ್ನತಿಗಾಗಿ ಈ ವಿದ್ಯೆಗಳು ಬಳಕೆಯಾಗುತ್ತವೆ. ಆದರೆ ಇವೆಲ್ಲವೂ ಬ್ರಹ್ಮವಿದ್ಯೆಯ ಮುಂದೆ ನಿರುಪಯೋಗಿ. ಪರಬ್ರಹ್ಮನಲ್ಲಿ ಜೀವಾತ್ಮನು ಐಕ್ಯವಾಗುವ ಅಲೌಕಿಕ ವಿದ್ಯೆಯಾದ ಮೋಕ್ಷ ವಿದ್ಯೆಯೇ ಸರ್ವಶ್ರೇಷ್ಠ ವಿದ್ಯೆ ಎಂದು ಪ್ರತಿಪಾದಿಸುವ ಈ ಪದ್ಯ ತಾತಯ್ಯನವರ ವಿಚಾರಧಾರೆಯನ್ನು ಬಟ್ಟಿ ಇಳಿಸಿರುವ ಪದ್ಯ.

ಸಂಗೀತ ಸಾಹಿತ್ಯ ಚದುವುಲು ಬಹು ನೇರ್ಚಿ
ವೇದಮುಲ್ ಗೊಣಿಗಿ ವ್ಯಾಸಾರುವಾರು ।

ಈ ಸಾಲುಗಳಲ್ಲಿ ಯೋಗಿವರ್ಯರು ಯಾವ ವಿದ್ಯೆಗಳು ಕೇವಲ ಇಹ ಜೀವನಕ್ಕೆ ಒತ್ತಾಸೆ ನೀಡುವ ವಿದ್ಯೆಗಳೋ ಅವುಗಳಲ್ಲಿ ಕೆಲವನ್ನು ಹೆಸರಿಸಿದ್ದರೂ ಎಲ್ಲ ಲೌಕಿಕ ವಿದ್ಯೆಗಳನ್ನು ಗುರುತಿಸುವುದು ಇಲ್ಲಿ ಅವರ ಮುಖ್ಯ ಗುರಿಯಾಗಿದೆ. ಸಂಗೀತ, ಸಾಹಿತ್ಯ, ಕಲೆ ಮುಂತಾದ ವಿದ್ಯೆಗಳು ಎಷ್ಟೇ ಹೆಸರುವಾಸಿಯಾಗಿದ್ದರೂ ಅವು ಹಣ ಗಳಿಕೆಯ ಲೌಕಿಕ ವಿದ್ಯೆಗಳೇ. ಅವುಗಳ ಜೊತೆಗೆ ವೇದಗಳನ್ನೂ ತಾತಯ್ಯನವರು ಸೇರಿಸಿದ್ದಾರೆ. ಜನರು ಈ ವಿದ್ಯೆಗಳನ್ನು ಕಲಿತು ಪ್ರಯೋಗಿಸಿ ಅವುಗಳ ಮೂಲಕ ಧನ ಸಂಪಾದನೆಯನ್ನು ಮಾಡುತ್ತಿರುವುದರಿಂದ ತಾತಯ್ಯನವರು ಇವನ್ನು ಹೊಟ್ಟೆಪಾಡಿನ ವಿದ್ಯೆಗಳೆಂದು ಅಭಿಪ್ರಾಯ ಪಡುತ್ತಾರೆ. ಈ ಎಲ್ಲ ಓದುಗಳೂ ಯಾವ ರೀತಿಯಲ್ಲೂ ಮೋಕ್ಷಕ್ಕೆ ದಾರಿ ತೋರುವುವಲ್ಲ. ಸಂಗೀತ, ಸಾಹಿತ್ಯದ ಓದುಗಳೂ ವೇದದ ಬರಹಗಳೂ ಲೌಕಿಕವಷ್ಟೆ. ಮೋಕ್ಷದಾಯಕ ವಿದ್ಯೆ ಬ್ರಹ್ಮವಿದ್ಯೆ ತಾತಯ್ಯನವರ ಉಪದೇಶ ಇಲ್ಲಿ ಧ್ವನಿಸುತ್ತದೆ. ಬ್ರಹ್ಮವಿದ್ಯೆ ಎಂದರೆ ಬ್ರಹ್ಮನನ್ನು ಸಾಕ್ಷಾತ್ಕರಿಸುವ ವಿದ್ಯೆ ಎಂಬುದು ತಾತಯ್ಯನವರ ಅಭಿಪ್ರಾಯ.

ಕಲವಿ ಲೇನಿವಿ ಕೊನ್ನಿ – ಕಂಟಮಿ ವಿಂಟಮನಿ
ಪರುಲ ದಗ್ಗರ ಚೇರಿ – ಪಲುಕುವಾರು ।

ಮೇಲಿನಂಥವರಲ್ಲದೆ ಇನ್ನೊಂದು ಬಗೆಯವರೂ ಉಂಟು. ಅವು ಅಧ್ಯಯನ, ಅಭ್ಯಾಸ, ಸಾಧನೆಗಳ ವಿದ್ಯೆಗಳಾದರೆ ಇವು ಅದಕ್ಕಿಂತ ಭಿನ್ನ. ಈ ಗುಂಪಿಗೆ ಸೇರಿದವರು ವಾಚಾಳಿಗಳು. ಮಾತಿನ ಕಲೆಗಾರಿಕೆಯವರು. ತಮ್ಮ ಮಾತುಗಳ ಮಾಯಾಜಾಲದಲ್ಲಿ ಸಿಲುಕಿಸಿ ಮೋಡಿ ಮಾಡಬಲ್ಲ ಜಾಣರಿವರು. ಇವರು ಇತರ ಜನರ ಬಳಿ ಹೋಗುತ್ತಾರೆ. ಅವರನ್ನು ಓಲೈಸುತ್ತಾರೆ. ತಮ್ಮ ಮಾತಿನ ಜಾಣ್ಮೆಯಿಂದ ಇರುವುದು, ಇಲ್ಲದಿರುವುದುಗಳನ್ನು ಸುಂದರವಾಗಿ ಬಣ್ಣಿಸುತ್ತಾರೆ. ಮತ್ತೂ ತಾವು ಕೇಳಿದ್ದೆಂದೂ ನೋಡಿದ್ದೆಂದೂ ಹೇಳುತ್ತಾ ಕೇಳುವವರ ಮನಸೂರೆಗೊಳ್ಳುತ್ತಾರೆ. ಅವರೆ ಕಲ್ಪನೆಗಳನ್ನು ಮಾಡಿ ನುಡಿಯುತ್ತಾರೆ. ತಮ್ಮ ವಾಕ್‌ಶಕ್ತಿಯನ್ನು ತಮ್ಮ ಲಾಭಗಳಿಗಾಗಿ ಬಳಸಿಕೊಳ್ಳುತ್ತಾರೆ. ಈ ಮಾತಿನ ಕಲೆಯೂ ಲೌಕಿಕವಾದುದೇ. ಇದರಿಂದ ಆಧ್ಯಾತ್ಮಿಕ ಲಾಭ ಎಲ್ಲಿ ದೊರೆಯಬೇಕು?

ಪಲುವ ವಿದ್ಯಲ ನೇರ್ಚಿ – ಪಾಟಲು ಪಾಡುಚು
ಅತಿವೆರೂಪುನ ನಾಟ್ಯಮಾಡುವಾರು ।
ಮಾಯವಿದ್ಯಲು ಚೇಶಿ – ಮನುಜುಲ ಮೆಪ್ಪಿಂಚಿ
ಧನಮುಲಾರ್ಜಿಂಚಿ ಧರ ತಿರುಗುವಾರು ॥

ಇದೂ ಲೌಕಿಕ ವಿದ್ಯೆಗಳಿಗೆ ಸೇರಿದಂತಹುದೇ. ಹಲವಾರು ವಿದ್ಯೆಗಳನ್ನು ಕಲಿತು ಕೆಲವು ಕಲೆಗಳನ್ನು ಸಿದ್ಧಿಸಿಕೊಳ್ಳುವವರುಂಟು. ಹಾಡುಗಳನ್ನು ಹೇಳುತ್ತಾ ಜೀವನಯಾತ್ರೆ ಸಾಗಿಸುವವರುಂಟು. ಅಂದರೆ ಸಂಗೀತ ಹೇಳುವುದು. ಅದಕ್ಕೆ ಅನೇಕ ಬಗೆಯ ಅರಿವುಗಳು ಬೇಕು. ಇದು ಈ ಪದ್ಯದ ಮೊದಲೆರಡು ಸಾಲುಗಳಿಗೆ ಸಂಬಂಧಿಸಿದ್ದೇ. ಸಂಗೀತ ಕಲಿಕೆಗೆ ರಾಗ, ತಾಳ, ನಾದಗಳ ಜ್ಞಾನ ಬೇಕು. ವಿವಿಧ ವಾದ್ಯಗಳ ಪರಿಚಯವಿರಬೇಕು. ಅದನ್ನು ಪ್ರಸ್ತುತ ಪಡಿಸುವ ಕಲೆಗಾರಿಕೆ ಬೇಕು. ಇವರಲ್ಲಿ ಕೆಲವರು ಹೆಣ್ಣು ವೇಷ ಧರಿಸಿ ನಾಟ್ಯ ವಿದ್ಯೆಗೆ ಅನುಸಾರವಾಗಿ ನರ್ತಿಸುವರು. ಇವರೆಲ್ಲ ಹಲವಾರು ವಿದ್ಯೆಗಳನ್ನು ಕಲಿತು ಇದನ್ನು ಸಿದ್ಧಿಸಿಕೊಂಡಿರುತ್ತಾರೆ.

ಈ ಲೌಕಿಕ ವಿದ್ಯೆಗಳೆಲ್ಲವುಗಳ ಒಂದೇ ಒಂದು ಗುರಿ ಎಂದರೆ ಧನಾರ್ಜನೆ ಮಾಡುವುದು. ಸಂಗೀತ, ಸಾಹಿತ್ಯ, ನಾಟ್ಯ, ಮಾತಿನ ಕಲೆಗಾರಿಕೆ ಮುಂತಾದವೆಲ್ಲವೂ ಮಾಯಾ ವಿದ್ಯೆಗಳೇ. ಅವು ಕೇಳುಗರಲ್ಲಿ ಮಾಯಾ ಲೋಕವನ್ನು ಸೃಷ್ಟಿಸುತ್ತವೆ. ನವರಸಗಳ ಮೂಲಕ ಮನುಷ್ಯರಲ್ಲಿ ಭ್ರಮಾಲೋಕವನ್ನು ನಿರ್ಮಿಸುತ್ತವೆ. ಈ ಮಾಯಾ ವಿದ್ಯೆಗಳು ಧನವನ್ನು ಗಳಿಸುವುದಕ್ಕಾಗಿ ಮನುಷ್ಯರನ್ನು ಮೆಚ್ಚಿಸಲೆತ್ನಿಸುತ್ತವೆ. ಇವರು ಈ ಉದ್ದೇಶದಿಂದ ಊರೂರು ಅಲೆಯುತ್ತಾರೆ. ಕೂಟಗಳನ್ನು ನಡೆಸುತ್ತಾರೆ. ಸಂತುಷ್ಟರಾದವರು ಈ ಜನರಿಗೆ ಧನರೂಪದಲ್ಲಿ ಧನ್ಯವಾದ ತಿಳಿಸುತ್ತಾರೆ. ಇವರಿಗೆ ಧನ. ಅವರಿಗೆ ಮನರಂಜನೆ. ಇವು ಕೇವಲ ಲೌಕಿಕವಾದವೇ ಹೊರತು ಇವಕ್ಕೆ ಆಧ್ಯಾತ್ಮಿಕ ಸ್ಪರ್ಶವಿರುವುದಿಲ್ಲ.

ಯೆನ್ನಿ ವಿದ್ಯಲು ನೇರ್ಚಿನ – ಯೇಮಿ ಫಲಮು ।
ಬ್ರಹ್ಮವಿದ್ಯಕು ಸರಿಸಾಟಿ – ವಿದ್ಯ ಲೇದು ।

ಈ ಮೇಲ್ಕಂಡ ಲೌಕಿಕ ವಿದ್ಯೆಗಳ ಹೆಸರುಗಳನ್ನೆತ್ತಿ ನೆನಪಿಸುವ ತಾತಯ್ಯನವರು ಅವನ್ನು ಬ್ರಹ್ಮವಿದ್ಯೆಯೊಂದಿಗೆ ಹೋಲಿಸಿ ಅದು ಮಿಕ್ಕೆಲ್ಲ ವಿದ್ಯೆಗಳಿಗಿಂತಲೂ ಅತಿ ಶ್ರೇಷ್ಠವಾದುದು. ಲೌಕಿಕ ವಿದ್ಯೆಗಳು ಕೇವಲ ಇಹಲೋಕದ ಸಾಮಾನ್ಯ ಜೀವನ ಯಾತ್ರೆಗೆ ಅಲ್ಪಕಾಲೀನ ಸಹಾಯವನ್ನು ನೀಡುವಂಥವಾದರೆ ಎಲ್ಲಕ್ಕಿಂತಲೂ ಮಿಗಿಲಾದ ಬ್ರಹ್ಮವಿದ್ಯೆ ಬ್ರಹ್ಮನನ್ನು ಸೇರುವ ಮಹಾನ್ ವಿದ್ಯೆ ಎನ್ನುತ್ತಾರೆ ಯೋಗಿವರ್ಯರು. ಬ್ರಹ್ಮ ಯಾರು? ಅವನೇ ದೈವ, ಪರಮಾತ್ಮ, ಪರಬ್ರಹ್ಮ, ಭಗವಂತ, ಆತ್ಮತತ್ತ್ವ ಮುಂತಾದ ಹೆಸರುಗಳಿಂದ ಗುರುತಿಸಲ್ಪಡುವವನು. ಬ್ರಹ್ಮನು ಎಲ್ಲರೊಳಗೆ ಅಂತರ್ಯಾಮಿಯಾಗಿ ನೆಲೆಸಿರುವ ದಿವ್ಯ ಚೇತನ. ಆ ಬ್ರಹ್ಮನನ್ನು ಅರಿತುಕೊಳ್ಳಲು ಇರುವುದನ್ನೇ ಬ್ರಹ್ಮವಿದ್ಯೆ ಎನ್ನುವುದು.

ಲೌಕಿಕವಾಗಿ ಎಷ್ಟೋ ವಿದ್ಯೆಗಳಿವೆ. ತಾತಯ್ಯನವರ ಕಾಲಕ್ಕಿಂತಲೂ ಈಗ ಅಂತಹ ವಿದ್ಯೆಗಳು ಅಸಂಖ್ಯಾತವಾಗಿ ವೃದ್ಧಿಸಿವೆ. ಎಷ್ಟೇ ವೈಜ್ಞಾನಿಕವಾದ ವಿದ್ಯೆಗಳನ್ನು ಕಲಿತರೂ ಎಷ್ಟೇ ವಿವಿಧ ಬಗೆಯ ಅರಿವುಗಳನ್ನು ಪಡೆದರೂ ಅವು ಕೇವಲ ಇಹಲೋಕ ಯಾತ್ರೆಗೆ ಪೂರಕವಾದುವಷ್ಟೇ. ಅವು ಯಾವ ವಿಧದಲ್ಲೂ ಹುಟ್ಟು ಸಾವುಗಳ ಕರ್ಮಚಕ್ರದಿಂದ ಮನುಜನನ್ನು ಪಾರುಗಾಣಿಸಲಾರವು. ಅಂತಹ ವಿದ್ಯೆಗಳನ್ನು ಕಲಿತರೆ ಫಲವೇನು ಬಂತು ಎಂಬುದು ಈ ಪದ್ಯದಲ್ಲಿ ಎತ್ತಲಾಗಿರುವ ಪ್ರಶ್ನೆ. ನಿಜವಾದ ವಿದ್ಯೆ ಎಂದರೆ ಜನನ ಮರಣಗಳ ಚಕ್ರದಿಂದ ಮುಕ್ತಿಗೊಳಿಸುವ ವಿದ್ಯೆಯೇ ಆಗಿದೆ. ಅದನ್ನೇ ವೇದಾಂತದಲ್ಲಿ 'ಸಾ ವಿದ್ಯಾ ಯಾ ವಿಮುಕ್ತಯೇ' ಎಂದು ಸೂಕ್ತಿ ರೂಪದಲ್ಲಿ ಹೇಳಲಾಗಿದೆ. ಯಾವ ವಿದ್ಯೆಯು ಮೋಕ್ಷಪ್ರದವೋ ಅದೇ ವಿದ್ಯೆ. ಹೀಗೆ ಮುಕ್ತಿಯ ದಾರಿಯನ್ನು ತೋರಿಸುವ ವಿದ್ಯೆಯೇ ಬ್ರಹ್ಮವಿದ್ಯೆ. ನರಜನ್ಮದ ಗುರಿಯೇ ಮೋಕ್ಷ. ಆ ಮೋಕ್ಷಕ್ಕೆ ದ್ವಾರವೇ ಬ್ರಹ್ಮವಿದ್ಯೆ. ಆದುದರಿಂದ ಬ್ರಹ್ಮವಿದ್ಯೆಗೆ ಸಮಾನವಾದ ವಿದ್ಯೆ ಬೇರೊಂದಿಲ್ಲ. 'ಬ್ರಹ್ಮವಿದ್ಯಕು ಸರಿಸಾಟಿ ವಿದ್ಯಲೇದು' ಎನ್ನುತ್ತಾರೆ ಕೈವಾರ ತಾತಯ್ಯನವರು.

(ಮುಂದುವರಿಯುವುದು)

**ಬ್ಯಾಂಕ್ ಮೂಲಕ ಚಂದಾ ಹಣ ಸಲ್ಲಿಸಲು ಇಚ್ಛಿಸುವವರು ಈ ಎಸ್‌ಬಿ ಅಕೌಂಟ್‌ಗೆ ಕಳುಹಿಸಬಹುದು**

For Subscription - Bank Transfer / RTGS
**Sri Yogi Nareyana Study Centre**
**SB A/c No. 141201011016824**
MSRIT Branch,
**VIJAYA BANK,** Bangalore 560 054
**IFSC Code: VIJB0001412**
**MICR Code: 560029070**
After Transfer please inform to below mentioned Mobile No. 94480 85975

ಯೋಗ ವಾಸಿಷ್ಠ ಒಂದು ಮಹಾನ್ ಅಧ್ಯಾತ್ಮ ಗ್ರಂಥ. ಬೃಹತ್ತಾದುದು ಕೂಡ. ವಸಿಷ್ಠರು ಹಾಗೂ ಶ್ರೀರಾಮನ ನಡುವಿನ ಸಂಭಾಷಣೆಯ ರೂಪದಲ್ಲಿರುವ ಈ ಗ್ರಂಥ ಅಧ್ಯಾತ್ಮ ವಿದ್ಯೆಯ ಪಠ್ಯಪುಸ್ತಕದಂತಿದೆ. ಬಹು ಪ್ರಾಚೀನವಾದ ಈ ಗ್ರಂಥದ ವೈಶಿಷ್ಟ್ಯವಿರುವುದೇ ಗಹನವಾದ ವಿಚಾರವನ್ನು ತಿಳಿಸಲು ಉಪಕಥೆಗಳನ್ನು ಬಳಸಿಕೊಂಡಿರುವುದು. ವಿದುಷಿ ನಂ. ನಾಗಲಕ್ಷ್ಮಿಯವರು ಸರಳ ಭಾಷೆಯಲ್ಲಿ ಅದರಲ್ಲಿನ ಕಥೆಗಳನ್ನು 'ಮಲ್ಲಾರ' ಓದುಗರಿಗಾಗಿ ಪ್ರತಿ ಸಂಚಿಕೆಯಲ್ಲೂ ಪ್ರಸ್ತುತಪಡಿಸುತ್ತಾರೆ.



### ಆತ್ಮ ದರ್ಶನ

ಪ್ರಾಪಂಚಿಕವಾದ ವಸ್ತುಗಳನ್ನು ಬಯಸುವುದೂ ಇದ್ದುದನ್ನು ಕಾಪಾಡಿಕೊಳ್ಳುವುದೂ ಬೇಡವಾದುದನ್ನು ನಾಶಪಡಿಸುವುದೂ ಲೌಕಿಕ ವಿಚಾರಗಳನ್ನು ನೋಡಿ ಆಶ್ಚರ್ಯಪಡುವುದೂ ಅವುಗಳನ್ನು ವೃದ್ಧಿ ಹೊಂದಿಸುವುದೂ ಇವೆಲ್ಲವೂ ಜ್ಞಾನಕ್ಕೆ ಇರುವ ಕಳಂಕಾ, ವಿಶಂಕಾ ಎಂಬ ಎರಡು ದೋಷಗಳಿಂದಲೇ ಆಗುವುದು. ಆ ಎರಡು ದೋಷಗಳು ನಾಶವಾದ ಮೇಲೆ ಯಾವ ಗೊಂದಲವೂ ಇರುವುದಿಲ್ಲ. ಇವು ನಾಶವಾಗಬೇಕಾದರೆ ಆತ್ಮ ದರ್ಶನದಿಂದಲೇ ಸಾಧ್ಯ.

# ಬಲಿ ವಿಜ್ಞಾನ ಪ್ರಾಪ್ತಿ

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

ವಿರೋಚನನು ಮಗನಾದ ಬಲಿಯ ಪ್ರಶ್ನೆಗೆ ಹೀಗೆಂದು ಉತ್ತರಿಸಿದನು, "ಮಗನೆ, ಆ ಮಂತ್ರಿಯು ಬಹು ಬಲಾಢ್ಯನು. ದೇವಾಸುರ ಗಣಗಳೆಲ್ಲವೂ ಸೇರಿ ಇನ್ನೂ ಒಂದು ಲಕ್ಷದಷ್ಟು ಹೆಚ್ಚಾಗಿ ಬಂದರೂ ಅವನನ್ನು ಏನೂ ಮಾಡಲಾರರು.

**ನಾಸೌ ಸಹಸ್ರಯನೋ ನ ಯಮೋ ನ ಧನೇಶ್ವರಃ ।**
**ನಾಮರೋ ನಾಸುರೋ ವಾಪಿ ಯದಿ ಪುತ್ರಕ ಜೀಯತೇ ॥**

ಅವನು ಇಂದ್ರನಲ್ಲ, ಯಮನಲ್ಲ, ಕುಬೇರನಲ್ಲ, ದೇವತೆಯಲ್ಲ, ದಾನವನೂ ಅಲ್ಲ, ಅಷ್ಟೇ ಅಲ್ಲ, ಅವನನ್ನು ಯಾರೂ ಗೆಲ್ಲಲು ಆಗುವುದಿಲ್ಲ. ಖಡ್ಗ, ಚಕ್ರ, ಗದಾ ಮೊದಲಾದ ಯಾವ ಆಯುಧಗಳ ಪ್ರಯೋಗವೂ ಕೂಡ ವ್ಯರ್ಥವೇ ಆಗುವುದು. ಅಂದರೆ, ಶಸ್ತ್ರಾಸ್ತ್ರಗಳು ಅವನನ್ನು ಏನೂ ಮಾಡಲಾರವು. ವೀರಾಧಿವೀರ ಭಟರೂ ಏನೂ ಮಾಡಲಾರರು. ಅದರಿಂದ ದೇವಾಸುರರೆಲ್ಲರೂ ಯಾವಾಗಲೂ ಅವನಿಗೆ ವಶರಾಗಿಯೇ ಇರುವರು.

ಅವನು ವಿಷ್ಣುವಲ್ಲದಿದ್ದರೂ ಹಿರಣ್ಯಾಕ್ಷನೇ ಮೊದಲಾದ ಅಸುರೇಂದ್ರರೆಲ್ಲರನ್ನೂ ಸಂಹರಿಸಿದವನು. ಅಷ್ಟೇ ಏಕೆ, ಸ್ವಯಂ ಸರ್ವಜ್ಞನಾದ ನಾರಾಯಣನೇ ಆದಿಯಾಗಿ ದೇವಾಧಿದೇವತೆಗಳೆಲ್ಲ ಅವನ ಪ್ರಹಾರಕ್ಕೆ ಸಿಕ್ಕಿದವರೇ. ಅವನ ಅನುಗ್ರಹದಿಂದಲೇ ಮನ್ಮಥನು ಐದೇ ಐದು ಬಾಣವುಳ್ಳವನಾದರೂ ಲೋಕತ್ರಯಗಳನ್ನೂ ಆಕ್ರಮಿಸಿಕೊಂಡಿರಲು ಸಾಧ್ಯವಾಗಿರುವುದು. ಅವನ ಅಪೇಕ್ಷೆಯ ಕಾರಣದಿಂದಲೇ ದೇವಾಸುರರ ಯುದ್ಧವು ಆಗಿಂದಾಗ್ಗೆ ನಡೆಯುತ್ತಲೇ ಇರುವುದು. ಇಂತಹ ಬಲಾಢ್ಯನಾದ ಮಂತ್ರಿಯನ್ನು ಬೇರೆ ಯಾರಿಂದಲೂ ಗೆಲ್ಲುವುದು ಸಾಧ್ಯವಿಲ್ಲ. ಕೇವಲ, ಅವನನ್ನು ಹುಟ್ಟಿಸಿದ ಪ್ರಭುವಿಗೆ ಮಾತ್ರ ಅವನನ್ನು ಗೆಲ್ಲಲು ಸಾಧ್ಯ. ಅದು ಯಾವಾಗಲೂ ಸಾಧ್ಯವಿಲ್ಲ. ಯಾವುದೋ ಒಂದು ಕಾಲದಲ್ಲಿ ಆ ಪ್ರಭುವಿಗೆ ತಾನು ಮಂತ್ರಿಯನ್ನು ಗೆಲ್ಲಬೇಕೆಂಬ ಅಪೇಕ್ಷೆ ಹುಟ್ಟಿದಾಗ ಮಾತ್ರವೇ ಸಾಧ್ಯ. ಆಗಲೇ ಮಂತ್ರಿಯೂ ಸುಲಲಿತವಾಗಿ ಪ್ರಭುವಿಗೆ ವಶವಾಗಿಬಿಡುತ್ತಾನೆ.

ಹೀಗೆ, ಮೂರೂ ಲೋಕಗಳಲ್ಲಿರುವವರನ್ನೆಲ್ಲ ಗೆದ್ದಿರುವ ಆ ಮಂತ್ರಿಯನ್ನು ಗೆಲ್ಲಲು ನಿನಗೆ ಶಕ್ತಿಯಿದ್ದರೆ ಆಗ, ನೀನು ನಿಜವಾಗಲೂ ಪರಾಕ್ರಮಶಾಲಿಯೆನಿಸಿಕೊಳ್ಳುತ್ತೀಯೆ. ಅವನೊಬ್ಬನನ್ನು ಗೆದ್ದರೂ ಸಾಕು, ನೀನು ಈ ಲೋಕಗಳನ್ನೆಲ್ಲ ಗೆದ್ದಂತೆಯೇ ಆಗುತ್ತದೆ. ಇಲ್ಲವಾದರೆ ನೀನು ಯಾವ ಲೋಕವನ್ನೇ ಗೆದ್ದರೂ ಏನನ್ನೂ, ಯಾರನ್ನೂ ಗೆಲ್ಲದಿದ್ದಂತೆಯೇ. ಆದ್ದರಿಂದ, ಶಾಶ್ವತ ಸುಖಕ್ಕಾಗಿ ನೀನು ಆಶಿಸುತ್ತಿರುವೆಯಾದರೆ ಆ ಮಂತ್ರಿಯನ್ನು ಜಯಿಸಲು ಪ್ರಯತ್ನ ಮಾಡು."

ಈ ಮಾತುಗಳನ್ನೆಲ್ಲ ಕೇಳಿದ ಬಲಿಯು ಮತ್ತೆ ಪ್ರಶ್ನಿಸಿದನು, "ಇಷ್ಟೆಲ್ಲ ಪರಾಕ್ರಮಿಯಾದ ಆ ಮಂತ್ರಿಯು ಯಾರು? ಅವನನ್ನು ಗೆಲ್ಲುವ ಉಪಾಯವನ್ನು ತಿಳಿಸು." ಆಗ ವಿರೋಚನನು ಉತ್ತರಿಸಿದನು, "ಮಗನೇ, ಯಾವಾಗಲೂ ಅಜೇಯನೇ ಆಗಿರುವ ಆ ಮಂತ್ರಿಯನ್ನು ಸುಲಭವಾಗಿ ಗೆಲ್ಲುವ ಉಪಾಯವನ್ನು ಹೇಳುವೆನು. ಒಂದೇ ಒಂದು ಯುಕ್ತಿಯಿದೆ. ಅದನ್ನು ಬಳಸಿದಲ್ಲಿ ಮಾತ್ರ ಅವನನ್ನು ಗೆಲ್ಲಲು ಸಾಧ್ಯ. ಇಲ್ಲವಾದರೆ ಅವನು ಒಂದು ಮಹಾಸರ್ಪದಂತೆ ನಮ್ಮನ್ನೆಲ್ಲ ನಾಶಮಾಡಿಬಿಡುತ್ತಾನೆ. ಆ ಯುಕ್ತಿ ಏನೆಂದರೆ, ಮೊದಲಿಗೆ ಆ ಮಂತ್ರಿಯನ್ನು ಪ್ರೀತಿಯಿಂದ ಎಳೆಯ ಮಗುವಿನಂತೆ ಲಾಲಿಸಬೇಕು. ಆಗ ಅವನು ವಶವಾಗುತ್ತಾನೆ. ಅನಂತರ ಅವನ ಮೂಲಕವೇ ಅವನ ಪ್ರಭುವನ್ನು ನೋಡಲು ಸಾಧ್ಯವಾಗುತ್ತದೆ. ಹೀಗೆ, ರಾಜನನ್ನು ಕಾಣುವವರೆಗೂ ಆ ಮಂತ್ರಿಯು ಸೋಲುವುದಿಲ್ಲ. ಮಂತ್ರಿಯನ್ನು ವಶಪಡಿಸಿಕೊಳ್ಳುವವರೆಗೂ ರಾಜನನ್ನು ನೋಡಲಾಗುವುದಿಲ್ಲ. ಅಂದರೆ, ಮಂತ್ರಿಯು ವಶನಾಗುವವರೆಗೂ ರಾಜನು ಅದೃಶ್ಯನಾಗಿಯೇ ಇರುತ್ತಾನೆ. ಅದರಿಂದ, ಎರಡೂ ಕಾರ್ಯಗಳು ಆಗುವಂತಹ ಉಪಾಯವನ್ನು ಒಂದೇ ಕಾಲದಲ್ಲಿ ಹೂಡಿದರೆ ರಾಜ ದರ್ಶನವೂ ಮಂತ್ರಿ ಪರಾಜಯವೂ ಆಗುವಂತೆ ಮಾಡಬಹುದು.

ಈ ಕಾರ್ಯಕ್ಕಾಗಿ ಪೌರುಷ, ಪ್ರಯತ್ನ ಮತ್ತು ದೃಢವಾದ ಅಭ್ಯಾಸಗಳು ಅಗತ್ಯ. ನೀನು ಮೇಲೆ ತಿಳಿಸಿದ ಎರಡೂ ಕಾರ್ಯಗಳಲ್ಲಿ ಯಶಸ್ವಿಯಾದರೆ ಆಗ, ಆ ಶುಭವಾದ ದೇಶವನ್ನು ಸೇರಬಹುದು. ಒಮ್ಮೆ ನೀನು ಆ ದೇಶಕ್ಕೆ ಹೋದುದೇ ಆದರೆ ಮತ್ತೆ ನಿನಗೆ ದುಃಖವೆಂಬುದು ಯಾವಾಗಲೂ ಇರುವುದೇ ಇಲ್ಲ. ಏಕೆಂದರೆ, ಆ ದೇಶದಲ್ಲಿರುವ ಪ್ರಜೆಗಳೆಲ್ಲರೂ ಸದಾಕಾಲ ಸಂತೋಷಚಿತ್ತರಾಗಿರುವರು. ಆ ದೇಶವೇ ಸಕಲ ದುಃಖಗಳನ್ನೂ ಅಳಿಸುವ 'ಮೋಕ್ಷ'ವಾಗಿರುವುದು. ಅಲ್ಲಿರುವ ಅರಸನೆಂದರೆ, ಸರ್ವ ಪದವಿಗಳನ್ನೂ ಮೀರಿದ ಪದವಿಯಲ್ಲಿರುವ ಆತ್ಮನಾಗಿರುವನು. ಅವನ ಮಂತ್ರಿಯಾಗಿರುವ ಆ ಬಲಶಾಲಿಯೇ 'ಮನಸ್ಸು' ಎಂಬುದು. ಅದನ್ನು ಗೆದ್ದುಕೊಂಡರೆ ಎಲ್ಲವನ್ನೂ ಗೆದ್ದಂತೆಯೇ."



ಮತ್ತೆ ತನ್ನ ಮಾತುಗಳನ್ನು ಮುಂದುವರಿಸುತ್ತ ವಿರೋಚನನು ಆ ಏಕಮಾತ್ರ ಉಪಾಯವನ್ನೂ ತಿಳಿಸುವನು. "ಪುತ್ರನೆ, ವಿಷಯಗಳನ್ನು ಸಂಪೂರ್ಣವಾಗಿ, 'ಆಸ್ಥೆ' ಎಂಬುದನ್ನು ಎಳ್ಳಷ್ಟೂ ಇಲ್ಲದಂತೆ ತೊರೆದುಬಿಡುವುದೇ ಆ 'ಮನಸ್ಸ'ನ್ನು ಜಯಿಸಲು ಇರುವ ಪರಮೋಪಾಯವಾಗಿರುವುದು. ಆದರೆ, ಅದು ಅಷ್ಟು ಸುಲಭವೂ ಅಲ್ಲ. ಆದರೂ ದೃಢವಾದ ಪ್ರಯತ್ನ ಮಾಡಿದರೆ ಖಂಡಿತ ಸಾಧ್ಯವಾಗುವುದು. ಸಂಸಾರವೆಂಬ ಹಳ್ಳದಲ್ಲಿ ಬಿದ್ದುಹೋಗಿರುವವನು ವಿರಕ್ತಿಯನ್ನು ಹೊಂದುವವರೆಗೂ ದುಃಖದಿಂದ ದುಃಖಕ್ಕೆ ಅಲೆಯುತ್ತಲೇ ಇರುವನು. ಅದರಿಂದ, ವಿಷಯಗಳಲ್ಲಿ ವೈರಾಗ್ಯವನ್ನು ಹೊಂದುವುದರಿಂದಲೇ ನಿನಗೆ ಬೇಕಾದ ಶಾಶ್ವತ ಸುಖದ ಸ್ಥಿತಿಯನ್ನು ಪಡೆದುಕೊಳ್ಳಲು ಸಾಧ್ಯವಾಗುವುದು. ಅದಕ್ಕೆ ಬೇಕಾದುದೇ 'ಆತ್ಮ ದರ್ಶನ'ವೆಂಬ ಸಾಧನ. ಅದು ಎಂದಿಗೂ ನಿನ್ನ ಅಪೇಕ್ಷೆಯ ನಿಷ್ಫಲವಾಗಲು ಬಿಡುವುದಿಲ್ಲ. ಆತ್ಮ ದರ್ಶನ ಮಾಡಿದವನ ಹೃದಯದಲ್ಲಿ ವಿಷಯ ವೈರಾಗ್ಯವು ದೃಢವಾಗಿ ನೆಲೆಸುವುದು. ಆದ್ದರಿಂದ ಉತ್ತಮವೂ ಸುಂದರವೂ ಆದ ವಿಚಾರಗಳಿಂದ ಆತ್ಮ ದರ್ಶನವನ್ನು ಸಂಪಾದಿಸಬೇಕು.

ಸಂಸ್ಕಾರವಿಲ್ಲದ ಚಿತ್ತವಾದಲ್ಲಿ ಕ್ರಮವಾಗಿ ಸಂಸ್ಕಾರವಾಗಲೆಂದು ಚಿತ್ತದಲ್ಲಿ ಎರಡು ಭಾಗವನ್ನು ಭೋಗಗಳಿಗೂ, ಒಂದು ಭಾಗವನ್ನು ಶಾಸ್ತ್ರಕ್ಕೂ, ಇನ್ನೊಂದು ಭಾಗವನ್ನು ಗುರು ಶುಶ್ರೂಷೆಗೂ ಉಪಯೋಗಿಸುತ್ತಾ ಬರಬೇಕು. ಚಿತ್ತಕ್ಕೆ ಕಿಂಚಿತ್ತಾಗಿಯಾದರೂ ಸಂಸ್ಕಾರವು ದೊರೆತ ಮೇಲೆ ಭೋಗಕ್ಕೆ ಒಂದು ಭಾಗವನ್ನೂ ಗುರು ಶುಶ್ರೂಷೆಗೆ ಎರಡು ಭಾಗವನ್ನೂ ಶಾಸ್ತ್ರ ಚಿಂತನೆಗೆ ಇನ್ನೊಂದು ಭಾಗವನ್ನೂ ಉಪಯೋಗಿಸಬೇಕು. ಹೀಗೆ, ಚಿತ್ತಕ್ಕೆ ಸಂಸ್ಕಾರವು ಹೆಚ್ಚಾಗಿ ಬಂದಂತೆಲ್ಲ ದಿನ ದಿನವೂ ಶಾಸ್ತ್ರ, ವೈರಾಗ್ಯ ಸಂಪಾದನೆಗಾಗಿ ಎರಡು ಭಾಗಗಳನ್ನೂ ಧ್ಯಾನ, ಗುರುಪೂಜೆಗಳಿಂದ ಇನ್ನೆರಡು ಭಾಗಗಳನ್ನೂ ಕಳೆಯಬೇಕು. ಹೀಗೆ, ಚಿತ್ತವೆಂಬ ಬಾಲಕನನ್ನು ನಿಧಾನವಾಗಿ ಯುಕ್ತಿಯಿಂದಲೂ ಪವಿತ್ರವಾದ ಶಾಸ್ತ್ರಾರ್ಥಗಳನ್ನು ಆಚರಿಸುವುದರಿಂದಲೂ ದಾರಿಗೆ ತರಬೇಕು.

ಆತ್ಮಜ್ಞಾನದಲ್ಲಿ ಹೀಗೆ ಪರಿಣತಿಯ ಹಂತವನ್ನು ತಲಪಿದ ಅನಂತರ ಮನಸ್ಸು ತನ್ನಲ್ಲಿರುವ ಮಾಲಿನ್ಯವನ್ನು ಅಂದರೆ 'ಜಗತ್ತು ಸತ್ಯ' ಎಂಬ ಭ್ರಾಂತಿಯ ಭಾವವನ್ನು ಬಿಟ್ಟು ಶಾಂತವಾಗುವುದು."

ತಂದೆಯ ಮಾತುಗಳನ್ನೆಲ್ಲ ಕೇಳಿದ ಬಲಿಯು ಆತ್ಮ ದರ್ಶನವನ್ನು ಮಾಡಿಕೊಳ್ಳುವ ಪ್ರಯತ್ನದಲ್ಲಿ ತೊಡಗಿ ಮನಸ್ಸಿನ ಶಾಂತಿಯನ್ನು ಪಡೆಯುವ ಕಾರ್ಯವನ್ನು ಆರಂಭಿಸಿದನು.


**(ಮುಂದುವರಿಯುವುದು)**


**ನಂ. ೨೫೧, ೧೨ನೇ 'ಬಿ' ಕ್ರಾಸ್, ೧ನೇ 'ಬಿ' ಮುಖ್ಯರಸ್ತೆ,**
**ಮಹಾಲಕ್ಷ್ಮಿಪುರಂ, ಬೆಂಗಳೂರು-೫೬೦ ೦೮೬.**



# ಪ್ರಾಚೀನ ಭಾರತದ ಮಹರ್ಷಿಗಳು-೧೭

ಕಶ್ಯಪ ಮಹರ್ಷಿ ಬ್ರಹ್ಮನ ಮೊಮ್ಮಗ. ಅವರು ಮರೀಚಿ ಮಹರ್ಷಿಗಳ ಪುತ್ರರು. ಬ್ರಹ್ಮನಿಂದಲೇ ಇವರು ಸೃಷ್ಟಿಕಾರ್ಯಕ್ಕಾಗಿ ಪ್ರಜಾಪತಿ ಸ್ಥಾನದಲ್ಲಿ ನಿಯುಕ್ತರಾದವರು. ಇನ್ನೊಬ್ಬ ಪ್ರಜಾಪತಿಯಾದ ದಕ್ಷಬ್ರಹ್ಮನಿಗೆ ಐವತ್ತು ಮಂದಿ ಪುತ್ರಿಯರಿದ್ದರು. ಅವರಲ್ಲಿ ಅದಿತಿ, ದಿತಿ, ದನು, ಕಾಲಾ, ದನಾಯು, ಸಿಂಹಿಕಾ, ಕ್ರೋಧಾ, ಪ್ರಾಧಾ, ವಿಶ್ವಾ, ವಿನತೆ, ಕಪಿಲಾ, ಮುನಿ ಮತ್ತು ಕದ್ರು ಎಂಬ ಹೆಸರಿನ ಹದಿಮೂರು ಮಂದಿ ಹೆಣ್ಣುಮಕ್ಕಳನ್ನು ಕಶ್ಯಪರಿಗೆ ವಿವಾಹ ಮಾಡಿಕೊಟ್ಟನು. ಇವರಿಂದಲೇ ಎಲ್ಲ ಬಗೆಯ ಸೃಷ್ಟಿಯೂ ಮುಂದುವರಿಯಿತು.



## ಕಶ್ಯಪ



ಡಾ. ಎಸ್. ಹೇಮಲತಾ.

ಅದಿತಿಯಲ್ಲಿ ಎಲ್ಲ ದೇವತೆಗಳೂ ಜನಿಸಿದರು. ಸಾಕ್ಷಾತ್ ಶ್ರೀಮನ್ನಾರಾಯಣನೇ ವಾಮನಾವತಾರದಿಂದ ಅವಳ ಗರ್ಭದಲ್ಲಿ ಜನಿಸಿ, ಇಂದ್ರನಿಗೆ ತಮ್ಮನಾದನು. ಎರಡನೆಯವಳಾದ ದಿತಿಗೆ ಹಿರಣ್ಯಕಶಿಪುವೆಂಬ ಪುತ್ರನು ಜನಿಸಿದನು. ಇವನ ವಂಶದವರೇ ದೈತ್ಯರು. ದನುವೆಂಬ ಮೂರನೆಯ ಭಾರ್ಯೆಗೆ ವಿಪ್ರಚಿತ್ತಿಯೇ ಮೊದಲಾದ ಮೂವತ್ನಾಲ್ಕು ಮಕ್ಕಳು ಜನಿಸಿ, ದಾನವರೆಂದು ಪ್ರಸಿದ್ಧರಾದರು. ಕಲಾ ಎಂಬ ನಾಲ್ಕನೆಯ ಭಾರ್ಯೆಯಲ್ಲಿ ಕಾಲಕೇಯರೆಂಬ ರಾಕ್ಷಸರು ಜನಿಸಿದರು. ದನಾಯು ಐದು ಅಸುರರನ್ನು ಮಕ್ಕಳನ್ನಾಗಿ ಪಡೆದಳು. ಸಿಂಹಿಕೆಯು ರಾಹುವೇ ಮುಂತಾದ ಮಕ್ಕಳನ್ನು ಪಡೆದಳು. ಕ್ರೋಧೆಯ ಮಕ್ಕಳು ರಾಕ್ಷಸಗಣದವರು. ಪ್ರಾಧಾ ಎಂಬುವವಳಿಗೆ ಗಂಧರ್ವರು ಪುತ್ರ-ಪುತ್ರಿಯರಾದರು. ವಿಶ್ವಾ ಎಂಬುವವಳ ವಂಶವು ಅಪ್ಸರೆಯರದಾಗಿದೆ. ಅರುಣ ಮತ್ತು ಗರುಡರು ವಿನತೆಯ ಪುತ್ರರು. ಕಪಿಲಾ ಎಂಬವಳು ಬ್ರಾಹ್ಮಣರು ಮತ್ತು ಹಸುಗಳ ಉಗಮಕ್ಕೆ ಕಾರಣಳಾದಳು. ಮುನಿಯ ಮಕ್ಕಳೇ ಮೌನೇಯರು; ಇವರಲ್ಲಿ ನಾರದರು ಪ್ರಮುಖರು. ಕಡೆಯವಳಾದ ಕದ್ರುವು ಸರ್ಪಗಳ ಮಾತೆ. ಹೀಗೆ ಅನೇಕ ವಿಧವಾದ ಸೃಷ್ಟಿಯು ಕಶ್ಯಪರಿಂದ ಆರಂಭಗೊಂಡಿತು ಎಂದು ಮಹಾಭಾರತದಲ್ಲಿ ಬರುವ ಕಶ್ಯಪರ ವಂಶವರ್ಣನೆಯಿಂದ ತಿಳಿದುಬರುತ್ತದೆ.

ಮಾರ್ಕಂಡೇಯ ಪುರಾಣದಲ್ಲಿ ಕೆಲವು ಹೆಸರು, ವಿವರಣೆಗಳಲ್ಲಿ ವ್ಯತ್ಯಾಸವಿದೆ. ಖಸಾ ಎನ್ನುವವಳು ಯಕ್ಷರನ್ನು ಹಡೆದವಳೆಂದೂ ಇರಾ ಎನ್ನುವವಳು ಐರಾವತವೇ ಮುಂತಾದ ಗಜಜಾತಿಗಳಿಗೆ ಕಾರಣಳೆಂದೂ ತಾಮ್ರಾ ಎನ್ನುವವಳಿಗೆ ಶ್ಯೇನಜಾತಿಯ ಗಿಡುಗ, ಭಾಸ, ಗಿಳಿ ಮುಂತಾದ ಪಕ್ಷಿಗಳು ಜನಿಸಿದವೆಂದೂ ಪ್ರಧಾಳಿಂದ ಜಲಜಂತುಗಳು ಉತ್ಪತ್ತಿಯಾದುವೆಂದೂ ಅಲ್ಲಿ ಹೇಳಿದೆ. ವಿವರಗಳು ಏನೇ ಇರಲಿ, ಈ ಸ್ತ್ರೀಯರು ಆಯಾ ಪ್ರಾಣಿ ಅಥವಾ ಪಕ್ಷಿವರ್ಗವನ್ನೂ, ವೃಕ್ಷಾದಿಗಳನ್ನೂ ಅಕ್ಕರೆಯಿಂದ ಪೋಷಣೆ ಮಾಡಿ, ಅವು ಉಳಿದು ಬೆಳೆಯುವಂತೆ ಮಾಡಿದರೆಂದು ನಾವು ಊಹಿಸಬಹುದು. ಪ್ರಪಂಚದಲ್ಲಿರುವ ಸಮಸ್ತ ಜೀವರಾಶಿಗಳ ಪಾಲನೆ-ಪೋಷಣೆಗಳು ಕಶ್ಯಪರ ಮತ್ತು ಅವರ ಕುಟುಂಬದ ಜವಾಬ್ದಾರಿಯಾಗಿತ್ತು. ಒಳ್ಳೆಯ ಮತ್ತು ಕೆಟ್ಟ ಜೀವಿಗಳೆಲ್ಲರಿಗೂ ಅವರು ಸಮಾನವಾದ ಪ್ರೀತಿ, ಸ್ಥಾನಗಳನ್ನು ನೀಡಿ ಬೆಳೆಸಿದ ಮಹಾಮಹಿಮರು. ಆದ್ದರಿಂದಲೇ ಪರಮಾತ್ಮನು ತನ್ನ ಮುಂದಿನ ಅವತಾರಗಳಿಗೂ ಅದಿತಿ-ಕಶ್ಯಪರೇ ತಾಯಿತಂದೆಯರಾಗಬೇಕೆಂದು ಬಯಸಿದನು. ಅವರೇ ಮುಂದೆ ಕೌಸಲ್ಯೆ-ದಶರಥರಾಗಿ ಜನಿಸಿ, ಶ್ರೀರಾಮನಾಗಿ ಪರಮಾತ್ಮನ ಅವತಾರಕ್ಕೆ ಕಾರಣರಾದರು; ದೇವಕಿ-ವಸುದೇವರಾಗಿ ಕೃಷ್ಣನಿಗೆ ಮಾತಾ-ಪಿತೃಗಳಾದರು.

ಕಶ್ಯಪರ ತಪಃಶಕ್ತಿಯನ್ನು ಸಾರುವ ಅನೇಕ ಕಥೆಗಳಿವೆ. ಪರಶುರಾಮರು ಭೂಮಿಯನ್ನೆಲ್ಲ ಇಪ್ಪತ್ತೊಂದು ಬಾರಿ ಪ್ರದಕ್ಷಿಣೆ ಮಾಡಿ, ಕ್ಷತ್ರಿಯರೆಲ್ಲರನ್ನೂ ನಿರ್ನಾಮ ಮಾಡಿದ ಅನಂತರ ತಾವು ಜಯಿಸಿದ್ದ ಭೂಭಾಗವನ್ನೆಲ್ಲ ಕಶ್ಯಪರಿಗೆ ದಾನಮಾಡಿದರಂತೆ. ಆದ್ದರಿಂದಲೇ ಭೂಮಿಗೆ 'ಕಾಶ್ಯಪೀ' ಎಂಬ ಹೆಸರು ಬಂದಿತು. ಈ ವಿಷಯ ರಾಮಾಯಣದ ಬಾಲಕಾಂಡದಲ್ಲಿ ಬರುತ್ತದೆ.

ಗರುಡನು ತನ್ನ ತಾಯಿಯಾದ ವಿನತೆಯ ದಾಸ್ಯವನ್ನು ದೂರ ಮಾಡಲು ತನ್ನ ದೊಡ್ಡಮ್ಮ ಕದ್ರು ಮತ್ತು ಅವಳ ಮಕ್ಕಳಾದ ಸರ್ಪಗಳಿಗೆ ಅಮೃತವನ್ನು ತಂದುಕೊಡಲು ಒಪ್ಪಿ ಸ್ವರ್ಗಲೋಕಕ್ಕೆ ಪ್ರಯಾಣ ಮಾಡುತ್ತಿರುತ್ತಾನೆ. ಅವನು ದಾರಿಯಲ್ಲಿ ತಂದೆಯಾದ ಕಶ್ಯಪರನ್ನು ಭೇಟಿಮಾಡಿ ಅಮೃತವನ್ನು ತರಲು ಬೇಕಾದಷ್ಟು ಶಕ್ತಿಯನ್ನು ಕೊಡುವ ಆಹಾರಕ್ಕಾಗಿ ತಂದೆಯನ್ನು ಬೇಡುತ್ತಾನೆ. ಆಗ ಕಶ್ಯಪರು ಜನ್ಮಾಂತರದಿಂದ ವೈರಿಗಳಾಗಿದ್ದ ಆಮೆ, ಆನೆಗಳನ್ನು ತೋರಿಸಿ ಅವುಗಳನ್ನು ಭಕ್ಷಿಸುವಂತೆ ಹೇಳಿದರು. ಅವೆರಡೂ ಪೂರ್ವಜನ್ಮದಲ್ಲಿ ವಿಭಾವಸು-ಸುಪ್ರತೀಕರೆಂಬ ಸಹೋದರರಾಗಿದ್ದರು. ಅವರಿಬ್ಬರೂ ತಪಸ್ವಿಗಳಾಗಿದ್ದರೂ ಪರಸ್ಪರ ದ್ವೇಷಿಸುತ್ತಿದ್ದರು. ಆ ಕಾರಣದಿಂದ ಈಗ ತಾಮಸಜನ್ಮವನ್ನು ಪಡೆದು, ಈಗಲೂ ಹಿಂದಿನ ವೈರದಿಂದ ಪರಸ್ಪರ ಹೋರಾಡುತ್ತ, ಅವುಗಳಿದ್ದ ಸರೋವರ ಪ್ರದೇಶವನ್ನು ದೂಷಿತಗೊಳಿಸುತ್ತಿದ್ದವು. ಗರುಡನು ಅವುಗಳನ್ನು ಭಕ್ಷಿಸಿ ಆ ಪ್ರದೇಶವನ್ನು ಸುಖಮಯವನ್ನಾಗಿ ಮಾಡಿದನು.

ಒಮ್ಮೆ ಕೃಷ್ಣನು ತನ್ನ ಪತ್ನಿಯಾದ ಸತ್ಯಭಾಮೆಗಾಗಿ ದೇವಲೋಕದಿಂದ ಪಾರಿಜಾತ ವೃಕ್ಷವನ್ನು ತರುವುದಾಗಿ ಪ್ರತಿಜ್ಞೆ ಮಾಡಿದನು. ಆದರೆ ಇಂದ್ರನಿಗೆ ಅದನ್ನು ಕೊಡಲು ಇಷ್ಟವಿರಲಿಲ್ಲ. ಅವರಿಬ್ಬರಲ್ಲಿ ಈ ವಿಷಯಕ್ಕಾಗಿ ಯುದ್ಧವೇ ಪ್ರಾರಂಭವಾಯಿತು. ಆಗ ಬೃಹಸ್ಪತಿಯು ಈ ವಾರ್ತೆಯನ್ನು ಕಶ್ಯಪರಿಗೆ ತಿಳಿಸಿ ಯುದ್ಧವನ್ನು ನಿಲ್ಲಿಸುವಂತೆ ಪ್ರಾರ್ಥಿಸಿದನು. ಕಶ್ಯಪರು ಶಂಕರನನ್ನು ಧ್ಯಾನಿಸಿ 'ಬಿಲ್ವೋದಕೇಶ್ವರ' ಎಂಬ ಶಿವನ ಮೂರ್ತಿಯನ್ನು ಪ್ರತಿಷ್ಠಾಪಿಸಿ ಶಿವನನ್ನು ಪ್ರಸನ್ನಗೊಳಿಸಿ, ಅನಂತರ ಅದಿತಿದೇವಿಯೊಡನೆ ಯುದ್ಧಭೂಮಿಗೆ ಬಂದು ತಮ್ಮ ನಲ್ನುಡಿಗಳಿಂದ ಇಂದ್ರ-ಉಪೇಂದ್ರರ ಯುದ್ಧವನ್ನು ನಿಲ್ಲಿಸುತ್ತಾರೆ. ಈ ಕಥೆಯನ್ನು ಹರಿವಂಶದಲ್ಲಿ ವಿವರಿಸಲಾಗಿದೆ.

ಕಶ್ಯಪರು ಮಂತ್ರದ್ರಷ್ಟಾರರು. ಋಗ್ವೇದದ ಅನೇಕ ಮಂತ್ರಗಳಿಗೆ ಕಶ್ಯಪರು ಋಷಿಗಳು. ಪ್ರಸಿದ್ಧವಾದ ಪವಮಾನಸೋಮಸೂಕ್ತವು ಅವರ ದರ್ಶನದ ಫಲವು. ಅವರು ಗೋತ್ರಪ್ರವರ್ತಕರೂ ಹೌದು. ಕಾಶ್ಯಪ, ನೈಧ್ರುವ, ತಾಣಾಕ್ಷಿ, ಶಾಂಡಿಲ್ಯ, ಮುಂತಾದ ಗೋತ್ರಗಳು ಕಾಶ್ಯಪರಿಂದ ಪ್ರವರ್ತಿತವಾಗಿವೆ. ತಮ್ಮ ಗೋತ್ರವು ಯಾವುದೆಂದು ಗೊತ್ತಿಲ್ಲದಿರುವವರು ಕೂಡ ತಮ್ಮದು ಕಾಶ್ಯಪಗೋತ್ರವೆಂದು ಒಪ್ಪಿಕೊಳ್ಳಬಹುದೆಂದು ಹೇಳುತ್ತಾರೆ.

ಕಶ್ಯಪರು ಗ್ರಂಥಕಾರರೂ ಆಗಿರುತ್ತಾರೆ. 'ಕಶ್ಯಪ ಸಂಹಿತೆ'ಯೆಂಬ ಕೃತಿಯನ್ನು ಬೌಧಾಯನರು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿರುತ್ತಾರೆ. ಆದರೆ ಈ ಕೃತಿ ಲಭ್ಯವಾಗಿಲ್ಲ. ಇದರಲ್ಲಿ ಶ್ರಾದ್ಧ, ಅಶೌಚ ಮತ್ತು ಪ್ರಾಯಶಿತ್ತ ಪ್ರಕರಣಗಳು ಇದ್ದಿರಬಹುದೆಂದು ಬೌಧಾಯನರ ಮಾತಿನಿಂದ ಊಹಿಸಬಹುದು. 'ಕಶ್ಯಪಸ್ಮೃತಿ'ಯೆಂಬ ಮತ್ತೊಂದು ಗದ್ಯಗ್ರಂಥವು ಗೃಹಸ್ಥಧರ್ಮ, ಅಪರಾಧಗಳಿಗೆ ಶಿಕ್ಷೆಗಳು ಮತ್ತು ಶುದ್ಧೀಕರಣಗಳನ್ನು ವಿವರಿಸುತ್ತದೆ. ಹಿಂದಿನ ಈ ಕೃತಿಗಳೇ ಮುಂದೆ ಮನುಸ್ಮೃತಿಯಂತಹ ಧರ್ಮಶಾಸ್ತ್ರ ಗ್ರಂಥಗಳಿಗೆ ಪ್ರೇರಕವಾದವು. ಹೀಗೆ ಕಶ್ಯಪರು ಗೃಹಸ್ಥರಾಗಿ, ಧರ್ಮಶಾಸ್ತ್ರ ಪ್ರವರ್ತಕರಾಗಿ, ಕರ್ಮಕಾಂಡದ ದರ್ಶಕರಾಗಿ ಸನಾತನ ಸಂಸ್ಕೃತಿಯಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿರುತ್ತಾರೆ.

ನಂ. ೧೧, ಎ.ಜಿ. ಲೇಔಟ್, ನ್ಯೂ ಬಿಇಎಲ್ ರಸ್ತೆ,
ಬೆಂಗಳೂರು-೫೬೦ ೦೫೪.

ಶ್ರೀ ಸಿದ್ಧೇಶ್ವರಸ್ವಾಮಿಗಳ ಪ್ರವಚನಗಳಿಂದ | ಆಯ್ದ ಕಥೆಗಳು

# ನಿಶ್ಚಿಂತನಾಗಿರು



ಒಬ್ಬ ದೇವಭಕ್ತ, ಎಂಬತ್ತರ ವಯಸ್ಸು, ಸಾಕಷ್ಟು ಧರ್ಮಕಾರ್ಯ ಮಾಡಿದಾತ. ಅವನಿಗೆ ಸತಿಸುತರಾರೂ ಇರಲಿಲ್ಲ. ಲೋಕಹಿತವೇ ಆತನ ಗುರಿಯಾಗಿತ್ತು.

ಒಂದು ದಿನ ಸಂಜೆ ಅನ್ನಪಾನಾದಿಗಳ ಮುಗಿಸಿಕೊಂಡು ವಿಶ್ರಮಿಸಲು ಮಲಗುವ ಕೋಣೆಗೆ ಬಂದ. ಬಹಳ ದಿನಗಳಿಂದಲೂ ತಾನು ಮಾಡಿದ ಸಮಾಜಸೇವೆಯ ಫಲಶ್ರುತಿ ಏನು ಎಂದು ತಿಳಿಯಬಯಸಿದ್ದ. ಹಾಸಿಗೆಯಲ್ಲಿ ಕುಳಿತು ಯೋಚನೆಗೆ ತೊಡಗಿದ.

ನಾಲ್ಕೈದು ದಶಕಗಳ ಸುದೀರ್ಘ ಸೇವೆಯ ಅನಂತರವೂ ಸಮಾಜದಲ್ಲಿ ಏನೂ ಪರಿವರ್ತನೆ ಕಾಣಲಿಲ್ಲ. ಎಂದಿನಂತೆ ಜನ ಮೋಸ, ವಂಚನೆಯಲ್ಲಿ ತೊಡಗಿದ್ದರು. ಅನೈತಿಕತೆ, ಅರಾಜಕತೆ, ಅಪ್ರಾಮಾಣಿಕತೆ ನಾಡಿನಲ್ಲಿ ತಾಂಡವ ನೃತ್ಯ ನಡೆಸಿರುವಂತೆ ಭಾಸವಾಯ್ತು.

'ನಾನಿಷ್ಟು ದಿನ ಮಾಡಿದ ಸೇವೆ ವ್ಯರ್ಥವಾಯಿತು' ಎನ್ನಿಸಿತು ಆತನಿಗೆ. ಜನ ನನ್ನ ಸೇವೆಯ ಸದುಪಯೋಗ ಮಾಡಿಕೊಳ್ಳಲಿಲ್ಲ. ನನ್ನ ತ್ಯಾಗ ಭಾವವನ್ನು ಜನರು ಅರ್ಥಮಾಡಿಕೊಳ್ಳಲಿಲ್ಲ ಎಂದು ದುಃಖ ದುಮ್ಮಾನ ಒತ್ತರಿಸಿ ಬಂದಿತು. ಯೋಚಿಸಿ ಯೋಚಿಸಿ ತಲೆಕಾಯ್ದು ನಿದ್ರೆ ಬರಲಿಲ್ಲ. ದಿಕ್ಕು ತೋಚದೆ ಕಣ್ಣು ಬಿಡುತ್ತಾ ಹಾಸಿಗೆಯಲ್ಲಿ ಕುಳಿತಿದ್ದ.

ಅಷ್ಟರಲ್ಲಿ ದಯಾನಿಧಿ ದೇವನಾಗಮಿಸಿದ. ಭಕ್ತನೆದ್ದು ದೇವನಿಗೆ ವಂದಿಸಿದ. ದೇವ ಕೇಳಿದ, "ಮಧ್ಯರಾತ್ರಿಯಾದರೂ ನೀ ಮಲಗಲಿಲ್ಲವೇಕೆ? ಏನು ಯೋಚನೆ?"

ಭಕ್ತ ಹೇಳಿದ, "ದೇವನೆ, ಅದು ಹೇಗೆ ನಿದ್ರೆ ಬರುತ್ತದೆ? ಜನಮನ, ದೇಶಕೋಶವೆಲ್ಲ ನೀತಿಗೆಟ್ಟು ಹಾಳಾಗಿದೆ. ಧರೆಯಲ್ಲಿ ಧರ್ಮ ನಿಶಿಸಿ ಹೋಗುತ್ತಿದೆ!" "ಈ ಜಗವ ತಿದ್ದುವ ಹೊಣೆ ನನಗಿರಲಿ. ನಿನಗೆ ವಯಸ್ಸಾಗಿದೆ. ಉಳಿದಿರುವಷ್ಟು ಕಾಲ ನೀನು ನಿಶ್ಚಿಂತೆಯಿಂದ, ನೆಮ್ಮದಿಯಿಂದ ಇರಬೇಕು. ಕಾಲಾತೀತನಾದ ನಾನು ಸಂಕಲ್ಪ ಮಾತ್ರದಿಂದ ಈ ಜಗವ ನಿರ್ಮಿಸುವೆ. ಬೇಕೆಂದರೆ ಇದೇ ಕ್ಷಣ ನಾನದನ್ನು ಸರಿಮಾಡಬಲ್ಲೆ. ಸರ್ವ ಶಕ್ತನೂ ಜಗದ ಕರ್ತನೂ ಆಗಿರುವ ನಾನೇ ನಿಶ್ಚಿಂತನಿರುವಾಗ ನಿನಗೇಕೆ ಚಿಂತೆ? ನಿನ್ನ ಕೈಲಾದಷ್ಟು ಕೆಲಸ ಮಾಡಿ ಮರೆತು ನೆಮ್ಮದಿಯಿಂದಿರು" ಎಂದು ದೇವನು ಹೇಳಿದ. ಈಗ ಭಕ್ತನ ಮನದಲ್ಲಿ ಭಾವಬಂಧನವಳಿದು ತಿಳಿಬೆಳಕು ಮೂಡಿತ್ತು.●

ಸಂಗ್ರಹ: ಡಾ|| ಶ್ರದ್ಧಾನಂದಸ್ವಾಮಿ



ಗುರುವಾಯೂರು ಕೃಷ್ಣನ ಮಹಾಭಕ್ತರಾದ ಮಹಾಕವಿ **ಮೇಪ್ಪತ್ತೂರು ನಾರಾಯಣ ಭಟ್ಟತ್ತಿರಿ**ಯವರ ಮಹಾನ್ ಭಕ್ತಿಕಾವ್ಯ 'ನಾರಾಯಣೀಯಮ್' ಈ ಸಂಚಿಕೆಯಿಂದ ಆರಂಭಿಸಿದ್ದೇವೆ. ಸ್ವತಃ ಸನಾತನ ಧರ್ಮದ ಶ್ರದ್ಧಾವಂತ ಅನುಯಾಯಿಗಳಾದ **ಶ್ರೀ ಬಿಂಡಿಗನವಿಲೆ ನಾರಾಯಣಸ್ವಾಮಿ** ಇದರ ಅನುವಾದಕರು.



# ನಾರಾಯಣೀಯಮ್

## ಸರ್ಗ: 11
## ಪ್ರಥಮ ಅವತಾರಕ್ಕೆ ಪೀಠಿಕೆ

**ಕ್ರಮೇಣ ಸರ್ಗೇ ಪರಿವರ್ಧಮಾನೇ ಕದಾಪಿ ದಿವ್ಯಾಃ ಸನಕಾದಯಸ್ತೇ**
**ಭವದ್ವಿಲೋಕಾಯ ವಿಕುಂಠಲೋಕಂ ಪ್ರಪೇದಿರೇ ಮಾರುತಮಂದಿರೇಶ ॥ 1 ॥**

ಓ ಗುರುವಾಯೂರಪ್ಪ! ಈ ರೀತಿ ಸೃಷ್ಟಿಕಾರ್ಯ ಕ್ರಮವಾಗಿ ವರ್ಧಿಸುತ್ತಿರಲು ಒಮ್ಮೆ ದಿವ್ಯ ಮುನಿಗಳಾದ ಸನಕಾದಿಗಳು ನಿನ್ನ ದರ್ಶನಕ್ಕಾಗಿ ವೈಕುಂಠ ಲೋಕವನ್ನು ಪ್ರವೇಶಿಸಿದರು. (1)

**ಮನೋಜ್ಞ–ನೈಃ ಶ್ರೇಯಸಕಾನನಾದ್ಯೈರನೇಕವಾಪೀ ಮಣಿಮಂದಿರೈಶ್ಚ ।**
**ಅನೋಪಮಂ ತಂ ಭವತೋ ನಿಕೇತಂ ಮುನೀಶ್ವರಾಃ ಪ್ರಾಪುರತೀತಕಕ್ಷ್ಯಾಂ । ॥ 2 ॥**

ಆ ಮುನೀಶ್ವರರು ಆರು ಪ್ರಾಕಾರಗಳನ್ನು ದಾಟಿ ಮನಮೋಹಕವಾದ ನೈಶ್ರೇಯಸವೆಂಬ ಕಾನನಾದಿಗಳನ್ನು ಅನೇಕ ಸರೋವರಗಳನ್ನು ಮಣಿ ಖಚಿತವಾದ ಮಂದಿರಗಳನ್ನು ಒಳಗೊಂಡ ಉಪಮಾತೀತವಾದ ನಿನ್ನ ನಿಕೇತನಕ್ಕೆ ಬಂದರು. (2)

**ಭವದ್ದಿ ದೃಕ್ಷೂನ್ ಭವನಂ ವಿವಿಕ್ಷೂನ್ ದ್ವಾಃಸ್ಥೌ ಜಯಸ್ತಾನ್ ವಿಜಯೋಪ್ಯರುಂಧಾಂ ।**
**ತೇಷಾಂ ಚ ಚಿತ್ತೇ ಪದಮಾಪ ಕೋಪಃ ಸರ್ವಂ ಭವತ್ಪ್ರೇರಣಯೈವ ಭೂಮನ್ ॥ 3 ॥**

ನಿನ್ನನ್ನು ಕಾಣಬಯಸಿ ಮುನಿಗಳು ನಿನ್ನ ಭವನವನ್ನು ಪ್ರವೇಶಿಸುವುದರಲ್ಲಿದ್ದಾಗ ಅವರನ್ನು ದ್ವಾರಪಾಲಕರಾದ ಜಯ ವಿಜಯರು ತಡೆಯಲು ಆ ಮುನಿಗಳ ಮನದಲ್ಲಿ ಕೋಪವು ಆವರಿಸಿತು. ಹೇ ಭೂಮನ್! ಇವೆಲ್ಲವೂ ನಿನ್ನ ಪ್ರೇರಣೆಯಿಂದಲೇ ಆಗಿದೆ. (3)



ಕನ್ನಡಾನುವಾದ:
ಬಿಂಡಿಗನವಿಲೆ ನಾರಾಯಣಸ್ವಾಮಿ

**ವೈಕುಂಠಲೋಕಾನುಚಿತಪ್ರಚೇಷ್ಟೌ ಕಷ್ಟೌ ಯುವಾಂ ದೈತ್ಯಗತಿಂ ಭಜೇತಾಂ ।**
**ಇತಿ ಪ್ರಶಪ್ತೌ ಭವದಾಶ್ರಯೌ ತೌ ಹರಿಸ್ಮೃತಿರ್ನೋಽಸ್ತ್ವಿತಿ ನೇಮತುಸ್ತಾನ್ ॥ 4 ॥**

'ವೈಕುಂಠ ಲೋಕಕ್ಕೆ ಅನುಚಿತವಾದ ವರ್ತನೆಯಿಂದ ಕೂಡಿದ ದುಷ್ಟರಾದ ನೀವಿಬ್ಬರೂ ದೈತ್ಯರಾಗಿ' ಎಂದು ಶಪಿಸಲು ನಿನ್ನ ಆಶ್ರಿತರಾದ ಅವರಿಬ್ಬರೂ 'ನಮಗೆ ಹರಿಸ್ಮರಣೆ ಇರಲಿ' ಎಂದು ಪ್ರಾರ್ಥಿಸುತ್ತಾ ಅವರ ಮುಂದೆ ಸಾಷ್ಟಾಂಗವೆರಗಿದರು. (4)

**ತದೇತದಾಜ್ಞಾಯ ಭವಾನವಾಪ್ತಃ ಸಹೈವ ಲಕ್ಷ್ಮ್ಯಾ ಬಹಿರಂಬುಜಾಕ್ಷ ।**
**ಖಗೇಶ್ವರಾಂಸಾರ್ಪಿತ–ಚಾರುಬಾಹುರಾನಂದಯಂಸ್ತಾನಭಿರಾಮಮೂರ್ತ್ಯಾ ॥ 5 ॥**

ಹೇ ಕಮಲಕಣ್ಣುಗಳೊಡೆಯ! ನೀನು ಇದನ್ನರಿತು ಲಕ್ಷ್ಮಿಯೊಂದಿಗೆ ನಿನ್ನ ಸುಂದರಬಾಹುಗಳನ್ನು ಖಗೇಶ್ವರನಾದ ಗರುಡನ ಭುಜದ ಮೇಲಿಟ್ಟು ನಿನ್ನ ದಿವ್ಯ ಸುಂದರ ರೂಪವನ್ನು ತೋರುತ್ತಾ ಆ ಮುನಿಗಳನ್ನು ಆನಂದಗೊಳಿಸಿ ಹೊರಬಂದೆ (5)

**ಪ್ರಸಾದ್ಯ ಗೀರ್ಭಿಃ ಸ್ತುವತೋ ಮುನೀಂದ್ರಾನನನ್ಯ–ನಾಥಾವಥ ಪಾರ್ಷದೌ ತೌ ।**
**ಸಂರಂಭಯೋಗೇನ ಭವಸ್ತ್ರಿಭಿರ್ಮಾಮುಪೇತಮಿತ್ಯಾತ್ತ ಕೃಪಂ ನ್ಯಗಾದೀಃ ॥ 6 ॥**

ಅನಂತರ ನಿನ್ನನ್ನು ಸ್ತುತಿಸುತ್ತಿದ್ದ ಮುನೀಂದ್ರರನ್ನು ನಿನ್ನ ಮೃದು ಮಾತುಗಳಿಂದ ಸಂತೋಷಪಡಿಸಿ, ಬೇರೆ ಒಡೆಯರಿಲ್ಲದೆ, ನಿನ್ನೊಬ್ಬನನ್ನೇ ಆಶ್ರಯಿಸಿದ್ದ ನಿನ್ನ ಸೇವಕರಾದ ಜಯ ವಿಜಯರಿಗೆ "ನೀವಿಬ್ಬರೂ ನನ್ನನ್ನು ಎದುರುಹಾಕಿಕೊಂಡು ಮೂರು ಜನ್ಮಗಳಲ್ಲಿ ನನ್ನನ್ನು ಹೊಂದಿ" ಎಂಬುದಾಗಿ ಕೃಪಾಪರವಶನಾಗಿ ನುಡಿದೆ. (6)

**ತ್ವದೀಯಭೃತ್ಯಾವಥ ಕಶ್ಯಪಾತ್ ತೌ ಸುರಾರಿ ವೀರಾವುದಿತೌ ದಿತೌ ದ್ವೌ ।**
**ಸಂಧ್ಯಾ ಸಮುತ್ಪಾದನ ಕಷ್ಟಚೇಷ್ಟೌ ಯಮೌ ಚ ಲೋಕಸ್ಯ ಯಮಾವಿವಾನ್ಯೌ ॥ 7 ॥**

ಅನಂತರ ಈ ನಿನ್ನ ಈರ್ವರು ಸೇವಕರಾದ ಜಯವಿಜಯರು ಕಶ್ಯಪ ಮಹರ್ಷಿಯಿಂದ ದಿತಿಯ ಗರ್ಭದಲ್ಲಿ ದೇವತೆಗಳ ಪರಮ ಶತ್ರುಗಳಾಗಿ ಜನಿಸಿದರು. ಸಂಧ್ಯಾ ಕಾಲದಲ್ಲಿ ಗರ್ಭಾಧಾನವಾದುದರಿಂದ ಅವರು ಎಷ್ಟು ಕ್ರೂರಕರ್ಮಿಗಳಾದರೆಂದರೆ ಅವರಿಬ್ಬರೂ ಮತ್ತೋರ್ವ ಯಮರಾಜನಂತೆ ಗೋಚರಿಸಿದರು.

**ಹಿರಣ್ಯಪೂರ್ವಃ ಕಶಿಪುಃ ಕಿಲೈಕಂ ಪರೋ ಹಿರಣ್ಯಾಕ್ಷ ಇತಿ ಪ್ರತೀತಃ ।**
**ಉಭೌ ಭವನ್ನಾಥಮಶೇಷಲೋಕಂ ರುಷಾ ನ್ಯರುಂಧಾಂ ನಿಜವಾಸನಾಂಧೌ ॥ 8 ॥**

ಒಬ್ಬನು ಹಿರಣ್ಯಕಶಿಪುವಾಗಿ ಮತ್ತೊಬ್ಬನು ಹಿರಣ್ಯಾಕ್ಷನಾಗಿ ಪ್ರಸಿದ್ಧರಾಗಿ, ತಮ್ಮ ಕುಸಂಸ್ಕಾರಗಳಿಂದ ಮೋಹವಶರಾಗಿ ಕುರುಡರಂತೆ ನೀನೇ ಒಡೆಯನಾಗಿರುವ ಎಲ್ಲ ಲೋಕಗಳನ್ನೂ ಹಿಂಸಿಸಲಾರಂಭಿಸಿದರು. (8)

**ತಯೋರ್ಹಿರಣ್ಯಾಕ್ಷ ಮಹಾಸುರೇಂದ್ರೋ ರಣಾಯ ಧಾವನ್ನನವಾಪ್ತವೈರೀ**
**ಭವತ್ಪ್ರಿಯಾಂ ಕ್ಷ್ಮಾಂ ಸಲಿಲೇ ನಿಮಜ್ಜ್ಯ ಚಚಾರ ಗರ್ವಾದ್ವಿನದನ್ ಗದಾವಾನ್ ॥ 9 ॥**

ಅವರಿಬ್ಬರಲ್ಲಿ ಹಿರಣ್ಯಾಕ್ಷನೆಂಬ ಮಹಾ ಅಸುರೇಂದ್ರನು ಯುದ್ಧ ಮಾಡಲು ತವಕಿಸುತ್ತಾ ವೈರಿಗಳು ಯಾರೂ ದೊರಕದಿರಲು ನಿನಗೆ ಪರಮಪ್ರಿಯಳಾದ ಭೂಮಿಯನ್ನು ನೀರಿನಲ್ಲಿ ಮುಳುಗಿಸಿ ಗರ್ವದಿಂದ ಗರ್ಜಿಸುತ್ತಾ ತನ್ನ ಗದೆಯೊಂದಿಗೆ ಸುತ್ತಲಾರಂಭಿಸಿದನು. (9)

**ತತೋ ಜಲೇಶಾತ್ ಸದೃಶಂ ಭವಂತಂ ನಿಶಮ್ಯ ಬಭ್ರಾಮ ಗವೇಷಯಂಸ್ತ್ವಾಂ ।**
**ಭಕ್ತೈಕದೃಶ್ಯಃ ಸ ಕೃಪಾನಿಧೇ ತ್ವಂ ನಿರುಂಧಿ ರೋಗಾನ್ ಮರುದಾಲಯೇಶ ॥ 10 ॥**

ಅನಂತರ ನೀರಿಗೆ ಒಡೆಯನಾದ ವರುಣನಿಂದ ನೀನೊಬ್ಬನೇ ಅವನಿಗೆ ಸರಿಸಮನೆಂದು ತಿಳಿದು ನಿನ್ನನ್ನು ಹುಡುಕುತ್ತಾ ಸಂಚರಿಸತೊಡಗಿದನು. ಹೇ ಕೃಪಾನಿಧೇ! ಗುರುವಾಯೂರಪ್ಪ! ಭಕ್ತರಿಗೆ ಮಾತ್ರ ದರ್ಶನ ಕರುಣಿಸುವ ನೀನು ನನ್ನ ರೋಗಗಳನ್ನು ದೂರ ಮಾಡು. (10)

(ಮುಂದುವರಿಯುವುದು)

# ೧೦೭, "ಕೇಶವ ಕೃಪ" ೧೭ನೇ ಕ್ರಾಸ್, ೧ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು–೫೬೦ ೦೧೦

▶▶ 5ನೇ ಪುಟದಿಂದ

ನಗುನಗುತ್ತಲೇ ಎಲ್ಲರನ್ನು ಸಹಿಸಿಕೊಂಡು ತಮ್ಮ ಕಾಯಕವನ್ನು ಮುಂದುವರಿಸಿದರು.

ಬಿಜ್ಜಳನ ರಾಜಧಾನಿ ಕಲ್ಯಾಣ. ಬಸವಣ್ಣನವರು ಅಲ್ಲಿಯೇ ನೆಲೆಸಿ ತಮ್ಮ ರಾಜಕಾರ್ಯದ ಜೊತೆಗೆ ಶಿವಪೂಜೆ, ದಾಸೋಹ, ಜಂಗಮ–ಶರಣ ಸೇವೆ ಮುಂದುವರಿಸಿದರು. ಅವರ ಈ ಕಾರ್ಯ ವಿಶೇಷವನ್ನು ನೋಡಿ ಅಸೂಯೆ ಪಟ್ಟ ಕೆಲವರು ಅವರು ಖಜಾನೆಯ ಹಣವನ್ನು ದುರುಪಯೋಗ ಪಡಿಸುತ್ತಿದ್ದಾರೆಂದು ದೂರಿದರು. ಇದರ ಜೊತೆಗೆ ಬಸವಣ್ಣನವರು ಮಾಡಿಸಿದ ಅಂತರ್ಜಾತೀಯ ವಿವಾಹ ಒಂದು ಕೆಲವರನ್ನು ಉತ್ತೇಜಿಸಿತು. ಇವು ಅವರಿಗೂ ರಾಜಾ ಬಿಜ್ಜಳನಿಗೂ ಇದ್ದ ಸಂಬಂಧವನ್ನು ಕೆಡಿಸಿತು. ಈ ವಿವಾಹವನ್ನು ಬಸವಣ್ಣನವರು ಒಬ್ಬ ಬ್ರಾಹ್ಮಣ ಕನ್ಯೆ ಹಾಗೂ ಒಬ್ಬ ಅಸ್ಪೃಶ್ಯ ವರನ ಜೊತೆ ನಡೆಸಿದ್ದರು. ರಾಜನು ನೂತನ ವಧು–ವರರ ತಂದೆಯರನ್ನು ಕರೆಸಿ ಅವರ ಕಣ್ಣುಗಳನ್ನು ಕೀಳಿಸುವಲ್ಲಿ ಮುಕ್ತಾಯವಾಯಿತು.

ಅದಕ್ಕೆ ಪ್ರತಿಯಾಗಿ ಉದ್ರಿಕ್ತ ಬಸವಾನುಯಾಯಿಗಳು ಬಿಜ್ಜಳನ ಹತ್ಯೆ ಮಾಡಿದರು. ಆಗ ರಾಜ್ಯದಲ್ಲಿ ಅಲ್ಲೋಲ ಕಲ್ಲೋಲ ಉಂಟಾಯಿತು. ಬಸವಣ್ಣನವರು ಕಲ್ಯಾಣದಿಂದ ಕಪ್ಪಡಿ ಸಂಗಮಕ್ಕೆ ಹೋದರು. ಸಂಗಮದಲ್ಲಿ ಅವರು ಜಲ ಸಮಾಧಿ ಹೊಂದಿದರು ಎಂಬ ನಂಬಿಕೆ ಉಂಟು.

ಏನೇ ಆಗಲಿ ಬಸವಣ್ಣನವರ ಕಾಲದಿಂದ ವೀರಶೈವ ಮತ ಪ್ರಭಾವಶಾಲಿ ಮತವಾಗಿ ಪರಿಣಮಿಸಿದೆ. ಇಂದಿಗೂ ಅದರ ಪ್ರಾಬಲ್ಯ ಹೆಚ್ಚುತ್ತಲೇ ಇದೆ. 'ಕಾಯಕವೇ ಕೈಲಾಸ... ದಯೆಯೇ ಧರ್ಮದ ಮೂಲವಯ್ಯಾ... ಕಲ ಬೇಡ ಕೊಲ ಬೇಡ ಹುಸಿಯಲು ನುಡಿಯಲು ಬೇಡ..' ಮುಂತಾದ ಅಣಿಮುತ್ತುಗಳಂತಹ ಮೌಲ್ಯದ ಮಾತುಗಳು ಬಸವಣ್ಣನವರ ವ್ಯಕ್ತಿತ್ವಕ್ಕೆ, ನಂಬಿಕೆಗಳಿಗೆ ಹಿಡಿದ ಕೈಗನ್ನಡಿಯಾಗಿದೆ. ಅವರದೆಂದು ಹೇಳಲಾದ 1426 ವಚನಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ. ಅಲ್ಲಮ ಪ್ರಭುಗಳಂಥ ಪರಮ ಜ್ಞಾನಿಗಳ ನೇತೃತ್ವದಲ್ಲಿ 'ಅನುಭವ ಮಂಟಪ'ವನ್ನು ಸ್ಥಾಪಿಸಿ ಅಲ್ಲಿ ಧರ್ಮ, ಜೀವನ ಮೌಲ್ಯ, ಆಚಾರ, ವಿಚಾರಗಳನ್ನು ಕುರಿತು ಎಲ್ಲರೂ ಭಾಗವಹಿಸಬಹುದಾದ ಸಭೆಯನ್ನು ಆಯೋಜಿಸಿದ್ದು ಅವರ ಇನ್ನೊಂದು ಹಿರಿಮೆ. ಜಾತಿಗಳ ತಾರತಮ್ಯವನ್ನು ನಿವಾರಿಸುವ ಗುರಿ ಹೊಂದಿದ್ದ ಬಸವಣ್ಣನವರಿಗೆ ಉಪನಿಷತ್ತುಗಳ ಮೌಲ್ಯಗಳೇ ಆಧಾರಗಳಾಗಿದ್ದವು. ●

# ಭಗೀರಥ ಚರಿತ್ರೆ



ಇದೇ ತಿಂಗಳ ಏಪ್ರಿಲ್ 29ರಂದು ಭಗೀರಥ ಜಯಂತಿ. ಭಗೀರಥನ ಚರಿತ್ರೆ ಕುರಿತು ತಿಳಿಸಿಕೊಟ್ಟಿದ್ದಾರೆ ವಿದ್ವಾನ್ ವಾನರಾಶಿ ಬಾಲಕೃಷ್ಣ ಭಾಗವತರ್.



ಭಾರತದ ಸನಾತನ ಪರಂಪರೆಯು ಋಷಿಮುನಿಗಳಿಂದಲೂ ಮಹರ್ಷಿಗಳಿಂದಲೂ ಸಮೃದ್ಧವಾಗಿದೆ. ಹಿಂದೆ ಈ ಪೃಥ್ವಿಯಲ್ಲಿ ಅನೇಕ ಮಹಾಪುರುಷರು ಹುಟ್ಟಿ ತಮ್ಮ ವಂಶಗಳನ್ನು ಪಾವನಗೊಳಿಸಿದ್ದಾರೆ. “ಮುಕ್ತರಾದರು ಎನ್ನ ನೂರೊಂದು ಕುಲದವರು ಮುಕ್ತಿಮಾರ್ಗಕೆ ಹಾದಿ ನಾನಾದೆನೋ, ಅಕಳಂಕ ಮಹಿಮನು ಭಕ್ತಿಗೆ ಮನಸೋತ ರುಕ್ಮಿಣೀ ಅರಸ ಕೈವಶನಾದ ಎನಗೆ ಬದುಕಿದೆನು ಬದುಕಿದೆನು” ಎಂದೆನ್ನುತ್ತಾರೆ ಭಕ್ತ ಕನಕದಾಸರು. ನಾನು ಹುಟ್ಟು–ಸಾವುಗಳಿಂದ ಮುಕ್ತನಾದ್ದರಿಂದ ನನ್ನ ವಂಶವೆಲ್ಲವೂ ತನ್ನಿಂದ ಪಾವನವಾಯಿತೆಂದು ತಿಳಿಸುತ್ತಾರೆ. “ರಾಮುಡೊಕಡುಪುಟ್ಟಿ ರವಿಕುಲಮೀಡೇರ್ಚೆ ಕುರುಪತಿ ಪುಟ್ಟಿ ಕುಲಮು ಚೆರಿಚೆ” ಎನ್ನುತ್ತಾರೆ ವೇಮನ ಯೋಗಿಗಳು ತಮ್ಮ ಪದ್ಯದಲ್ಲಿ. ಶ್ರೀರಾಮನು ಸೂರ್ಯವಂಶದಲ್ಲಿ ಜನಿಸಿದುದರ ಫಲದಿಂದ ಇಡೀ ಇಕ್ಷ್ವಾಕು ವಂಶವೇ ಪಾವನವಾಯ್ತು. ಕುರುಪತಿಯಾದ ದುರ್ಯೋಧನ ಕುರುವಂಶದಲ್ಲಿ ಹುಟ್ಟಿ, ಇಡೀ ಕುರುವಂಶವನ್ನೇ ನಾಶ ಮಾಡಿದ.


## ಭಗೀರಥ ವೃತ್ತಾಂತ

ಇಕ್ಷ್ವಾಕು ವಂಶವು ಶ್ರೀರಾಮನ ಜನನಕ್ಕಿಂತಲೂ ಮುಂಚೆಯೇ ಅನೇಕ ಮಹನೀಯರಿಗೆ ಜನ್ಮ ನೀಡಿದೆ. ಅವರೆಲ್ಲರೂ ತಮ್ಮ ರವಿವಂಶವನ್ನು ಉದ್ಧರಿಸಿದವರೇ ಆಗಿರುತ್ತಾರೆ. ರಾಮಾಯಣದ ಬಾಲಕಾಂಡದ 38 ರಿಂದ 44ನೇ ಅಧ್ಯಾಯಗಳು ಸಗರ ಚಕ್ರವರ್ತಿ ಹಾಗೂ ಭಗೀರಥರ ವೃತ್ತಾಂತದಿಂದ ಕೂಡಿವೆ. ಅಯೋದ್ಯಾ ನಗರವನ್ನು ಇಕ್ಷ್ವಾಕು ವಂಶದ ಕುಲೋತ್ತುಂಗನಾದ ಸಗರ ಚಕ್ರವರ್ತಿಯು ಆಳುತ್ತಿದ್ದನು. ಅವನಿಗೆ ಕೇಶಿನಿ ಮತ್ತು ಸುಮತಿಯರೆಂಬ ಇಬ್ಬರು ರಾಣಿಯರಿದ್ದರು. ಆದರೆ ಈ ಸಗರ ಚಕ್ರವರ್ತಿಗೆ ಮಕ್ಕಳಿಲ್ಲವೆಂಬ ಕೊರಗು ಕಾಡುತ್ತಿತ್ತು. ಕೊನೆಗೆ ಮಡದಿಯರ ಸಮೇತ ಹಿಮಾಲಯಕ್ಕೆ ಹೋಗಿ ತಪಸ್ಸನ್ನು ಮಾಡಲು ನಿರ್ಧರಿಸಿ ಭೃಗು ಮುನಿಗಳ ಆಶೀರ್ವಾದವನ್ನು ಪಡೆದುಕೊಂಡು ಭೃಗುಪ್ರಸ್ರವಣವೆಂಬ ಪರ್ವತವೊಂದರಲ್ಲಿ ಜ್ಞಾನಮಗ್ನನಾಗಿ ಸುಮಾರು ನೂರಾರು ವರ್ಷಗಳ ಕಾಲ ತಪಸ್ಸಿಗೆ ಕುಳಿತನು. ಅನಂತರ ಭೃಗು ಮುನಿಗಳೇ ಸಗರ ಚಕ್ರವರ್ತಿಯ ತಪಸ್ಸಿಗೆ ಮೆಚ್ಚಿ ವರವನ್ನು ನೀಡುತ್ತಾರೆ, “ಸಗರ ಚಕ್ರವರ್ತಿಯೇ ನಿನಗೆ ಸಂತಾನ ಭಾಗ್ಯ ಉಂಟು. ನಿನ್ನ ಒಬ್ಬ ಪತ್ನಿಯಲ್ಲಿ ವಂಶೋದ್ಧಾರಕನಾದ ಒಬ್ಬ ಮಗನೂ ಇನ್ನೊಬ್ಬ ಪತ್ನಿಯಲ್ಲಿ ಬಲಶಾಲಿಗಳಾದ ಅರುವತ್ತು ಸಾವಿರ ಮಕ್ಕಳು ಹುಟ್ಟುತ್ತಾರೆ” ಎಂದು ಆಶೀರ್ವದಿಸಿದರು.

ಕಾಲಾಂತರದಲ್ಲಿ ಮಡದಿಯರೊಂದಿಗೆ ಸಂತೋಷದಿಂದ ಕಾಲ ಕಳೆಯುತ್ತಿದ್ದ ಸಗರ ಚಕ್ರವರ್ತಿಗೆ ಶುಭವಾರ್ತೆ ತಲಪಿತು. ಪತ್ನಿ ಕೇಶಿನಿಯು ಒಬ್ಬ ಪುತ್ರರತ್ನನನ್ನು ಹಡೆದಳು. ಅವನಿಗೆ ಅಸಮಂಜನೆಂದು ಹೆಸರಿಡಲಾಯಿತು. ಸುಮತಿಯು ಸೋರೆಕಾಯಿಯ ಆಕಾರದ ದೊಡ್ಡದೊಂದು ಗರ್ಭಪಿಂಡವನ್ನು ಹಡೆದಳು. ಅನಂತರ ಆ ಪಿಂಡವು ಅರುವತ್ತು ಸಾವಿರ ವಿಭಾಗಗಳಾಯಿತು. ತುಪ್ಪದ ಕೊಡಗಳಲ್ಲಿ ಸಂರಕ್ಷಿಸಿ, ಪರಿಪೂರ್ಣರಾದ ಶಿಶುಗಳಾದ ಮೇಲೆ ಹೊರ ತೆಗೆದು ಬೆಳೆಸಿದರು. ಅವರೆಲ್ಲರೂ ಶಕ್ತಿಶಾಲಿಗಳೂ ರೂಪವಂತರೂ ಆದರು. ಇವರೆಲ್ಲರೂ ಯೌವನಕ್ಕೆ ಕಾಲಿಟ್ಟರು. ಅಸಮಂಜನು ವಿವಾಹವಾಗಿ ಅಂಶುಮಂತನೆಂಬ ಪುತ್ರನನ್ನು ಪಡೆದನು. ಈ ಅಂಶುಮಂತನು ವೀರನೂ ಶೂರನೂ ಆಗಿ ಪ್ರಜೆಗಳ ಪ್ರೀತಿಪಾತ್ರನಾದನು.

ಕಾಲವು ಹೀಗೆ ಕಳೆಯುತ್ತಿರಲು ಸಗರ ಮಹಾರಾಜನು ಅಶ್ವಮೇಧಯಾಗವೊಂದನ್ನು ಕೈಗೊಂಡನು. ಶುಭದಿನಕ್ಕಾಗಿ ಕಾದು, ಶುಭ ಮುಹೂರ್ತದಲ್ಲಿ ಕುದುರೆಯನ್ನು ದೇಶ ಸಂಚಾರಕ್ಕೆ ಬಿಟ್ಟನು. ಮೊಮ್ಮಗನಾದ ಅಂಶುಮಂತನೇ ಅಶ್ವದ ಕಾವಲಿಗೆ ಧನುರ್ಧಾರಿಯಾಗಿ ಸೇನೆಯ ಮುಂದಾಳತ್ವವನ್ನು ವಹಿಸಿ ದಿಗ್ವಿಜಯವನ್ನು ಸಾಧಿಸಿಕೊಂಡು ಅಶ್ವವನ್ನು ಸಂರಕ್ಷಿಸಿಕೊಂಡು ಬಂದನು. ತಾತ ಸಗರನಿಗೆ ಮೊಮ್ಮಗನ ಈ ಸಾಹಸವನ್ನು ಕಂಡು ಸಂತೋಷವಾಯಿತು. ಆದರೆ ಇನ್ನೇನು ಯಜ್ಞವು ಪೂರ್ಣಗೊಳ್ಳಬೇಕು ಎನ್ನುವಷ್ಟರಲ್ಲಿ, ದೇವೇಂದ್ರನಿಗೆ ಸಗರ ಚಕ್ರವರ್ತಿಯ ಶ್ರೇಯಸ್ಸನ್ನು ಸಹಿಸಲಾರದೆ, ಮಾಯಾವಿ ವೇಷವನ್ನು ಧರಿಸಿ ಬಂದು ಅಶ್ವವನ್ನು ಅಪಹರಿಸಿದನು. ಆ ಆಶ್ವವನ್ನು ಪಾತಾಳದಲ್ಲಿ ತಪೋನಿರತನಾಗಿದ್ದ ಕಪಿಲ ಮಹಾಮುನಿಯ ಆಶ್ರಮದಲ್ಲಿ ಬಿಟ್ಟನು.

“ಯಜ್ಞವು ಯಾವುದೇ ಕಾರಣಕ್ಕೂ ಅಪೂರ್ಣವಾಗಬಾರದು, ಅಪೂರ್ಣವಾದರೆ ರಾಜನಿಗೂ ಪ್ರಜೆಗಳಿಗೂ ಕೇಡು ಬಂದೊದಗುತ್ತದೆ. ಈ ಕಾರಣದಿಂದ ಅಶ್ವವನ್ನು ಹಿಂದಕ್ಕೆ ತರಿಸಬೇಕು” ಎಂದು ಋಷಿಮುನಿಗಳು ರಾಜ ಸಗರನನ್ನು ಪ್ರಾರ್ಥಿಸಿದರು. ಋಷಿಗಳ ಪ್ರಾರ್ಥನೆಯನ್ನು ಮನ್ನಿಸಿ ಸಗರ ಚಕ್ರವರ್ತಿಯು, “ನಾನು ಈ ಯಜ್ಞಭೂಮಿಯಿಂದ ಏಳುವಂತಿಲ್ಲ. ನನಗೆ ರಕ್ಷಣೆಯಾಗಿ ಅಂಶುಮಂತನು ಇರುತ್ತಾನೆ. ನನ್ನ ಅರುವತ್ತು ಸಾವಿರ ಮಕ್ಕಳನ್ನು ಕಳುಹಿಸುತ್ತಿದ್ದೇನೆ. ಅವರು ಇಡೀ ಭೂಮಂಡಲವನ್ನು ಶೋಧಿಸಿ ಅಶ್ವವನ್ನು ಕರೆತರುತ್ತಾರೆ” ಎಂದು ಆದೇಶಿಸಿ, ಮಕ್ಕಳನ್ನು ಹಾರೈಸಿ ಕಳುಹಿಸುತ್ತಾನೆ. ಮಹಾಬಲಶಾಲಿಗಳಾದ ಸಗರ ಪುತ್ರರು ಭೂಲೋಕವನ್ನು ಶೋಧಿಸಿ, ಕೊನೆಗೆ ಪಾತಾಳ ಲೋಕದಲ್ಲಿ ಕಪಿಲ ಮಹರ್ಷಿಗಳ ಆಶ್ರಮದಲ್ಲಿ ಈ ಅಶ್ವವನ್ನು ಕಾಣುತ್ತಾರೆ. ತಪೋನಿರತರಾದ ಕಪಿಲ ಮಹರ್ಷಿಯನ್ನು ಸಗರನ ಪುತ್ರರು ಹೀಯಾಳಿಸತೊಡಗುತ್ತಾರೆ. ಇದರಿಂದ ಕೋಪಗೊಂಡ ಕಪಿಲ ಮಹರ್ಷಿಯು ಮಹಾರೋಷದಿಂದ ಹೂಂಕಾರವನ್ನು ಮಾಡುತ್ತಾರೆ. ಈ ಹೂಂಕಾರಕ್ಕೆ ಆ ಅರುವತ್ತು ಸಾವಿರ ಸಗರ ಪುತ್ರರೂ ಸುಟ್ಟು ಬೂದಿಗುಡ್ಡೆಯಾಗುತ್ತಾರೆ.



ಜಹ್ನು ಮಹರ್ಷಿಯು ಗಂಗೆಯನ್ನು ಆಪೋಷನ ಪಡೆದುಕೊಳ್ಳುತ್ತಿರುವುದು

ಬಹುಕಾಲದವರೆಗೆ ತನ್ನ ಅರುವತ್ತು ಸಾವಿರ ಮಕ್ಕಳು ಮರಳಿಬಾರದಾದಾಗ ಸಗರ ಚಕ್ರವರ್ತಿ ದುಃಖಿತನಾದನು. ಧೀರನಾದ ತನ್ನ ಮೊಮ್ಮಗ ಅಂಶುಮಂತನನ್ನು ಕರೆದು, “ಅವರೆಲ್ಲರೂ ಏನಾದರು ನೋಡಿಕೊಂಡು ಯಾಗಾಶ್ವವನ್ನು ಹುಡುಕಿಕೊಂಡು ಬಾ” ಎಂದು ಆಜ್ಞೆಯನ್ನು ನೀಡುತ್ತಾನೆ. ಅಂಶುಮಂತನಿಗೆ ಕಾರ್ಯವು ಬೇಗನೇ ಸಿದ್ಧಿಸುತ್ತದೆ. ಅಂಶುಮಂತನು ಕಪಿಲ ಮಹರ್ಷಿಯ ಅಶ್ರಮದಲ್ಲಿದ್ದ ಅಶ್ವವನ್ನು ಕಂಡು ವಿಷ್ಣು ಅಂಶರಾದ ಕಪಿಲರಿಗೆ ಸಾಷ್ಟಾಂಗ ಪ್ರಣಾಮ ಮಾಡಿ, “ಅಲ್ಪರಾದ ನಮಗೆ ತಮ್ಮನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ, ನಮ್ಮನ್ನು ಕರುಣಿಸಿ” ಎಂದಾಗ, ಕಪಿಲ ಮಹರ್ಷಿಗೆ ದಯೆಯುಂಟಾಗಿ, “ಎಲೈ ಬುದ್ಧಿವಂತನಾದ ಯುವಕನೇ! ಈ ಅಶ್ವವನ್ನು ನಿಮ್ಮ ತಾತನಲ್ಲಿಗೆ ಕರೆದುಕೊಂಡು ಹೋಗು ಅಶ್ವಮೇಧಯಾಗವನ್ನು ಪರಿಪೂರ್ಣಗೊಳಿಸು. ಆದರೆ ನಿಮ್ಮ ಚಿಕ್ಕಪ್ಪಂದಿರು ಅವಿವೇಕದಿಂದ ಬೂದಿಯಾದರು. ಅವರ ಬೂದಿಯ ಮೇಲೆ ಗಂಗಾಜಲ ಹರಿದರೆ ಅವರು ಸ್ವರ್ಗವನ್ನು ಸೇರುತ್ತಾರೆ” ಎಂದು ಆಶೀರ್ವದಿಸಿದರು.

ಅಶ್ವವನ್ನು ಹಿಡಿದು ತಂದ ಅಂಶುಮಂತನು ಸಗರನ ಯಜ್ಞ ಸಮಾಪ್ತಿಯಾದ ಮೇಲೆ ಪಟ್ಟಾಭಿಷಿಕ್ತನಾಗಿ ಕೆಲಕಾಲ ರಾಜ್ಯವಾಳಿ ಅವನ ಮಗನಾದ ದಿಲೀಪನಿಗೆ ರಾಜ್ಯಾಧಿಕಾರ ಕೊಟ್ಟು ವಾನಪ್ರಸ್ಥಕ್ಕೆ ತೆರಳಿ ಘೋರ ತಪಸ್ಸನ್ನು ಆಚರಿಸಿದನು. ಅಂಶುಮಂತನ ದೇಹತ್ಯಾಗದ ಅನಂತರ ದಿಲೀಪನು ಗಂಗಾಜಲಕ್ಕಾಗಿ ತಪಸ್ಸನ್ನು ಆಚರಿಸಿದನು. ಆತನು ತನ್ನ ತಪಸ್ಸನ್ನಾಚರಿಸುವಾಗಲೇ ದೇಹತ್ಯಾಗ ಮಾಡಿದನು.


ರಾಜ ದಿಲೀಪನ ಮಗನೇ ಭಗೀರಥ. ಭಗೀರಥ ಚಕ್ರವರ್ತಿ ಪ್ರಜೆಗಳ ಪ್ರೀತಿಗೆ ಪಾತ್ರನಾಗಿದ್ದನು. ಆದರೆ ಗಂಗೆಯನ್ನು ತನ್ನ ಪೂರ್ವಜರ ಬೂದಿಯ ಮೇಲೆ ಹರಿಸುವ ಆಲೋಚನೆ ಬಿಟ್ಟಿರಲಿಲ್ಲ. ಇದೇ ಚಿಂತೆಯಲ್ಲಿ ತನ್ನ ರಾಜ್ಯಭಾರವನ್ನು ಮಂತ್ರಿಗಳಿಗೆ ಒಪ್ಪಿಸಿ ಭಗೀರಥನು ತಪಸ್ಸಿಗೆ ತೆರಳಿದ. ತಪಸ್ಸಿಗೆ ಮೆಚ್ಚಿದ ಅಮೃತಮಯ ಕಟಾಕ್ಷವುಳ್ಳ, ಶ್ರೇಷ್ಠ ಅಲೆಗಳಿಂದ ಕೂಡಿದ, ಗಂಗೆಯು ಪ್ರತ್ಯಕ್ಷವಾಗಿ ವರವನ್ನು ಬೇಡುವಂತೆ ಕೇಳಿದನು. ಆಗ ಭಗೀರಥನು, “ಅಮ್ಮ, ಭೂಮಿಗೆ ಅವತರಿಸಿ ಅಮೃತವಾದ ಗಂಗಾಜಲದಿಂದ ನನ್ನ ಪೂರ್ವಜರಿಗೆಲ್ಲ ತರ್ಪಣ ನೀಡಬೇಕು, ಸ್ವರ್ಗಪ್ರಾಪ್ತಿಯಾಗಬೇಕು. ಅವರ ಬೂದಿಯ ಮೇಲೆ ಪ್ರವಹಿಸಿ ಅವರನ್ನು ಕೃತಾರ್ಥರನ್ನಾಗಿ ಮಾಡು ತಾಯೇ” ಎಂದು ವರವನ್ನು ಬೇಡಿದನು. ಅದಕ್ಕೆ ಸಮ್ಮತಿಸಿದ ಗಂಗೆಯು, “ಆಕಾಶಮಾರ್ಗದಿಂದ ಭೂಮಿಗೆ ಧುಮುಕುವ ನನ್ನ ಶರವೇಗದ ರಭಸವನ್ನು ತಡೆಯಲು ಯಾರಿಂದ ಸಾಧ್ಯ?” ಎಂದು ಪ್ರಶ್ನಿಸಿದಳು. ಅದಕ್ಕೆ ಭಗೀರಥನು, “ಶಿವನನ್ನು ಬೇಡುವೆನೆಂದು” ತಿಳಿಸಿ ಶಿವನ ಅಪ್ಪಣೆ ಪಡೆದನು. ಆಗ ಭಕ್ತವತ್ಸಲನಾದ ಶಿವನು ಭಗೀರಥನ ಕಾರ್ಯಶ್ರದ್ಧೆಯನ್ನು ಮೆಚ್ಚಿ ವಿಷ್ಣು ಪಾದಗಳನ್ನು ತಾಕಿ ಪವಿತ್ರಳಾದಂತಹ ಜಲವನ್ನೊಳಗೊಂಡು ಆಕಾಶದಿಂದ ಭೂಮಿಗೆ ಧುಮುಕುವ ಗಂಗೆಯನ್ನು ತನ್ನ ಶಿರಸ್ಸಿನಲ್ಲಿ ಧರಿಸಿದನು.

ಅನೇಕ ವರ್ಷಗಳ ಕಾಲ ಶಿವನನ್ನು ಕುರಿತು ತಪಸ್ಸನ್ನಾಚರಿಸಿದ ಭಗೀರಥನು ಕೊನೆಗೆ ಶಿವನಿಂದ ಅಭಯವನ್ನು ಪಡೆದು ಗಂಗೆಯನ್ನು ಭುವಿಯಲ್ಲಿ ಪ್ರವಹಿಸಲು ಪ್ರಾರ್ಥಿಸಿ ರಥವನ್ನು ಮುನ್ನಡೆಸುತ್ತಾ ಸಾಗಿದನು. ಆತನ ಹಿಂದೆ ಗಂಗೆ ಚಲಿಸಿತು. ಚಲಿಸುತ್ತಾ ಇರಲಾಗಿ ಜಹ್ನು ಮಹರ್ಷಿಯ ಆಶ್ರಮವನ್ನು ಕೊಚ್ಚಿಕೊಂಡು ಹೋಗಲು ಮಹರ್ಷಿಯು ಕೋಪಗೊಂಡು ಗಂಗೆಯನ್ನೆಲ್ಲ ಕುಡಿದು ಹೊಟ್ಟೆಯಲ್ಲಿ ಧರಿಸಿದನು. ಮತ್ತೆ ದುಃಖಿತನಾದ ಭಗೀರಥನು ಛಲವನ್ನು ಬಿಡದೇ ಕಾರ್ಯಪ್ರವೃತ್ತನಾಗಿ ಮಹರ್ಷಿಯನ್ನು ಪ್ರಾರ್ಥಿಸಲಾಗಿ ಜಹ್ನು ಮಹರ್ಷಿಯು ಸ್ವಲ್ಪಮಟ್ಟಿನ ಜಲವನ್ನು ಕಿವಿಯಿಂದ ಬಿಟ್ಟನು. ಅದಕ್ಕೆಂದೇ ಗಂಗೆಯನ್ನು ಜಾಹ್ನವಿ ಎಂದು ಕರೆಯುತ್ತಾರೆ.

ಅಲ್ಲಿಂದ ಬಂದ ಗಂಗೆಯು ಭಗೀರಥನ ಹಿಂದೆ ಹಿಂದೆ ಚಲಿಸಿತು. ಪಾತಾಳದಲ್ಲಿದ್ದ ಅವನ ಪಿತೃಗಳ ಬೂದಿಯ ಮೇಲೆ ಹರಿಯಿತು. ಭಗೀರಥನ ಇಕ್ಷ್ವಾಕು ವಂಶದ ಪಿತೃಗಳು ಸ್ವರ್ಗ ಸೇರಿದರು. ಭಗೀರಥನಿಂದ ಇಡೀ ವಂಶವೇ ಪಾವನವಾಯ್ತು.

ಇದನ್ನೇ ಭಗೀರಥ ಪ್ರಯತ್ನವೆನ್ನುವುದು. ಹಿಡಿದ ಕಾರ್ಯವನ್ನು ಛಲಬಿಡದೆ ಸುರನದಿಯಾದ ದೇವಗಂಗೆಯನ್ನು ಭೂಲೋಕದಲ್ಲಿ ಹರಿಸಿದ ಹಿರಿಮೆ ಭಗೀರಥನದು. ಪ್ರತಿಯೊಂದು ಪ್ರಯತ್ನದ ಹಿಂದೆ ಪರಮಾತ್ಮನಿದ್ದಾನೆಂದು ವಿಶ್ವಕ್ಕೆ ತೋರಿದ ಮಹಾಮಹರ್ಷಿ ಭಗೀರಥ. ಭಗೀರಥ ಮಹರ್ಷಿಯ ಜೀವನಗಾಥೆ ನಮಗೆಲ್ಲರೂ ಆದರ್ಶ, ಅನುಕರಣೀಯ.●

ನಿವೃತ್ತ ಹಿರಿಯ ಬ್ಯಾಂಕ್ ಅಧಿಕಾರಿಗಳಾದ **ಶ್ರೀ ಹೆಚ್.ವಿ. ಶ್ರೀನಿವಾಸ** ಅವರ ಕಾವ್ಯನಾಮವೇ ಸಾಯಿಬಿಂದು. ಪ್ರಗತಿಪರ ಅಧ್ಯಾತ್ಮ ಚಿಂತಕರೂ ಉಪನ್ಯಾಸಕರೂ ಆಡಳಿತ, ತತ್ತ್ವಜ್ಞಾನ,



ಧ್ಯಾನ, ವ್ಯಕ್ತಿತ್ತ್ವ ವಿಕಸನ, ಬ್ಯಾಂಕಿಂಗ್ ಮುಂತಾದ ಗಂಭೀರ ವಿಷಯಗಳನ್ನು ಕುರಿತು ಪುಸ್ತಕಗಳನ್ನು ರಚಿಸಿದ್ದಾರೆ. ಸಾಯಿ ಎಂದರೆ ಸಾಗರ. ಬಿಂದು ಎಂದರೆ ಹನಿ. ಸಾಯಿ ಎಂಬ ಸಾಗರದಲ್ಲಿ ತಾನು ಒಂದು ಹನಿ ಎಂದು ತಮ್ಮ ಕಾವ್ಯನಾಮದ ಬಗ್ಗೆ ವಿವರಣೆ ನೀಡುತ್ತಾರೆ. 'ವ್ಯಕ್ತಿತ್ತ್ವ ವಿಕಸನ ಲೇಖನ ಮಾಲೆ'ಯಲ್ಲಿ ಅವರ ಚಿಂತನೆಗಳನ್ನು ಕಾಣುವಿರಿ.

# ಅಮೃತ ಮತ್ತು ವಿಷ– ಜಪ ಮತ್ತು ಧ್ಯಾನ

ಶಿವನು ಸಮುದ್ರ ಮಂಥನದಿಂದ ಹೊರಬಂದ ಕಾರ್ಕೋಟಕ ವಿಷವನ್ನು ಕುಡಿದು ತನ್ನ ಕಂಠದಲ್ಲಿ ಇರಿಸಿಕೊಂಡಿದ್ದು ಮತ್ತು ತದನಂತರ ಶ್ರೀಮಾನ್ ಮಹಾವಿಷ್ಣುವು ಅಮೃತವನ್ನು ದೇವತೆಗಳಿಗೆ ಹಂಚಿದ್ದು ಇವು ಪುರಾಣಕಾಲದ ಸಾಂಕೇತಿಕ ಘಟನೆಗಳಾದರೂ ನಮಗೆ ಇವು ಅದ್ಭುತ, ವಿಸ್ಮಯ ಮತ್ತು ಅತಿಸೂಕ್ಷ್ಮವಾದ ಅಮರ ಸಂದೇಶಗಳನ್ನು ಬಿತ್ತರಿಸುತ್ತವೆ.

ದೇವತೆಗಳಿಗೆ ಅಮೃತಪಾನ ಮಾಡಿಸಿದ್ದು, ಬಹುಶಃ ಅವರು ತಮ್ಮ ಜವಾಬ್ದಾರಿಯನ್ನು ಸಾಮರ್ಥ್ಯದಿಂದ ಪ್ರಕೃತಿ ಲೀಲೆಗಳಿಗಾಗಿ ನಿರ್ವಹಿಸಲಿ ಎಂದಿರಬಹುದು. ಅಮೃತವನ್ನು ಹಂಚುವ ಮೊದಲು, ಜಗತ್ತಿನ ಅಪಾರ ವಿಷವನ್ನು ತೆಗೆಯಬೇಕು. ಈ ವಿಷವೇ ಋಣಾತ್ಮಕ ವಿಷ. ಆ ವಿಷವನ್ನು ಸ್ವೀಕರಿಸುವ ಬಲವುಳ್ಳವನೆಂದರೆ ಆ ಪರಮಶಿವ. ಕಾರಣ ಅವನು ತಪೋಮೂರ್ತಿ, ತೇಜೋಮೂರ್ತಿ, ಧ್ಯಾನಮೂರ್ತಿ.

ಅಮೃತವೆಲ್ಲವನ್ನೂ ಕೇವಲ ದೇವತೆಗಳಿಗೆ ಹಂಚಿದರೆ ಸಾಲದು. ಅಮೃತದ ಒಂದಿಷ್ಟು ಭಾಗವನ್ನು ಜೀವಕುಲ, ಮನುಜಕುಲ, ವಿಶೇಷವಾಗಿ ಸಂತಕುಲಕ್ಕೂ ತಲಪಿಸಬೇಕು. ಮನುಜರು ಸಂತರಾಗಬೇಕು. ಸಂತರು ಕೈವಲ್ಯ ಪದವಿಯನ್ನು ಪಡೆಯಬೇಕು.

ವಿಷವೆಲ್ಲವನ್ನೂ ಶಿವ ತಾನೊಬ್ಬನೇ ಸ್ವೀಕರಿಸಿಬಿಟ್ಟರೆ, ಜಗತ್ತಿನ ಆಟ ನಡೆಯುವುದಾದರೂ ಹೇಗೆ? ಸ್ವಲ್ಪ ವಿಷವನ್ನು ಜಗತ್ತಿನಲ್ಲೂ ಇರಿಸಬೇಕು. ರಾವಣ ಎಂಬ ವಿಷವಿದ್ದರೇನೇ ರಾಮ ಎಂಬ ಅಮೃತದ ಬೆಲೆ ನಮಗೆ ಅರಿವಾಗುವುದು. ಹಿರಣ್ಯಕಶಿಪು ಇದ್ದರೆ ಮಾತ್ರ ಪ್ರಹ್ಲಾದನ ಬೆಲೆ ನಮಗೆ ಅರಿವಾಗುವುದು.

ಜಗತ್ತಿನಲ್ಲಿ ಧನಾತ್ಮಕ ಅಂಶಗಳು ಮತ್ತು ಋಣಾತ್ಮಕ ಅಂಶಗಳು ಸಮಾನವಾಗಿ ಇದ್ದರೆ ಮಾತ್ರ ಲೀಲಾ ನಾಟಕವು ವೈವಿಧ್ಯಮಯ ಪ್ರೇರಣೆಗಳಿಂದ ಮನುಜರ ಮನಸ್ಸುಗಳನ್ನು ಹೊಕ್ಕು, ಮನೋಹರವಾಗಿ ಅಥವಾ ಭಯಂಕರವಾಗಿ ನಡೆಯುತ್ತದೆ. ಮನುಜರೆಲ್ಲರೂ ಈ ಪಾಠಶಾಲೆಯಲ್ಲಿ ತಯಾರಾಗುತ್ತಾ, ವಿಕಾಸ ಹೊಂದುತ್ತಾ, ಅಂತಿಮ ಸಾಯುಜ್ಯವನ್ನು ಗಳಿಸಬೇಕು. ಸಪ್ತರ್ಷಿಗಳ ಮತ್ತು ನಾರದರ ದಿವ್ಯಸ್ಪರ್ಶದಿಂದ ದರೋಡೆಗಾರನೂ ಸಹ ವಾಲ್ಮೀಕಿ ಋಷಿಯಾಗಿ ರೂಪಾಂತರಗೊಂಡನು. ಹಾಗೆಯೇ, ಬುದ್ಧನ ಅಯಸ್ಕಾಂತ ಸ್ಪರ್ಶದಿಂದ ಅಂಗುಲಿಮಾಲನೆಂಬ ದುರಾತ್ಮನೂ ಸಹ ಸಂತನಾಗಿ ಪರಿವರ್ತನೆಗೊಂಡನು. ಈ ಒಂದು ನಿಗೂಢ ಕೈಚಳಕದ ದಿವ್ಯಲೀಲೆಯಲ್ಲಿ ವಿಷದ ಮತ್ತು ಅಮೃತದ ಮಹತ್ತ್ವಗಳು ಇದ್ದೇ ಇರುತ್ತವೆ. ಕೆಲವೊಮ್ಮೆ ವಿಷವೂ ಸಹ ಔಷಧಿಯಾಗಬಲ್ಲದು. ನಾಗರಹಾವಿನ ವಿಷವನ್ನು ಕೆಲವು ರೋಗಗಳಿಗೆ ಔಷಧಿಯಾಗಿ ಉಪಯೋಗಿಸುತ್ತಾರೆ. ಅತಿಯಾದರೆ ಅಮೃತವೂ ಸಹ ವಿಷವಾಗುತ್ತದೆ ಎನ್ನುತ್ತಾರೆ.

ಇತರರು ನಮ್ಮ ಮನಸ್ಸಿಗೆ ಕೊಡುವ ಹಿಂಸೆಯು ಒಂದಾದರೆ, ನಮಗೆ ನಾವೇ ನಮ್ಮ ಮನಸ್ಸುಗಳಿಗೆ, ನಮ್ಮ ಅಜ್ಞಾನ ವಲಯದಿಂದ ನಿರಂತರವಾಗಿ ಹಿಂಸೆ ಕೊಡುತ್ತಾ ಇರುತ್ತೇವೆ. ದೇಹದ ಹಿಂಸೆಯನ್ನಾದರೂ ಸ್ವಲ್ಪ ತಡೆಯಬಹುದು. ಆದರೆ ಮನಸ್ಸಿಗೆ ಆಗುವ ಆಘಾತಗಳನ್ನು ಸಹಿಸುವುದು ಎಂತಹವರಿಗೂ ಕಷ್ಟವೇ. ಯೋಗಿಗಳಿಗೆ, ಸಂತರಿಗೆ ಅದು ಕಷ್ಟವೇನಲ್ಲ. ಅವರು ಮನಸ್ಸನ್ನು ದಾಟಿರುತ್ತಾರೆ. ಆದರೆ ನಮ್ಮಂತಹವರಿಗೆ ಒಂದು ಉಪಾಯಬೇಕು. ಅದಕ್ಕೆ ನಮಗೆ ಪ್ರಹ್ಲಾದನೇ ಸ್ಫೂರ್ತಿ. ಅದು ಜಪ. ಅದು ಅಮೃತ ಕವಚ. ಮತ್ತೊಂದು ಉಪಾಯವೂ ಇದೆ. ಅದು ಧ್ಯಾನದಿಂದ ಲಭ್ಯವಾಗುವ ಮಹಾಶಕ್ತಿ. ಅದಕ್ಕಾಗಿ ಶಿವನನ್ನು ನೋಡೋಣ.

ಶಿವನು ಸತ್ಯಂ–ಶಿವಂ–ಸುಂದರಂ. ಶಿವನು ಮನಮೋಹಕ ಮೂರ್ತಿ. ಅವನು ಘಟಸರ್ಪಗಳನ್ನೇ ತನ್ನ ಆಭರಣಗಳನ್ನಾಗಿ, ಮಹಾಮೃತ್ಯುಂಜಯನಂತೆ ಧರಿಸಿ ವಿಜೃಂಭಿಸಿದ್ದಾನೆ. ಅವನೊಬ್ಬ ಸ್ಮಶಾನವಾಸಿ. ಅವನ ಅಲಂಕಾರವೆಂದರೆ ಬೂದಿ. ಬೂದಿಯು ಜಗತ್ತಿನ ನಶ್ವರತೆಯನ್ನು ಸೂಚಿಸುತ್ತದೆ. ಅದು ಪರಮೋಚ್ಚ ಜ್ಞಾನದ ಸಂಕೇತ. ವಿಶ್ವದ ಬಹುಭಾಗ ವಿಷವನ್ನು ಜೀವ ಸಂಕುಲದ ಒಳಿತಿಗಾಗಿ ತಾನೇ ಸ್ವೀಕರಿಸಿ, ಅದನ್ನು ತನ್ನ ಸಿರಿಕಂಠದಲ್ಲೇ ಮೂಲೆಗುಂಪಾಗಿ ಅದ್ಭುತವಾಗಿ ಇರಿಸಿದ. ಆದರೂ ತನಗೆ ಏನೂ ಆಗದವನಂತೆ, ಶಾಂತಮೂರ್ತಿಯಾಗಿ, ಆನಂದಮೂರ್ತಿಯಾಗಿ, ಬೇಡಿದವರಿಗೆ ಭಾಗ್ಯ ನೀಡುವ ಕರುಣಾಮೂರ್ತಿಯಂತೆ ಮಿಂಚಿದ್ದಾನೆ. ಆ ರೂಪಕವು ನಮಗೆ ಸಾಂಕೇತಿಕ ಸ್ಫೂರ್ತಿ.

ಶಿವನೆಂದರೆ ಶೂನ್ಯ. ಅವನೊಬ್ಬ ಖಾಲಿ. ಅವನೊಬ್ಬ ಬಯಲು. ಬಯಲೆಂದರೆ ಬಯಕೆ ಇಲ್ಲದ ಸ್ಥಳ. ಶಿವನು ಯಾವುದರ ಒಡೆತನವನ್ನೂ ಇರಿಸಿಕೊಳ್ಳದ ಮಹಾನಿರ್ಲಿಪ್ತ. ಆದರೂ ಅವನ ಅಂಕಿತವಿಲ್ಲದೆ ಒಂದು ಹುಲ್ಲುಕಡ್ಡಿಯೂ ಸಹ ಚಲಿಸಲಾಗದು, ವಿಶ್ವದ ಅನಂತ ಅರಿವಿನಲ್ಲೇ ಲಯನಾದ ಆ ಮಹಾಧ್ಯಾನಿಗೆ ತನ್ನ ಅರಿವೇ ಇಲ್ಲದಂತ ಮಾಯಾತೀತ ಸಹಜ ಸ್ಥಿತಿಯುಂಟು.

ಬ್ರಹ್ಮಾಂಡಗಳಿಗೆ ಆಧಾರವು ಬಯಲು. ಬಯಲಿಗೆ ಆಧಾರ ಬಯಲೇ. ಬಯಲೇ ಅಂತಿಮ. ಪಾರ್ವತಿಗೆ (ಪ್ರಕೃತಿಗೆ)



ಆಧಾರ ಪರಮಶಿವ (ಪುರುಷ). ಪರಶಿವನಿಗೆ ಆಧಾರ ಪರಶಿವನೇ. ಪರಶಿವನೇ ಅಂತಿಮ. ಅದೇ ಮುಕ್ತಿ, ನಿರ್ವಾಣ, ಕೈವಲ್ಯ.

ಆ ಶಿವನನ್ನು ಹೊಂದುವುದು ಎಂದರೆ ನಾವೂ ಸಹ ಧ್ಯಾನಸ್ಥರಾಗಬೇಕು. ಪ್ರತ್ಯೇಕ ಭಾವದಲ್ಲಿ ಶೂನ್ಯರಾಗಬೇಕು. ಸಮಗ್ರ ಭಾವದಲ್ಲಿ ನಾವು ಪೂರ್ಣರಾಗಬೇಕು. "ಆ ಶಿವನೇ ನಾನು" ಎಂಬ ಜ್ಞಾನವಾಗಬೇಕು. ಆ ಉಪಸ್ಥಿತಿಯು ಅಹಂಕಾರದ ಪ್ರತೀಕವಲ್ಲ. ಅದು ಅಹಂ ಕಳೆದ ಅನಂತ ಅಸ್ತಿತ್ವ. ಅದೇ "ಪ್ರಜ್ಞಾನಂ ಬ್ರಹ್ಮ". ಅದೇ ಸ್ವರೂಪ ದರ್ಶನ. ಅದಕ್ಕಾಗಿ ಧ್ಯಾನ ಸಾಧನೆ ಆವಶ್ಯಕ.

ಆಕಾಶದಲ್ಲಿ ಭೀಕರ ಕಾರ್ಮೋಡಗಳು ಒದಗುತ್ತವೆ. ಭಯಗೊಳಿಸುವ, ಎದೆ ಸೀಳುವ ಸಿಡಿಲು, ಗುಡುಗು, ಮಿಂಚುಗಳು ಆರ್ಭಟಿಸುತ್ತವೆ. ಆದರೆ, ಅವು ಯಾವುವೂ ಸಹ ಆಕಾಶವನ್ನು ಮುಟ್ಟಲಾರವು, ತಟ್ಟಲಾರವು. ಅವು ಕ್ಷಣಿಕ. ನೀಲಗಗನವೇ ಶಾಶ್ವತ. ಅಂತಹ ಅನಂತ ಆಕಾಶವು ನಮ್ಮ ಪ್ರಜ್ಞೆಯ ಒಳಗೇ ಇದೆ. ಮನಸ್ಸಿನ ಮಲಿನತೆಯೇ ಆ ಶುದ್ಧ ಪ್ರಜ್ಞೆಗೆ ತಗಲಿರುವ ಗ್ರಹಣ, ಅಜ್ಞಾನದ ಆವರಣ. ಅವು ಕಳೆದಾಗಲೇ ನಮ್ಮ ಒಳಗೇ ಶಾಶ್ವತವಾಗಿ ಇರುವ ಸುಂದರ ಆಕಾಶದ ಅನುಭೂತಿಯಾಗುತ್ತದೆ.

ಧ್ಯಾನಸ್ಥನಿಗೆ ಪ್ರಪಂಚದ ಯಾವ ಭಯವೂ ಕೂಡ ಇರಬಾರದು. ಪ್ರಪಂಚದ ಭೀಕರ ಅಲೆಗಳು ಧ್ಯಾನಸ್ಥನನ್ನು ಸ್ಪರ್ಶಿಸಬಾರದು. ಧ್ಯಾನದ ನೆಲೆಯೆಂದರೆ ಆತ್ಮದ ನೆಲೆ. ವಿಷಗಳು, ಚಲಿಸುವ ಕಾರ್ಮೋಡಗಳಂತೆ. ಅವು ನಮ್ಮ ಅಂತರಾಕಾಶದಲ್ಲಿ ಹಾದುಹೋದರೂ ಅವು ಅಂತರಾತ್ಮನನ್ನು ಸ್ಪರ್ಶಿಸುವುದಿಲ್ಲ.

ಇಂದು ಸಮಾಜವು ವಿಷಪೂರಿತವಾಗಿದೆ. ಪ್ರಪಂಚದ ಒಳಿತಿಗಾಗಿ, ಇತರರ ಕ್ಷೇಮಕ್ಕಾಗಿ, ಶಾಂತಿ ರಕ್ಷಣೆಗಾಗಿ ಒಂದಿಷ್ಟು ಸಮಾಜದ ವಿಷವನ್ನು ಸ್ವೀಕರಿಸಲು ಸಮರ್ಥರಾಗಬೇಕು, ಆ ನಂಜುಂಡನಂತೆ. ನಂಜನ್ನು ಉಂಡವನೇ ನಂಜುಂಡೇಶ್ವರ. ಅನಂತರ ಅಮೃತವನ್ನು ಬಯಸುವುದೇ ಬೇಡ. ಧ್ಯಾನಸ್ಥನಿಗೆ ಅಮೃತತ್ವವು ಸಹಜವಾಗಿ ಪ್ರಾಪ್ತಿಯಾಗಬಲ್ಲದು.

ಭೂತತ್ವದಲ್ಲೇ ಉಳಿದು ವ್ಯವಹರಿಸುವಾಗ ಜಪವೆಂಬುದು ಸಹಕಾರಿ, ಉಪಕಾರಿ. ಆದರೆ ಆ ಪರಮಸತ್ಯವನ್ನು, ಪರಮಶಾಂತಿಯನ್ನು ಅಥವಾ ಜೀವನ್ಮುಕ್ತ ಸ್ಥಿತಿಯನ್ನು ಪಡೆಯಬೇಕಾದರೆ ಆಕಾಶತತ್ತ್ವದಲ್ಲಿ ನೆಲೆಯಾಗಬೇಕು. ಭೂಮಿಗೂ ಆಕಾಶಕ್ಕೂ ಸಲ್ಲುವ ಏಣಿಯೆಂದರೆ ಧ್ಯಾನವೇ. "ಧ್ಯಾನ–ಧ್ಯಾನ–ಧ್ಯಾನ" ಅದೇ ಉತ್ತರ. ಧ್ಯಾನವನ್ನು ಮಾಡಲಾಗದಿರುವುದೇ ದೌರ್ಭಾಗ್ಯ. ಧ್ಯಾನವನ್ನು ಮಾಡಲಾಗುವುದೇ ಸೌಭಾಗ್ಯ.

ದೇಹದ ಕಾಯಕಕ್ಕಾಗಿ ಕರ್ಮಯೋಗ. ಮನದ ರಂಜನೆಗಾಗಿ ಭಕ್ತಿಯೋಗ. ಬುದ್ಧಿಯನ್ನು ಪಳಗಿಸಲು ಜ್ಞಾನಯೋಗ. ಆತ್ಮವನ್ನು ಬೆಳಗಿಸಲು ಧ್ಯಾನ ಯೋಗ. ಈ ಎಲ್ಲ ಯೋಗಗಳೂ ಧ್ಯಾನಿಯಲ್ಲಿ ಸಮರಸವಾಗಿವೆ.

ಓ ಧ್ಯಾನಿ... ನೀನೇ ಪರಮಸುಖಿ, ಭಾಗ್ಯಶಾಲಿ.

ಮುಂದುವರಿಯುವುದು)

'ಮೈತ್ರೇಯಿ' ೧೮೯೮, ೭ನೇ ಮುಖ್ಯರಸ್ತೆ, 'ಇ' ವಿಭಾಗ, ೨ನೇ ಹಂತ, ರಾಜಾಜಿನಗರ (ಸುಬ್ರಮಣ್ಯನಗರ) ಬೆಂಗಳೂರು–೫೬೦ ೦೧೦.



ಈ ಸಂಚಿಕೆಯಿಂದ ಸಂಸ್ಕೃತ ವಿದುಷಿ, ಪ್ರಾಧ್ಯಾಪಕಿ, ಮಾಜಿ ವಿಧಾನ ಪರಿಷತ್ ಸದಸ್ಯೆ, ಲೇಖಕಿ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿರುವ **ಡಾ. ಎಸ್.ಆರ್. ಲೀಲಾ** ಅವರು ಸಂಸ್ಕೃತದ ಮಹತ್‌ಗ್ರಂಥ ಕಥಾಸರಿತ್ಸಾಗರದಿಂದ ಕೆಲವು ಉತ್ತಮ ಕಥೆಗಳನ್ನು ಆಯ್ದು ಮಲ್ಲಾರ ಓದುಗರಿಗೆ ನೀಡಲಿದ್ದಾರೆ.

–ಸಂ.

# ಕೀರ್ತಿಸೇನೆ


ಸೋಮಪ್ರಭೆ ಮಯಾಸುರನ ಪುತ್ರಿ. ಮದುವೆಯಾಗಿದ್ದವಳು. ಅವಳ ಪ್ರಾಣಸಖಿ ಕಳಿಂಗಸೇನೆ. ಅವಳಿನ್ನೂ ಸಂಸಾರದ ನೊಗ ಹೊತ್ತಿರಲಿಲ್ಲ. ಲಾವಣ್ಯರಾಶಿಯೇ ಮೈವೆತ್ತಂತೆ ಇದ್ದ ಕಳಿಂಗಸೇನೆಯನ್ನು ಕಂಡರೆ ಸೋಮಪ್ರಭೆಗೆ ಬಲುಅಕ್ಕರೆ. ಅವಳನ್ನು ಕಾಣಲು ಆಗಾಗ ಬರುತ್ತಿದ್ದಳು. ಒಮ್ಮೆ ಅವಳೊಡನೆ ಮಾತಾಡುತ್ತಿದ್ದಾಗ, "ಮದುವೆಯಾದ ಅನಂತರ ಹೆಣ್ಣುಮಕ್ಕಳಿಗೆ ಅದೃಷ್ಟವಿದ್ದರೆ, ಸುಖಜೀವನವಷ್ಟೆ. ಅತ್ತೆಯಾದವಳು ತೋಳವು ಕುರಿಯನ್ನು ಕಿತ್ತುತಿನ್ನುವಂತೆ ಸೊಸೆಯನ್ನು ಹರಿದುಮುಕ್ಕುತ್ತಾಳೆ" ಎಂದಳು. ಕಳಿಂಗಸೇನೆ, "ಹಾಗೇಕೆ ಹೇಳುತ್ತಿದ್ದೀಯೆ?" ಎಂದು ಮುಗ್ಧಳಾಗಿ ಕೇಳಿದಾಗ ಸೋಮಪ್ರಭೆ ತನ್ನ ಮಾತಿಗೆ ನಿದರ್ಶನವಾಗಿ ಕೀರ್ತಿಸೇನೆಯ ಕಥೆಯನ್ನು ಹೇಳುತ್ತಾಳೆ.

ಪಾಟಲೀಪುತ್ರ ಪ್ರಸಿದ್ಧ ನಗರ. ವಿದ್ಯಾವಂತರು, ಕಲಾಕಾರರು, ವ್ಯಾಪಾರಿಗಳಿಂದ ತುಂಬಿ ಧನಕನಕ ಸಮೃದ್ಧಿಯಿಂದ ಶೋಭಿಸುತ್ತಿತ್ತು. ಅಲ್ಲಿ ಧನಪಾಲಿತನೆಂಬ ಹೆಸರಾಂತ ರತ್ನಪಡಿ ವ್ಯಾಪಾರಿಯಿದ್ದ. ಆತನ ಮಗಳು ಕೀರ್ತಿಸೇನೆ. ಅವಳೋ ಚೆಲುವಿನ ಗಣಿ. ತಂದೆಯ ಮುದ್ದಿನಮಣಿ. ಪ್ರೀತಿಯಿಂದ ಸಾಕಿದ್ದ. ಮಗಧ ದೇಶದ ಧನಿಕ ದೇವಸೇನ. ಧನಪಾಲಿತನಿಗೆ ಸಮನಾದ ಶ್ರೀಮಂತ. ಮುದ್ದಿನ ಮಗಳನ್ನು ದೇವಸೇನನಿಗೆ ಮದುವೆ ಮಾಡಿಸಿದ. ದೇವಸೇನನ ತಂದೆ ಮೃತಪಟ್ಟು ತಾಯಿ ಮಾತ್ರ ಇದ್ದಳು. ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಸಹಜಸುಂದರ ಸ್ವಭಾವದ ದೇವಸೇನನು ಪತ್ನಿಯಾದ ಕೀರ್ತಿಸೇನೆಯನ್ನು ತುಂಬ ಪ್ರೀತಿಸುತ್ತಿದ್ದ. ಅವಳ ಮುಗ್ಧಸೌಂದರ್ಯ ಅವನಿಗೆ ಹುಚ್ಚುಹಿಡಿಸಿತ್ತು. ಅವಳ ನಡವಳಿಕೆ ಇವನಿಗೆ ಮೆಚ್ಚುಗೆಯಾಗಿತ್ತು. ದೇವಸೇನನ ತಾಯಿಗೆ ಮಾತ್ರ ತನ್ನ ಮಗ ಹೆಂಡತಿಯನ್ನು ಪ್ರೀತಿಸುವುದು ಸುತರಾಂ ಇಷ್ಟವಿರಲಿಲ್ಲ. ಕೋಪದಿಂದ ಉರಿಯುತ್ತಿದ್ದಳು. ಸಮಯಸಂದರ್ಭ ಸಿಕ್ಕಾಗಲೆಲ್ಲ ಹೀಯಾಳಿಸುತ್ತಿದ್ದಳು. ಕೀರ್ತಿಸೇನೆಗೆ ಇದೆಲ್ಲ ತಿಳಿದರೂ ಗಂಡನಿಗೆ ಅತ್ತೆಯ ಬಗೆಯನ್ನು ಹೇಳಲಾಗುತ್ತಿರಲಿಲ್ಲ. ಒಳಗೊಳಗೇ ನೋವುಣ್ಣುತ್ತಿದ್ದಳು.

ವ್ಯಾಪಾರಿಗಳಿಗೆ ಸಲಹೆ-ಸೂಚನೆ ಕೊಡುವವರು ಅನೇಕರು. ವಲಭೀನಗರ ಮಗಧದಿಂದ ದೂರದಲ್ಲಿದ್ದ ಪಟ್ಟಣ. ವರ್ತಕರಿಂದ ತುಂಬಿದ್ದ ವಿಖ್ಯಾತನಗರ. ದೇವಸೇನನ ಹತ್ತಿರದವರು ಅವನಿಗೆ ಈ ನಗರದ ಬಗ್ಗೆ ಹೇಳಿ ಅವನೂ ವ್ಯಾಪಾರಕ್ಕೆಂದು ಅಲ್ಲಿಗೆ ಹೊರಟುನಿಂತ. ಕೀರ್ತಿಸೇನೆಗೆ ದುಃಖ ತಡೆಯಲಾಗಲಿಲ್ಲ. ಅವಳು ಗಂಡನಿಗೆ, "ನಿಮ್ಮ ಮುಂದೆಯೇ ನನ್ನನ್ನು ಅಂದುಆಡಿ ಮಾಡುವ ನಿಮ್ಮ ತಾಯಿ ನೀವಿಲ್ಲದಿದ್ದಾಗ ಏನು ಮಾಡಬಹುದೆಂದು ಯೋಚಿಸಿ. ನನಗೆ ಭಯವಾಗುತ್ತಿದೆ" ಎಂದಳು. ಅವನಿಗೆ ಹೆಂಡತಿಯ ಮೇಲೆ ಪ್ರೀತಿ, ಅಮ್ಮನ ಮೇಲಿನ ಭೀತಿ. ಮುದ್ದಿನ ಹೆಂಡತಿಯ ಮಾತು ಕೇಳಿ ಗಾಬರಿಯಾದ. ಅಮ್ಮನ ಬಳಿಗೆ ಹೋಗಿ ನಮಸ್ಕರಿಸಿ ಹೇಳಿದ, "ಅಮ್ಮ, ಕೀರ್ತಿಸೇನೆ ಈ ಮನೆಯ ಸೊಸೆ. ಉತ್ತಮಕುಲದಲ್ಲಿ ಹುಟ್ಟಿದ ಗುಣವತಿ. ನಾನಿಲ್ಲದಿರುವಾಗ ನನ್ನ ಹೆಂಡತಿಯನ್ನು ಚೆನ್ನಾಗಿ ನೋಡಿಕೊ" ಇದನ್ನು ಕೇಳಿ ತಾಯಿಗೆ ಕೋಪ ಉಕ್ಕೇರಿತು. ಕೀರ್ತಿಸೇನೆಯನ್ನು ಉರಿಯುವ ಕಣ್ಣುಗಳಿಂದ ನೋಡುತ್ತಾ, "ಕಳ್ಳಿ ಇವಳು. ಮನೆಮುರುಕಿ. ಮಗ-ಸೊಸೆಯರಲ್ಲಿ ನಾನು ಭೇದ ಮಾಡಿದವಳೆ ಅಲ್ಲ. ಮಗಳಂತೆ ಕಂಡಿದ್ದೇನೆ, ಇವಳನ್ನು ನಾನು ಚೆನ್ನಾಗಿಯೆ ನೋಡಿಕೊಳ್ಳುತ್ತೇನೆ" ಎಂದಳು. ದೇವಸೇನನು ತಾಯಿಯ ಮಾತನ್ನು ನಂಬಿ ನಿಶ್ಚಿಂತೆಯಿಂದ ಹೊರಟ. ದೇವಸೇನೆ ಏನೂ ಹೇಳಲಾರದೆ ಒಳಗೊಳಗೆ ಕುದ್ದುಹೋದಳು. ಅಸಹಾಯಕತೆ ಅವಳನ್ನು ಆವರಿಸಿತು. ಗಂಡನ ವಿರಹ, ಅತ್ತೆಯ ವಿರಸ ಎರಡನ್ನೂ ಅನುಭವಿಸಬೇಕಾಯಿತು.

ಕ್ರಮೇಣ ಅತ್ತೆ ಸೊಸೆಯ ಮೇಲೆ ಕತ್ತಿ ಮಸೆಯತೊಡಗಿದಳು. ಅವಳ ದಾಸಿಯರನ್ನೆಲ್ಲ ಮನೆಗೆ ಕಳುಹಿಸಿ ಒಬ್ಬಂಟಿಯನ್ನಾಗಿಸಿದಳು. ತನ್ನ ಸೇವಕಿಯ ಜೊತೆ ಸೇರಿ ನಾನಾತೆರನಾದ ಹಿಂಸೆನೀಡಿ, ಮೈಯೆಲ್ಲ ಪರಚಿ ಗಾಯಮಾಡಿ, ನೆಲಮಾಳಿಗೆಯಲ್ಲಿದ್ದ ಕತ್ತಲೆ ಕೋಣೆಗೆ ನೂಕಿದಳು. ಒಂದು ಹೊತ್ತು ಮಾತ್ರ ಹಿಡಿ ಅನ್ನವನ್ನು ಮಣ್ಣಿನ ಬೋಗುಣಿಯಲ್ಲಿ ಹಾಕಿಕೊಡುತ್ತಿದ್ದಳು. ಕೀರ್ತಿಸೇನೆಯ ಎದೆಯೊಡೆಯಿತು. ಶ್ರೀಮಂತ ತಂದೆಯ ಮುದ್ದಿನ ಮಗಳಾದ ತನಗೆ ಇಂಥ ದುಃಸ್ಥಿತಿಯೆ? ಮನದ ನೋವು, ದೈಹಿಕ ಹಿಂಸೆಗಳಿಂದ ಬಳಲಿ ಬೆಂಡಾದಳು. ಇದಕ್ಕೆ ಇರಬೇಕು ಜನ ಹೆಣ್ಣು ಹುಟ್ಟುವುದೇ ಬೇಡ ಎನ್ನುವುದು ಎಂದುಕೊಂಡು ಸುಮ್ಮನೆ ಹಾಗೆ ತಾನಿದ್ದ ಕತ್ತಲ ಸಾಮ್ರಾಜ್ಯವನ್ನು ನಿರುಕಿಸಿ ನೋಡಿದಳು. ಒಂದು ಮೂಲೆಯಲ್ಲಿ ಸುಮಾರು ಗಾತ್ರದ ಕಬ್ಬಿಣದ ಸಲಾಕೆ ಕಾಣಿಸಿತು. ಬುದ್ಧಿವಂತೆಯಾದವಳು ನೋವನ್ನು ನುಂಗಿಕೊಂಡು ಆ ಸರಳಿನಿಂದ ಸುರಂಗ ತೋಡಲು ಮೊದಲಿಟ್ಟಳು. ಅಂದುಕೊಂಡಂತೆಯೆ ಕೆಲದಿನಗಳ ಅನಂತರ ಸುರಂಗ ಅವಳ ಶಯನಾಗಾರಕ್ಕೆ ತೆರೆದುಕೊಂಡಿತು. ತನ್ನ ಕೋಣೆಯನ್ನು ಹೊಕ್ಕು ಬಹು ಎಚ್ಚರಿಕೆಯಿಂದ ರಾತ್ರಿಯ ವೇಳೆ ಚಿನ್ನ, ಒಡವೆ, ವಸ್ತ್ರಗಳನ್ನು ತೆಗೆದುಕೊಂಡು ಹೊರನಡೆದಳು. ರಹಸ್ಯವಾಗಿ ಹೆಜ್ಜೆಯಿಡುತ್ತ ಹೇಗೋ ಬೆಳಗಾಗುವ ವೇಳೆಗೆ ಊರು ಬಿಟ್ಟಿದ್ದಳು. ಅಂದು ಉದಯಿಸಿದ ಸೂರ್ಯನ ಬೆಳಕನ್ನು ಪುಣ್ಯದ ಫಲವೂ ಎಂಬಂತೆ ಆಸೆಯಿಂದ ನೋಡಿ ಭಗವಂತನಿಗೆ ನಮಸ್ಕರಿಸಿದಳು. ಹೆಬ್ಬುಲಿಯ ಬಾಯಿಂದ ತಪ್ಪಿಸಿಕೊಂಡಂತಾಗಿತ್ತು.





ಅನಂತರ ಯೋಚನೆಯಾಯಿತು. ಎಲ್ಲಿಗೆ ಹೋಗುವುದು? ತವರುಮನೆಗೆ ಹೋದರೆ ನನ್ನನ್ನು ನಂಬುತ್ತಾರೋ ಇಲ್ಲವೋ? ಅವಮಾನವಾದರೆ? ಬೇಡವೇ ಬೇಡ. ಮದುವೆಯ ಅನಂತರ ಸತಿಗೆ ಪತಿಯೆ ಗತಿ. ಪತಿಯನ್ನೇ ಹುಡುಕಿ ಹೋಗುತ್ತೇನೆ. ಮನಸ್ಸು ಸಂಕಲ್ಪ ಮಾಡಿತು. ಕೆರೆಯೊಂದರಲ್ಲಿ ಸ್ನಾನ ಮಾಡಿ, ಒಂದಷ್ಟು ಒಡವೆಗಳನ್ನು ಮಾರಿ ರಾಜಕುವರನ ವೇಷತೊಟ್ಟಳು. ಕೆಲವು ಸೇವಕರೊಡನೆ ವಲಭೀನಗರಿಯ ಕಡೆಗೆ ಹೊರಟಿದ್ದ ಸಮುದ್ರಸೇನನೆಂಬ ವ್ಯಾಪಾರಿಯ ಸಾರ್ಥದೊಡನೆ ಸೇರಿಕೊಂಡಳು. ತಾನಿರುವಲ್ಲಿ ಸಂಬಂಧಿಕರು ಪೀಡಿಸುತ್ತಿದ್ದಾರೆಂದೂ ವಲಭಿಯಲ್ಲಿ ತನ್ನ ಇಷ್ಟಮಿತ್ರರು ಇರುವುದರಿಂದ ವ್ಯಾಪಾರಕ್ಕಾಗಿ ಅಲ್ಲಿಗೆ ಹೋಗಬೇಕಾಗಿದೆ ಎಂದು ಹೇಳಿದಳು. ಸಮುದ್ರಸೇನ ಅವಳ ಶ್ರೀಮಂತಿಕೆಯನ್ನು ಕಂಡು ತುಂಬ ಗೌರವದಿಂದ ಉಪಚರಿಸಿದ.

ವ್ಯಾಪಾರಿಗಳ ಬುದ್ಧಿ ಎಲ್ಲ ಕಾಲದಲ್ಲೂ ಎಲ್ಲ ದೇಶದಲ್ಲೂ ಒಂದೇ ತೆರನಾಗಿರುತ್ತದೆ! ರಾಜಮಾರ್ಗದಲ್ಲಿ ಸುಂಕ ಕೊಡಬೇಕಾಗುತ್ತದೆಂದು ಸಮುದ್ರಸೇನ ಕಾಡುದಾರಿಯನ್ನು ಹಿಡಿದು ಪ್ರಯಾಸದ ಪ್ರಯಾಣ ಮಾಡಿ ಸಂಜೆಯ ವೇಳೆಗೆ ಒಂದೆಡೆ ನೆಲೆನಿಂತ. ಆಗ ನರಿಗಳ ಕರ್ಕಶ ಕೂಗು ಕಿವಿಗಪ್ಪಳಿಸಿತು. ಅಪಶಕುನದ ಅಪಾಯ ಸೂಚನೆಯೆಂದರಿತ ವ್ಯಾಪಾರಿ ರಾತ್ರಿಯ ವೇಳೆಗೆ ಎಲ್ಲರೂ ಆಯುಧಸನ್ನದ್ಧರಾಗಿರಬೇಕೆಂದು ಸಾರ್ಥದವರಿಗೆ ತಿಳಿಸಿದ. ಸ್ವಲ್ಪ ಹೊತ್ತಿಗೆಲ್ಲ ಕಳ್ಳರ ಗುಂಪೊಂದು ಇತ್ತಕಡೆಗೆ ಬರಲಾರಂಭಿಸಿತು. ಮುಂದಿನದನ್ನು ಕೀರ್ತಿಸೇನೆ ಊಹಿಸಿ ತಲ್ಲಣಿಸಿದಳು. ಪಾಪಿ ಸಮುದ್ರಕ್ಕೆ ಹೋದರೂ ಎಂಬಂತಾಯಿತು ನನ್ನ ಸ್ಥಿತಿ. ಅತ್ತೆಯ ಕಾಟ ತಪ್ಪಿಸಿಕೊಂಡೆ, ಈಗ ಕಳ್ಳರ ಕೈಗೆ ಬಿದ್ದು ಎಲ್ಲ ಕಳೆದುಕೊಳ್ಳುವ ಫಜೀತಿ ಬಂತು. ಕಳ್ಳರು ನಮ್ಮನ್ನು ಸಾಯಿಸಲೂಬಹುದು! ಹಿಂದುಮುಂದು ಆಲೋಚಿಸಿದ ಅವಳು ಸಾರ್ಥವನ್ನು ಬಿಟ್ಟು ತಾನು ತಪ್ಪಿಸಿಕೊಳ್ಳಬೇಕೆಂದುಕೊಂಡು ತನ್ನ ಗಂಟನ್ನು ಹಿಡಿದು ದೂರದಲ್ಲಿದ್ದ ದೊಡ್ಡದೊಂದು ಮರದ ಪೊಟರೆಯಲ್ಲಿ ಅಡಗಿಕುಳಿತಳು. ದರೋಡೆಕೋರರು ಸಾರ್ಥವನ್ನು ಆಕ್ರಮಿಸಿ, ಹೊಡೆದುಬಡಿದು, ವ್ಯಾಪಾರಿಗಳ ರಕ್ತದ ಪ್ರವಾಹವನ್ನೇ ಹರಿಸಿದರು. ಅವರ ಧನಕನಕಗಳನ್ನು ದೋಚಿದರು. ಕೇಕೆಹಾಕುತ್ತಾ ಜಾಗ ಖಾಲಿ ಮಾಡಿದರು. ಪೊಟರೆಯ ಸಂದಿನಿಂದ ಎಲ್ಲವನ್ನೂ ನೋಡುತ್ತಲಿದ್ದ ಕೀರ್ತಿಸೇನೆಗೆ ದಿಕ್ಕೇ ತೋಚದಂತಾಯಿತು. ಬದುಕು ಅದೆಷ್ಟು ಘೋರ ಎನಿಸಿತು. ಪೂರ್ಣ ಸೂರ್ಯೋದಯದ ಅನಂತರ ಮೆಲ್ಲಗೆ ಹೊರಗೆ ಬಂದು ಅತ್ತಿತ್ತ ನೋಡಿದಳು. ತಾಪಸನೊಬ್ಬ ಅದೇ ಕಡೆ ಬರುತ್ತಿದ್ದನು. ಕೀರ್ತಿಸೇನೆ ಆತನಲ್ಲಿ ತನ್ನೆಲ್ಲ ಕರುಣಕಥೆಯನ್ನು ಹೇಳಿ ಶರಣಾದಳು.

ಮೃದುಮನದ ತಪಸ್ವಿ ಅವಳನ್ನು ಸಂತೈಸಿ, ಕಮಂಡಲುವಿನ ನೀರನ್ನು ಕುಡಿಯಲು ಕೊಟ್ಟು ಮುಂದಿನ ದಾರಿ ತೋರಿದನು. ಅವಳಿಗೆ ತನ್ನ ಭಾಗ್ಯದ ಮೇಲೆ ಒಂದಿಷ್ಟು ಭರವಸೆಯುಂಟಾಗಿ, ಆ ತಪಸ್ವಿಗೆ ವಂದಿಸಿ ಹೊರಟಳು. ಸೂರ್ಯಾಸ್ತದವರೆಗೆ ನಡೆದು, ಮತ್ತೆ ಇನ್ನೊಂದು ಮರದಪೊಟರೆಯನ್ನೆ ಮನೆಯಾಗಿಸಿಕೊಂಡಳು. ದೊಡ್ಡದೊಂದು ಮರದ ತುಂಡಿನಿಂದ ಅದರ ಬಾಯನ್ನು ಮುಚ್ಚಿ ಒಳಗೆ ಕುಳಿತಳು. ಸ್ವಲ್ಪ ಹೊತ್ತಿನಲ್ಲಿ ರಾಕ್ಷಸಿಯೊಬ್ಬಳು ಕೆಲವು ಗಂಡುಮಕ್ಕಳೊಂದಿಗೆ ಅಲ್ಲಿಗೆ ಬಂದಳು. ಕೀರ್ತಿಸೇನೆಯ ಹೃದಯ ಬಾಯಿಗೆ ಬಂದಂತಾಯಿತು. ರಕ್ಕಸಿಯ ಕೈಗೆ ಬಿದ್ದೆ ಎಂದುಕೊಂಡಳು. ಆದರೆ ಅವಳು ಇನ್ನೊಂದು ಬದಿಯಿಂದ ಮರವೇರಿದಳು. ಮಕ್ಕಳು, "ಅಮ್ಮಾ, ಹಸಿವು. ತಿನ್ನಲು ಕೊಡು" ಎಂದು ಕೂಗುತ್ತಿದ್ದವು. "ಮಕ್ಕಳೆ, ಈವತ್ತು ನನ್ನ ಅದೃಷ್ಟ ಸರಿ ಇಲ್ಲ. ಎಲ್ಲಿ ಹೋದರು ಆಹಾರ ಸಿಗಲಿಲ್ಲ. ಸ್ಮಶಾನಕ್ಕೆ ಹೋಗಿ ಭೈರವನನ್ನೇ ಕೇಳಿಕೊಂಡೆ. ಅವನು ನನ್ನ ಕುಲಗೋತ್ರಗಳನ್ನು ಕೇಳಿ, 'ಭಯಂಕರಿ! ಖರದೂಷಣರ ವಂಶದಲ್ಲಿ ಹುಟ್ಟಿದ ನಿನಗೆ ಇಷ್ಟು ದೈನ್ಯವೇಕೆ? ನನ್ನ ಮಾತು ಕೇಳು ಇಲ್ಲಿಂದ ಹತ್ತಿರದಲ್ಲೆ ಇರುವ ವಸುದತ್ತಪುರಕ್ಕೆ ಹೋಗು. ಅಲ್ಲಿ ವಸುದತ್ತನೆಂಬ ಧರ್ಮಶೀಲನಾದ ರಾಜನಿದ್ದಾನೆ. ಅವನು ಕಳ್ಳಕಾಕರನ್ನು ಹಿಡಿದು ಬಂಧಿಸಿ ಪ್ರಜಾಕ್ಷೇಮವುಂಟು ಮಾಡುತ್ತಾ ಪ್ರಸಿದ್ಧನಾಗಿದ್ದಾನೆ. ಅವನು ಒಮ್ಮೆ ಕಾಡಿಗೆ ಬಂದಿದ್ದಾಗ ಒಂದು ಸಣ್ಣ ಜರಿಯು(ಶತಪದಿ) ಅವನ ಕಿವಿಯನ್ನು ಹೊಕ್ಕಿದೆ. ಅದು ತಲೆಯನ್ನು ಸೇರಿ, ಅದರ ಸಂತತಿ ಬೆಳೆದು, ರಾಜ ರೋಗಪೀಡಿತನಾಗಿ, ಸಾಯುವಂತಾಗಿದ್ದಾನೆ. ಯಾವ ವೈದ್ಯರಿಗೂ ಅವನ ರೋಗವನ್ನು ಗುಣಪಡಿಸಲಾಗಿಲ್ಲ. ಇನ್ನು ಕೆಲವೇ ದಿನಗಳಲ್ಲಿ ಅವನು ಸಾಯುವವನಿದ್ದಾನೆ. ಹೋಗಿ ಅವನು ಸತ್ತಮೇಲೆ ಆ ರಾಜಮಾಂಸವನ್ನು ತಿನ್ನು' ಎಂದು ಹೇಳಿದ. ಶೀಘ್ರದಲ್ಲಿ ಆಹಾರ ದೊರಕುವುದು ಕಷ್ಟವೇ ಇದೆ." ಆಗ ಮಕ್ಕಳು, "ಅಮ್ಮ ರೋಗ ಯಾವುದೆಂದು ತಿಳಿದು ವಾಸಿಮಾಡಿದರೆ ರಾಜ ಬದುಕಿಕೊಳ್ಳುತ್ತಾನೆಯೇ? ಎನ್ನಲು "ಹೌದು, ರೋಗ ದೂರಾದರೆ ರಾಜನು ಬದುಕುತ್ತಾನೆ. ವಾಸಿ ಮಾಡುವ ಉಪಾಯ ನನಗೂ ತಿಳಿದಿದೆ" ಎಂದಳು. ಮಕ್ಕಳು ಉಪಾಯ ಹೇಳು ಎಂದು ಪೀಡಿಸಿದಾಗ ಹೀಗೆಂದಳು, "ತುಪ್ಪ ಬಹು ದೊಡ್ಡ ಔಷಧಿ. ಮೊದಲು ( ರಾಜನ ತಲೆಗೆ ಬಿಸಿ) ತುಪ್ಪ ಸವರಿ ಉರಿಬಿಸಲಿನಲ್ಲಿ ಕೂರಿಸಿ, ಕಿವಿಗೆ ಬಿದಿರಿನ ಕೊಳವೆ ಸಿಕ್ಕಿಸಬೇಕು. ಅದರ ಇನ್ನೊಂದು ತುದಿ ತಣ್ಣೀರಿನ ಗಡಿಗೆಯಲ್ಲಿರಬೇಕು. ತಲೆಬಿಸಿಯೇರುತ್ತಿದ್ದಂತೆ ಜರಿಗಳು ತಾಪತಡೆಯಲಾರದೆ ಕೊಳವೆಯ ಮೂಲಕ ಹೊರಬಂದು ತಣ್ಣೀರಿನಲ್ಲಿ ಬೀಳುತ್ತವೆ. ರಾಜನು ರೋಗಮುಕ್ತನಾಗುತ್ತಾನೆ."

ಪೊಟರೆಯಲ್ಲಡಗಿದ್ದ ಕೀರ್ತಿಸೇನೆ, ಆ ರಕ್ಕಸ ತಾಯಿ-ಮಕ್ಕಳ ಮಾತುಕತೆ ಕೇಳಿದಳು. ಅವಳ ತಲೆಯಲ್ಲಿ ಮಿಂಚು ಹೊಳೆದಂತಾಯಿತು. ಹೇಗೋ ಇಲ್ಲಿಂದ ತಪ್ಪಿಸಿಕೊಂಡು ವಸುದತ್ತಪುರಕ್ಕೆ ಹೋಗಿ ರಾಜನಿಗೆ ಗುಣಮಾಡಬೇಕೆಂದುಕೊಂಡಳು. ಕಳ್ಳಕಾಕರನ್ನು ಸದೆಬಡಿಯುವ ರಾಜನಿರುವ ವಸುದತ್ತಪುರದ ಮಾರ್ಗವಾಗಿಯೇ ಸಾರ್ಥಗಳು, ವ್ಯಾಪಾರಿಗಳು ಬರುತ್ತಾರಂತೆ, ಬಹುಶಃ ನನ್ನ ಪತಿಯೂ ಇದೇ ಮಾರ್ಗವಾಗಿ ಬರಬಹುದು. ನಾನೂ ಅವನನ್ನು ಸೇರಿಕೊಳ್ಳಬಹುದು. ರಾತ್ರಿ ಸರಿಯುತ್ತಿತ್ತು. ಉಷಃಕಾಲದ

ಬೆಳಕಿನ ಕಿರಣಗಳಂತೆ ಅವಳ ಯೋಚನಾಲಹರಿಯೂ ವೇಗಪಡೆದವು. ಅತ್ತೆಯೆಂಬ ರಕ್ಕಸಿಯ ಕೈಯಲ್ಲಿ ಸಿಕ್ಕಿಬಿದ್ದಿದ್ದ ಕೀರ್ತಿಸೇನೆಯನ್ನು ಮರವೇರಿದ್ದ ರಾಕ್ಷಸಿ ಕಾಣಲೇ ಇಲ್ಲ. ಬಂದಂತೆಯೆ ಮಕ್ಕಳೊಡನೆ ಹೊರಟು ಹೋದಳು. ಬಳಿಕ ಕೀರ್ತಿಸೇನೆ ಮಧ್ಯಾಹ್ನದವರೆಗೂ ನಡೆದು ಹಸುಗಳನ್ನು ಮೇಯಿಸುತ್ತಿದ್ದ ಸಾಧುಪುರುಷನೊಬ್ಬನನ್ನು ಕಂಡು ಹತ್ತಿರದಲ್ಲಿ ಯಾವ ಊರಿದೆ ಎಂದಳು. ಕರುಣಾಪೂರ್ಣ ಮುಖಮುದ್ರೆಯುಳ್ಳ ಆ ವ್ಯಕ್ತಿ, "ಇದು ವಸುದತ್ತಪುರ. ಅಲ್ಲಿನ ರಾಜ ರೋಗಗ್ರಸ್ತನಾಗಿದ್ದಾನೆ" ಎಂದನು. ಆ ಗೋಪಾಲಕನಿಗೂ ರಾಜನ ಪೀಡೆಯಿಂದ ನೋವುಂಟಾದಂತಿತ್ತು. ಗೋಪಾಲಕನ ಮಾತಿನಿಂದ ಕೀರ್ತಿಸೇನೆಗೆ ಅವನಲ್ಲಿ ನಂಬಿಕೆಯುಂಟಾಯಿತು. "ನನ್ನನ್ನು ರಾಜನ ಬಳಿಗೆ ಕರೆದುಕೊಂಡು ಹೋಗಿರಿ. ಅವನ ರೋಗವನ್ನು ವಾಸಿಮಾಡುತ್ತೇನೆ" ಎಂದಳು. ಗೋಪಾಲಕನು ಕುತೂಹಲಗೊಂಡು, "ನಾನೂ ಅಲ್ಲಿಗೆ ಹೋಗುತ್ತಿದ್ದೇನೆ, ಬಾ ನಿನ್ನನ್ನೂ ಕರೆದೊಯ್ಯುತ್ತೇನೆ" ಎಂದ. ಅರಮನೆಯ ದ್ವಾರಪಾಲಕರು, ಸೇವಕರು, ವೈದ್ಯೋಪಚಾರ ಮಾಡುವವರು ಎಲ್ಲರೂ ಕ್ರಮವಾಗಿ ಪುರುಷವೇಷದ ಕೀರ್ತಿಸೇನೆಯನ್ನು ಪರಿಚಯಿಸಿಕೊಂಡು, ಪ್ರವೇಶ ದೊರಕಿಸಿಕೊಟ್ಟು ರಾಜನ ಬಳಿಗೆ ಕರೆದೊಯ್ದರು. ರೋಗದಿಂದ ನೊಂದು ನವೆಯುತ್ತಿದ್ದ ರಾಜನು ಕೀರ್ತಿಸೇನೆಯ ಭದ್ರಾಕಾರವನ್ನೂ ಸತ್ತ್ವಸೌಂದರ್ಯದಿಂದ ಕಂಗೊಳಿಸುತ್ತಿದ್ದ ಮುಖಮಂಡಲವನ್ನೂ ನೋಡಿ ತುಂಬ ಸಮಾಧಾನಪಟ್ಟನು. ಅದಕ್ಕೆ ಕಾರಣವೂ ಇತ್ತು. ಅವಳನ್ನು ಕಂಡಾಗ ರಾಜನು, "ನೀನು ನನ್ನ ರೋಗವನ್ನು ವಾಸಿಮಾಡಲು ಬಂದಿರುವೆ ಎಂದು ಗೊತ್ತು. ನೆನ್ನೆ ನನ್ನ ಕನಸಿನಲ್ಲಿ ಬಂದ ಹೆಣ್ಣೊಬ್ಬಳು ನನ್ನ ಬೆನ್ನಮೇಲಿಂದ ಕರಿಕಂಬಳಿಯನ್ನು ಎಳೆದುಹಾಕಿದಂತಾಯ್ತು. ನನ್ನನ್ನು ಗುಣಮಾಡಿದರೆ ನನ್ನ ರಾಜ್ಯಾರ್ಧವನ್ನು ನಿನಗೆ ಕೊಡುತ್ತೇನೆ" ಎಂದ. ಕೀರ್ತಿಸೇನೆ, "ಆಗಲಿ, ಇಂದು ಹೊತ್ತಾಯಿತು. ನಾಳೆ ಬೆಳಗ್ಗೆ ಬಿಸಿಲೇರುವ ಹೊತ್ತಿನಲ್ಲಿ ವೈದ್ಯ ಮಾಡುತ್ತೇನೆ. ಈಗ ಹಸುವಿನ ತುಪ್ಪವನ್ನು ತನ್ನಿ" ಎಂದು ಹೇಳಿ ಅದನ್ನು ಸೇವಕರ ಮೂಲಕ ರಾಜನ ತಲೆಗೆ ಚೆನ್ನಾಗಿ ಹಚ್ಚಿಸಿದಳು. ರಾಜನ ವೇದನೆ ಎಷ್ಟೋ ಕಡಮೆಯಾಗಿ ನಿದ್ರೆಯೂ ಚೆನ್ನಾಗಿ ಬಂತು. ಅರಮನೆಯಲ್ಲಿ ಕೀರ್ತಿಸೇನೆಯನ್ನು ಉಪಚರಿಸಿ ನೋಡಿಕೊಂಡರು.

ಮಾರನೆಯ ದಿನ ಇವಳ ಚಿಕಿತ್ಸೆಯನ್ನು ನೋಡಲು ಮಂತ್ರಿಮಹೋದಯರು ವೈದ್ಯಪರಿಣತರೆಲ್ಲ ನೆರೆದರು. ಅಂತಃಪುರದವರೂ ಕೌತುಕದಿಂದ ನೋಡುತ್ತ ನಿಂತರು. ಕೀರ್ತಿಸೇನೆ ಬಿದಿರಿನ ಕೊಳವೆ, ತಣ್ಣೀರಗಡಿಗೆ, ತುಪ್ಪಗಳನ್ನು ತರಿಸಿ, ರಕ್ಕಸಿ ಹೇಳಿದ್ದಂತೆ ರಾಜನನ್ನು ಬಿಸಿಲಿನಲ್ಲಿ ಕೂರಿಸಿ ವೈದ್ಯ ಮಾಡಿದಳು. ಎಲ್ಲರೂ ನೋಡನೋಡುತ್ತಿದ್ದಂತೆ ಜರಿಗಳೂ ಅದರ ಮರಿಗಳೂ ಜೊಂಪೆಜೊಂಪೆಯಾಗಿ ಬಿದಿರಿನ ಕೊಳವೆಯ ಮೂಲಕ ಹೊರಬಂದು ತಣ್ಣೀರಿಗೆ ಬಿದ್ದವು. ಅವು ಹೊರಬರುತ್ತಿದ್ದಂತೆ ರಾಜನ ಮೊಗದಲ್ಲಿ ನೋವು ಕಡಮೆಯಾಯಿತು. ಏನೋ ಹಗುರವಾದ ಭಾವ ಮನದಲ್ಲಿ ಮೂಡಿತು. ಎಲ್ಲರೂ ಈ ಅದ್ಭುತವನ್ನು ನೋಡಿ ಅಚ್ಚರಿ ಸಂತಸಗಳನ್ನನುಭವಿಸಿ, ಕೀರ್ತಿಸೇನೆಯನ್ನು ಅಭಿನಂದಿಸಿದರು. "ಆಹಾ! ಎಂಥ ಸರಳೋಪಾಯ, ಏನು ರೋಗ ನಿವಾರಣೆ, ಭೇಷ್ ಭೇಷ್" ಎಂದು ಕೊಂಡಾಡಿದರು. ರಾಜನಿಗೆ ಹೊಸ ಜನ್ಮವೆ ಬಂದಂತೆ ಆರೋಗ್ಯ ಪಡೆದನು. ಎಲ್ಲರೂ ತಮ್ಮ ಸಂತೋಷಕ್ಕೆ ತಕ್ಕಂತೆ ವೈದ್ಯನಿಗೆ ಉಡುಗೊರೆಗಳನ್ನು ಕೊಟ್ಟರು. ರಾಜನೂ ತನ್ನ ಮಾತಿನಂತೆ ರಾಜ್ಯಾರ್ಧವನ್ನು ನೀಡಿದ. ಕೀರ್ತಿಸೇನೆ ಅದೆಲ್ಲವನ್ನೂ ರಾಜನಿಗೇ ಕೊಟ್ಟು ತಾನೊಂದು ವ್ರತ ಕೈಗೊಂಡಿರುವುದಾಗಿಯೂ ಕೆಲಕಾಲ ಇಲ್ಲೆ ಇರುವುದಾಗಿಯೂ ಹೇಳಿ ಪುರುಷವೇಷದಲ್ಲಿಯೇ ರಹಸ್ಯವಾಗಿ ಕೆಲದಿನಗಳನ್ನು ಕಳೆದಳು. ಅವಳು ಪತಿನಿರೀಕ್ಷೆಯಲ್ಲಿದ್ದುದು ಯಾರ ಅರಿವಿಗೂ ಬರಲಿಲ್ಲ. ಸ್ವಲ್ಪ ದಿನಗಳು ಕಳೆದವು. ಕೀರ್ತಿಸೇನೆಯ ಬದುಕಿನಲ್ಲಿಯೂ ಮೋಡವು ಸರಿದು ಬೆಳಕು ಕಾಣುವ ಕಾಲಬಂದಿತು. ವಲಭೀನಗರದಿಂದ ವ್ಯಾಪಾರಿಗಳ ಗುಂಪು ಬಂದಿದೆಯೆಂದು ಎಲ್ಲೆಲ್ಲೂ ಸುದ್ದಿ ಹರಡಿತು. ವಸುದತ್ತಪುರದಲ್ಲೂ ವ್ಯಾಪಾರ-ವಹಿವಾಟು ಚಿಗುರಿತು. ಹೋಗಿ ನೋಡಿದಳು. ಪತಿ ದೇವಸೇನನೂ ವ್ಯಾಪಾರಿಗಣದಲ್ಲಿದ್ದುದನ್ನು ಕಂಡಾಗ ಮೋಡ ಕಂಡ ಮಯೂರದಂತೆ ಮನ ಗರಿಬಿಚ್ಚಿ ಕುಣಿಯಿತು. ಹೋಗಿ ಪತಿಯ ಪಾದಕ್ಕೆರಗಿ ಆನಂದಾಶ್ರುವಿನಿಂದಲೆ ಅವನ ಪಾದವನ್ನು ತೊಳೆದಳು. ಅವಳ ಸಂತೋಷ, ಸಡಗರ, ಸಂತಾಪಗಳೆಲ್ಲ ಕಣ್ಣೀರಾಗಿ ಹರಿಯಿತು. ಪ್ರಿಯಪತ್ನಿಯನ್ನು ಗುರುತಿಸಿದ ದೇವಸೇನ ಅವಳನ್ನು ಅಲ್ಲಿ ನೋಡಿ ಸ್ತಂಭೀಭೂತನಾದನು. ಅವಳ ಪುರುಷವೇಷದ ಮರ್ಮ ತಿಳಿಯದೆ ಅವಾಕ್ಕಾಗಿ ಹೋದನು. "ಎಲ್ಲ ತಿಳಿಸುತ್ತೇನೆ ನನ್ನೊಡನೆ ಬಾ" ಎಂದು ಕೀರ್ತಿಸೇನೆ ಪತಿಯನ್ನು ಕರೆದುಕೊಂಡು ಅರಮನೆಗೆ ಬಂದಳು. ತನಗೆ ಆರೋಗ್ಯಭಾಗ್ಯ ಕರುಣಿಸಿದ ವೈದ್ಯನೊಡನೆ ಮತ್ತೊಬ್ಬನನ್ನು ನೋಡಿ ರಾಜಾ ವಸುದತ್ತನು ಚಕಿತನಾದನು. ಕೀರ್ತಿಸೇನೆಯು ತನ್ನ ಕಥೆಯನ್ನು ಇಬ್ಬರಿಗೂ ಸವಿಸ್ತರವಾಗಿ ಹೇಳಿದಳು. ಅವಳು ಅತ್ತೆಯ ಕೈಯಲ್ಲಿ ಅನುಭವಿಸಿದ ಕಡುಕಷ್ಟಗಳನ್ನೂ ಕಾಡಿನಲ್ಲಿ ಪಟ್ಟಪಾಡನ್ನೂ ಹೇಳುತ್ತಿದ್ದಂತೆ ಕೇಳಿದವರೆಲ್ಲ ಅವಳ ಧೈರ್ಯ, ಸಾಹಸ, ಸಹಿಷ್ಣುತೆಗಳನ್ನು ಕಂಡು ಮೂಕವಿಸ್ಮಿತರಾದರು. ವಸುದತ್ತ ಮಹಾರಾಜನಂತೂ ಚಿಕ್ಕವಯಸ್ಸಿನ ಈ ರೂಪಸಿಯಲ್ಲಿ ಅದೆಂಥ ಅಗಾಧ ಮನೋದಾರ್ಢ್ಯ ಮನೆಮಾಡಿದೆ ಎಂದು ಆಶ್ಚರ್ಯಪಟ್ಟು, ಕೀರ್ತಿಸೇನೆಯನ್ನು ಕುರಿತು, "ಕೀರ್ತಿಸೇನೆ. ನೀನು ಗಂಡನ ಮೇಲಿನ ಪವಿತ್ರ ಪ್ರೇಮಕ್ಕಾಗಿ ಪಟ್ಟಕಷ್ಟ ಅಷ್ಟಿಷ್ಟಲ್ಲ. ಪತಿವ್ರತೆಯಾದ ಸೀತಾದೇವಿಯನ್ನೂ ಮೀರಿಸಿದ್ದೀಯೆ. ನಿನ್ನ ಬಗೆಗೆ ನನಗೆ ತುಂಬ ಅಭಿಮಾನವುಂಟಾಗುತ್ತಿದೆ. ಇನ್ನು ಮುಂದೆ ನೀನು ನನ್ನ ಪ್ರೀತಿಯ ತಂಗಿಯಾಗಿರು" ಎಂದನು. ರಾಜನು ತೋರಿದ ಅಭಿಮಾನಕ್ಕೆ ಮನದುಂಬಿ ವಂದಿಸುತ್ತ, ಕೀರ್ತಿಸೇನೆ, 'ಅಣ್ಣಾ, ನೀನು ನನಗೆ ನೀಡಿದ ರಾಜ್ಯಾರ್ಧ, ಮುತ್ತುರತ್ನ, ವಾಹನಗಳನ್ನೆಲ್ಲ ನನ್ನ ಪತಿಗೆ ನೀಡು" ಎಂದಾಗ ಸಂತೋಷದಿಂದ ವಸುದತ್ತನು ದೇವಸೇನನಿಗೆ ಎಲ್ಲವನ್ನೂ ಕೊಟ್ಟನು. ಪತ್ನಿಯ ಪುಣ್ಯಫಲವು ತನ್ನನ್ನು ಅರಸಿ ಬಂದದ್ದನ್ನು ಕಂಡು ದೇವಸೇನನು ಸಂತುಷ್ಟನಾಗಿ ಪತ್ನಿಯನ್ನು ಅಭಿನಂದಿಸಿದನು. ಅವಳನ್ನು ತನ್ನ ಪ್ರೀತಿಯ ಪುತ್ಥಳಿ ಎಂದು ಭಾವಿಸಿದನು. ಅತ್ತೆಯ ಕಾಟವನ್ನು ಅನುಭವಿಸಿದ ಕೀರ್ತಿಸೇನೆಯನ್ನು ಮತ್ತೆ ತಮ್ಮ ಊರಿಗೆ ಕರೆದೊಯ್ಯದೆ ವಸುದತ್ತಪುರದಲ್ಲಿಯೆ ಸಕಲಸೌಭಾಗ್ಯಗಳೊಡನೆ ನೆಲೆಸಿದನು. ಅವನ ವ್ಯಾಪಾರ-ವ್ಯವಹಾರವೂ ಅಭಿವೃದ್ಧಿಯಾಗಿ ಕೀರ್ತಿಸೇನೆಯೊಡನೆ ಸುಖದ ಸುಪ್ಪತ್ತಿಗೆಯಲ್ಲಿ ತೇಲಿದನು.

ಅಸುರಪುತ್ರಿ ಸೋಮಪ್ರಭೆಯು ಕಥೆಯನ್ನು ಮುಗಿಸಿ ಗೆಳತಿ ಕಳಿಂಗಸೇನೆಗೆ, "ಸಖಿ, ನಿನಗೆ ಅತ್ತೆ, ನಾದಿನಿಯರ ಕಾಟವಿಲ್ಲದ ಒಳ್ಳೆಮನೆ ದೊರೆಯಲಿ. ಪ್ರೀತಿಸುವ ಗಂಡನೊಡನೆ ಚೆನ್ನಾಗಿ ಬಾಳು" ಎಂದು ಹೇಳುತ್ತ ಮನೆಗೆ ಹೋಗಲು ಸಿದ್ಧಳಾದಳು. ಅದ್ಭುತವಾದ ಘಟನೆಗಳಿಂದ ಕೂಡಿದ ಕಥೆಯನ್ನು ಕೇಳಿ ಕಳಿಂಗಸೇನೆ ಹರ್ಷಿತಳಾಗಿ ಸೋಮಪ್ರಭೆಯನ್ನು ಬೀಳ್ಕೊಟ್ಟಳು.●



13ನೇ ಪುಟದಿಂದ

ಅನಂತರ ರಾಮಾನುಜರು ಪರಾಶರರನ್ನು ಜೊತೆಯಲ್ಲಿ ರಂಗನಾಥನ ಸನ್ನಿಧಿಗೆ ಕೈ ಹಿಡಿದು ಕರೆದೊಯ್ದರು. ಅವರು ಮನಸ್ಸಿನಲ್ಲಿಯೇ ರಂಗನಾಥಸ್ವಾಮಿಗೆ 'ಈ ಪರಾಶರ ಭಟ್ಟರನ್ನು ಗುರು ಯಾಮುನಾಚಾರ್ಯರ ಆಶಯದಂತೆ ವಿದ್ಯೆಗಳನ್ನು ಕಲಿಸಿ ನಾನೇ ಸ್ವತಃ ಬೆಳೆಸಿದ್ದೀನಿ. ಅವರನ್ನು ನಮ್ಮ ಅನಂತರ ಶ್ರೀಮಠದ ಪೀಠಾಧಿಕಾರಿಗಳನ್ನಾಗಿ ನೇಮಿಸಬಯಸುತ್ತೀನಿ. ದಯವಿಟ್ಟು ಅನುಗ್ರಹಿಸಿ ಸ್ವಾಮಿ" ಎಂದು ಪ್ರಾರ್ಥಿಸಿದರು. ಅನಂತರ ಬಳಿಯಲ್ಲಿದ್ದ ಗೋವಿಂದರಿಗೆ "ಪರಾಶರ ಭಟ್ಟರು ನಮ್ಮ ಮುಂದಿನ ಶ್ರೀಮಠದ ಅಧಿಪತಿಗಳು. ಅದಕ್ಕೆ ಬೇಕಾದ ಶಾಸ್ತ್ರಗಳೆಲ್ಲವನ್ನು ಕಲಿಸುವುದು ನಿನ್ನ ಹೊಣೆ" ಎಂದು ಪರಾಶರರನ್ನು ಅವರಿಗೆ ಒಪ್ಪಿಸಿದರು.

ರಾಮಾನುಜರು ಒಂದು ದಿನ ಒಬ್ಬರೇ ಇದ್ದಾಗ ಸಾಲಿಗ್ರಾಮದಲ್ಲಿ ರಾಮಾನುಜರ ಶಿಷ್ಯರಾದ ಆಂಧ್ರಪೂರ್ಣ ಅಥವಾ ವಡುಗ ನಂಬಿ ಅಂದಿನಿಂದ ರಾಮಾನುಜರ ಜೊತೆಯಲ್ಲಿಯೇ ಇರಲಾರಂಭಿಸಿದ್ದರು. ರಾಮಾನುಜರ ಆರಂಭದ ಸಂನ್ಯಾಸಪೂರ್ವ ಜೀವನವನ್ನು ಕುರಿತು ಅವರಿಂದಲೇ ವಿಷಯ ಸಂಗ್ರಹಿಸಲಾರಂಭಿಸಿದರು. ಅದೇಕೆಂದು ರಾಮಾನುಜರು ಕೇಳಲಿಲ್ಲ. ಆಂಧ್ರಪೂರ್ಣರು ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರಿಸಿದರು.

ಆಂಧ್ರಪೂರ್ಣರು ರಾಮಾನುಜರ ಎಲ್ಲ ಬಗೆಯ ಸೇವೆಯನ್ನು ಮಾಡುತ್ತಿದ್ದರು. ಒಂದು ದಿನ ಶ್ರೀರಂಗದಿಂದ ಮೂರು ಹರಿದಾರಿ ದೂರದಲ್ಲಿದ್ದ ತಿರುವಳ್ಳೈರೈ ಎಂಬ ಊರಿಗೆ ರಾಮಾನುಜರ ಜೊತೆ ಹೋದರು. ಗುರುಗಳ ಪೂಜಾ ವಿಗ್ರಹ, ತಿರುಮಣ್‌ಪೆಟ್ಟಿಗೆ ಮತ್ತು ವಸ್ತ್ರಗಳನ್ನು ಇರಿಸಿದ್ದ ಬುಟ್ಟಿಯನ್ನು ತಲೆಯ ಮೇಲೆ ಹೊತ್ತುಕೊಂಡು ಹೊರಟರು. ವಿಶೇಷವೆಂದರೆ ಈ ಪೆಟ್ಟಿಗೆಯ ಮೇಲೆ ಗುರುಗಳ ಪಾದುಕಗಳನ್ನು ಇರಿಸಿದ್ದರು.

ತಿರುವಳ್ಳೈರೈಯಲ್ಲಿ ನದಿಯಲ್ಲಿ ಸ್ನಾನ ಮಾಡಿ ಬಂದ ರಾಮಾನುಜರು ಪವಿತ್ರ ಪೂಜಾ ವಿಗ್ರಹಗಳ ಪೆಟ್ಟಿಗೆಯ ಮೇಲೆ ತಮ್ಮ ಪಾದುಕೆಗಳನ್ನು ಇರಿಸಿದ್ದು ಕಂಡು ಹೌಹಾರಿ "ವಡುಗಾ! ಇದೇನಯ್ಯ ಇಂಥ ಪಾಪ ಕಾರ್ಯ ಮಾಡಿದ್ದೀಯೆ? ನಮ್ಮ ಆರಾಧ್ಯ ದೈವಗಳ ಪೂಜಾ ವಿಗ್ರಹಗಳ ಪೆಟ್ಟಿಗೆಯ ಮೇಲೆ ನನ್ನ ಪಾದುಕೆಗಳನ್ನು ಇರಿಸಿದ್ದೀಯ. ನಿನಗೆ ಬುದ್ಧಿ ಕೆಟ್ಟಿದೆಯೇನಯ್ಯ..." ಎಂದು ಕುಪಿತಗೊಂಡರು.

ಇದಕ್ಕೆ ಆಂಧ್ರಪೂರ್ಣರ ಉತ್ತರವೂ ಅನಿರೀಕ್ಷಿತವಾಗಿತ್ತು, "ಸ್ವಾಮೀ ಎಲ್ಲ ದೇವರೂ ಒಂದೇ ಎನ್ನುವರಲ್ಲ. ನನ್ನ ದೇವರ ಪಾದುಕೆಗಳನ್ನು ಈ ಪೆಟ್ಟಿಗೆಯ ಮೇಲಿರಿಸಿರುವುದು ಹೇಗೆ ತಪ್ಪು." ರಾಮಾನುಜರು, "ಆಂಧ್ರಪೂರ್ಣ! ನಿನಗೆ ನನ್ನ ಮೇಲಿರುವ ಗುರುಭಕ್ತಿಗೆ ನನ್ನ ಮೆಚ್ಚುಗೆ ಇರುವುದಾದರೂ ಈ ಅಕಾರ್ಯಕ್ಕೆ ನಾನು ಅನುಮತಿ ಕೊಡುವುದಿಲ್ಲ. ಪೆಟ್ಟಿಗೆಯಲ್ಲಿರುವುದು ಶ್ರೀಮನ್ನಾರಾಯಣನ ಪೂಜಾ ವಿಗ್ರಹ, ಸಾಲಿಗ್ರಾಮಗಳಲ್ಲವೇ? ಶ್ರೀಮನ್ನಾರಾಯಣ ಎಲ್ಲ ದೇವರುಗಳಿಗಿಂತ ಉನ್ನತ ಸ್ಥಾಯಿಯಲ್ಲಿರುವವನು. ಅವಮಾನಿಸಿದ್ದೀಯ. ಹೀಗಲ್ಲ ನಿನ್ನ ಗುರುಭಕ್ತಿಯನ್ನು ತೋರಿಸುವುದು" ಎಂದು ಆಂಧ್ರಪೂರ್ಣರನ್ನು ಸರಿತಿದ್ದಿದರು.

ಒಂದು ದಿನ ಶ್ರೀ ರಾಮಾನುಜರನ್ನು ಅವರ ಕೋಣೆಯಲ್ಲಿ ಭೇಟಿ ಮಾಡಿದ ಆಂಧ್ರಪೂರ್ಣರು ಒಂದು ಬೇಡಿಕೆಯನ್ನು ಮುಂದಿಟ್ಟಿದ್ದರು. "ಸ್ವಾಮೀ, ನೀವು ಸಾಲಿಗ್ರಾಮಕ್ಕೆ ಬಂದಾಗಿನಿಂದಲೂ ಹಗಲೂ ರಾತ್ರಿ ನಿಮ್ಮ ಜೊತೆಯಲ್ಲಿಯೇ ಇದ್ದೀನಿ. ಇಡೀ ನಿಮ್ಮ ಜೀವನವನ್ನು ಅವಲೋಕಿಸಿದ್ದೀನಿ. ಗೋವಿಂದ ಎಂಬಾರ್, ದಾಶರಥಿ ಮುಂತಾದವರಿಂದ ನನಗೆ ತಿಳಿಯದ ನಿಮ್ಮ ಪೂರ್ವ ಜೀವನದ ವಿಷಯಗಳನ್ನು ಸಂಗ್ರಹಿಸಿಟ್ಟಿದ್ದೀನಿ. ಅವನ್ನೆಲ್ಲ ಸೇರಿಸಿ ನಿಮ್ಮ ಜೀವನವನ್ನು ಬರೆದಿಡಬೇಕೆಂದು ನನಗೆ ಪ್ರೇರಣೆಯಾಗುತ್ತಿದೆ. ಅನುಮತಿ ಕೊಡಬೇಕು."

ರಾಮಾನುಜರ ಮುಂದೆ ಆ ಮೊದಲು ಯಾರೂ ಅಂಥ ಬೇಡಿಕೆಯನ್ನು ಇರಿಸಿರಲಿಲ್ಲ. ಆ ವೇಳೆಗಾಗಲೇ ರಾಮಾನುಜರು ಹಣ್ಣು ಹಣ್ಣು ಮುದುಕರಾಗಿದ್ದರು. "ನನ್ನ ಜೀವನವನ್ನು ಬರೆಯುವೆಯಾ? ಅಂತಹುದೇನಿದೆಯಯ್ಯಾ ನನ್ನ ಜೀವನದಲ್ಲಿ? ನನ್ನದು ಸಂನ್ಯಾಸಿಯ ಜೀವನ. ಜೀವನ ಉಪ್ಪು, ಹುಳಿ, ಖಾರ ಯಾವುದೂ ಇರುವುದಿಲ್ಲ. ಬರೆದರೆ ರಾಜ ಮಹಾರಾಜರ ಬರೆಯಬೇಕು. ಆಗ ನವರಸಭರಿತ ಸಾಹಿತ್ಯ ಅದಾಗುತ್ತದೆ" ಎಂದು ಹಾಸ್ಯದ ಧ್ವನಿಯಲ್ಲಿ ಹೇಳಿದರು.

"ರಾಜ ಮಹಾರಾಜರ ಜೀವನ ಬರೆಯಲು ಅದಕ್ಕಾಗಿಯೇ ನೇಮಕವಾಗಿರುವ ಆಸ್ಥಾನ ಕವಿಗಳಿರುತ್ತಾರೆ. ನಮ್ಮ ಯತಿರಾಜರ ಜೀವನ ಬರೆಯಲು ನಾನು ಇದ್ದೀನಿ. ನಮ್ಮ ಯತಿರಾಜರ ಜೀವನ ಕಥೆ ನಮ್ಮ ಮುಂದಿನ ಪೀಳಿಗೆಗೆ ತಿಳಿಯಬೇಡವೇ?"

ರಾಮಾನುಜರು ನಗುತ್ತಾ, "ಏನು ಬರೆಯುತ್ತೀಯೋ ಬರಿ. ನಿನ್ನಿಷ್ಟ." ಎಂದು ಒಪ್ಪಿಗೆ ನೀಡಿದರು. ಅದರ ಫಲವಾಗಿ 'ಯತಿರಾಜ ವೈಭವಂ' ಎಂಬ ಕಾವ್ಯ ನಿರ್ಮಾಣವಾಗಿ ಮುಂದಿನ ಪೀಳಿಗೆಗಳಿಗೆ ರಾಮಾನುಜರ ಜೀವನ ತಿಳಿಯುವಂತಾಯಿತು.

ರಾಮಾನುಜರು ಜೀವಂತ ಇದ್ದರೂ ಅವರ ಶಕ್ತಿ ಸಂಪೂರ್ಣ ಉಡುಗಿ ಹೋಗಿ ಕೇವಲ ಗಾಳಿಯನ್ನು ಸೇವಿಸಿ ಜೀವಿಸುತ್ತಿದ್ದಾರೋ ಎಂಬ ಸ್ಥಿತಿ ತಲಪಿದ್ದರು.


ಒಂದೊಂದೇ ಹೊಣೆಗಾರಿಕೆಯನ್ನು ಕಳಚಿಕೊಳ್ಳುವ ನಿಟ್ಟಿನಲ್ಲಿದ್ದರು. ಐವತ್ತೇಳು ವರ್ಷದ ಪರಾಶರರನ್ನು ತಮ್ಮ ಉತ್ತರಾಧಿಕಾರಿಯಾಗಿ ನಿಷ್ಕರ್ಷಿಸಿದ ಅನಂತರ ಅವರ ಹೆಗಲ ಮೇಲಿನ ಬಹುದೊಡ್ಡ ಭಾರ ಇಳಿಸಿದಂತಾಗಿತ್ತು.

ಈಗ ಇನ್ನೊಂದು ಸಂಗತಿ ಅವರನ್ನು ಕಾಡುತ್ತಿತ್ತು. ಅದೇ ತಮ್ಮ ಇಡೀ ಜೀವನ ಪರ್ಯಂತ ತಮ್ಮ ಸೇವೆಯಲ್ಲಿಯೇ ತೊಡಗಿದ್ದ ತಮ್ಮ 'ತ್ರಿದಂಡ' ಎಂದು ಅವರಿಂದ ಕರೆಸಿಕೊಳ್ಳುತ್ತಿದ್ದ ತಮ್ಮ ಪೂರ್ವಾಶ್ರಮದ ತಂಗಿಯ ಮಗ ದಾಶರಥಿಯದು.

ಆ ವೇಳೆಗೆ ಚೋಳ ರಾಜ ಮನೆತನದಲ್ಲಿ ಬದಲಾವಣೆಗಳಾಗಿದ್ದವು. ಮೊದಲನೇ ಕುಲೋತ್ತುಂಗ ಚೋಳ ಐವತ್ತೆರಡು ವರ್ಷಗಳ ಆಡಳಿತ ನಡೆಸಿ ವೃದ್ಧಾಪ್ಯ ತಲಪಿದ್ದ. ಅವನ ಕೈಯಲ್ಲಿ ರಾಜ್ಯಾಡಳಿತ ನಡೆಸುವುದು ಕಷ್ಟವಾಗುತ್ತಿತ್ತು. ಆದ್ದರಿಂದ ತನ್ನ ನಾಲ್ಕನೆಯ ಮಗ ವಿಕ್ರಮ ಚೋಳನನ್ನು ಯುವರಾಜನನ್ನಾಗಿ ಮಾಡಿ ಅವನಿಗೆ ರಾಜ್ಯಾಡಳಿತ ನಡೆಸುವ ಶಿಕ್ಷಣವನ್ನು ಕೊಡಿಸಿದ. ಕುಲೋತ್ತುಂಗ ಹೆಸರಿಗೆ ಮಾತ್ರ ರಾಜನಾಗಿ ವಿಕ್ರಮ ಚೋಳನೇ ಆಡಳಿತವನ್ನು ನಡೆಸಲು ಆರಂಭಿಸಿದ್ದ. ಅವನು ತಂದೆಯಂತೆ ಸರ್ವಧರ್ಮ ಸಮಭಾವದ ಮಹಾರಾಜನಾಗಿದ್ದ. 'ವಿಕ್ರಮ ಚೋಳನಿಗೆ ವಯೋವೃದ್ಧರಾದ ಶ್ರೀರಂಗದ ಶ್ರೀವೈಷ್ಣವ ಮಠದ ಮಠಾಧಿಪತಿಗಳಾದ ರಾಮಾನುಜರನ್ನು ಕಂಡು ಆಶೀರ್ವಚನ ಪಡೆಯುವ ಇಚ್ಛೆಯಾಯಿತು.

ವಿಕ್ರಮ ಚೋಳನು ಸಪತ್ನೀಕನಾಗಿ ಪರಿವಾರ ಸಮೇತ ಶ್ರೀರಂಗನಾಥ ಸ್ವಾಮಿಯ ದೇವಸ್ಥಾನಕ್ಕೆ ಬಂದು ದೇವರ ದರ್ಶನ ಪಡೆದು ಅನಂತರ ರಾಮಾನುಜರಿದ್ದ ಶ್ರೀಮಠಕ್ಕೆ ಬಂದ. ಅವರಿಗೆ ಫಲ ಪುಷ್ಪ ತಾಂಬೂಲಾದಿಗಳನ್ನೂ ಅರಮನೆಯ ಖಿಲ್ಲತ್ತುಗಳನ್ನೂ ಸಲ್ಲಿಸಿದ.


(ಮುಂದುವರಿಯುವುದು)



# ಗೀತಾ ಪ್ರವಚನ

■ ಸಂತ ವಿನೋಬಾ ಭಾವೆ.

■ ಕನ್ನಡ ಅನುವಾದ: ಸಿದ್ದವನಹಳ್ಳಿ ಕೃಷ್ಣಶರ್ಮಾ



ಸಂತ ಏಕನಾಥ

## ಪ್ರಯಾಣ ಸಾಧನೆ: ಸಾತತ್ಯ ಯೋಗ

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

ನಾವು ದಿನಚರಿ ಬರೆದರೆ ಉಲ್ಲೇಖಿಸುವುದು ಎರಡು ಮೂರು ಮಹತ್ತ್ವದ ಘಟನೆ ಮಾತ್ರ. ನಿತ್ಯ ಇಂಥ ಸಂಸ್ಕಾರಗಳನ್ನು ಎತ್ತಿಕೊಂಡು ವಾರದ ಸಂಚಯಕ್ಕೆ ತೊಡಗಿದರೆ, ಇವುಗಳಲ್ಲಿ ಹಲವು ಅಳಿಸಿ ಹೋಗಿ ಎಲ್ಲೋ ಕೆಲವು ಉಳಿದುಕೊಳ್ಳಬಹುದು. ಅನಂತರ ಒಂದು ತಿಂಗಳಲ್ಲಿ ನಡೆದುದೇನೆಂದು ಯೋಚಿಸುತ್ತಾ ಹೊರಟರೆ ಕೇವಲ ಕೆಲವು ಮಹತ್ತ್ವದ ಘಟನೆ ಮಾತ್ರ ನೆನಪಿಗೆ ಬಂದಾವು. ಹೀಗೆ ಆರು ತಿಂಗಳು, ಒಂದು ವರ್ಷ, ಐದು ವರ್ಷಗಳಿಗೊಂದು ಬಾರಿ ಯೋಚಿಸಿದರೆ ಕೇವಲ ಕೆಲವು ಮಹತ್ತ್ವದ ಘಟನೆಗಳಿಂದಲೇ ಸಂಸ್ಕಾರವಾಗುವುದು. ಅಸಂಖ್ಯ ಕ್ರಿಯೆ, ಅನಂತ ಜ್ಞಾನ. ಮನಸ್ಸಿನಲ್ಲಿ ಉಳಿದುದು ಮಾತ್ರ ತೀರ ಕೊಂಚ. ಆ ಕರ್ಮ, ಆ ಜ್ಞಾನ ಬಂದವು. ತಮ್ಮ ಕೆಲಸ ತೀರಿಸಿ ಸತ್ತುಹೋದವು. ಆ ಎಲ್ಲ ಕರ್ಮಗಳ ಪರಿಣಾಮವಾಗಿ ಎಂಟು ಹತ್ತು ದೃಢ ಸಂಸ್ಕಾರ ಉಳಿಯುತ್ತವೆ. ಅವೇ ನಮಗೆ ಬಂಡವಾಳ. ಬಾಳಿನ ವ್ಯಾಪಾರದಲ್ಲಿ ದೊರೆಯುವ ಸಂಪತ್ತೆಂದರೆ ಸಂಸ್ಕಾರ. ನಿತ್ಯದ, ತಿಂಗಳಿನ, ವರ್ಷದ ಜಮಾ ಖರ್ಚು ತೆಗೆದು ಇಷ್ಟು ಲಾಭ ಇಷ್ಟು ಹಾನಿ ಎಂದು ವ್ಯಾಪಾರಿ ಲೆಕ್ಕ ಹಾಕುತ್ತಾನೆ. ಬಾಳಿನಲ್ಲೂ ಹಾಗೆ. ಅನೇಕ ಸಂಸ್ಕಾರಗಳನ್ನು ಕೂಡಿಸಿ ಕಳೆದ ಬಳಿಕ ಅತ್ಯಂತ ಸ್ಪಷ್ಟ ಹಾಗೂ ವ್ಯವಸ್ಥಿತವಾದ ಹಲವು ವಿಷಯ ಉಳಿಯುತ್ತವೆ. ಬಾಳಿನ ಕೊನೆಗಾಲದಲ್ಲಿ ಮನುಷ್ಯ ಈ ಉಳಿಕೆಯನ್ನು ನೆನೆಸುತ್ತಾನೆ. ಜನ್ಮದಲ್ಲೆಲ್ಲ ಮಾಡಿದುದೇನೆಂದು ಯೋಚಿಸಿದಾಗ ಅವನಿಗೆ ಎರಡು ಮೂರು ವಿಷಯಗಳಲ್ಲಿ ತಾನು ಮಾಡಿದುದು ಹೊಳೆಯುತ್ತದೆ. ಬೇರೆ ಕರ್ಮ, ಜ್ಞಾನಗಳೆಲ್ಲ ವ್ಯರ್ಥವಾದವೆಂದು ಇದರರ್ಥವಲ್ಲ. ಅವು ತಮ್ಮ ಕೆಲಸ ಮಾಡಿ ಹೋಗಿರುತ್ತವೆ. ಸಾವಿರಾರು ವ್ಯವಹಾರ ಮಾಡಿದರೂ ಕೊನೆಗೆ ವ್ಯಾಪಾರಿಯಲ್ಲಿ ಉಳಿಯುವುದು ಐದು ಸಾವಿರ ಸಾಲ–ಇಲ್ಲ ಹತ್ತು ಸಾವಿರ ಲಾಭ. ಸಾಲವಾದರೆ ಎದೆಗುದಿ; ಲಾಭವಾದರೆ ಸಂತೋಷ.


3. ನಮ್ಮದೂ ಹೀಗೇ. ಮರಣ ಕಾಲದಲ್ಲಿ ತಿಂಡಿಯ ಮೇಲೆ ಮನಸ್ಸಾದರೆ ಬದುಕಿದ್ದಾಗಲೆಲ್ಲ ಅನ್ನದ ರುಚಿ ನೋಡಿದುದು ಸಿದ್ಧವಾಗುತ್ತದೆ. ಅನ್ನದ ವಾಸನೆ ಆ ಬಾಳಿನ ಸಂಪಾದನೆ. ತಾಯಿಗೆ ಸಾಯುವಾಗ ಮಗನ ನೆನಪಾದರೆ ಆ ಪುತ್ರ ವಿಷಯಕ ಸಂಸ್ಕಾರವೆ ಬಲವಾದುದಾಯಿತು. ಇನ್ನುಳಿದ ಅಸಂಖ್ಯ ಕರ್ಮ ಹಾರಿಹೋದಂತೆ. ಅಂಕಗಣಿತದಲ್ಲಿ ಅಪೂರ್ಣಾಂಕದ ಉದಾಹರಣೆ ಇದೆ. ಆ ಅಂಕಗಳು ಎಷ್ಟು ದೊಡ್ಡವು. ಆದರೆ ಸಂಕ್ಷೇಪ ಮಾಡುತ್ತಾ ಮಾಡುತ್ತಾ ಕೊನೆಗೆ, ಒಂದು ಇಲ್ಲವೆ ಕೊನೆಗೆ ಬಲಶಾಲಿಯಾದ ಸಂಸ್ಕಾರವೊಂದು ಸಾರರೂಪವಾಗಿ ಉಳಿಯುತ್ತದೆ. ಬಾಳಿನ ಉದಾಹರಣೆಗೆ ಉತ್ತರ ಅದು. ಅಂತ್ಯಕಾಲದ ಸ್ಮರಣೆ ಅಖಂಡ ಜೀವನದ ಫಲ.

ಬಾಳಿನ ಈ ಕೊನೆಯ ಸಾರ ಮಧುರವಾಗಿರಬೇಕು. ಕೊನೆಯ ಈ ಗಳಿಗೆ ಸವಿಯಾಗಬೇಕು ಎಂದು ಬಾಳಿನ ಅವಧಿಯಲ್ಲೆಲ್ಲ ಪ್ರಯತ್ನಿಸಬೇಕು. ಕೊನೆ ಚೆನ್ನಾದರೆ ಎಲ್ಲವೂ ಚೆನ್ನು, ಆ ಕೊನೆಯ ಉತ್ತರದ ಕಡೆ ಗಮನವಿಟ್ಟು ಬಾಳಿನ ಗಣಿತ ಮಾಡಬೇಕು. ಬಾಳಿನ ಯೋಜನೆಯ ಧ್ಯೇಯ ಕಣ್ಣೆದುರಿಗೆ ಇರಬೇಕು. ಗಣಿತದಲ್ಲಿ ಕೇಳಿದ ವಿಶಿಷ್ಟ ಪ್ರಶ್ನೆಗಳನ್ನು ಮುಂದಿರಿಸಿಕೊಂಡು ಯೋಚಿಸಿ ಉತ್ತರ ಬರೆಯಬೇಕಾಗುತ್ತದೆ. ಮರಣಕಾಲದಲ್ಲಿ ಇಂಥ ಸಂಸ್ಕಾರ ಬೇಕು ಎಂದರೆ ಅದನ್ನು ಸರಿಸಿ ಬಾಳಿನ ಓಘವನ್ನು ಹೊರಳಿಸಬೇಕು. ಆ ಕಡೆ ಹಗಲಿರುಳೂ ಗಮನವಿರಬೇಕು.

### ಸಾವಿನ ಸ್ಮರಣೆ ಇರಲಿ

4. ಮರಣ ಕಾಲದಲ್ಲಿ ಸ್ಪಷ್ಟವಾಗಿ ಉಳಿಯುವ ವಿಚಾರವೇ ಮುಂದಿನ ಜನ್ಮದಲ್ಲಿ ಬಲವತ್ತರವಾಗುವುದೆಂಬ ಸಿದ್ಧಾಂತವನ್ನು ಈ ಎಂಟನೆಯ ಅಧ್ಯಾಯದಲ್ಲಿ ಮಂಡಿಸಿದೆ. ಆ ಸಂಸ್ಕಾರದ ಬುತ್ತಿ ಕಟ್ಟಿಕೊಂಡು ಜೀವ ಮುಂದಿನ ಯಾತ್ರೆಗೆ ಹೊರಡುತ್ತದೆ. ಇಂದಿನ ಸಂಪಾದನೆಯಿಂದ ನಾವು ನಾಳೆಯ ದಿನವನ್ನಾರಂಭಿಸುತ್ತೇವೆ. ಹಾಗೆ ಈ ಬಾಳಿನ ಬುತ್ತಿ ಕಟ್ಟಿಕೊಂಡು ಮರಣದ ಮಹಾ ನಿದ್ರೆಯ ಅನಂತರ ಮತ್ತೆ ನಮ್ಮ ಯಾತ್ರೆ ಮೊದಲಾಗುತ್ತದೆ. ಈ ಜನ್ಮದ ಕೊನೆ, ಮುಂದಿನ ಜನ್ಮದ ಆದಿ. ಎಂತಲೇ ಮರಣದ ನೆನಪಿರಬೇಕು ಯಾವಾಗಲೂ.

5. ಸಾವಿನ ಭೀಕರತೆಗೆ ಎದುರಿಸುವ ಸಿದ್ಧತೆ ಮಾಡಿಕೊಳ್ಳಲು ಸಹ ಮರಣದ ಸ್ಮರಣೆ ಅತ್ಯಗತ್ಯ. ಏಕನಾಥರದೊಂದು ಕತೆ ಹೀಗಿದೆ. ಅವರನ್ನು ಒಬ್ಬ ಗೃಹಸ್ಥ ಮಹಾರಾಜ, ನಿಮ್ಮ ಬಾಳು ಎಷ್ಟು ಸಾದಾ. ಎಷ್ಟು ನಿಷ್ಪಾಪ! ನಮ್ಮದೇಕೆ ಹಾಗಿಲ್ಲ? ನೀವೆಂದೂ ಸಿಟ್ಟು ಮಾಡಿಕೊಳ್ಳುವುದಿಲ್ಲ. ಯಾರೊಂದಿಗೂ ಜಗಳವಿಲ್ಲ. ತಂಟೆಯಿಲ್ಲ. ಎಷ್ಟು ಶಾಂತ, ಪವಿತ್ರ, ಪ್ರೇಮದ ವ್ಯಕ್ತಿ ನೀವು! ಎಂದ. ಅದಕ್ಕೆ ಏಕನಾಥರು 'ನನ್ನ ಮಾತು ಹಾಗಿರಲಿ. ನಿನ್ನ ಬಗ್ಗೆ ನನಗೊಂದು ವಿಚಾರ ತಿಳಿದಿದೆ. ಇನ್ನು ಏಳು ದಿನಗಳ ಅನಂತರ ನೀನು ಸಾಯುತ್ತೀ' ಎಂದರು. ಏಕನಾಥರು ಹೇಳಿದ ಮಾತನ್ನು ಸುಳ್ಳು ಎನ್ನಲಾಗುತ್ತದೆಯೇ? ಏಳು ದಿನಗಳ ಅನಂತರ ಸಾವು. ಇನ್ನುಳಿದುದು ಬರೀ 168 ಗಂಟೆ. ಎಲಲಾ! ಆ ಮನುಷ್ಯ ಗಡಿಬಿಡಿಗೊಂಡು ಮನೆಗೆ ಹೋದ. ಏನೂ ಹೊಳೆಯಲೊಲ್ಲದು. ಹೇಗೋ ಮಾತು. ಹೇಗೋ ವರ್ತನೆ. ಸರಿ, ಕಾಯಿಲೆಯಾಯಿತು. ಹಾಸಿಗೆ ಹಿಡಿದುದೂ ಆಯಿತು. ಆರು ದಿನ ಕಳೆದವು. ಏಳನೆಯ ದಿನ ಏಕನಾಥರು ಬಳಿಗೆ ಬಂದರು. ಆತ ನಮಸ್ಕರಿಸಿದ. 'ಏನು ಸಮಾಚಾರ?' ಎಂದರು ನಾಥರು. ಆತ 'ಹೊರಟೆ ನಾನು' ಎಂದ. 'ಈ ಆರು ದಿನಗಳಲ್ಲಿ ಎಷ್ಟು ಪಾಪಕೃತ್ಯ ನಡೆದವು? ಪಾಪದ ವಿಚಾರ ಎಷ್ಟು ಹೊಳೆದವು?' ಎಂದು ಏಕನಾಥರು ಕೇಳಿದರು. ಆ ಆಸನ್ನ ಮರಣದ ಮನುಷ್ಯ 'ಏಕನಾಥರೆ, ಪಾಪದ ವಿಚಾರ ಮಾಡಲು ಬಿಡುವೆ ಸಿಕ್ಕಲಿಲ್ಲ. ಕಣ್ಣೆದಿರು ಯಾವಾಗಲೂ ಸಾವೇ ಕಟ್ಟಿದಂತಿತ್ತು' ಎಂದ. ಆಗ ಏಕನಾಥರು, 'ನಮ್ಮ ಬಾಳು ಏಕೆ ನಿಷ್ಪಾಪ ಎಂಬುದಕ್ಕೆ ಈಗ ನಿನಗೆ ಉತ್ತರ ದೊರೆಯಿತು ನೋಡು. ಸಾವಿನ ಹುಲಿರಾಯ ಸರ್ವದಾ ಇದಿರಿಗೆ ನಿಂತಾಗ ಪಾಪದ ವಿಚಾರವಾದರೂ ಬಂದೀತೆ? ಪಾಪ ಮಾಡಲೂ ಸಹ ನಿಶ್ಚಿಂತತೆ ಬೇಕು. ಪಾಪದಿಂದ ಪಾರಾಗಲು ಸಾವಿನ ನೆನಪನ್ನು ಸದಾ ಇಟ್ಟುಕೊಂಡಿರುವುದೇ ಶ್ರೇಷ್ಠ ಉಪಾಯ'. ಸಾವು ಇದಿರಿಗೇ ಇದ್ದಾಗ ಯಾವ ಧೈರ್ಯದಿಂದ ಮನುಷ್ಯ ಪಾಪ ಮಾಡಿಯಾನು?



ಮೋಕ್ಷ ಪಡೆದ ಅಜಾಮಿಳ

6. ಆದರೆ ಮನುಷ್ಯ ಸಾವಿನ ಸ್ಮರಣೆಯನ್ನು ದೂರ ತಳ್ಳುತ್ತಿರುತ್ತಾನೆ. ಪ್ಯಾಸ್ಕಲ್ ಒಬ್ಬ ಫ್ರೆಂಚ್ ತತ್ತ್ವಜ್ಞಾನಿ. ಆತ 'ಪಾಂಸೆ' ಎಂಬ ಪುಸ್ತಕ ಬರೆದಿದ್ದಾನೆ. 'ಪಾಂಸೆ' ಎಂದರೆ ವಿಚಾರ. ಅದರಲ್ಲಿ ಬೇರೆ ಬೇರೆ ಸ್ಫುಟ ವಿಚಾರ ಇವೆ. ಒಂದು ಕಡೆ 'ಮೃತ್ಯು ಸದಾ ಬೆನ್ನ ಹಿಂದೆಯೇ ಇದೆ. ಆ ಮೃತ್ಯುವನ್ನು ಹೇಗೆ ಮರೆಯಬೇಕೆಂದು ಮನುಷ್ಯ ಯಾವಾಗಲೂ ಪ್ರಯತ್ನಿಸುತ್ತಿದ್ದಾನೆ. ಸಾವನ್ನು ನೆನಪಿನಲ್ಲಿಟ್ಟುಕೊಂಡು ವರ್ತಿಸುವುದು ಹೇಗೆಂಬುದನ್ನು ಆತ ಯೋಚಿಸುವುದಿಲ್ಲ' ಎಂದು ಆತ ಹೇಳಿದ್ದಾನೆ. ಮರಣವೆಂಬ ಶಬ್ದವೂ ಮನುಷ್ಯನಿಗೆ ರುಚಿಸದು. ಊಟ ನಡೆದಾಗ ಮರಣ ಶಬ್ದವನ್ನು ಉಚ್ಚರಿಸಿದರೆ 'ಎಂಥ ಅಶುಭ ಮಾತು ಆಡುತ್ತೀಯೆ' ಎನ್ನುತ್ತಾರೆ. ಆದರೆ ಹೆಜ್ಜೆಯೇನೋ ಸರ್ವದಾ ಸಾವಿನ ಕಡೆಗೇ. ಬೊಂಬಾಯಿ ಟಿಕೀಟು ತೆಗೆದುಕೊಂಡು ರೈಲಿನಲ್ಲಿ ಕುಳಿತುಕೊಂಡರೆ, ಡಬ್ಬಿಯಲ್ಲಿ ಕುಳಿತೇ ಇದ್ದರೂ ಗಾಡಿ ನಿಮ್ಮನ್ನು ಬೊಂಬಾಯಿಗೆ ತಂದುಹಾಕುತ್ತದೆ. ಹುಟ್ಟಿದಾಗಲೇ ನಾವು ಸಾವಿನ ಟಿಕೀಟು ತೆಗೆದುಕೊಂಡಿರುತ್ತೇವೆ. ಕುಳಿತುಕೊಂಡಿದ್ದರೂ ಸರಿ ಓಡುತ್ತಿದ್ದರೂ ಸರಿ. ಕೊನೆಗೆ ಸಾವು ಕಟ್ಟಿಟ್ಟದ್ದೇ. ಸಾವಿನ ವಿಚಾರ ನಿಮಗಿದ್ದರೂ ಸರಿ ಇಲ್ಲದಿದ್ದರೂ ಸರಿ, ಅದೇನೋ ತಪ್ಪದು. ಮರಣ ನಿಶ್ಚಿತ. ಉಳಿದುದು ಅನಿಶ್ಚಿತವಿದ್ದೀತು. ಸೂರ್ಯ ಮುಳುಗುವಾಗ ಆಯುಷ್ಯದ ಒಂದು ತುಣುಕು ತಿಂದು ಹೋಗುತ್ತಾನೆ. ಬಾಳಿನ ಒಂದು ತುಣುಕು ಮಾಯವಾಗುತ್ತದೆ. ಬಾಳು ಚಿಕ್ಕದಾಗುತ್ತದೆ. ಆದರೆ ಮನುಷ್ಯನಿಗೆ ಆ ವಿಚಾರವಿಲ್ಲ. 'ಕೌತಕ ದಿಸತಸೆ' ಎನ್ನುತ್ತಾರೆ ಜ್ಞಾನದೇವ. ಮನುಷ್ಯನಿಗೆ ಆ ಯೋಚನೆಯನ್ನೆ ಆತ ಬರಗೊಡ. ಕಣ್ಣಿನ ಮೇಲೆ ಪರದೆ ಎಳೆದುಕೊಂಡು ಕೂಡುತ್ತಾನೆ. ಯುದ್ಧಕ್ಕೆ ಹೊರಟ ಸೈನಿಕರು ಸಾವಿನ ವಿಚಾರ ಮರೆಸಲು ಆಡುತ್ತಾರೆ, ಕುಣಿಯುತ್ತಾರೆ, ಸಿಗರೇಟು ಸೇದುತ್ತಾರೆ. 'ಪ್ರತ್ಯಕ್ಷ ಮೃತ್ಯುವೆ ಕಾಣುತ್ತಿದ್ದಾಗ ಸಹ ಈ ಟಾಮಿ, ಈ ಸೈನಿಕ ಅದನ್ನು ಮರೆಯಲಿಕ್ಕಾಗಿ ತಿಂದು ಕುಡಿದು ಮಜಾ ಮಾಡುತ್ತಾ ಕೂತಾನು' ಎನ್ನುತ್ತಾನೆ ಪ್ಯಾಸ್ಕಲ್.

7. ನಾವೆಲ್ಲ ಇರುವುದೂ ಈ ಟಾಮಿಯ ಹಾಗೇ. ಮುಖ ದುಂಡಗೆ ಹಾಸ್ಯಯುಕ್ತವಾಗಿರಬೇಕು. ಒಣಗಿದ್ದಲ್ಲಿ

▶▶ 36ನೇ ಪುಟಕ್ಕೆ



**ಸ್ವಾಮಿ ನಿಮಿಷಾನಂದಜೀಯವರ ಲೇಖನ ಮಾಲೆ ನಮ್ಮ ದೈನಂದಿನ ಜೀವನಗಳನ್ನು, ನಮ್ಮ ಪ್ರಾಚೀನ ಶಾಸ್ತ್ರಗಳನ್ನು ಆಧರಿಸಿ, ಹೇಗೆ ಉತ್ತಮಪಡಿಸಿಕೊಳ್ಳಬಹುದು ಎಂಬುದನ್ನು ತಿಳಿಯಪಡಿಸುವಂತಹವು. ಮರೀಚಿ ಮಹರ್ಷಿಗಳ ಮಕ್ಕಳಾದ ಕಶ್ಯಪರು ಮಾನವ ಧರ್ಮದ ಮೂಲಭೂತ ರಹಸ್ಯ ತತ್ತ್ವಗಳನ್ನು ಕಶ್ಯಪ ಸೂತ್ರಗಳಲ್ಲಿ ವಿವರಿಸಿದ್ದಾರೆ.**

# ಜ್ಞಾನಾಜ್ಞಾನ ದ್ವಂದ್ವಜಂ ಕೋಲಾಹಲಂ

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

ನಾವು ಎಚ್ಚರವಾಗಿದ್ದಾಗ ಆಗುವಂತಹ ಅನುಭವಗಳು ಹೇಗಿರುತ್ತವೆ? ಇದನ್ನು ವಿವರಿಸುವುದು ಕಷ್ಟ. ಏಕೆಂದರೆ ಪ್ರತಿ ದಿನವೂ ನೂರಾರು ರೀತಿಯ ಅನುಭವಗಳನ್ನು ನಾವು ಅನುಭವಿಸುತ್ತೇವೆ. ಒಬ್ಬೊಬ್ಬರ ಅನುಭವ ಒಂದೊಂದು ರೀತಿ ಇರುತ್ತದೆ. ಉದಾಹರಣೆಗೆ, ರೈಲಿನ ಒಂದು ಭೋಗಿಯಲ್ಲಿ ಎಪ್ಪತ್ತೆರಡು ಜನರು ಕುಳಿತಿರಬಹುದು. ಪ್ರತಿಯೊಬ್ಬರಿಗೂ ಆ ಸಮಯದಲ್ಲಿ ಆ ಸ್ಥಿತಿಯಲ್ಲಿ ಮನಸ್ಸಿನಲ್ಲಿ ಹಲವಾರು ರೀತಿ ಅನುಭವಗಳಾಗುತ್ತಿರಬಹುದು. ಒಬ್ಬ ಪ್ರಯಾಣಿಕ ಪ್ರಯಾಣದಿಂದ ಬೇಸತ್ತಿರಬಹುದು, ಮತ್ತೊಬ್ಬನಿಗೆ ನಿದ್ರೆ ಬರುತ್ತಿರಬಹುದು. ಒಬ್ಬ ಸಂತೋಷದಿಂದ ಹಾಡನ್ನು ಗುನುಗುತ್ತಿರಬಹುದು. ಮತ್ತೊಬ್ಬ ಹಸಿದು ತಿಂಡಿಯಾವಾಗ ಬರುವುದೆಂದು ಚಪಲದಿಂದ ಕಾಯುತ್ತಿರಬಹುದು. ಹೀಗೆ ಎಪ್ಪತ್ತೆರಡು ಜನರು ಸಾವಿರಾರು ವಿಧಗಳಲ್ಲಿ ಸಾವಿರಾರು ವಿಷಯಗಳ ಬಗ್ಗೆ ಯೋಚನೆ ಮಾಡುತ್ತಿರಬಹುದು. ಇವರ ವಿವಿಧ ಯೋಚನೆಗಳಿಗೆ, ಭಾವನೆಗಳಿಗೆ, ಅನುಭವಗಳಿಗೆ, ಆ ರೈಲಿನ ಬೋಗಿ, ಅಥವಾ ಅದನ್ನು ಎಳೆಯುತ್ತಿರುವ ಇಂಜಿನ್ನು ಕಾರಣವೇ? ರೈಲಿನ ಈ ಇಂಜಿನ್ ನಮ್ಮ ಆತ್ಮದ ಸಂಕೇತ. ನಮ್ಮ ಆತ್ಮ ಚೈತನ್ಯವೂ ಕೂಡ ನಮ್ಮನ್ನು ಧರ್ಮದ ಕಂಬಿಗಳ ಮೇಲೆ ಜೀವನದ ಯಾತ್ರೆಯಲ್ಲಿ ಕರೆದೊಯ್ಯುತ್ತಿದೆ. ಇದಕ್ಕೆ ಕಶ್ಯಪರು "ಸೃಷ್ಟಿ–ಧರ್ಮೇಣ ಜೀವಯಾತ್ರಾ", ಎಂದು ತಮ್ಮ ಐದನೆಯ ಸೂತ್ರದಲ್ಲಿ ಹೇಳಿದ್ದು. ರೈಲಿನ ಬೋಗಿಯಲ್ಲಿ ಕುಳಿತವರನ್ನು ಇಂಜಿನ್ ಕರೆಯಲಿಲ್ಲ. ಅವರೇ ರೈಲನ್ನು ಹತ್ತಿದರು, ಅವರೇ ತಮ್ಮ ಟಿಕೆಟನ್ನು ಕೊಂಡರು. ಎಲ್ಲಿ ಹತ್ತಬೇಕೆಂದು ನಿಶ್ಚಯಿಸಿದವರೂ ಅವರೇ. ಎಲ್ಲಿ ಇಳಿಯಬೇಕೆಂಬ ನಿರ್ಧಾರವನ್ನು ಮಾಡುವವರೂ ಅವರೇ. ಹಾಗೆಯೇ ನಮ್ಮ ಜೀವನದ ಯಾತ್ರೆಯಲ್ಲೂ ಕೂಡ. ಇಲ್ಲಿಯವರೆಗೂ ಪಡೆದಿರುವಂತಹ ಅನುಭವಗಳೂ ನಮ್ಮ ನಿರ್ಧಾರಗಳಿಂದ, ನಮ್ಮ ಗುರಿಗಳಿಂದ ಹಾಗೂ ನಮ್ಮ ಆಸೆಗಳಿಂದ ಬಂದಿವೆ. ನಮ್ಮ ಇಡೀ ಜೀವನ ಹಲವಾರು ಜನ್ಮಗಳ ಆಸೆಯ ಪ್ರವಾಹ. ಇದಕ್ಕೆ ನಮ್ಮ ಆತ್ಮ ಯಾವ ರೀತಿಯಲ್ಲೂ ಹೊಣೆಯಲ್ಲ. ಪಯಣಿಸುವ ವಾಹನ ಹೇಗೆ ಪ್ರಯಾಣಿಕರ ಆಸೆ, ಆಕಾಂಕ್ಷೆ, ಅನುಭವಗಳಿಗೆ ಹೊಣೆಯಲ್ಲವೋ, ಹಾಗೆಯೇ ನಮ್ಮ ಆತ್ಮವೂ ಕೂಡ, ನಮ್ಮ ಆಸೆಗಳಿಂದ, ಕರ್ಮಗಳಿಂದ ಮೂಡುವಂತಹ ಅನುಭವಗಳಿಗೆ ಹೊಣೆಯಲ್ಲ. ಈ ಅರಿವು ನಮ್ಮನ್ನು ಆತ್ಮಜ್ಞಾನದತ್ತ ಒಯ್ಯುತ್ತದೆ ಎಂದು ಕಶ್ಯಪರು ಖಚಿತವಾಗಿ ಹೇಳುತ್ತಾರೆ.

ಶ್ರೀ ಶಂಕರಾಚಾರ್ಯರು ಇದನ್ನೇ ಇನ್ನೊಂದು ರೀತಿಯಲ್ಲಿ ತಿಳಿಸಿದ್ದಾರೆ. ಸಂಜೆಯ ಮಬ್ಬಿನಲ್ಲಿ ನಡೆಯುತ್ತಿದ್ದಾಗ ದಾರಿಯಲ್ಲಿ ಬಿದ್ದಿರುವ ಹಗ್ಗವನ್ನು ನೋಡಿ ಹಾವು ಎಂದು ಗಾಬರಿಗೊಳ್ಳುತ್ತೇವೆ. ಬೆಳಕನ್ನು ಬಿಟ್ಟಾಗ ಮಾತ್ರ ನಮಗೆ ಅರಿವಾಗುತ್ತದೆ ಅದು ಹಾವಲ್ಲ ಹಗ್ಗವೆಂದು. ಹಾಗೆಯೇ ಜೀವನದಲ್ಲೂ ಕೂಡ ನಮ್ಮನ್ನು ದ್ವಂದ್ವದಿಂದ ಬಿಡಿಸಲು ಜ್ಞಾನದ ಬೆಳಕು ಅತ್ಯಾವಶ್ಯಕ. ಇದು ಸದಾ ನಮಗೆ ಬೇಕೆ ಬೇಕು. ಜ್ಞಾನದ ಬೆಳಕಿದ್ದರೆ ನಮ್ಮ ಯೋಚನೆಗಳು ಸ್ಪಷ್ಟವಾಗಿ ಮೂಡಿಬರುತ್ತವೆ. ಮನಸ್ಸು ತಿಳಿಯಾಗಿದ್ದರೆ, ಪ್ರತಿಯೊಂದೂ ಸ್ಪಷ್ಟವಾಗಿ ಗೋಚರವಾಗುತ್ತದೆ. ನಮ್ಮ ಮನಸ್ಸು ದ್ವಂದ್ವದಿಂದ ಕದಡಿದಾಗ ಕೋಲಾಹಲವೇ ಪರಿಣಾಮ. ಕೋಲಾಹಲವಿರುವ ಕಡೆ ಸಂತೋಷ, ನೆಮ್ಮದಿ ಇರಲು ಸಾಧ್ಯವಿಲ್ಲ. ಮನಸ್ಸಿನ ಗದ್ದಲವಿರುವ ಕಡೆ ಮನಃಶಾಂತಿ ಇರಲು ಸಾಧ್ಯವಿಲ್ಲ. ನಮ್ಮ ಮನಸ್ಸು ಒತ್ತಡಕ್ಕೆ ಒಳಗಾದಾಗ ಒಂದೇ ಸುರುಳಿಯಲ್ಲಿ ಸುತ್ತುತ್ತಿರುತ್ತದೆ. ನಾನು ತೆಗೆದುಕೊಂಡಿರುವ ನಿರ್ಧಾರ ಸರಿಯೇ? ತಪ್ಪೇ? ನಾನು ಈ ಕೆಲಸವನ್ನು ಒಪ್ಪಿಕೊಳ್ಳುವುದು ಸೂಕ್ತವೋ? ಇಲ್ಲವೋ? ಈ ಕಾರ್ಯವನ್ನು ಸಾಧಿಸಲು ನನ್ನಿಂದ ಸಾಧ್ಯವೋ ಇಲ್ಲವೋ? ಇತ್ಯಾದಿ ಪ್ರಶ್ನೆಗಳನ್ನೇ ಕುರಿತು ಯಾವ ನಿರ್ಧಾರಕ್ಕೂ ಬರದೆ ಪದೇ ಪದೇ ಚಿಂತಿಸುತ್ತಿರುತ್ತದೆ. ನಿರ್ಧಾರವನ್ನೇ ತೆಗೆದುಕೊಳ್ಳಲಾಗದೆ ಒಂದು ತಟಸ್ಥ ಸ್ಥಿತಿಗೆ ಬಂದು ನಿಲ್ಲುತ್ತದೆ. ಇದಕ್ಕೆ ಈ ಕಥೆ ಒಂದು ಒಳ್ಳೆಯ ಉದಾಹರಣೆ–ಸಾವಿರ ಕಾಲು ಝರಿ ಕಾಡಿನಲ್ಲಿ ಹರಿದು ಹೋಗುತ್ತಿದ್ದಾಗ ಅದನ್ನು ಕಂಡ ಕಪ್ಪೆ ಕುತೂಹಲದಿಂದ ಕೇಳಿತು, "ನಿನಗೆ ಸಾವಿರ ಕಾಲಿದೆಯಲ್ಲ. ನಡೆಯುವಾಗ ಮೊಟ್ಟ ಮೊದಲು ನೀನು ಯಾವ ಕಾಲನ್ನು ಮುಂದಿಡುತ್ತೀಯಾ?" ಎಂದು. ಆಗ, ಝರಿಯು ಯೋಚನೆ ಮಾಡಿ ಹೇಳಿತು, "ಕಪ್ಪೆ! ನಿಜ ಹೇಳುವುದಾದರೆ ನಾನು ಇದರ ಬಗ್ಗೆ ಯೋಚಿಸಿಯೇ ಇರಲಿಲ್ಲ, ಈಗ ಗಮನಿಸಿ ನಿನಗೆ ಹೇಳುತ್ತೇನೆ," ಎಂದು ಝರಿಯು ತನ್ನ ನಡಿಗೆಯನ್ನು ತಾನೇ ಗಮನಿಸಲಾರಂಭಿಸಿತು. "ನಾನು ಮೊದಲು ಎಡಗಾಲನ್ನು ಇಡುತ್ತಿದ್ದೇನೋ ಅಥವಾ ಬಲಗಾಲನ್ನು ಇಡುತ್ತಿದ್ದೇನೋ, ಮುಂದಿನ ಕಾಲಿಟ್ಟ ಅನಂತರ ಹಿಂದಿನ ಕಾಲನ್ನು ಮುಂದಕ್ಕೆ ತರುವೆನೋ ಅಥವಾ ಹಿಂದಿನ ಕಾಲಿನಿಂದ ಮುಂದಿನ ಕಾಲನ್ನು ತಳ್ಳುತ್ತಿರುವೆನೋ...! ಹೀಗೆ ಎಷ್ಟು ಗಮನಿಸಿದರೂ ಝರಿಗೆ ಒಂದೂ ಸ್ಪಷ್ಟವಾಗಿ ಅರ್ಥವಾಗಲಿಲ್ಲ. ದ್ವಂದ್ವದಲ್ಲಿ ಸಿಲುಕಿ ಉತ್ತರವೇ ಸಿಗದೆ ನಡೆಯುವುದನ್ನೇ ಬಿಟ್ಟು ಇದ್ದಲ್ಲೇ ಕುಳಿತುಬಿಟ್ಟಿತು. ನಮ್ಮ ಮನಸ್ಸು ಕೂಡ ದ್ವಂದ್ವದಲ್ಲಿ ಸಿಲುಕಿದಾಗ ಸ್ಪಷ್ಟತೆಯನ್ನು ಕಳೆದುಕೊಂಡು ತಟಸ್ಥವಾಗುತ್ತದೆ.

ಜೀವನದಲ್ಲಿ ನಮ್ಮ ಗುರಿಗಳನ್ನು ಸ್ಪಷ್ಟವಾಗಿ ನಿರ್ಧರಿಸಬೇಕಾದರೆ, ಜೀವನದ ಉದ್ದೇಶವನ್ನು ಅರಿತಿರಬೇಕು, ಇದನ್ನು ಅರಿತಾಗ ಜ್ಞಾನದ ಬೆಳಕು ಮೂಡಿ ಮನಸ್ಸು ದ್ವಂದ್ವವಿಲ್ಲದೆ ತಿಳಿಯಾಗಿರುತ್ತದೆ. ಜೀವನದಲ್ಲಿ ನಮ್ಮ ಗುರಿ ಸ್ಪಷ್ಟವಾಗಿಲ್ಲದಿದ್ದರೆ, ಮನಸ್ಸು ಅಜ್ಞಾನದ ಕತ್ತಲೆಯಲ್ಲಿ ಮುಳುಗಿ ಪದೇ ಪದೇ ದ್ವಂದ್ವದಲ್ಲಿ ಸಿಲುಕುತ್ತದೆ. ಹೀಗೆ ನಮ್ಮೊಳಗೆ ಸದಾ ಕಾಲ ಜ್ಞಾನಕ್ಕೂ, ಅಜ್ಞಾನಕ್ಕೂ ಹೋರಾಟ ನಡೆದಿದೆ. ಇದರಿಂದ ನಮ್ಮ ಯೋಚನೆಗಳನ್ನು ಸರಿಯಾಗಿ ಧರ್ಮದೊಂದಿಗೆ ಬೆಸುಗೆಗೊಳಿಸಲಾಗುತ್ತಿಲ್ಲ. ಸರಿಯಾದ ರೀತಿಯಲ್ಲಿ ಯೋಚಿಸಲು ನಮಗೆ ಬರುತ್ತಿಲ್ಲ. ಸರಿಯಾಗಿ ಯೋಚಿಸದಿದ್ದಲ್ಲಿ ಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಲು ಸಾಧ್ಯವಾಗುವುದಿಲ್ಲ, ಏಕೆಂದರೆ ಪ್ರತಿಯೊಂದು ಕಾರ್ಯವೂ ಹುಟ್ಟುವುದು ಒಂದು ಯೋಚನೆಯಿಂದಲೇ, ಪ್ರತಿಯೊಂದು ಯೋಚನೆ ಹುಟ್ಟುವುದು ಈ ಎರಡರಿಂದಲೇ ಜ್ಞಾನ ಅಥವಾ ಅಜ್ಞಾನ. ಜ್ಞಾನದಿಂದ ಬರುವ ಚಿಂತನೆ ಅರಿವಿನ ಬೆಳಕನ್ನು ಚೆಲ್ಲಿ ದ್ವಂದ್ವವನ್ನು ತೆಗೆಯುತ್ತದೆ. ಅಜ್ಞಾನದಿಂದ ಬರುವ ಯೋಚನೆ ಹೆಚ್ಚು ಹೆಚ್ಚು ದ್ವಂದ್ವವನ್ನು ಉಂಟುಮಾಡಿ ನಮ್ಮನ್ನು ಕತ್ತಲೆಯಲ್ಲೇ ಬಂಧಿಸುತ್ತದೆ. ಆದ್ದರಿಂದ ಕಶ್ಯಪರು ಹೇಳುತ್ತಾರೆ ಜ್ಞಾನ, ಅಜ್ಞಾನಗಳಿಗೆ ನಡೆಯುವ ಹೋರಾಟದಿಂದ ದ್ವಂದ್ವ ಉಂಟಾಗಿ, ಈ ದ್ವಂದ್ವವು ನಮ್ಮನ್ನು ಕೋಲಾಹಲದಲ್ಲಿ ತಳ್ಳುತ್ತದೆ. ನಮ್ಮ ಮನಸ್ಸು ಹಾಗೂ ಬುದ್ಧಿ ಸದಾ ಯೋಚನೆಗಳನ್ನು ಉತ್ಪತ್ತಿ ಮಾಡುತ್ತಲೇ ಇರುತ್ತವೆ. ನಾವು ಎಷ್ಟೆಷ್ಟು ಯೋಚನೆಯಲ್ಲಿ ತೊಡಗಿರುತ್ತೇವೆಯೋ ಅಷ್ಟಷ್ಟು ದ್ವಂದ್ವವನ್ನು ಅನುಭವಿಸುತ್ತೇವೆ.

ಮನಸ್ಸು ಯೋಚಿಸುವುದನ್ನು ನಿಲ್ಲಿಸಿ ಮೌನವನ್ನು ತಳೆದಾಗ ಆತ್ಮಾನಂದವನ್ನು ಅನುಭವಿಸುತ್ತೇವೆ. ಉದಾಹರಣೆಗೆ ಹಳ್ಳಿಯಲ್ಲಿ ಒಬ್ಬ ಕುರಿ ಕಾಯುವವನು ಕುರಿಯನ್ನು ಮೇಯಿಸುತ್ತಿದ್ದಾಗ ಪ್ರಪಂಚವನ್ನೇ ಮರೆತು ತನ್ನ ಪಾಡಿಗೆ ತಾನು ಹಾಡು ಹೇಳುತ್ತಿರುತ್ತಾನೆ ಈ ಸಮಯದಲ್ಲಿ ಅವನ ಮನಸ್ಸಿಗೆ ಅನಾವಶ್ಯಕವಾದ ಯೋಚನೆಗಳು ಬರುವುದೇ ಇಲ್ಲ. ಆದ್ದರಿಂದ ಅವನ ಮನಸ್ಸು ಹಗುರವಾಗಿ, ತಿಳಿಯಾಗಿ, ಪರಿಶುದ್ಧವಾಗಿರುತ್ತದೆ. ಒಂದೆರಡು ಕುರಿಗಳು ಕುರಿಹಿಂಡನ್ನು ಬಿಟ್ಟು ಅತ್ತಿತ್ತ ಚಲಿಸಿದಾಗ ಅವನ ಮನಸ್ಸಿನಲ್ಲಿ ದ್ವಂದ್ವ ಉಂಟಾಗುತ್ತದೆ. ಆಗ ಅವನು ಹಾಡುವುದನ್ನು ನಿಲ್ಲಿಸಿ, ಆ ಕುರಿಗಳನ್ನು ಮತ್ತೆ ಕುರಿ ಹಿಂಡಿಗೆ ಸೇರಿಸುತ್ತಾನೆ, ಇದಾದ ಅನಂತರ ತಿಳಿಯಾದ ಮನಸ್ಸಿನಿಂದ ಪುನಃ ಆನಂದದಿಂದ ತನ್ನ ಹಾಡನ್ನು ಮುಂದುವರಿಸುತ್ತಾನೆ. ಅವನ ಮನಸ್ಸು ಹಾಗೂ ಜೀವನ ಅತೀ ಸರಳ ಹಾಗೂ ಸಹಜ, ಸಾಧಾರಣವಾಗಿ ವಿದ್ಯಾಭ್ಯಾಸ ಪಡೆದವರು ಹೆಚ್ಚು ಯೋಚಿಸುತ್ತಾರೆ. ಹಾಗೂ ಹೆಚ್ಚು ದ್ವಂದ್ವಗಳಿಗೆ ಒಳಗಾಗುತ್ತಾರೆ. ಅಲ್ಪ ವಿದ್ಯೆ ಹೊಂದಿದವರು ನನಗೆ ಇರುವ ವಿದ್ಯೆ ಸಾಲದು, ನಾನು ಇನ್ನೂ ಮುಂದೆ ಓದಿ ಹೆಚ್ಚು ವಿದ್ಯೆಯನ್ನು ಪಡೆಯಬೇಕು ಎಂಬ ದ್ವಂದ್ವದಲ್ಲಿ ಜೀವಿಸುತ್ತಾರೆ. ಬಹಳ ಪದವಿಗಳನ್ನು ಪಡೆದವರು ತನ್ನ ಅರ್ಹತೆಗೆ ತಕ್ಕ ಹುದ್ದೆಯೇ ಇಲ್ಲ ಎಂದು ಕೊರಗುತ್ತಾರೆ. ಇಬ್ಬರಿಗೂ ಸಹ ತಮ್ಮ ತಮ್ಮ ವೃತ್ತಿಯಲ್ಲಿ ತೃಪ್ತಿ ಇರುವುದಿಲ್ಲ. ಆದರೆ ಈ ಕುರಿ ಕಾಯುವವನು ವಿದ್ಯಾಭ್ಯಾಸವಿಲ್ಲದಿದ್ದರೂ ತನ್ನ ವೃತ್ತಿಯಲ್ಲಿ ಹಾಗೂ ಜೀವನದಲ್ಲಿ ಸಂಪೂರ್ಣ ತೃಪ್ತಿಯನ್ನು ಕಂಡುಕೊಂಡಿದ್ದ. ಇದಕ್ಕಾಗಿಯೇ, "ಅಜ್ಞಾನವೆಂದರೆ ಆನಂದ" ಎಂದು ಕೆಲವು ಬಾರಿ ನಾವು ಹೇಳುವುದು. ಇಲ್ಲಿ, ಅಜ್ಞಾನವೆಂದರೆ ಚಿಂತನಾರಹಿತ ಸ್ಥಿತಿ ಎಂದು ನಾವು ಅರ್ಥಮಾಡಿಕೊಳ್ಳಬೇಕು.

ಈಗ ತಾನೇ ನಾವು ಕಂಡಂತೆ ತೃಪ್ತಿ ಮತ್ತು ಆನಂದ ಜೀವನದಲ್ಲಿ ಬಹಳ ಮುಖ್ಯ, ಶಾಶ್ವತವಾದ ಆನಂದಕ್ಕೆ ಏನು ನಾವು ಆತ್ಮಾನಂದವೆಂದು ಕರೆಯುತ್ತೇವೆ. ನಾವೆಲ್ಲರೂ ಈ ಸ್ಥಿತಿಯನ್ನು ಹಲವು ಬಾರಿ ಅನುಭವಿಸಿಯೂ ಇದ್ದೇವೆ. ಈ ಆತ್ಮಾನಂದವನ್ನು ಪಡೆಯಲು ಹಲವಾರು ಮಾರ್ಗಗಳಿವೆ. ಪ್ರತಿಯೊಬ್ಬ ವ್ಯಕ್ತಿಯೂ ಒಂದೊಂದು ಮಾಧ್ಯಮದ ಮೂಲಕ ಆನಂದವನ್ನು ಅನುಭವಿಸುತ್ತಿರಬಹುದು. ಕೆಲವರು ಸಂಗೀತ ಅಥವಾ ಭಜನೆ ಹಾಡುವುದರಿಂದ ಅಥವಾ ಕೇಳುವುದರಿಂದ, ಇನ್ನೂ ಕೆಲವರು ದೇವಾಲಯ, ಆಶ್ರಮ, ಸತ್ಸಂಗಗಳಿಗೆ ಹೋಗುವುದರಿಂದ, ಮತ್ತೆ ಕೆಲವರು ಅಡುಗೆ ಮಾಡುವುದರಿಂದ ಅಥವಾ ತಮ್ಮ ವೃತ್ತಿಯನ್ನು ಪಾಲಿಸುವುದರಿಂದ, ಆಂತರ್ಯದ ಆನಂದವನ್ನು ಸವಿಯುತ್ತಿರಬಹುದು. ಕೆಲವೊಮ್ಮೆ ಯಾವುದೋ ಒಂದು ಸಂದರ್ಭ, ಘಟನೆ, ಸ್ಫೂರ್ತಿದಾಯಕ ವ್ಯಕ್ತಿ ಅಥವಾ ಒಂದು ವಾಕ್ಯದಿಂದಲೂ ಕೂಡ ಈ ಆನಂದದ ಸ್ಪರ್ಶ ಮಾಡುತ್ತೇವೆ. ಹೀಗಾದಾಗ, ನಾವೂ ಆನಂದಿಸುತ್ತೇವೆ. ನಮ್ಮ ಆತ್ಮವೂ ಆನಂದದಲ್ಲಿ ಮುಳುಗಿ ನಮ್ಮ ದೇಹ, ಮನಸ್ಸನ್ನು ಸಂಪೂರ್ಣ ಮರೆಯುತ್ತೇವೆ. ನಮ್ಮನ್ನು ಯಾವ ಮಾಧ್ಯಮ ಈ ಸ್ಥಿತಿಗೆ ಕರೆದೊಯ್ಯುತ್ತದೋ ಅದೇ ಆತ್ಮ ಚೈತನ್ಯ. ನಮ್ಮ ಜೀವನದಲ್ಲಿ ಇಂತಹ ಆನಂದ ನೀಡುವ ಅಂಶಗಳನ್ನು ನಾವು ಹೆಚ್ಚು ಹೆಚ್ಚು ಬೆಳೆಸಿಕೊಂಡು ವಿಸ್ತರಿಸಿಕೊಳ್ಳಬೇಕು. ಆಗ ನಾವು ಸದಾ ಆತ್ಮಾನಂದದ ಅಲೆಗಳಲ್ಲಿ ಮುಳುಗಿ, ತೇಲಿ, ಕರಗುತ್ತೇವೆ. ಆದರೆ ನಾವು ಮೈಮರೆಯುವುದಕ್ಕಾಗಿ, ಅಮಲು ತರುವ ಪದಾರ್ಥಗಳನ್ನು ಎಂದೂ ಉಪಯೋಗಿಸಬಾರದು. ಆತ್ಮಾನಂದ ಅಂತರ್ಮೌನವನ್ನು ತಂದುಕೊಡುತ್ತದೆ. ಆದರೆ ಅಮಲುಗಳು ನಮ್ಮ ನಾಲಗೆಗೆ ಹಾಗೂ ಮನಸ್ಸಿಗೆ ಲಗಾಮ್ ಇಲ್ಲದಂತೆ ಮಾಡುತ್ತದೆ. ಅಂತೆಯೇ ಇತರರ ಪ್ರಶಂಸೆಯಿಂದ ನಮ್ಮ ಅಹಂಕಾರವು ಹಿಗ್ಗಿದಾಗ ಅನುಭವಿಸುವ ಆನಂದವೂ ಕೂಡ ಆತ್ಮಾನಂದವಲ್ಲ. ಮನಸ್ಸಿನಿಂದ, ಇಂದ್ರಿಯಗಳಿಂದ, ಅಮಲುಗಳಿಂದ ಮತ್ತು ಅಹಂಕಾರದಿಂದ ಸಿಗುವಂತಹ ಅಲ್ಪ ಆನಂದ ಯಾವುದೂ ಕೂಡ ಆತ್ಮಾನಂದವಲ್ಲ ಎಂದು ಕಶ್ಯಪರು ಹೇಳುತ್ತಾರೆ.

**(ಮುಂದುವರಿಯುವುದು)**

**ಶ್ರೀ ನಿಮಿಷಾಂಬಾ ಆಶ್ರಮ, ನಂ. ೭೩, ೪ನೇ ಕ್ರಾಸ್, ಕಾನ್‌ಕಾರ್ಡ್ ಗಾರ್ಡನ್ ಸಿಟಿ ಲೇಔಟ್, ಆರ್.ವಿ. ಕಾಲೇಜು ಅಂಚೆ, ಬೆಂಗಳೂರು–೫೬೦ ೦೫೯.**

▶▶ 33ನೇ ಪುಟದಿಂದ

ಎಣ್ಣೆ, ಪೋಮೇಡ್ ಹಚ್ಚಬೇಕು. ಕೂದಲು ನರೆತಿದ್ದಲ್ಲಿ ಬಣ್ಣ ಹಚ್ಚಬೇಕು ಎಂದು ಮನುಷ್ಯ ಪ್ರಯತ್ನಿಸುತ್ತಾನೆ. ಎದೆಯ ಮೇಲೆ ಸಾವಿನ ನರ್ತನ ನಡೆದಾಗಲು ಸಹ ನಾವೆಲ್ಲ ಟಾಮಿಗಳಂತೆ ಅದನ್ನು ಮರೆಯಲು ಯತ್ನಿಸುತ್ತೇವೆ. ಏನು ಬೇಕಾದರೂ ಮಾತನಾಡಬಹುದು. ಸಾವಿನ ವಿಚಾರ ಮಾತ್ರ ತೆಗೆಯುವಂತಿಲ್ಲ. ಮೆಟ್ರಿಕ್ ಆದ ಹುಡುಗನನ್ನು 'ಮುಂದೇನು ಮಾಡುತ್ತೀಯೆ' ಎಂದು ಕೇಳಿದರೆ ಆತ 'ಸದ್ಯ ಕೇಳಬೇಡಿ. ಈಗ ಫಸ್ಟ್ ಇಯರ್‌ನಲ್ಲಿದ್ದೇನೆ' ಎನ್ನುತ್ತಾನೆ. ಮುಂದಿನ ವರ್ಷ ಮತ್ತೆ ಅವನನ್ನೆ ಅದೇ ಪ್ರಶ್ನೆ ಕೇಳಿದರೆ 'ಮೊದಲು ಇಂಟರ್ ಆದರೂ ಆಗಲಪ್ಪ! ಮುಂದೆ ಯೋಚಿಸೋಣ' ಎನ್ನುತ್ತಾನೆ. ಹೀಗೆ, ಮುಂದಿನದನ್ನು ಮೊದಲೇ ನೋಡಿಕೊಂಡಿರಬೇಡವೆ? ಮುಂದಿನ ಹೆಜ್ಜೆಯ ಸಿದ್ಧತೆ ಮೊದಲೆ ಇರಬೇಕು. ಇಲ್ಲವಾದರೆ ಅದು ತಗ್ಗಿಗೆ ಬೀಳಿಸೀತು. ಆದರೆ ವಿದ್ಯಾರ್ಥಿಗೆ ಅದೆಲ್ಲ ರುಚಿಸದು. ಪಾಪ ಅವನ ಶಿಕ್ಷಣವೇ ಅಂಧಕಾರಮಯ. ಅದರಾಚೆಯ ಭವಿಷ್ಯ ಅವನಿಗೆ ಅಗೋಚರ. ಆದುದರಿಂದ ಮುಂದೇನು ಮಾಡಬೇಕೆಂಬ ವಿಚಾರವನ್ನೇ ಆತ ಬಿಡುತ್ತಾನೆ ಮುಂದೆ ಬರೀ ಕತ್ತಲೆ. ಆದರೆ ಮುಂದೆ ಬರುವುದೇನೋ ತಪ್ಪದು. ಹಠಾತ್ತಾಗಿ ಅದು ಇದುರಿಗೆ ಬರುತ್ತದೆ.

8. ಕಾಲೇಜಿನಲ್ಲಿ ಪ್ರೊಫೆಸರು ತರ್ಕಶಾಸ್ತ್ರ ಕಲಿಸುತ್ತಿದ್ದಾರೆ. 'ಮನುಷ್ಯ ಮರ್ತ್ಯ. ಸಾಕ್ರೆಟೀಸ್ ಮನುಷ್ಯ ಅರ್ಥಾತ್ ಆತ ಸಾಯುತ್ತಾನೆ. ಸಾಕ್ರೆಟೀಸ್‌ನ ದೃಷ್ಟಾಂತವನ್ನೇ ಏಕೆ ಕೊಡಬೇಕು ಅವರು ತಮ್ಮ ಉದಾಹರಣೆಯನ್ನೇಕೆ ಕೊಡುವುದಿಲ್ಲ? ಪ್ರೊಫೆಸರರೂ ಮರ್ತ್ಯರೇ. ಎಲ್ಲ ಮನುಷ್ಯರೂ ಮರ್ತ್ಯರೇ. ಆದುದರಿಂದ ಪ್ರೊಫೆಸರಾದ ನಾನು ಮರ್ತ್ಯನೇ, ಶಿಷ್ಯರಾದ ನೀವೂ ಮರ್ತ್ಯರೇ' ಎಂದು ಹೇಳಲಾರರು. ಮರಣವನ್ನವರು ಸಾಕ್ರೆಟೀಸನ ಮೇಲೆ ತಳ್ಳಿಬಿಡುತ್ತಾರೆ. ಕಾರಣವಿಷ್ಟೆ. ಸಾಕ್ರೆಟೀಸ್ ಸತ್ತೇ ಹೋಗಿದ್ದಾನೆ. ದೂರು ಎತ್ತಲು ಆತ ಇಲ್ಲಿ ಇಲ್ಲ. ಸಾಕ್ರೆಟೀಸನಿಗೆ ಸಾವನ್ನರ್ಪಿಸಿ ಗುರುಶಿಷ್ಯರು ತಮ್ಮ ಮಟ್ಟಿಗೆ ತಾವು ಬಹಳ ಸುರಕ್ಷಿತವೆಂದು ಕಲ್ಪಿಸಿಕೊಳ್ಳುತ್ತಾರೆ.

9. ಸಾವನ್ನು ಮರೆತುಬಿಡುವ ಈ ಪ್ರಯತ್ನ ಎಲ್ಲೆಲ್ಲೂ ಹಗಲಿರುಳೂ ನಡೆದಿದೆ. ಆದರೂ ಸಾವು ತಪ್ಪದು. ನಾಳೆ ತಾಯಿ ಸತ್ತಾಗ ಮೃತ್ಯು ಎದುರಿಗೇ ನಿಲ್ಲುತ್ತದೆ. ನಿರ್ಭಯವಾಗಿ ಮರಣದ ವಿಚಾರ ಮಾಡಿ ಅದನ್ನೆದುರಿಸುವ ಧೈರ್ಯ ಮನುಷ್ಯನಿಗಿಲ್ಲ. ಹರಿಣಿಯ ಬೆನ್ನ ಹಿಂದೆ ಹುಲಿ ಧಾವಿಸುತ್ತದೆ. ಹರಿಣಿಯೇನೋ ಅತಿ ಚುರುಕು. ಆದರೆ ಶಕ್ತಿ ಕಡಮೆ. ಕೊನೆಗೆ ದಣಿದುಹೋಗುತ್ತದೆ. ಬೆನ್ನ ಹಿಂದೆಯೇ ಹುಲಿ–ಸಾವು. ಆಗ ಹರಿಣಿಯ ಸ್ಥಿತಿ ಏನು? ಹುಲಿಯ ಕಡೆ ಅದು ನೋಡಲಾರದು. ಮುಖ, ಕೊಂಬುಗಳನ್ನು ಮಣ್ಣಿನಲ್ಲಿ ಸೇರಿಸಿ ಕಣ್ಣುಮುಚ್ಚಿ ನಿಂತುಕೊಳ್ಳುತ್ತದೆ. 'ಬಾ ಅಪ್ಪ ಹೊಡೆದುಬಿಡು' ಎಂದು ನಿರಾಧಾರವಾಗಿ ಹೇಳುವಂತಿರುತ್ತದೆ. ನಾವು ಸಾವನ್ನು ಎದುರಿಸಲಾರೆವು. ಅದನ್ನು ತಪ್ಪಿಸಬೇಕೆಂದು ಎಷ್ಟು ಉಪಾಯ ಹೂಡಿದರೂ ಅದರ ಶಕ್ತಿ ಬಲವಾದುದರಿಂದ ಕೊನೆಗೂ ಅದು ಬಂದೇ ಬರುತ್ತದೆ.



ಅಭಿಷೇಕ ಪ್ರಿಯ ಶಿವ

10. ಸಾವು ಬಂದಾಗ ಮನುಷ್ಯ ಬಾಳಿನಲ್ಲಿ ಗಳಿಸಿದುದೇನೆಂದು ಯೋಚಿಸುತ್ತಾನೆ. ಪರೀಕ್ಷೆಗೆ ಕಟ್ಟಿದ ವಿದ್ಯಾರ್ಥಿ ಮಸಿಕುಡಿಕೆಯಲ್ಲಿ ಲೆಕ್ಕಣಿಕೆ ಹಾಕುತ್ತಾನೆ. ಮೇಲಕ್ಕೆತ್ತುತ್ತಾನೆ. ಬಿಳಿಯ ಕಾಗದದ ಮೇಲೆ ಕಪ್ಪು ಗೀಟು ಎಳೆದರೆ ಆಣೆ! ಕೊಂಚವಾದರೂ ಬರೆಯಬೇಕೋ ಬೇಡವೋ. ಏನು ಸರಸ್ವತಿ ಬಂದು ಬರೆಯಬೇಕೆ? ಮೂರು ತಾಸು ಮುಗಿಯುತ್ತವೆ. ಬರಿಯ ಕಾಗದ ಕೊಡುತ್ತಾನೆ. ಇಲ್ಲವೆ ಕೊನೆಗೆ ಏನೋ ಗೀಚುತ್ತಾನೆ. ಪ್ರಶ್ನೆ ಬಿಡಿಸುವ, ಉತ್ತರ ಬರೆಯುವ ವಿಚಾರವಿಲ್ಲ. ಅತ್ತ ಇತ್ತ ನೋಡುತ್ತಾನೆ. ನಮ್ಮದೂ ಹೀಗೇ. ಬಾಳಿನ ಕೊನೆ ಸಾವಿನ ಕಡೆ ನಡೆದಿದೆಯೆಂಬುದನ್ನು ಗಮನದಲ್ಲಿಟ್ಟುಕೊಂಡು ಆ ಕೊನೆಯ ಕ್ಷಣ ಹೇಗೆ ಪುಣ್ಯಮಯ, ಪಾವನ, ಸವಿಕಟ್ಟು, ಆದೀತೋ ಅದನ್ನು ಅಭ್ಯಸಿಸುತ್ತಿರಬೇಕು. ಮನಸ್ಸಿನ ಮೇಲೆ ಅತ್ಯುತ್ಕೃಷ್ಟ ಸಂಸ್ಕಾರ ಹೇಗಾದೀತೆಂಬ ವಿಚಾರ ಮೊದಲಿನಿಂದಲೂ ಇರಬೇಕು. ಆದರೆ ಒಳ್ಳೆಯ ಸಂಸ್ಕಾರಗಳ ವಿಚಾರ ಯಾರಿಗಿದೆ? ಕೆಟ್ಟ ವಿಷಯಗಳ ವಿಚಾರ, ಅಭ್ಯಾಸವೇ ಯಾವಾಗಲೂ. ನಾಲಗೆ, ಕಣ್ಣು, ಕಿವಿಗಳಿಗೆ ಸ್ವಚ್ಛಂದತೆಯ ಶಿಕ್ಷಣ ಕೊಡುತ್ತೇವೆ. ಚಿತ್ತಕ್ಕೆ ಬೇರೆ ಚಟ ಕಲಿಸಬೇಕು. ಒಳ್ಳೆಯತನದ ಕಡೆ ಚಿತ್ತ ಹೊರಳಬೇಕು. ಅಲ್ಲಿಯ ರಮಿಸಬೇಕು. ನಮ್ಮ ತಪ್ಪು ನಮಗೆ ತಿಳಿದೊಡನೆಯೇ ಸುಧಾರಣೆಗೆ ಮೊದಲಾಗಬೇಕು. ತಪ್ಪು ತಿಳಿದರೂ ಸಹ ಮತ್ತೆ ಮತ್ತೆ ತಪ್ಪು ಮಾಡಬೇಕೆ? ತಪ್ಪು ತಿಳಿದಾಗಲೇ ಪುನರ್ಜನ್ಮ. ಅದೇ ನಿನ್ನ ನವೀನ ಬಾಲ್ಯ. ಅದೇ ನಿನ್ನ ಬಾಳಿನ ಹೊಸ ಬೆಳಕು ಎಂದು ತಿಳಿ. ನಿಜಕ್ಕೂ ಈಗ ಎಚ್ಚೆತ್ತುಕೊಂಡಿದ್ದೀ. ಇನ್ನು ಹಗಲಿರುಳೂ ಬಾಳಿನ ಪರೀಕ್ಷೆ ಮಾಡು, ಜಪಿಸು. ಇಲ್ಲವಾದರೆ ಮತ್ತೆ ಕಾಲುಜಾರಿ ಬೀಳುತ್ತೀ, ಮತ್ತೆ ಕೆಡುಕಿಗೆ ಸಿಕ್ಕಿಕೊಳ್ಳುತ್ತೀ.

11. ಕೆಲವು ವರ್ಷದ ಹಿಂದೆ ನಮ್ಮ ಅಜ್ಜಿಯನ್ನು ಕಾಣಲು ಹೋಗಿದ್ದೆ. "ವಿನ್ಯಾ, ಇತ್ತೀಚೆಗೆ ಯಾವುದೂ ನೆನಪಿನಲ್ಲೇ ಉಳಿಯುವುದಿಲ್ಲಪ್ಪಾ, ತುಪ್ಪದ ಪಾತ್ರೆ ತರಲು ಹೋಗುತ್ತೇನೆ, ಮರೆತುಬಿಟ್ಟು ಹಾಗೇ ಬರುತ್ತೇನೆ" ಎಂದು ಆಕೆ ಹೇಳುತ್ತಿದ್ದಳು. ಆದರೆ ಅದಕ್ಕೆ 51 ವರ್ಷ ಹಿಂದೆ ನಡೆದ ಆಭರಣದ ಕತೆಯೊಂದನ್ನು ಆಕೆ ಚೆನ್ನಾಗಿಯೇ ವಿವರಿಸುತ್ತಿದ್ದಳು. ಐದು ನಿಮಿಷಕ್ಕೆ ಮೊದಲಿನವರ ನೆನಪಿಲ್ಲ. ಐವತ್ತು ವರ್ಷಕ್ಕೆ ಹಿಂದಿನ ಬಲವಾದ ಸಂಸ್ಕಾರ ಮಾತ್ರ ಕೊನೆಯವರೆಗೂ ಇತ್ತು. ಕಾರಣವೇನು? ಅದುವರೆಗೂ ಆಕೆ ಆ ಆಭರಣದ ಕತೆಯನ್ನೆ ಪ್ರತಿಯೊಬ್ಬರ ಹತ್ತಿರವೂ ಹೇಳಿರಬಹುದು. ಆ ವಿಷಯದ ಉಚ್ಚಾರ ಸತತವಾಗಿ ನಡೆಯಿತು. ಆಕೆಯ ಬಾಳಿಗೇ ಅದು ಅಂಟಿಕೊಂಡಿತು. ಬಾಳಿನೊಂದಿಗೆ ಏಕರೂಪ ತಳೆಯಿತು. 'ದೇವರ ದಯೆಯಿಂದ ಅಜ್ಜಿಗೆ ಮರಣ ಕಾಲದಲ್ಲಾದರೂ ಈ ಆಭರಣಗಳ ನೆನಪಾಗದಿದ್ದರೆ ಸಾಕು' ಎಂದು ನಾನು ನನ್ನಷ್ಟಕ್ಕೆ ಹೇಳಿಕೊಂಡೆ.

## ೩೮. ಸದಾ ಅದರಲ್ಲೇ ರಮಿಸಿ

12. ಹಗಲಿರುಳೂ ಅಭ್ಯಾಸ ಮಾಡಿದ ವಿಷಯ ಅಂಟಿಕೊಳ್ಳದಿದ್ದೀತೆ? ಆ ಅಜಾಮಿಳನ ಕತೆ ಓದಿ ಭ್ರಾಂತರಾಗಬೇಡಿ. ಆತ ನೋಡಲು ಪಾಪಿಯಾಗಿದ್ದ. ಆದರೆ ಬಾಳಿನೊಳಗಡೆ ಪುಣ್ಯದ ಪ್ರವಾಹ ಹರಿಯುತ್ತಿತ್ತು. ಕೊನೆಯ ಕ್ಷಣದಲ್ಲಿ ಅದು ಮೈದೋರಿತು. ಯಾವಾಗಲೂ ಪಾಪದಲ್ಲಿ ನಿರತರಾಗಿದ್ದರೂ ರಾಮನಾಮ ಬಾಯಲ್ಲಿ ಬಂದೇ ತೀರುವುದೆಂದು ಭ್ರಮಿಸಬೇಡಿ. ಚಿಕ್ಕಂದಿನಿಂದಲೂ ಸತತ ಅಭ್ಯಾಸ ನಡಿಸಿ, ಒಂದೊಂದಾಗಿ ಒಳ್ಳೆಯ ಸಂಸ್ಕಾರ ಹುಟ್ಟುವಂತೆ ಯತ್ನಿಸಿ. ಅದರಿಂದೇನಾದೀತು. ಇದರಿಂದೇನಾದೀತು ಎನ್ನಬೇಡಿ: ನಾಲ್ಕು ಗಂಟೆಗೆ ಏಕೆ ಏಳಬೇಕು? ಏಳು ಗಂಟೆಗೆ ಎದ್ದರೆ ಏನು ಕೇಡು? ಎಂದರೆ ನಡೆಯದು. ಹೀಗೆ ಮನಸ್ಸನ್ನು ಸಡಿಲ ಬಿಟ್ಟರೆ ಕೊನೆಗೆ ಮೋಸ ಹೋದೀರಿ. ಸಂಸ್ಕಾರಗಳ ಮುದ್ರೆ ಬೀಳಲಿಕ್ಕಿಲ್ಲ, ಲಕ್ಷ್ಮಿಯನ್ನು ಕಣಕಣವಾಗಿ ದೊರಕಿಸಬೇಕಾಗುತ್ತದೆ. ಪ್ರತಿಕ್ಷಣವೂ ನಡೆಯುವ ಸಂಸ್ಕಾರ ಒಳ್ಳೆಯದೆ ತಾನೆ ಎಂಬುದರ ಯೋಚನೆಯಿರಲಿ. ಕೆಟ್ಟ ಮಾತು ಬಂತು–ಆಯಿತು. ಕೆಟ್ಟ ಸಂಸ್ಕಾರ. ಒಂದೊಂದು ಕೃತಿಯು ಬಾಳಿನ ಬಂಡೆಗೆ ಒಂದು ಉಳಿಯೇಟು ಹಾಕುತ್ತದೆ. ಹಗಲೆಲ್ಲ ಒಳ್ಳೆಯದಾಗಿದ್ದರೂ ಕನಸಿನಲ್ಲಿ ಕಾಣಿಸುವುದೆಂದೇನೂ ಇಲ್ಲ. ಅನೇಕ ಕುಸಂಸ್ಕಾರಗಳು ಉಳಿದು ಹೋಗಿರುತ್ತವೆ. ಅವು ಯಾವಾಗ ಎದ್ದು ಕುಳಿತಾವೆಂಬ ನಿಯಮವಿಲ್ಲ. ಎಂತಲೇ ಸಣ್ಣ ಪುಟ್ಟ ವಿಷಯಗಳಲ್ಲಿ ಎಚ್ಚರಿಕೆಯಿಂದಿರಬೇಕು. ಮುಳುಗುವವನಿಗೆ ಒಂದು ಕಡ್ಡಿಯೂ ಆಧಾರ. ನಾವು ಸಂಸಾರ ಸಾಗರದಲ್ಲಿ ಮುಳುಗುತ್ತಿದ್ದೇವೆ. ಒಂದು ಒಳ್ಳೆಯ ಮಾತು ಆಡಿದರೆ ಅದೇ ಆಧಾರ. ನೀವು ಮಾಡಿದ ಉತ್ತಮ ಕೃತಿ ವ್ಯರ್ಥವಾಗದು. ಅದು ನಿಮ್ಮನ್ನುಳಿಸೀತು. ಲೇಶಮಾತ್ರವೂ ಕುಸಂಸ್ಕಾರ ಬೇಡ. ಕಣ್ಣು ಪವಿತ್ರವಾಗಿರಲಿ, ನಿಂದೆಗೆ ಕಿವಿ ಜೋಲದಿರಲಿ. ಒಳ್ಳೆಯ ಮಾತನ್ನೇ ನಾಲಗೆ ನುಡಿಯುತ್ತಿರಲಿ. ಇಂಥ ದಕ್ಷತೆಯಿದ್ದರೆ ಕೊನೆಯ ಕ್ಷಣಕ್ಕೆ ಜಯಶೀಲರಾಗುವಿರಿ, ಬಾಳಿಗೂ ಸಾವಿಗೂ ಒಡೆಯರಾದೀರಿ.

13. ಪವಿತ್ರ ಸಂಸ್ಕಾರಗಳಾಗಬೇಕಾದರೆ ಮನದಲ್ಲಿ ಉದಾತ್ತ ವಿಚಾರ ಬರಬೇಕು. ಕೈ ಪವಿತ್ರ ಕೆಲಸಗಳಲ್ಲಿ ತೊಡಗಿರಬೇಕು. ಒಳಗಡೆ ದೇವರ ಸ್ಮರಣೆ, ಹೊರಗಡೆ ಸ್ವಧರ್ಮಾಚರಣೆ. ಕೈಯಿಂದ ಸೇವಾಕರ್ಮ, ಮನದಲ್ಲಿ ವಿಕರ್ಮ, ಹೀಗೆ ದಿನದಿನವೂ ನಡೆಯಬೇಕು. ಗಾಂಧೀಜಿಯನ್ನು ನೋಡಿ, ದಿನವೂ ನೂಲುತ್ತಾರೆ. ಪ್ರತಿ ದಿನವೂ ನೂಲಬೇಕೆಂದು ಹೇಳುತ್ತಾರೆ. ದಿನವೂ ಏಕೆ ನೂಲಬೇಕು? ಬಟ್ಟೆಗಳಿಗೆ ಸಾಲುವಷ್ಟು ಯಾವಾಗಲಾದರೂ ನೂತುಬಿಟ್ಟರೆ ಸಾಲದೆ? ಹೀಗೆ ಮಾಡಿದರೆ ಅದು ವ್ಯವಹಾರವಾಯಿತು. ದಿನವೂ ನೂಲುವುದು ಆಧ್ಯಾತ್ಮಿಕತೆ. ಅದು ದೇಶಕ್ಕಾಗಿ ನಾವು ಮಾಡಬೇಕಾದ ಚಿಂತನೆ. ಆ ನೂಲು ದರಿದ್ರ ನಾರಾಯಣನೊಂದಿಗೆ ನಿತ್ಯ ಜೋಡಿಸುತ್ತದೆ. ಕೊನೆಗೆ ಆ ಸಂಸ್ಕಾರ ದೃಢವಾಗುತ್ತದೆ.

14. ಔಷಧ ಕೊಟ್ಟ ಡಾಕ್ಟರು ನಿತ್ಯವೂ ಒಂದು ಡೋಸು ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಎಲ್ಲವನ್ನೂ ಒಂದೇ ಸಲ ಕುಡಿದುಬಿಟ್ಟರೆ? ಅದೇನೋ ಚಮತ್ಕಾರವಾದೀತು. ಅಷ್ಟೇ. ಔಷಧದ ಉದ್ದೇಶ ಸಫಲವಾಗಲಿಕ್ಕಿಲ್ಲ. ಪ್ರತಿನಿತ್ಯವೂ ಔಷಧದ ಸಂಸ್ಕಾರವಾಗಿ ರೋಗ ದೂರವಾಗಬೇಕು. ಬಾಳಿನದೂ ಹೀಗೇ. ಶಂಕರನ ಮೂರ್ತಿಯ ಮೇಲೆ ಮೆಲ್ಲಮೆಲ್ಲನೆ ಅಭಿಷೇಕ ಮಾಡಬೇಕು. ನನ್ನ ಮೆಚ್ಚಿನ ದೃಷ್ಟಾಂತ ಇದು. ಬಾಲ್ಯದಲ್ಲಿ ಈ ಕ್ರಿಯೆಯನ್ನು ನಿತ್ಯವೂ ನೋಡುತ್ತಿದ್ದೆ. ಇಪ್ಪತ್ನಾಲ್ಕು ಗಂಟೆಗಳ ಕಾಲ ಸುರಿದ ಆ ನೀರು ಎರಡು ಕೊಡದಷ್ಟು ಆದೀತು. ಆ ಎರಡು ಕೊಡವನ್ನೂ ಒಂದೇ ಸಲ ಮೂರ್ತಿಯ ಮೇಲೆ ಸುರಿದರೆ? ಈ ಪ್ರಶ್ನೆಗೆ ಬಾಲ್ಯದಲ್ಲೇ ನನಗೆ ಉತ್ತರ ದೊರೆಯಿತು. ನೀರನ್ನು ಒಮ್ಮೆಲೆ ಸುರಿದುಬಿಟ್ಟರೆ ಕರ್ಮ ಸಫಲವಾಗದು. ಹನಿಹನಿಯಾಗಿ ಸತತ ಧಾರೆ ಸುರಿಯುತ್ತಿದ್ದರೆ ಮಾತ್ರ ಉಪಾಸನೆಯಾದೀತು. ಸಮಾನ ಸಂಸ್ಕಾರಗಳ ಧಾರೆ ಸತತವಾಗಿ ನಡೆದಿರಬೇಕು. ಬೆಳಗಿನ ಸಂಸ್ಕಾರವೆ ಮಧ್ಯಾಹ್ನಕ್ಕೆ. ಅದೇ ಸಂಜೆಗೆ. ಹಗಲಿನದು ರಾತ್ರಿಗೆ ನಿನ್ನೆಯದು ಇಂದು. ಇಂದಿನದು ನಾಳೆಗೆ, ಈ ವರ್ಷದ್ದು ಮುಂದಿನ ವರ್ಷಕ್ಕೆ. ಈ ಜನ್ಮದ್ದು ಮುಂದಿನ ಜನ್ಮಕ್ಕೆ. ಬದುಕಿದ್ದಾಗಿನದು ಸಾಯುವಾಗ. ಹೀಗೆ ಒಂದೊಂದು ಒಳ್ಳೆಯ ಸಂಸ್ಕಾರದ ದಿವ್ಯಧಾರೆ ಬಾಳಿನಲ್ಲೆಲ್ಲ ಹರಿಯುತ್ತಿರಬೇಕು. ಈ ಪ್ರವಾಹ ಅಖಂಡವಾಗಿದ್ದರೆ ಮಾತ್ರ ನಮಗೆ ಗೆಲುವು. ಸಂಸ್ಕಾರದ ಪ್ರವಾಹ ಒಂದೇ ದಿಕ್ಕಿಗೆ ಹರಿಯುತ್ತಿರಬೇಕು. ಬೆಟ್ಟದ ಮೇಲೆಬಿದ್ದ ನೀರು ಹನ್ನೆರಡೂ ದಿಕ್ಕಿಗೆ ಹರಿದರೆ ಹೊಳೆಯಾಗಲಾರದು. ಎಲ್ಲವೂ ಒಂದೇ ದಿಕ್ಕಿಗೆ ಹರಿದರೆ ಪ್ರವಾಹವಾದೀತು. ಪ್ರವಾಹ ಹೊಳೆಯಾದೀತು. ಹೊಳೆ ಗಂಗೆಯಾದೀತು. ಸಾಗರದಲ್ಲಿ ಬೆರೆತೀತು. ಒಂದೇ ದಿಕ್ಕಿಗೆ ಹರಿದ ನೀರು ಸಾಗರ ಸೇರಿತು. ಎಲ್ಲ ಕಡೆಗೆ ಹರಿದುದು ಬತ್ತಿ ಹೋಯಿತು. ಸಂಸ್ಕಾರಗಳದೂ ಹೀಗೆ. ಅವು ಬಂದ ಹಾಗೆ ಹೋಗಿಬಿಟ್ಟರೆ ಪ್ರಯೋಜನವೇನು? ಅವುಗಳ ಪವಿತ್ರ ಪ್ರವಾಹ ಬಾಳಿನುದ್ದಕ್ಕೂ ಹರಿಯುತ್ತಿದ್ದರೆ ಮಾತ್ರ ಸಾವು ಮಹದಾನಂದದ ವಿಧಾನವಾದೀತು. ದಾರಿಯಲ್ಲೆಲ್ಲೂ ನಿಂತುಕೊಳ್ಳದೆ, ಮೋಹಗಳನ್ನು ದೂರಗೊಳಿಸಿ ಕಷ್ಟದಿಂದ ಅಡಿಯಿಡುತ್ತ ಶಿಖರಕ್ಕೆ ತಲಪಿ, ಮೇಲೆ ಹೋಗಿ ಎದೆಯ ಮೇಲಿನ ಬಂಧನಗಳನ್ನೆಲ್ಲ ಕಿತ್ತೊಗೆದು, ಅಲ್ಲಿನ ಸ್ವಚ್ಛಂದ ಹವೆಯ ಅನುಭವ ಪಡೆದ ಪ್ರವಾಸಿಯ ಆನಂದದ ಕಲ್ಪನೆ ಬೇರೆಯವರಿಗೆ ಬರಲಾರದು. ನಡುದಾರಿಯಲ್ಲೇ ನಿಂತ ಪ್ರವಾಸಿಗಾಗಿ ಸೂರ್ಯನೇನೂ ಇಲ್ಲ.

(ಮುಂದುವರಿಯುವುದು)


# ಮಾಸ ವೈಶಿಷ್ಟ್ಯ

ನಮ್ಮ ಹಿಂದೂ ಧರ್ಮದ ಆಚರಣೆಗಳಲ್ಲಿ ಹಬ್ಬ ಹರಿದಿನಗಳಿಗೆ, ಮಹಾನ್ ಸಂತರ, ಮಹಾನ್ ಸತ್ಪುರುಷರ ಜಯಂತಿ ಹಾಗೂ ಪುಣ್ಯ ದಿನಗಳಿಗೆ ವಿಶೇಷವಾದ ಸ್ಥಾನ ಉಂಟು. ಈ ಕುರಿತು ಪ್ರತಿ ತಿಂಗಳೂ ಮಾಸ ವೈಶಿಷ್ಟ್ಯದಲ್ಲಿ ತಿಳಿಸಿಕೊಡುತ್ತಾರೆ ಶ್ರೀ ಜಿ. ಶೇಖರ್

**1. ಶ್ರೀರಾಮನವಮೀ: (02–04–2020).** ಚೈತ್ರಮಾಸದ ಶುಕ್ಲಪಕ್ಷದ ನವಮಿಯಂದೇ ಶ್ರೀರಾಮನ ಜನ್ಮದಿನ. ಸೂರ್ಯವಂಶದ




ಇಕ್ಷ್ವಾಕು ಕುಲದ ಮುಕುಟಮಣಿ ಶ್ರೀರಾಮ. ಶ್ರೀರಾಮನು ಪ್ರಜೆಗಳಿಗೆ ಆದರ್ಶ ರಾಜನಾಗಿ, ದಶರಥನಿಗೆ ಆದರ್ಶ ಮಗನಾಗಿ, ಜನಕ ಪುತ್ರಿ ಸೀತೆಗೆ ಆದರ್ಶ ಪತಿಯಾಗಿ ಬಹುಜನರ ಆರಾಧ್ಯ ದೈವ. ಈ ದಿನದಂದು ದೇಶಾದ್ಯಂತ ಶ್ರೀರಾಮನನ್ನು ಭಕ್ತಿಯಿಂದ ಸ್ಮರಿಸಿ, ಎಲ್ಲ ದೇವಾಲಯಗಳಲ್ಲೂ ಪೂಜೆ, ವಿಶೇಷ ಅಭಿಷೇಕ, ಅಲಂಕಾರಗಳನ್ನು ಮಾಡುತ್ತಾರೆ. ಶ್ರೀರಾಮನ ಕೀರ್ತನೆಗಳನ್ನು ಕೀರ್ತಿಸುತ್ತಾ, ಭಜನೆಯನ್ನು ಮಾಡುತ್ತಾ ಸಂತೋಷ ಸಡಗರದಿಂದ ನವಮಿಯನ್ನು ಆಚರಿಸುತ್ತಾರೆ.



**2. ಮಹಾವೀರ ಜಯಂತಿ: (06–04–2020).** ಚೈತ್ರ ಶುಕ್ಲ ತ್ರಯೋದಶಿ. ಕ್ರಿ.ಪೂ. 6ನೇ ಶತಮಾನದಲ್ಲಿ ಮಹಾವೀರನು ಬಿಹಾರ್ ರಾಜ್ಯದ ವೈಶಾಲಿ ನಗರದ ದೊರೆ ಸಿದ್ಧಾರ್ಥ ಹಾಗೂ ತ್ರಿಶಲಾದೇವಿಯ ಮಗನಾಗಿ ಜನಿಸಿದ. ಈತನಿಗೆ ವರ್ಧಮಾನ ಎಂದು ನಾಮಕರಣ ಮಾಡಲಾಯಿತು. ರಾಜನ ಮಗನಾಗಿದ್ದರೂ ವೈಭೋಗದಲ್ಲಿ ಆಸಕ್ತಿ ವಹಿಸದೇ ಆಗಲೇ ಜೈನ ಧರ್ಮದ ಬಗ್ಗೆ ತಿಳಿದುಕೊಳ್ಳಲು ತೊಡಗಿದನು. ಸಾಂಸಾರಿಕ ಬಂಧನಗಳಲ್ಲಿ ಆಸಕ್ತಿ ವಹಿಸದೇ 30ನೇ ವಯಸ್ಸಿನವರೆಗೆ ದೇಶ ಸಂಚಾರ ಮಾಡಿದನು. 12 ವರ್ಷ ತಪಸ್ಸಿನ ಅನಂತರ ಜ್ಞಾನೋದಯವನ್ನು ಪಡೆದು ಜೈನ ಧರ್ಮದ 24ನೇ ತೀರ್ಥಂಕರನೆನಿಸಿಕೊಂಡನು.


**3. ಅಕ್ಷಯ ತೃತೀಯ: (26–04–2020).** ವೈಶಾಖಮಾಸದ ಶುಕ್ಲ



ಪಕ್ಷ ಮೂರನೆಯ ದಿನದಂದು ಅಕ್ಷಯ ತೃತೀಯವನ್ನು ಆಚರಿಸಲಾಗುತ್ತದೆ. ಅಕ್ಷಯ ತೃತೀಯವೆಂಬುದು ಶುಭದ ಸಂಕೇತ. ಎಂದಿಗೂ ಕೊನೆಯಾಗದ ಶುಭ ನಿರೀಕ್ಷೆಗಳು ಎಂಬ ಅರ್ಥವನ್ನು ಅಕ್ಷಯ ತೃತೀಯ ಸಾರಿ ಹೇಳುತ್ತದೆ. ಈ ದಿನದಂದು ಜನರು ದಾನ ಧರ್ಮಗಳನ್ನು ಮಾಡುತ್ತಾರೆ. ಯಾವುದೇ ಹೊಸ ಕೆಲಸಗಳನ್ನು ಆರಂಭಿಸಿದರೂ ಶುಭವಾಗುತ್ತದೆಂಬ ನಂಬಿಕೆ ಇದೆ.

**4. ಬಸವೇಶ್ವರ ಜಯಂತಿ: (26–04–2020).** ಮೇಲ್ಕಂಡ ದಿನದಂದೇ ಸಮಾಜ ಸುಧಾರಕ, ವಚನಕಾರ ಬಸವ ಜಯಂತಿಯೂ ಬಂದಿದೆ. 12ನೇ ಶತಮಾನದಲ್ಲಿ ಜನಿಸಿದ ಬಸವಣ್ಣನವರು ಸತ್ಯ, ಅಹಿಂಸೆ, ಪ್ರಾಮಾಣಿಕತೆ, ಜಾತಿ–ವಿನಾಶ, ಆಧ್ಯಾತ್ಮಿಕತೆಯ ಮೌಲ್ಯಗಳನ್ನು ಪ್ರತಿಪಾದಿಸಿದವರು. ಹೆಚ್ಚು ಅರ್ಥವುಳ್ಳ, ಸರಳ ಭಾಷೆಯ ಸಾಹಿತ್ಯದಿಂದ ಕೂಡಿದ ವಚನಗಳ ಮೂಲಕ ಸಮಾಜದಲ್ಲಿ ಅಡಕಗೊಂಡಿದ್ದ ಮೂಢನಂಬಿಕೆಗಳನ್ನು, ಅಸಮತೋಲನವನ್ನು ವೈಚಾರಿಕವಾಗಿ ತಿಳಿಸಿ, ಸಮಾಜವನ್ನು ತಿದ್ದಿದರು.





**5. ಶ್ರೀ ಶಂಕರಾಚಾರ್ಯರ ಜಯಂತಿ: (28–04–2020):** ವೈಶಾಖಮಾಸದ ಶುಕ್ಲ ಪಕ್ಷ ಪಂಚಮಿ. ಶಂಕರಾಚಾರ್ಯರ ಕಾಲದ ಬಗ್ಗೆ ವಿದ್ವಾಂಸರಲ್ಲಿ ಇನ್ನೂ ಜಿಜ್ಞಾಸೆಯಿದೆ. ಒಂದು ವಿಧದ ಪ್ರಕಾರ ಇವರು ಕ್ರಿ.ಶ. 8ನೇ ಶತಮಾನದಲ್ಲಿ (788) ಕೇರಳ ರಾಜ್ಯದ ಕಾಲಡಿ ಎಂಬ ಹಳ್ಳಿಯಲ್ಲಿ ಶಿವಗುರು, ಆರ್ಯಾಂಬೆ ಬ್ರಾಹ್ಮಣ ದಂಪತಿಗೆ ಜನಿಸಿದರು ಎಂದು ನಂಬಲಾಗಿದೆ.

ಸನಾತನ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ಸಾರಿ ಹೇಳಿದ ಆಚಾರ್ಯತ್ರಯರಲ್ಲಿ ಮೊದಲಿಗರು ಆದಿ ಶಂಕರರು. ಕೇವಲ 32 ವರ್ಷಗಳ ಜೀವಿತ ಕಾಲದ ಅಲ್ಪಾವಧಿಯಲ್ಲಿಯೇ ದೇಶದ ಮೂಲೆ ಮೂಲೆಗಳಿಗೆ ಸಂಚರಿಸಿ ಪರಮಾತ್ಮನ ಅದ್ವೈತ ತತ್ತ್ವವನ್ನು ಪ್ರತಿಪಾದಿಸುತ್ತ ಜಗತ್ತಿಗೆ ಸಾರಿ, ಹಲವಾರು ಮತಗಳಿಂದ ದಾಳಿಗೊಳಗಾಗುತ್ತಿದ್ದ ಸನಾತನ ಧರ್ಮವನ್ನು ಪುನರುತ್ಥಾನಗೊಳಿಸಿದರು.


**6. ಶ್ರೀ ರಾಮಾನುಜಾಚಾರ್ಯರ ಜಯಂತಿ: (28–04–2020):** ಈ ದಿನದಂದೇ ಶ್ರೀ ರಾಮಾನುಜಾಚಾರ್ಯರ ಜಯಂತಿಯೂ ಬಂದಿರುವುದು ವಿಶೇಷ.

ಕ್ರಿ.ಶ. 1012ರಲ್ಲಿ ತಮಿಳುನಾಡಿನ ಕಂಚೀ ಕ್ಷೇತ್ರದ ಸನಿಹದ ಶ್ರೀ ಪೆರಂಬುದೂರು ಎಂಬಲ್ಲಿ ಆಸೂರಿ ಕೇಶವ ಸೋಮಯಾಜಿ, ಕಾಂತಿಮತಿಗೆ ಜನಿಸಿದರು.



ವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಪಾದಕರಾದ ಶ್ರೀ ರಾಮಾನುಜಾಚಾರ್ಯರು 'ಓಂ ನಮೋ ನಾರಾಯಣಾಯ' ಎಂಬ ತಿರುಮಂತ್ರವನ್ನು ಸರ್ವರಿಗೂ ಬೋಧಿಸಿದರು. ಭಕ್ತಿಮಾರ್ಗದಿಂದ ಎಲ್ಲರಿಗೂ ಮೋಕ್ಷವು ಸಿಗುತ್ತದೆಂಬ ಮೋಕ್ಷದ ದಾರಿಯನ್ನು ಸುಲಭವಾಗಿ ತಿಳಿಸಿಕೊಟ್ಟು ಶ್ರೀ ವೈಷ್ಣವ ಧರ್ಮವನ್ನು ಪ್ರಚಾರ ಮಾಡಿದರು.

**7. ಶ್ರೀ ಭಗೀರಥ ಜಯಂತಿ: (29–04–2020):** ವೈಶಾಖಮಾಸ ಷಷ್ಠೀಯಂದು. ಸೂರ್ಯವಂಶದ ರಾಜನಾದ ಸಗರನಿಗೆ ಕೇಶಿನಿ, ಸುಮತಿ ಎಂಬ ಇಬ್ಬರು ಹೆಂಡತಿಯರು. ಕೇಶಿನಿಯ ಮಗನೇ ಅಸಮಂಜ. ಅಸಮಂಜನ ಮಗ ಅಂಶುಮಂತ. ಅಂಶುಮಂತನ ಮಗ ದಿಲೀಪ. ದಿಲೀಪನ ಕುಮಾರನೇ ಭಗೀರಥ. ಕಪಿಲ ಮಹಾಮುನಿಯ ಶಾಪಕ್ಕೆ ತುತ್ತಾಗಿ ಭಸ್ಮವಾಗಿರುವ ತನ್ನ ಪೂರ್ವಜರಿಗೆ ಉತ್ತಮ ಸದ್ಗತಿಯನ್ನುಂಟುಮಾಡಲು ಕಠಿಣವಾದ ತಪಸ್ಸನ್ನು ಮಾಡಿ, ಶಿವನನ್ನು ಒಪ್ಪಿಸಿ ಗಂಗೆಯನ್ನು ಭೂಮಿಯಲ್ಲಿ ಹರಿಸಿ ತನ್ನ ಪೂರ್ವಜರಿಗೆ ಮೋಕ್ಷ ದೊರಕಿಸಿಕೊಟ್ಟನೆಂಬ ಕೀರ್ತಿಯನ್ನು ಪಡೆದಿದ್ದಾನೆ.






# ಶ್ರೀ ಯೋಗಿ ನಾರೇಯಣ ಮಠ, ಶ್ರೀಕ್ಷೇತ್ರ ಕೈವಾರ



ದೂರವಾಣಿ: 08154–239525 / ಮೊಬೈಲ್ : 9945337398
klnarayankaiwara53@gmail.com




ಏಪ್ರಿಲ್ 2020ನೇ ಮಾಹೆಯ ಸಾಪ್ತಾಹಿಕ ಸೇವೆಗಳ ವಿವರ

## ನಾದಸುಧಾರಸ

ವಿನೂತನ ಯೋಜನೆಯಲ್ಲಿ ಅಮೋಘ ಸಂಕೀರ್ತನ ಸಂಗೀತ ಕಚೇರಿಗಳು

| ದಿನಾಂಕ | ಸಮಯ | ವಿದ್ವಾಂಸರ ಹೆಸರುಗಳು | ಕಾರ್ಯಕ್ರಮ |
|---|---|---|---|
| 04.04.2020<br>ಶನಿವಾರ | ಸಂಜೆ<br>5.00 ಗಂಟೆಗೆ | ಶ್ರೀಮತಿ ಮಂಜುಳಾ ಜಗದೀಶ್ ಮತ್ತು ರೇಖಾ, ಶಿಡ್ಲಘಟ್ಟ<br>ಶ್ರೀ ಆರ್. ಜಗದೀಶ್ ಕುಮಾರ್, ಶಿಡ್ಲಘಟ್ಟ – ಪಿಟೀಲು<br>ಶ್ರೀ ಷಣ್ಮುಗಾನಂದ, ಆನೇಕಲ್ – ಮೃದಂಗ | ಗಾಯನ |
| 08.04.2020<br>ಬುಧವಾರ | ಬೆಳಗ್ಗೆ 11.00 ರಿಂದ<br>12.00 ಗಂಟೆವರೆಗೆ | ಶ್ರೀ ವಾನರಾಶಿ ಬಾಲಕೃಷ್ಣ ಭಾಗವತ ಅವರಿಂದ<br>ಪೋತನ ಭಾಗವತ ಪ್ರವಚನ | ಹುಣ್ಣಿಮೆ |
| | ಸಂಜೆ 4.00 ಗಂಟೆಗೆ | ವಿಶೇಷ ಪೂಜೆ ಮತ್ತು ಆಲಂಬಗಿರಿಯಲ್ಲಿ ಗಿರಿ ಪ್ರದಕ್ಷಿಣೋತ್ಸವ<br>ಡಾ. ಎಂ.ಆರ್. ಜಯರಾಮ್ ಅವರ ನೇತೃತ್ವ | |
| 11.04.2020<br>ಶನಿವಾರ | ಸಂಜೆ<br>5.00 ಗಂಟೆಗೆ | ನಾದಸುಧಾರಸ ತಂಡದವರಿಂದ | ಗಾಯನ |
| 18.04.2020<br>ಶನಿವಾರ | ಸಂಜೆ<br>5.00 ಗಂಟೆಗೆ | ಶ್ರೀ ಅಭಿಜಿತ್ ಬಿ.ಎಸ್., ಬೆಂಗಳೂರು<br>ಶ್ರೀ ಎಸ್. ಯಶಸ್ವಿ – ಪಿಟೀಲು<br>ಶ್ರೀ ಬಿ. ಧ್ರುವರಾಜ್, ಬೆಂಗಳೂರು – ಮೃದಂಗ | ಗಾಯನ |
| 25.04.2020<br>ಶನಿವಾರ | ಸಂಜೆ<br>5.00 ಗಂಟೆಗೆ | ಶ್ರೀ ಕೆ. ಪ್ರಮೀಳಾ ಭಾಗವತಾರಿಣಿ, ರಾಯಚೋಟಿ (ಆಂಧ್ರಪ್ರದೇಶ)<br>ಶ್ರೀ. ಎ.ವಿ. ವಿಶ್ವನಾಥ್, ಚಿಂತಾಮಣಿ – ಹಾರ್ಮೋನಿಯಂ<br>ಶ್ರೀ ಮುಲ್ಲಹಳ್ಳಿ ಪ್ರಕಾಶ್ – ತಬಲ | ಹರಿಕಥೆ |



**ಬಾಲಕೃಷ್ಣ ಭಾಗವತರ್**
ಸಂಯೋಜಕರು:
ಶ್ರೀ ಯೋಗಿನಾರೇಯಣ ಸಂಕೀರ್ತನಾ ಯೋಜನೆ

**ಡಾ॥ ಎಂ.ಆರ್. ಜಯರಾಮ್**
ಧರ್ಮಾಧಿಕಾರಿಗಳು

## ಮಲ್ಲಾರ ಚಂದಾದಾರರಲ್ಲಿ ವಿನಂತಿ

ಮಲ್ಲಾರ ಕಛೇರಿಯಲ್ಲಿ ಹಂಚಿಕೆಯ ವಿಭಾಗದಿಂದ ಚಂದಾದಾರ/ಓದುಗರಿಗೆ 3ನೇ ದಿನಾಂಕದೊಳಗಾಗಿ ತಲುಪುವಂತೆ ಪತ್ರಿಕೆ ಕಳುಹಿಸಲಾಗುತ್ತಿದೆ. ಯಾವುದೇ ಕಾರಣದಿಂದ 10ನೇ ದಿನಾಂಕದೊಳಗಾಗಿ ತಲುಪದಿದ್ದರೆ ಸ್ಥಳೀಯ ಅಂಚೆ ಕಚೇರಿಯಲ್ಲಿ ವಿಚಾರಿಸಿ ಖಚಿತಪಡಿಸಿಕೊಳ್ಳಬೇಕು. ತಲುಪದ ಬಗ್ಗೆ ನಮ್ಮ ಕಛೇರಿಯ ಹಂಚಿಕೆ ವಿಭಾಗಕ್ಕೆ ಪೋಸ್ಟ್ ಕಾರ್ಡ್ ಮೂಲಕ 20ನೇ ದಿನಾಂಕದೊಳಗಾಗಿ ಲಿಖಿತವಾಗಿ ದೂರು ಸಲ್ಲಿಸಬೇಕು. ಪೋಸ್ಟ್ ಕಾರ್ಡ್‌ನಲ್ಲಿ ನಿಮ್ಮ ಗ್ರಾಹಕ ಸಂಖ್ಯೆ, ಸದಸ್ಯತ್ವ (ವಾರ್ಷಿಕ, ಪೋಷಕ ಇತ್ಯಾದಿ) ವಿಳಾಸವನ್ನು ಸ್ಪಷ್ಟವಾಗಿ ಬರೆದಿರಬೇಕು. ದೂರು ಬಂದ ನಂತರ ಆ ತಿಂಗಳ ಸಂಚಿಕೆಯನ್ನು ಮಾತ್ರ ನಂತರದ ತಿಂಗಳಿನ ಸಂಚಿಕೆಯೊಂದಿಗೆ ಪ್ರತ್ಯೇಕವಾಗಿ ಕಳುಹಿಸುವ ವ್ಯವಸ್ಥೆ ಮಾಡಲಾಗುತ್ತದೆ. ಇತರ ಹಳೆಯ ಸಂಚಿಕೆಗಳು ಲಭ್ಯವಿಲ್ಲ. ಅಂಚೆ ಅಧಿಕಾರಿಗಳನ್ನು ಸಂಪರ್ಕಿಸಲು ಅನುಕೂಲ ವಾಗುವಂತೆ ದೂರನ್ನು ಲಿಖಿತವಾಗಿ ಮಾತ್ರ ನೀಡಬೇಕಾಗಿ ವಿನಂತಿ: ಫೋನ್ ಕರೆ ಸಾಕಾಗುವುದಿಲ್ಲ. ಡಿ.ಡಿ./ಚೆಕ್‌ಗಳು 'Sri Yogi Nareyana Study Centre' ಹೆಸರಿನಲ್ಲಿ ಮಾತ್ರ ಕಳಿಸಬೇಕು; ಅಲ್ಲಿ ಬೇರೇನೂ ಇರಬಾರದು; ಕಾರ್ಯಾಲಯ ವಿಳಾಸಕ್ಕೆ ಕಳಿಸಬೇಕು.

ಸಂಪಾದಕರು.



**ಶ್ರೀ ಕಂಚಿ ಕಾಮಕೋಟಿ ಪೀಠದ ಪರಮಾಚಾರ್ಯ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮಿಗಳವರು** ಇತ್ತೀಚಿನ ವರೆಗೂ ಜೀವಿಸಿದ್ದು ಪಾದಚಾರಿಗಳಾಗಿಯೇ ದೇಶ ಸಂಚಾರ ಮಾಡುತ್ತಾ **ಕರತಲ ಭಿಕ್ಷಾ ತರುತಲ ವಾಸಃ** ಎಂಬಂತೆ ಪರಿಶುದ್ಧ ಸಂನ್ಯಾಸ ಜೀವನ ನಡೆಸಿ ಶತಾಯುಷಿಗಳಾಗಿ ಬ್ರಹ್ಮೈಕ್ಯರಾದರು. ಅವರು ಸನಾತನ ಧರ್ಮದ ಸಾರಸರ್ವಸ್ವವನ್ನೂ ಆಧುನಿಕ ಪರಿಭಾಷೆಯಲ್ಲಿ ಎಲ್ಲರಿಗೂ ಅರ್ಥವಾಗುವಂತೆ ತಿಳಿ ಭಾಷೆಯಲ್ಲಿ ವಿವರಿಸಿದ್ದಾರೆ. ಅವರ ಮುಂಬಯಿ ಭಕ್ತರು ಒಂದೂಗೂಡಿ **'ಶ್ರೀ ಕಂಚಿ ಮಹಾಸ್ವಾಮಿ ಪೀಠಾರೋಹಣ ಶತಾಬ್ದಿ ಮಹೋತ್ಸವ ಟ್ರಸ್ಟ್' (ಮುಂಬೈ–400 002)** ರಚಿಸಿಕೊಂಡು ಪರಮಾಚಾರ್ಯರ ಅತ್ಯಂತ ಅಮೂಲ್ಯವಾದ ವಿಚಾರಗಳನ್ನೆಲ್ಲ 'ದೈವವಾಣಿ' ಎಂಬ ಹೆಸರಿನಲ್ಲಿ 7 ಬೃಹತ್ ಸಂಪುಟಗಳಲ್ಲಿ ಹೊರತಂದಿದ್ದಾರೆ. ಈ ಬರಹವನ್ನು ಎರಡನೆ ಸಂಪುಟದಿಂದ ಆಯ್ಕೆ ಮಾಡಿ ಕೃತಜ್ಞತಾಪೂರ್ವಕವಾಗಿ ಪ್ರಕಟಿಸುತ್ತಿದ್ದೇವೆ.

# ವೇದಗಳ ಕಾಲ: ಯಥಾರ್ಥವಲ್ಲದ ಶೋಧನೆ

ವೇದಗಳು ನಿತ್ಯವಾದವು ಎಂಬ ವಿಚಾರವು ಪಾಶ್ಚಾತ್ಯರ ಮನೋಭೂಮಿಕೆಗೆ ಒಗ್ಗದಂಥದು. ನಿಷ್ಪಕ್ಷಪಾತವಾದ ಮತ್ತು ವೈಜ್ಞಾನಿಕವಾದ ಸಂಶೋಧನೆ ಎಂದು ಅವರು ಹೇಳಿಕೊಳ್ಳುತ್ತಾರೆಯೇ ಪರಂತು ಹಿಂದೂ ಧರ್ಮಗ್ರಂಥಗಳಿಗೆ ಉಚ್ಚಸ್ಥಾನವನ್ನು ಕಲ್ಪಿಸುವುದಕ್ಕೆ ಅವರು ಸಿದ್ಧರಿಲ್ಲ. ಅನೇಕ ಪುರಾತತ್ತ್ವ ಶಾಸ್ತ್ರಜ್ಞರಿಗೇ ವೇದವು ನಿತ್ಯ ಎಂಬ ದೃಷ್ಟಿಯು ಅಪಥ್ಯವಾಗಿಬಿಟ್ಟಿದೆ.

ವೇದಗಳ ಕಾಲನಿರ್ಣಯ ಮಾಡಲು ಆಧುನಿಕ ಇತಿಹಾಸಕಾರರು ಪ್ರಧಾನವಾಗಿ ಎರಡು ವಿಧಾನಗಳನ್ನು ಅಳವಡಿಸಿಕೊಂಡಿದ್ದಾರೆ. ಮೊದಲನೆಯದು, ವೇದಗಳಲ್ಲಿನ ಖಗೋಳ ವಿಷಯಕವಾದ ಉಲ್ಲೇಖಗಳನ್ನಾಧರಿಸಿದ್ದು ಮತ್ತು ಎರಡನೆಯದು ಅದರ ಭಾಷೆಯ ಆಕೃತಿ ರಚನೆಗೆ ಸಂಬಂಧಿಸಿದ್ದು. ಆದರೆ, ಅವರೇನಾದರೂ ಈ ವಿಧಾನಗಳನ್ನನುಸರಿಸಿ, ಯಾವುದಾದರೂ ಖಚಿತ ನಿರ್ಣಯಕ್ಕೆ ಬಂದಿದ್ದಾರೆಯೆ? ಒಬ್ಬೊಬ್ಬ ಸಂಶೋಧಕನೂ ಒಂದೊಂದು ಕಾಲಘಟ್ಟವನ್ನು ಸೂಚಿಸಿದ್ದಾನೆ. ತಿಲಕರು ವೇದಗಳ ಕಾಲವು ಕ್ರಿ.ಪೂ. 6000 ವರ್ಷ ಎಂದರೆ ಕೆಲವರು ಕ್ರಿ.ಪೂ. 3000 ಎಂದೋ 1500 ಎಂದೋ ಹೇಳಿದ್ದಾರೆ.

ಇತರರ ಧರ್ಮಗ್ರಂಥಗಳ ಕಾಲದ ಬಗ್ಗೆ ಚರಿತ್ರಕಾರರಲ್ಲಿ ಅಭಿಪ್ರಾಯ ಭೇದವಿಲ್ಲ. ಬೌದ್ಧರ ತ್ರಿಪಿಟಿಕಗಳನ್ನು ಅಶೋಕನ ಕಾಲದಲ್ಲಿ ಬರೆದಿಡಲಾಯಿತು, ಆದರೆ ಅದರಲ್ಲಿರುವ ಬುದ್ಧನ ಬೋಧನೆಗಳು ಅದಕ್ಕಿಂತ ಹಿಂದಿನವು ಎಂದು ಅವರು ಒಪ್ಪಿದ್ದಾರೆ. ಹಾಗೆಯೇ ಹೊಸ ಒಡಂಬಡಿಕೆ (New Testament) 2000 ವರ್ಷಗಳಷ್ಟು ಹಳೆಯದೆಂಬ ಬಗ್ಗೆ ಸರ್ವಾನುಮತವಿದೆ. ಕೊರಾನ್ 1300 ವರ್ಷಗಳ ಹಿಂದೆ ರಚಿಸಲ್ಪಟ್ಟಿತು ಎಂಬ ಬಗ್ಗೆ ಎಲ್ಲರ ಸಮ್ಮತಿ ಇದೆ. ವೇದಗಳ ವಿಷಯದಲ್ಲಿ ಮಾತ್ರ ಚರಿತ್ರಕಾರರು ನಿರ್ಣಾಯಕ ಕಾಲಘಟ್ಟವನ್ನು ಹೇಳಿಲ್ಲ.

ವೇದಗಳ ಕಾಲನಿರ್ಣಯಕ್ಕೆ ಎರಡು ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ ಎಂದು ಹೇಳಿದೆನಷ್ಟೆ. ಕೆಲವು ಖಗೋಳಕಾರ್ಯಗಳ ಸ್ಥಾನನಿರ್ದೇಶನವು ಈ ಗ್ರಂಥಗಳಲ್ಲಿ ಬಂದಿದೆ. ಅವುಗಳಲ್ಲಿ ಹೇಳಿದ ಒಂದು ಖಗೋಳಕೂಟದ ಮೇಲೆ ಆಧರಿಸಿ ವೇದಗಳ ಕಾಲವನ್ನು ಕ್ರಿ.ಪೂ. 6000 ಎಂದು ನಿರ್ಣಯಿಸಲಾಗಿದೆ.

ಆದರೆ, ಆ ಮೊದಲೂ ಅಂಥ ಖಗೋಳಕೂಟ ಸಂಭವಿಸಿರಲಿಲ್ಲ ಎಂದು ಹೇಳುವುದು ಸರಿಯಾದೀತೆ? ಇಂಥ ಕೂಟಗಳು ಈ ಬ್ರಹ್ಮಾಂಡ ಸೃಷ್ಟಿಗಿಂತ ಮೊದಲೇ ಅಲ್ಲ, ಅದಕ್ಕೂ ಬಹು ಬಹು ಹಿಂದೆಯೂ ಸಂಭವಿಸಿದ್ದಿರಲು ಸಾಧ್ಯ. ವೇದಗಳಲ್ಲಿ ಹೇಳಿರುವುದು ಇಂಥ ಯಾವ ಕಾಲಘಟ್ಟದ್ದನ್ನು ಎಂದು ತೆಗೆದುಕೊಳ್ಳೋಣ? ಋಷಿಗಳಿಗೆ ಕಲ್ಪಾಂತರಗಳ ಆಚೆಗೂ ಹಾಯುವ ದೃಷ್ಟಿಶಕ್ತಿ ಇತ್ತು. ಆದ್ದರಿಂದ ಋಷಿಗಳು ತಮ್ಮ ಇಂದ್ರಿಯಾತೀತ ಗ್ರಹಣಶಕ್ತಿಯ ಮೂಲಕ ಸಂಹಿತೆಗೊಳಿಸಿದ ವೇದಗಳಿಗೆ ಈ ರೀತಿಯ ಲೆಕ್ಕಾಚಾರಗಳು ಹೊಂದಲಾರವು. ಹೀಗೆ, ಆಧುನಿಕ ಸಂಶೋಧಕರು ಬಹಳವಾಗಿ ಹೇಳುವ ವೇದಾಂತಾಂತರ್ಗತ ಖಗೋಳಿಕ ಆಧಾರಗಳು ವೇದಗಳ ಕಾಲನಿರ್ಣಯ ಮಾಡಲಾರವೆಂಬುದು ಕಾಣುತ್ತದೆ.



ಎರಡನೆಯ ವಿಧಾನವು ಭಾಷಾವಿಜ್ಞಾನದ್ದು. ಇಲ್ಲಿ ನಾವು ಭಾಷೆ ಮತ್ತು ಲಿಪಿ ಎರಡನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ದೇಶದ ಬಹುಭಾಗದಲ್ಲಿ ಬಳಕೆಯಲ್ಲಿರುವ ಎಲ್ಲ ಭಾಷೆಗಳ ಲಿಪಿಗೂ ಬ್ರಾಹ್ಮೀಯೇ ಮೂಲ. ದೇವನಾಗರಿ ಮತ್ತು ತಮಿಳು ಲಿಪಿಗಳು ಪರಸ್ಪರ ಸಂಬಂಧವೇ ಇಲ್ಲದವಂತೆ ಕಾಣಬಹುದು. ಆದರೆ ವಸ್ತುಸ್ಥಿತಿಯೇ ಬೇರೆ. ದೇಶಾದ್ಯಂತ ದೊರೆತ ಶಾಸನಗಳ ಆಧಾರದ ಮೇಲೆ, ಕಳೆದ ಶತಮಾನಗಳಲ್ಲಿ ಬ್ರಾಹ್ಮೀಲಿಪಿಯು ಹೊಂದಿರುವ ಬದಲಾವಣೆಗಳ ಬಗ್ಗೆ ಅಧ್ಯಯನ ಮಾಡಲಾಗಿದೆ. ಈ ಅಧ್ಯಯನವನ್ನಾಧರಿಸಿ ಒಂದು ಫಲಕ(Chart)ವನ್ನು ಸಿದ್ಧಗೊಳಿಸಲಾಗಿದೆ. ಅದನ್ನು ನೋಡಿದರೆ, ಮೇಲುನೋಟಕ್ಕೆ ಪರಸ್ಪರ ಸಂಬಂಧವಿಲ್ಲ ಎನ್ನುವಂತೆ ಕಂಡರೂ ದೇಶದ ವಿವಿಧ ಭಾಗಗಳಲ್ಲಿ ಇಂದು ಬಳಕೆಯಲ್ಲಿರುವ ಲಿಪಿಗಳೆಲ್ಲವೂ ಮೂಲ ಬ್ರಾಹ್ಮೀಯಿಂದಲೇ ವಿಕಾಸಗೊಂಡಂಥವು ಎಂಬುದು ಕಾಣುತ್ತದೆ. ಈಗ ಅಸ್ತಿತ್ವದಲ್ಲಿರುವ ಎಲ್ಲ ಲಿಪಿಗಳೂ ಮೀಸೆ ಮತ್ತು ಕೊಂಬುಗಳುಳ್ಳ ಬ್ರಾಹ್ಮೀಲಿಪಿಯೇ ಹೌದು–ಎಂದು ನಾನು ತಮಾಷೆಯಾಗಿ ಅಂದುಕೊಳ್ಳುತ್ತೇನೆ. ಬ್ರಾಹ್ಮೀ ಲಿಪಿಗಳ ಮಧ್ಯೆ ಮೀಸೆಯಂಥದು ಏನೋ ಅಂಟಿಕೊಳ್ಳುತ್ತದೆ. ದೇವನಾಗರಿಯು (उ...U ಮತ್ತು ऊ...U) ಹೀಗೆ ರೂಪುಗೊಂಡಿದೆ. ತಮಿಳು ವರ್ಣಮಾಲೆಯ ಅನೇಕ ಅಕ್ಷರಗಳು ಕೊಂಬು ಮೂಡಿಸಿಕೊಂಡ ಬ್ರಾಹ್ಮೀ ಲಿಪಿಯಂತೆ ಕಾಣುತ್ತವೆ. ರಾಜಾಜ್ಞೆಗಳು ಮತ್ತು ಶಾಸನಗಳ ಆಧಾರದಿಂದ ತಮಿಳು ಪದಗಳು ಹೀಗೆ ಬದಲಾವಣೆ ಹೊಂದಿವೆ. ಇದು ಎಲ್ಲ ಭಾಷೆಗಳಲ್ಲೂ ಕಂಡುಬರುವ ವಿದ್ಯಮಾನ. ಕೆಲ ಧ್ವನಿಗಳು ಶಿಥಿಲಗೊಳ್ಳುತ್ತವೆ. ಕೆಲವೇಳೆ ಅವುಗಳ ಅರ್ಥವೂ ಹಾಗೇ ಉಳಿದಿರುವುದಿಲ್ಲ. ತಮಿಳು ಪದ 'ವೆಗುಳಿ', ಎಂಬುದನ್ನೇ ನೋಡೋಣ, ಹಾಗೆಂದರೆ 'ಪೆದ್ದ' ಎಂದು ಅರ್ಥ; ಆದರೆ ಹಿಂದೆ ಅದಕ್ಕೆ 'ಕೋಪ' ಅಥವಾ 'ಕೋಪಿಷ್ಠ', ಎಂದು ಅರ್ಥವಿತ್ತು. ಹಿಂದೆ ತಮಿಳಿನ 'ಮಾಂಡ' ಎಂಬುದಕ್ಕೆ 'ಸತ್ತವನು' ಎಂಬ ಅರ್ಥವಿರಲಿಲ್ಲ; ಹಾಗೆಂದರೆ 'ಖ್ಯಾತ' ಎಂಬ ಅರ್ಥವಿತ್ತು ಎಂದು ನನಗೊಬ್ಬ ತಮಿಳು ವಿದ್ವಾಂಸರು ಹೇಳಿದರು. ಸಂಸ್ಕೃತದಲ್ಲೂ ಅಂಥ ನಿದರ್ಶನಗಳಿವೆ. ಮುಂದೆ ಬಂದ ಸಂಸ್ಕೃತ ಕಾವ್ಯಗಳನ್ನು ಅರಿಯುವಂತೆ ವೇದಗಳನ್ನು ಅರ್ಥಮಾಡಿಕೊಳ್ಳಲಾರೆವು. ಇತರ ಭಾಷೆಗಳಿಗೆ ಹೋಲಿಸಿದರೆ ನಮ್ಮ ಭಾಷೆಗಳಲ್ಲಿ ಅಂಥ ಬದಲಾವಣೆಗಳು ಅಸಂಖ್ಯವಾಗಿಲ್ಲ. ಇಂಗ್ಲಿಷ್ ಮನುಷ್ಯ ಕೂಡ ಕೇವಲ ಒಂದು ಸಾವಿರ ವರ್ಷಗಳಷ್ಟು ಹಳೆಯದಾದ ಆಂಗ್ಲೋ–ಸಾಕ್ಸನ್ (ಹಳೆಯ ಇಂಗ್ಲಿಷ್) ಭಾಷೆಯ ಒಂದು ಸಾಲನ್ನೂ ಅರ್ಥಮಾಡಿಕೊಳ್ಳಲಾರ. ಕೇವಲ ಸುಮಾರು 300 ವರ್ಷಗಳಲ್ಲಿ 'ಅಮೆರಿಕನ್ ಇಂಗ್ಲಿಷ್' ಎಂದು ಕರೆಯಬೇಕಾದಷ್ಟು ಬದಲಾವಣೆ ಅಲ್ಲಿನ ಇಂಗ್ಲಿಷ್‌ನಲ್ಲಾಗಿದೆ.

ಒಂದು ಧ್ವನಿಮಾದ ಸ್ವರೂಪವು ಬದಲಾಗುವ ಕಾಲಾವಧಿ ಎಷ್ಟು ಎಂಬುದನ್ನು ಲೆಕ್ಕಹಾಕಿದ್ದಾರೆ. ಆದರೆ ಒಂದು ಪದದ ಅರ್ಥವು–ಬದಲಾಗಲು ತಗಲುವ ಕಾಲಾವಧಿಯನ್ನು ಅಷ್ಟೇ ನಿಖರವಾಗಿ ಲೆಕ್ಕಹಾಕಲಾಗಿಲ್ಲ. ಅವುಗಳ ಪದಗಳ ಧ್ವನಿಲಕ್ಷಣವನ್ನಾಧರಿಸಿ ವಿದ್ವಾಂಸರು ವೇದಗಳ ಕಾಲನಿರ್ಣಯ ಮಾಡಲು ಪ್ರಯತ್ನಿಸಿದ್ದಾರೆ. ಪದವೊಂದರ ಧ್ವನಿಯು ಪ್ರತಿ 200 ವರ್ಷಕ್ಕೂ ಇಂಥಿಂಥ ಬದಲಾವಣೆ ಹೊಂದುತ್ತದೆ ಎಂದು ಭಾಷಾವಿಜ್ಞಾನದ ಅಧಿಕಾರವಾಣಿಯಂತಿರುವ ಒಬ್ಬರು ಪ್ರತಿಪಾದಿಸಿದ್ದಾರೆ. ಈಗ ನಮಗೆ ಗೊತ್ತಿರುವ ವೇದದ ಧ್ವನಿಮಾದ ಸ್ವರೂಪವು ಅನೇಕ ಮಾರ್ಪಾಟುಗಳನಂತರದ್ದಾಗಿದೆ. ಅಂಥ ಹತ್ತು ಬದಲಾವಣೆಗಳಾಗಿದ್ದರೆ ವೇದಗಳು 2000 ವರ್ಷಗಳಷ್ಟು ಹಳೆಯವು ಎಂದರ್ಥ. ಅದು 30 ಬದಲಾವಣೆ ಕಂಡಿದೆ ಅಂದರೆ 6000 ವರ್ಷಗಳಷ್ಟು ಹಳತು ಎಂದು ಅರ್ಥ; ಈ ತರ್ಕದಂತೆ ಕ್ರಿ.ಪೂ. 4000 ವರ್ಷಕ್ಕೂ ಹಿಂದೆ ನಮ್ಮ ಧರ್ಮಗ್ರಂಥಗಳು ಅಸ್ತಿತ್ವದಲ್ಲಿರಲಿಲ್ಲ ಎಂದಾಗುತ್ತದೆ. ಅಂಥ ಅಭಿಪ್ರಾಯಗಳನ್ನು ನಾವು ಪದೇ ಪದೇ ಕೇಳುತ್ತಿರುತ್ತೇವೆ.



ಈ ಪ್ರತಿಯೊಂದು ಬದಲಾವಣೆಯೂ ಯಾವ ಕಾಲಘಟ್ಟದಲ್ಲಿ ಆಗಿದೆ ಎಂಬುದು ನಮಗೆ ಖಚಿತವಾಗಿ ತಿಳಿದುಬರುತ್ತದೆ. ಈ ವಿಧಾನವನ್ನನುಸರಿಸಿಯೇ ಅನೇಕ ಶಾಸನಗಳ ಕಾಲನಿರ್ಣಯ ಮಾಡಲಾಗಿದೆ.

ಹೀಗಿದ್ದಾಗ್ಯೂ, ವೇದಗಳನ್ನು ಎಲ್ಲಿಯೂ ಕಲ್ಲಿನ ಮೇಲೆ ಕೆತ್ತಲಾಗಿಲ್ಲ. ಹಾಗಾಗಿ, ಯಾವುದೇ ಲಿಪಿಯ ಆಧಾರದ ಮೇಲೆ ಅವುಗಳ ಕಾಲನಿರ್ಣಯ ಮಾಡುವುದು ಸಾಧ್ಯವಾಗದು. ಈ ಸಂಬಂಧದಲ್ಲಿ ಭಾಷೆಯ ಇತರ ಲಕ್ಷಣಗಳನ್ನೂ ಗಣಿಸಬೇಕಾಗುತ್ತದೆ. ಪದಗಳ ಆಕೃತಿ ರಚನೆಯೂ ಅವುಗಳ ಧ್ವನಿಶೀಲವೂ ಕಾಲಕಾಲಕ್ಕೆ ಬದಲಾಗುತ್ತಾ ಹೋಗುತ್ತವೆ. ಸಂಗಂ ಕಾಲದ ಅನೇಕ

ವೇದಕಾಲವನ್ನು ನಿರ್ಣಯಿಸುವುದಕ್ಕೆ ಅಂಥ ಆಧಾರಗಳನ್ನು ಗಣಿಸುವುದು ಎಷ್ಟು ತಪ್ಪಾಗುತ್ತದೆ ಎಂದು ತೋರಿಸಲು ಒಂದು ನಿದರ್ಶನ ಸಾಕು.

ನಮ್ಮ ಮನೆಗಳಲ್ಲಿ ಅನೇಕ ಪಾತ್ರೆಗಳಿವೆ. ಅವುಗಳಲ್ಲಿ ಕೆಲವನ್ನು ಹೆಚ್ಚು ಬಳಸುತ್ತಿರುತ್ತೇವೆ. ಬೆಳಗ್ಗೆ ಮತ್ತು ಸಂಜೆ ಅನ್ನ ಮಾಡಲು ಬಳಸುವ ಕಂಚನ್ನು ದಿನಕ್ಕೆ ಎರಡು ಬಾರಿ

ತೊಳೆಯುತ್ತೇವೆ. ಆದ್ದರಿಂದ ಅದು ಬೇಗ ಸವೆಯುತ್ತದೆ. ನಮ್ಮಲ್ಲಿ ಇನ್ನೊಂದು, ಕೊಂಚ ದೊಡ್ಡದಾದುದೇ ಪಾತ್ರೆ-ಹಂಡೆ-ಇದೆ ಎನ್ನೋಣ. ಅದನ್ನು ಉಗ್ರಾಣದಲ್ಲಿ ಇಟ್ಟಿರುತ್ತೇವೆ. ಅದನ್ನು ಹಬ್ಬ ಹರಿದಿನಗಳಲ್ಲಿ ಬಿಟ್ಟು ಉಳಿದಂತೆ ಬಳಸುತ್ತಿರುವುದಿಲ್ಲ. ಅದನ್ನು ಅಪರೂಪಕ್ಕೊಮ್ಮೆ ತೊಳೆಯುವುದರಿಂದ ಇತ್ತೀಚೆಗೆ ಕೊಂಡ ಕಂಚಿನಷ್ಟೂ ಬೇಗ ಸವೆಯಲಾರದು. ಹಂಡೆಯು ಅಜ್ಜಿಯ ಕಾಲದಲ್ಲಿ ವರದಕ್ಷಿಣೆಯ ರೂಪದಲ್ಲಿ ಬಂದದ್ದಿರಬೇಕು, ಬಹಳ ಹಳತೇ ಸರಿ. ಆದರೂ ಸವೆದ ಗುರುತೂ ಕಾಣದು. ಇದರ ಆಧಾರದ ಮೇಲೆ ಕಂಚನ್ನು ಹಂಡೆಗಿಂತ ಹಿಂದೆಯೇ ಕೊಳ್ಳಲಾಗಿತ್ತು ಎಂಬ ನಿರ್ಣಯಕ್ಕೆ ಬರಲಾದೀತೆ? ನಿಮ್ಮ ಸೊಸೆ ಬಂದಾಗ ವರದಕ್ಷಿಣೆ ರೂಪದಲ್ಲಿ ಊಟದ ತಟ್ಟೆಯೂ ಪನ್ನೀರುದಾನಿಯೂ ಬಂದವೆನ್ನಿ. ಹತ್ತು ವರ್ಷಗಳಲ್ಲಿ ತಟ್ಟೆಯ ಸ್ವರೂಪವೇ ಬದಲಾಗಿಬಿಟ್ಟಿರುತ್ತದೆ, ಆದರೆ ಪನ್ನೀರುದಾನಿಯು ಹಾಗೆ ಹೊಳೆಯುತ್ತಿರುತ್ತದೆ.

ನಿತ್ಯವೂ ಮಾತಾಡುವ ಪದಗಳ ಧ್ವನಿಮಾದಲ್ಲಿ ಆಗುವ ವ್ಯತ್ಯಾಸ ಮತ್ತು ವೇದದ ಪದಗಳಲ್ಲಿ ಆಗುವ ವ್ಯತ್ಯಾಸ ಅಂಥದು-ಮೇಲೆ ಹೇಳಿದ ಪಾತ್ರೆಗಳಲ್ಲಿ ಕಂಡಂಥದು. ನಿತ್ಯವೂ ಸಾಮಾನ್ಯವಾಗಿ ಬಳಸುತ್ತಿರುವ ಪದಗಳು ಅನೇಕ ರೀತಿಯಲ್ಲಿ ಸವೆಯುತ್ತವೆ. ವೇದಗಳನ್ನು ನಿತ್ಯವೂ ಉಚ್ಚರಿಸಿದರೂ ಅವುಗಳ ಸ್ವರವನ್ನು ಮೂಲರೂಪದಲ್ಲಿ ಕಾಯ್ದುಕೊಳ್ಳಲು ವಿಶೇಷವಾದ ಗಮನ ಕೊಡಲಾಗುತ್ತದೆ. ವೇದಾಂಗಗಳ ಬಗ್ಗೆ ನಾನು ಆಮೇಲೆ ಹೇಳುತ್ತೇನೆ. ಶಿಕ್ಷಾ, ವ್ಯಾಕರಣಗಳ ಬಗ್ಗೆ ಹೇಳಲಿದ್ದೇನೆ. ಯಾವುದೇ ಮಾರ್ಪಾಟಿಗೆ ಒಳಗಾಗದಂತೆ ಪ್ರತಿಯೊಂದು ವೇದಾಕ್ಷರದ ಸ್ವರವನ್ನೂ ಹಾಗೇ ಕಾಪಾಡಿಕೊಂಡು ಬರುವ ವ್ಯವಸ್ಥೆಯೊಂದನ್ನು ನಮ್ಮ ಪೂರ್ವಿಕರು ಹೇಗೆ ರೂಪಿಸಿದರು ಎಂಬ ಬಗ್ಗೆ ಹೇಳಲಿದ್ದೇನೆ. ನಿತ್ಯಬಳಕೆಯ ಪಾತ್ರೆಗಳಂತಾಗಲಿ, ನಮ್ಮ ಮಾತಿನಂತಾಗಲಿ ವೇದದ ಸ್ವರಗಳು ಸವೆತಕ್ಕೆ ಒಳಗಾಗಲಾರವು. ಹಳೆಯದಾದರೂ ಸುರಕ್ಷಿತವಾಗಿರುವ ಹಂಡೆಯಂತೆ ಅವು.

ಆಧುನಿಕ ಪುರಾತತ್ತ್ವಶಾಸ್ತ್ರಜ್ಞರು (Indologists), ವೇದಗಳಲ್ಲೆಲ್ಲ ಋಗ್ವೇದವು ಅತಿ ಪ್ರಾಚೀನವಾದುದೆಂದೂ ಅನಂತರ ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದ ಅನುಕ್ರಮವಾಗಿ ಬಂದುವೆಂದೂ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಪ್ರತಿಯೊಂದು ವೇದಶಾಖೆಯಲ್ಲೂ ಅದರ ಸಂಹಿತೆಯು ಎಲ್ಲಕ್ಕಿಂತ ಹಳೆಯದು ಎಂದೂ ಅವರು ಹೇಳಿದ್ದಾರೆ. ಆಮೇಲೆ ಬ್ರಾಹ್ಮಣ ಮತ್ತು ಆರಣ್ಯಕ ಬಂದುವು ಎನ್ನುತ್ತಾರವರು. ಅವುಗಳ ಭಾಷೆಯ ಸ್ವರೂಪದ ಆಧಾರದ ಮೇಲೆ ಪ್ರತಿಯೊಂದು ಪಾಠ್ಯದ ಕಾಲನಿಗದಿ ಮಾಡಲೂ ಅವರು ಪ್ರಯತ್ನಿಸಿದ್ದಾರೆ. ವೇದಗಳಲ್ಲಿ ಬಳಕೆಯಾದ ಕೆಲವು ಪದಗಳು ರಾಮಾಯಣ-ಮಹಾಭಾರತ ಮತ್ತು ಕಾಳಿದಾಸನಂಥ ಕವಿಕೃತಿಗಳಲ್ಲಿ ಭಿನ್ನರೂಪಗಳಲ್ಲಿ ಹೇಗೆ ಕಾಣಿಸಿಕೊಂಡಿವೆ ಎಂಬ ಬಗೆಗೂ ಅವರು ಸಂಶೋಧನೆ ನಡೆಸಿದ್ದಾರೆ. ನಾನು ಮೇಲೆ ತೋರಿಸಿಕೊಟ್ಟಿರುವ ವೇದಗಳ ಧ್ವನಿಮಾಗಳಿಗೂ ಬೇರೆ ಕೃತಿಗಳ ಧ್ವನಿಮಾಗಳಿಗೂ ಇರುವ ಮೂಲಭೂತ ವ್ಯತ್ಯಾಸವನ್ನು ಉಪೇಕ್ಷಿಸುವುದರಿಂದಾಗಿ ಈ ಪುರಾತತ್ತ್ವಶಾಸ್ತ್ರಜ್ಞರು ನಡೆಸುವ ಭಾಷಾವೈಜ್ಞಾನಿಕ ಸಂಶೋಧನೆಯು ಸರಿಯಾದ ಫಲಿತಾಂಶವನ್ನು ಕೊಡಲಾರದೆ ಹೋಗುತ್ತದೆ. ಅವುಗಳನ್ನು ತಮ್ಮ ಮೂಲರೂಪದಲ್ಲಿ ಜತನ ಮಾಡಲು ತೆಗೆದುಕೊಂಡಿರುವ ಈ ಎಲ್ಲ ಎಚ್ಚರಿಕೆಗಳ ಅನಂತರವೂ ನಮ್ಮ ಗ್ರಹಿಕೆಗೆ ಸಿಗುವ ಕೆಲ ಸಾವಿರ ವರ್ಷಗಳೇ ಅದಕ್ಕೆ ಹಿಡಿದಿದ್ದೀತು. ಹೀಗೆ, ಭಾಷಾಧ್ವನಿಗಳಲ್ಲಾಗುವ ಸವಕಳಿಗಳ ಬಗೆಗಿನ ಮಾತು ಇತರ ಕೃತಿಗಳಿಗೂ ಆಡುಭಾಷೆಗಳಿಗೂ ಅನ್ವಯಿಸೀತು, ವೇದಗಳಿಗಲ್ಲ; ಇದನ್ನು ಸ್ಪಷ್ಟಪಡಿಸಿಕೊಂಡಿದ್ದಾದರೆ, ಆಧುನಿಕ ಪುರಾತತ್ತ್ವಶಾಸ್ತ್ರಜ್ಞರು ಯತ್ನಿಸಿರುವಂತೆ ವೇದಕಾಲದ ನಿರ್ಣಯ ಮಾಡುವುದು ಯುಕ್ತವಾದುದಲ್ಲ ಎಂಬುದನ್ನು ಒಪ್ಪುತ್ತೀರಿ.

ಹಿಂದೀ ಭಾಷೆಯು ಕೇವಲ ಕೆಲವು ಶತಮಾನಗಳಷ್ಟು ಹಳತಾದುದು. ಆದಾಗ್ಯೂ ಅದನ್ನು ಬಹಳ ವಿಸ್ತಾರವಾದ ಪ್ರದೇಶದಲ್ಲಿ ಜನರು ಆಡುತ್ತಾರೆ. ಸಂಸ್ಕೃತ, ಅರೇಬಿಕ್ ಮತ್ತು ಪರ್ಷಿಯನ್ ಪದಗಳು ಅದರಲ್ಲಿವೆ, ಹಾಗಾಗಿ ಹೋಲಿಸಿದ್ದಾದರೆ ಅದು ಕಡಮೆ ಅವಧಿಯಲ್ಲಿಯೇ ಬದಲಾವಣೆ ಹೊಂದಿದೆ. ತಮಿಳನ್ನು ಅದಕ್ಕಿಂತ ಕಡಮೆ ಜನ ಬಳಸುತ್ತಾರೆ, ಆದರೆ ಹಿಂದಿಯಷ್ಟು ಮಾರ್ಪಾಟಾಗಿಲ್ಲ. ಅಷ್ಟಾದರೂ ತಾಯುಮಾನವರ್ ಅವರ ಹಾಡುಗಳನ್ನು ಅರ್ಥಮಾಡಿಕೊಳ್ಳುವಷ್ಟು ಕಂಬನ್ ರಾಮಾಯಣವನ್ನು ಗ್ರಹಿಸಲಾರೆವು. ಜ್ಞಾನಸಂಬಂಧರ್ ಅವರ ತೇವಾರಮ್ ಕೃತಿಯನ್ನೇ ಕಂಬನ್ ರಾಮಾಯಣವನ್ನು ಅರಿಯಬಹುದಾದಷ್ಟು ಸುಲಭವಾಗಿ ಅರ್ಥಮಾಡಿಕೊಳ್ಳಲಾರೆವು. ಮತ್ತೆ ತಿರುಮುರುಗಾಟ್ರುಪೆಡ್ಡೈಗಳು ತೇವಾರಂಗಿಂತ ಕಠಿಣವಾಗಿವೆ. ಹೀಗೆ, ಈ ಶತಮಾನಗಳಲ್ಲಿ ತಮಿಳು ಕೂಡ ಹಾಗೆಯೇ ಉಳಿದಿಲ್ಲ. ಇಡೀ ಭಾರತದ ಜನಕ್ಕೆ ಸಂಸ್ಕೃತವು ತಿಳಿದಿತ್ತು, ಆದರೆ ಹಿಂದಿ ಅಥವಾ ತಮಿಳಿನಂತೆ ಅದು ಆಡುಭಾಷೆಯಾಗಿರಲಿಲ್ಲ. ಅದು ಸಾಹಿತ್ಯಕ ಭಾಷೆಯಾಗಿತ್ತು, ತಮಿಳಿನಲ್ಲಾಗಿರುವಷ್ಟು ವ್ಯತ್ಯಾಸವೂ ಅದರಲ್ಲಿ ಆಗಿಲ್ಲ. ವೇದಗಳ ವಿಷಯದಲ್ಲಾದರೆ ಕಾವ್ಯಗಳಿಗಿಂತ ಹೆಚ್ಚು ಎಚ್ಚರಿಕೆಯಿಂದ ಅವುಗಳನ್ನು ಕಾಪಾಡಿಕೊಂಡು ಬರಲಾಗಿದೆ, ಮತ್ತು ಅವುಗಳಲ್ಲಿ ಮಾರ್ಪಾಟು ಕಾಣುವುದು ಅಪರೂಪ. ಆದ್ದರಿಂದ ಭಾಷಾತಜ್ಞರು ಹೇಳುವಂತೆ ಬೇರೆ ಭಾಷೆಗಳಲ್ಲಿ ಕೆಲ ವ್ಯತ್ಯಾಸಗಳಾಗಲು 1000 ವರ್ಷ ಹಿಡಿದರೆ ವೇದಗಳಲ್ಲಿ ಹಾಗಾಗಲು 100000 ವರ್ಷ ಹಿಡಿಸೀತು.

ವೇದಗಳನ್ನು ಬಲು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರಲಾಗಿದೆ. ಮಂತ್ರದ ಪ್ರತಿ ಅಕ್ಷರವನ್ನೂ ಅದರ ಸ್ವರ ಮತ್ತು ಪಾಠ್ಯಕ್ಕೆ ಕರಾರುವಾಕ್ಕಾಗಿ ಹೊಂದುವಂತೆ ಉಚ್ಚರಿಸಿದಾಗ ಮಾತ್ರ ಅದು ಫಲಪ್ರದವಾಗುತ್ತದೆ ಎಂಬ ಬಲವಾದ ನಂಬಿಕೆಯಿಂದ ಹೀಗೆ ಮಾಡಲಾಗಿದೆ. ಈ ಉದ್ದೇಶಕ್ಕಾಗಿಯೇ ವೇದಗಳನ್ನು ಜತನಗೊಳಿಸುವ ಜವಾಬ್ದಾರಿಯನ್ನು ಪ್ರತ್ಯೇಕವಾದ ಜಾತಿಯೊಂದಕ್ಕೆ ವಹಿಸಲಾಯಿತು. ಈ ವಸ್ತುಸ್ಥಿತಿಯನ್ನು ರಕ್ತಗತ ಮಾಡಿಕೊಳ್ಳದೆ ಮಾಡುವ ಸಂಶೋಧನೆಯು ಏನನ್ನೂ ಸಾಧಿಸುವುದಿಲ್ಲ. ವೇದಗಳು ನಿತ್ಯವಲ್ಲ ಎಂದು ಸ್ಥಾಪಿಸುವ ತಮ್ಮ ಯತ್ನದಲ್ಲಿ ಆಧುನಿಕ ಸಂಶೋಧನೆಗಳು ಯಶಸ್ಸು ಕಂಡಿಲ್ಲ. ಇಷ್ಟು ದೀರ್ಘಕಾಲ ಅವನ್ನು ಎಷ್ಟೊಂದು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರಲಾಗಿದೆ ಎಂಬುದನ್ನು ನೋಡಿ, ಅವುಗಳ ಸ್ವರವನ್ನು ಜೀವಂತವಾಗಿಟ್ಟುಕೊಳ್ಳಲು ಎಷ್ಟು ರೀತಿಗಳಲ್ಲಿ ಯತ್ನಿಸಲಾಗಿದೆ ನೋಡಿ; ಆಗ ವೇದಗಳು ಅನಾದಿ ಎಂಬ ನಮ್ಮ ನಂಬಿಕೆ ಬಲಗೊಳ್ಳುತ್ತದೆ.

●







ಭಕ್ತಕವಿ ವಿದ್ವಾನ್ ಕೆ.ವಿ. ವರದರಾಜಯ್ಯಂಗಾರ್



# ಬಾಲಕೃಷ್ಣನ ಲೀಲೆಗಳು

**ಶ್ಲೋಕ-19**

ಶಂಭೋ ಸ್ವಾಗತಮಾಸ್ಯತಾಂ ಇತಇತೋ ವಾಮೇನ ಪದ್ಮಾಸನ
ಕ್ರೌಂಚಾರೇ ಕುಶಲಂ ಸುಖಂ ಸುರಪತೇ ವಿತ್ತೇಶ ನೋದೃಶ್ಯಸೇ
ಇತ್ಥಂ ಸ್ವಪ್ನಗತಸ್ಯ ಕೈಟಭಜಿತಃ ಶ್ರುತ್ವಾ ಯಶೋದಾ ಗಿರಃ
ಕಿಂ ಕಿಂ ಬಾಲಕ ಜಲ್ಪಸೀತಿ ರಚಿತಂ ಧೂಧೂಕೃತಂ ಪಾತು ನಃ (II-59)
'ಶಂಭುವೇ ಸ್ವಾಗತವು ಕುಳ್ಳಿರಿ ಇಲ್ಲಿ ಇಲ್ಲೇ,' 'ಎಡಗಡೆಗೆ ಹೇ ಬ್ರಹ್ಮನೇ'

**'ಸ್ಕಂದನೇ ಕುಶಲವೇ?' 'ಸುಖವಾಯ್ತೆ ಇಂದ್ರನೇ?'**
**'ಕಾಣಲಿಲ್ಲವದೇಕೆ ಹೇ ಕುಬೇರನೇ?'**
**ಸ್ವಪ್ನದಲಿ ಶಿಶುಕೃಷ್ಣ ಹೀಗೆ ನುಡಿದುದ ಕೇಳಿ,**
**'ಏನಿದೇನಿದು ಮಗು ನಿನ್ನ ಕನವರಿಕೆ'**
**ಎನುತಾ ಯಶೋದೆಯು ದೃಷ್ಟಿ ತೆಗೆದಿರಲು,**
**ಸಲಹಲೆಮ್ಮನು ಬಾಲಗೋಪಾಲನವನು**



ಇಲ್ಲಿ ಮುದ್ದು ಕೃಷ್ಣನ ಕನಸಿನ ಲೋಕವನ್ನು ವರ್ಣಿಸಿದೆ. ಕಂದ ಕೃಷ್ಣನಿಗೆ ತಾಯಿ ಯಶೋದೆಯು ವಿಧವಿಧವಾದ ಕಥೆಗಳನ್ನು ಹೇಳುತ್ತಾಳೆ. ಲಾಲಿ ಹಾಡುತ್ತಾಳೆ. ಗುಮ್ಮನನ್ನು ಕರೆಯುತ್ತಾಳೆ. ಇದಕ್ಕೆಲ್ಲ ಫಲಪ್ರಾಪ್ತಿಯಾದಂತೆ ಶಿಶುಕೃಷ್ಣನು ನಿದ್ದೆ ಮಾಡಲಾರಂಭಿಸುತ್ತಾನೆ. ತಾಯಿ ಯಶೋದೆಗೆ ತುಂಬ ಸಂತೋಷ, ನೆಮ್ಮದಿ. ಈಗ ತನ್ನ ಕೆಲಸಗಳಲ್ಲಿ ತಾನು ತೊಡಗಿಸಿಕೊಳ್ಳುತ್ತಾಳೆ.

ಒಮ್ಮೆ ತಾಯಿ ಯಶೋದೆ, ತನ್ನ ಮನೆಗೆಲಸಗಳ ಮಧ್ಯೆ, ಶಿಶುಕೃಷ್ಣ ನಿದ್ದೆ ಮಾಡುತ್ತಿದ್ದಾನೆ ಎಂಬುದನ್ನು ನೆನಪಿಸಿಕೊಂಡಳು. ಕೂಡಲೇ ಮಗು ಮಲಗಿರುವ ಕೋಣೆಗೆ ಹೋಗಿ ನೋಡಿದಳು. ಅದಾವುದೋ ಕೆಟ್ಟ ಗಳಿಗೆಯಲ್ಲಿ ಮಗು ಕೃಷ್ಣ ಬಡಬಡಿಸುತ್ತಿರುವಂತೆ ಕಾಣಿಸಿತು. ಇನ್ನೂ ಹತ್ತಿರ ಹೋಗಿ ಕೇಳಿಸಿಕೊಂಡಳು. ಮುಗ್ಧ ಶಿಶು ಕೃಷ್ಣನ ಬಾಯಿಂದ ಬರುತ್ತಿರುವ ಮಾತುಗಳು ಹೀಗಿದ್ದವು:

"ಓಹೋ, ಈಶ್ವರನೇ, ಬನ್ನಿ, ಬನ್ನಿ; ಇಲ್ಲಿ ಕುಳಿತುಕೊಳ್ಳಿ."

"ಬ್ರಹ್ಮನೇ, ನೀವೂ ಬನ್ನಿ, ಇಲ್ಲಿ ಎಡಗಡೆಗೆ ಕುಳಿತುಕೊಳ್ಳಿ."

"ಬಾರಯ್ಯ, ಷಣ್ಮುಖ, ಚೆನ್ನಾಗಿದ್ದೀಯಾ?"

"ಏನಪ್ಪಾ ಇಂದ್ರ, ಸುಖವಾಗಿರುವೆಯಾ? ಬೇರೆ ಯಾವುದೂ ತಾಪತ್ರಯದಲ್ಲಿ ಸಿಕ್ಕಿಕೊಂಡಿಲ್ಲ ತಾನೇ?"


"ಏನಪ್ಪಾ! ಕುಬೇರ! ನಿನ್ನ ದರ್ಶನವೇ ಇಲ್ಲ. ತುಂಬ ದಿನದಿಂದ ಕಾಣುತ್ತಿಲ್ಲ."

ಗಾಢ ನಿದ್ರೆಯಲ್ಲಿರಬೇಕಾದ ಮಗು ಕೃಷ್ಣನು ತನ್ನ ಹಿಂದಿನ ಪರಸ್ವರೂಪದಲ್ಲಿ ನೆಲೆಗೊಂಡಿದ್ದಾನೆ. ವೈಕುಂಠದಲ್ಲಿ, ಪರಮಪದದಲ್ಲಿ ಶೇಷಶಯನನಾಗಿದ್ದಾನೆ ಶ್ರೀಮನ್ನಾರಾಯಣ. ಅವನನ್ನು ದರ್ಶಿಸಲು ದೇವಾನುದೇವತೆಗಳೆಲ್ಲ ಬರುತ್ತಿದ್ದಾರೆ. ಬಂದವರನ್ನೆಲ್ಲ ಸದ್ಗೃಹಸ್ಥನಂತೆ ನಾರಾಯಣನು ಆದರದಿಂದ ಬರಮಾಡಿಕೊಂಡು ಉಪಚಾರದ ಮಾತುಗಳನ್ನು ಹೇಳುತ್ತಿದ್ದಾನೆ. ಇಂತಹ ಸಹಜ, ಸುಂದರ, ಸತ್ಯ ಸನ್ನಿವೇಶದಲ್ಲಿ ನಾರಾಯಣನಿಂದ ಮಾತುಗಳು ಮುಚ್ಚುಮರೆಯಿಲ್ಲದೆ ಬರುತ್ತಿದ್ದವು. ಅದೂ ಈ ಕೃಷ್ಣಾವತಾರದ ಬಾಲಕೃಷ್ಣನ ಬಾಯಿಯಲ್ಲಿ ಈಗ ಹೊರಬರುತ್ತಿವೆ.

ಇದನ್ನೆಲ್ಲ ಕೇಳಿಸಿಕೊಂಡು ಯಶೋದೆ ತುಂಬ ಕಳವಳಪಟ್ಟಳು. ಮಗುವಿಗೆ ಯಾವುದೋ ಕೆಟ್ಟ ಕಣ್ಣು ತಾಗಿದೆ. ಯಾರದೋ ದೃಷ್ಟಿ ತಾಗಿದೆ ಎಂದೆನಿಸಿತು ಅವಳಿಗೆ. ಕೂಡಲೇ ಹಳೆಯ ಪೊರಕೆಯಿಂದ ಒಂದು ಹಿಡಿ ಪೊರಕೆ ಕಡ್ಡಿಗಳನ್ನು ತೆಗೆದುಕೊಂಡಳು. ಅದರ ಹಿಂಭಾಗದಿಂದ ಮಗು ಕೃಷ್ಣನಿಗೆ ಅಪ್ರದಕ್ಷಿಣವಾಗಿ ನಿವಾಳಿಸಿದಳು. ಅದಕ್ಕೆ ಥೂ ಥೂ ಎಂದು ಉಗಿದಳು. ಆ ಹಿಡಿಪೊರಕೆ ಕಟ್ಟನ್ನು ಕೋಣೆಯ ಒಂದು ಮೂಲೆಯಲ್ಲಿಟ್ಟು ಬೆಂಕಿ ಹಚ್ಚಿದಳು. ಆ ಪೊರಕೆ ಕಡ್ಡಿಗಳು ಚಟಚಟನೆ ಸದ್ದು ಮಾಡುತ್ತಾ ಉರಿಯತೊಡಗಿದವು. ಆ ಶಬ್ದವು ಹೆಚ್ಚಾದಂತೆಲ್ಲ ದೃಷ್ಟಿ ದೋಷವೂ ಹೆಚ್ಚಾಗಿತ್ತೆಂದು ಎಣಿಕೆ. ಆ ಶಬ್ದದೊಂದಿಗೆ ಯಶೋದೆ ತನ್ನ ಕೈಬೆರಳುಗಳಿಂದ ನೆಟಿಕೆ ಮುರಿದು "ಹಾಳಾಗಿ ಹೋಗು" ಎಂದು ಶಪಿಸಿದಳು. ಇದರೊಂದಿಗೆ ಕೆಟ್ಟಕಣ್ಣು ತಾಗಿದ್ದ ದೃಷ್ಟಿದೋಷವೂ ಉರಿದು ಭಸ್ಮವಾಯಿತು ಎಂದು ನೆಮ್ಮದಿಯಿಂದ ನಿಟ್ಟುಸಿರಿಟ್ಟಳು ಆ ಮಹಾತಾಯಿ.

ಇಂತಹ ದೈವೀಕಂದ ಕೃಷ್ಣನೂ ಅವನ ಕ್ಷೇಮಕ್ಕಾಗಿ ಪರಿತಪಿಸುವ ಯಶೋದಾ ತಾಯಿಯೂ ನಮ್ಮನ್ನು ಎಲ್ಲ ಸಮಯಗಳಲ್ಲೂ ಎಲ್ಲ ಕೆಟ್ಟ ಗಳಿಗೆಗಳಲ್ಲೂ, ಎಲ್ಲ ದುಷ್ಟ ಶಕ್ತಿಗಳಿಂದಲೂ ಸದಾ ಕಾಪಾಡುತ್ತಿರಲಿ.

**(ಮುಂದುವರಿಯುವುದು)**




ತೆಲುಗು ಮೂಲ:
■ ಪಿ.ವಿ.ಆರ್.ಕೆ. ಪ್ರಸಾದ್
(ನಿವೃತ್ತ ಐ.ಎ.ಎಸ್. ಅಧಿಕಾರಿ)

■ ಕನ್ನಡಕ್ಕೆ: ಸೂರ್ಯವಂಶಿ

ತಿರುಮಲೆಯ ಬೆಟ್ಟದ ಮೇಲಿನ ಶ್ರೀನಿವಾಸನ ಆಲಯವನ್ನು ಮರಾಠ ಸೈನ್ಯದಿಂದ ಸ್ವಾಧೀನಪಡಿಸಿಕೊಳ್ಳಬೇಕೆಂದು ಈಸ್ಟ್ ಇಂಡಿಯಾ ಕಂಪೆನಿಯ ಸೈನ್ಯಗಳು ಗಡಿಬಿಡಿಯಿಂದ ಮದ್ರಾಸಿನಿಂದ ತಿರುಪತಿಗೆ ಬಂದುವು.

ಸೈನ್ಯ ದೊಡ್ಡದೇ! ಆದರೆ ಬೆಟ್ಟವನ್ನು ಹತ್ತುವುದಕ್ಕೆ ಅರ್ಹತೆಯಿರುವ ಹಿಂದೂ ಸೈನಿಕರನ್ನು ಮಾತ್ರ ಆರಿಸಿಕೊಂಡು, ಬೆಟ್ಟದ ಮೇಲೆ ಕಳುಹಿಸುವ ಏರ್ಪಾಟು ಮಾಡಿ, ಅಲ್ಲಿ ಯುದ್ಧ ಮಾಡಬೇಕೆಂದು ಅಧಿಕಾರಿಗಳು ಹೇಳಿದರು. (ಯುದ್ಧ ಮಾಡುವುದಕ್ಕೆ ಸೆಂಟಿಮೆಂಟ್?) "ಹಾಗೇ" ಎಂದು ಬೆಟ್ಟದ ಹತ್ತಿದ ಸೈನಿಕರು ಮರಾಠ ಸೈನಿಕರ ಕೈಯಲ್ಲಿ ಭಾರಿ ಹೊಡೆತ ತಿಂದರು.

ಮತ್ತೊಂದು ಸಂದರ್ಭದಲ್ಲಿ ಹೈದರಾಲಿ ತಿರುಪತಿಯ ಸುತ್ತಮುತ್ತಲಿನ ಸಂಸ್ಥಾನಗಳ ಮೇಲೆ ದಂಡೆತ್ತಿ ಬಂದು ಗೆದ್ದರೂ ತಿರುಮಲೆಯ ಬೆಟ್ಟದ ಮೇಲಿನ ಆಲಯವನ್ನು ಆಕ್ರಮಿಸುವ ಪ್ರಯತ್ನ ಮಾಡಲಿಲ್ಲ. ಜೊತೆಗೆ ದೇವಸ್ಥಾನದ ಆದಾಯವನ್ನಾಗಲೀ, ಆ ವ್ಯವಸ್ಥೆಯನ್ನಾಗಲೀ ಸ್ಪರ್ಶಿಸಲೂ ಇಲ್ಲ!

ಆ ಮಾತಿಗೆ ಬಂದರೆ, ದೇಶದಲ್ಲಿನ ಅನೇಕ ಆಲಯಗಳನ್ನು ಧ್ವಂಸ ಮಾಡಿದ ಚರಿತ್ರೆಯಿರುವ ಯಾವ ಮುಸ್ಲಿಂ ಪಾಲಕನೂ ತಿರುಮಲೆಯ ಆಲಯದ ಮೇಲೆ ಒಮ್ಮೆಯೂ ದಾಳಿ ಮಾಡಲಿಲ್ಲ!

## ತಿರುಮಲೆಯ ಆಲಯದ ಮೇಲೆ ಮುಸಲ್ಮಾನರ ದಾಳಿ ನಡೆದಿಲ್ಲ

* * *

ತಿರುಮಲೆಯ ಪ್ರಾಂತ್ಯ ಆರ್ಕಾಟು ನವಾಬನ ವಶಕ್ಕೆ ಬಂದಿದ್ದರಿಂದ ತಿರುಮಲೆಯ ಆಲಯವೂ ಆ ನವಾಬನ ಅಧಿಕಾರಕ್ಕೆ ಬಂತು. ಹೆಚ್ಚು ಕಡಮೆ ವರ್ಷಕ್ಕೆ ಎರಡು ಲಕ್ಷಗಳಷ್ಟು ಆದಾಯವನ್ನು ನೀಡುತ್ತಿರುವ ದೇವಸ್ಥಾನವನ್ನು ನಾಶಪಡಿಸುವುದಕ್ಕೆ...ಕೊನೇಪಕ್ಷಮುಟ್ಟುವುದಕ್ಕೂಮುಸ್ಲಿಮರಾಗಲೀ, ಇಂಗ್ಲಿಷರಾಗಲೀ, ಫ್ರೆಂಚಿನವರಾಗಲೀ ಪ್ರಯತ್ನಿಸಲಿಲ್ಲ. ಆದರೆ ಆ ದೇವಸ್ಥಾನದ ಅಧಿಕಾರ ಪಡೆಯುವುದಕ್ಕೆ ಮಾತ್ರ ಪ್ರತಿಯೊಬ್ಬರೂ ಯಾವಾಗಲಾದರೂ ಒಮ್ಮೆ ಬಲವಾದ ಪ್ರಯತ್ನ ಮಾಡಿದರು.

ಮೊದಲು ಮುಸ್ಲಿಮರ ದೃಷ್ಟಿ ಆ ಆಲಯದ ಮೇಲೆ ಬಿದ್ದಾಗ, ತಿರುಪತಿಯಿಂದ ಬೆಟ್ಟಕ್ಕೆ ಹೋಗಿ ಆಲಯದ ಮೇಲೆ ದಾಳಿ ಮಾಡಬೇಕೆಂಬ ಸಂಕಲ್ಪದಿಂದ ಇದ್ದಾಗ ಸ್ಥಾನಿಕರು ಈ ಆಲಯದ ಆದಾಯ ಎಷ್ಟು ಹೆಚ್ಚೋ, ಬಂಗಾರದ ಮೊಟ್ಟೆಯನ್ನು ನೀಡುವ ಬಾತೆಂದು ವರ್ಣಿಸಿ, ಅದರ ಮೇಲೆ ದಾಳಿ ನಡೆಸಿದರೆ ಅವರೇ ನಷ್ಟವನ್ನು ಅನುಭವಿಸುತ್ತಾರೆಂದೂ ಕಾರ್ಯಕ್ರಮಗಳನ್ನು ನಡೆಯಿಸಲು ಬಿಟ್ಟರೆ ವರ್ಷಕ್ಕೆ ಏನಿಲ್ಲವೆಂದರೂ ಎರಡು ಲಕ್ಷ ರೂಪಾಯಿಗಳು ಸುನಾಯಾಸವಾಗಿ ಬರುತ್ತದೆಂಬ ವಿಷಯವನ್ನು ಅವರಿಗೆ ಅರ್ಥವಾಗುವಂತೆ ವಿವರಿಸಿದಂತೆ ತೋರುತ್ತದೆ.

ಅದೂ ಅಲ್ಲದೇ ಮೇಲಿರುವುದು ವರಾಹಸ್ವಾಮಿ ಎಂದು ತಿಳಿಸಿ, ಮುಸಲ್ಮಾನರಿಗೆ ಸ್ವಲ್ಪ ಅಸಹ್ಯತೆ ಉಂಟಾಗುವಂತೆ ಹೇಳಿರುವುದು, ಮುಸಲ್ಮಾನರ ನವಾಬರಿಗೆ ಬೇಕಾದ ಆದಾಯ, ಆಲಯದಿಂದ ತಪ್ಪದೇ ಬರುವಂತೆ, ದೇವಸ್ಥಾನದ ನಿರ್ವಹಣೆಯನ್ನು ಹರಾಜು ಹಾಕುವುದರ ಮೂಲಕ, ಒಬ್ಬ ಪ್ರತಿನಿಧಿಗೆ ಒಪ್ಪಿಸುವ (ರೆಂಟರ್) ಪದ್ಧತಿಯನ್ನು ಆರಂಭಿಸಿದರು. ಇನ್ನೊಬ್ಬರ ಅಧೀನಕ್ಕೆ ಆಲಯವು ಹೋಗದಂತಿರುವುದಕ್ಕೆ ಶ್ರೀವೈಷ್ಣವರೇ ಈ ನಿರ್ವಹಣೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುವಂತೆ, ನವಾಬನಿಗೆ ಪ್ರತೀ ವರ್ಷ ಎರಡು ಲಕ್ಷ ರೂಪಾಯಿಗಳು ಸಲ್ಲುವಂತೆ ಒಪ್ಪಂದವನ್ನು ಮಾಡಿಕೊಳ್ಳಲಾಯಿತು.

ಈ ರೀತಿ ಆರ್ಕಾಟು ನವಾಬನಿಗೆ ಪ್ರತೀ ವರ್ಷ ತಿರುಮಲೆಯ ಆಲಯದಿಂದ ಎರಡು ಲಕ್ಷ ರೂಪಾಯಿಗಳು ಸಂದಾಯವಾಗುತ್ತಿತ್ತು. ಈ ಆರ್ಕಾಟು ನವಾಬನಿಗೆ ತಿರುಚಿರಾಪಲ್ಲಿಯ ಚಂದಾಸಾಹೇಬು ಆತನ ಮಗ ರಾಜಾ ಸಾಹೇಬನೊಂದಿಗೆ ವೈರತ್ವವಿತ್ತು. ಅವರಿಬ್ಬರ ನಡುವೆ ಸದಾ ಯುದ್ಧ ನಡೆಯುತ್ತಿರುತ್ತಿತ್ತು. ಅದರಿಂದಾಗಿ ಈ ನವಾಬನ ಖಜಾನೆ ಖಾಲಿಯಾದ್ದರಿಂದ ಆತ ಇಂಗ್ಲಿಷರ ಸಹಾಯ ತೆಗೆದುಕೊಳ್ಳಲಾರಂಭಿಸಿದ. ಆ ಸಹಾಯದಿಂದ ಅಧಿಕಾರದಲ್ಲಿ ಸ್ಥಿರತೆ ಏರ್ಪಟ್ಟಿತು. ಸಹಾಯ ಮಾಡಿದ ಆಂಗ್ಲರಿಗೆ ತನ್ನ ಅಧಿಕಾರವನ್ನು ಉಳಿಸಿದ್ದರಿಂದ ನೀಡಬೇಕಾದ ಹಣವನ್ನು ನೀಡಲಾರದೇ, ಅವನ ಅಧೀನದಲ್ಲಿದ್ದ ಕೆಲವು ಜಿಲ್ಲೆಗಳೊಂದಿಗೆ ತಿರುಮಲೆಯ ಆದಾಯವನ್ನೂ ಅವರಿಗೆ ಬರೆದು ಕೊಟ್ಟುಬಿಟ್ಟ.

ಆ ರೀತಿ ಕ್ರಿ.ಶ. 1714ರಿಂದ ದೇವಸ್ಥಾನದ ಆದಾಯ ಈಸ್ಟ್ ಇಂಡಿಯಾ ಕಂಪೆನಿಯವರ ಅಧಿಕಾರಕ್ಕೆ ಬಂತು. ಅಲ್ಲಿಯವರೆಗೂ ಆಲಯದ ಜವಾಬ್ದಾರಿಯನ್ನು ಏಜೆಂಟರು ನಿರ್ವಹಿಸುವಂತೆ, ಪ್ರತೀ ವರ್ಷ ಕಂಪೆನಿಯವರಿಗೆ ಎರಡು ಲಕ್ಷಗಳನ್ನು ನೀಡುವ ಪದ್ಧತಿ ಮುಂದುವರಿಯಿತು.

ಕ್ರಿ.ಶ. 1715ರಲ್ಲಿ ಡೂಪ್ಲೇನ ಪತ್ನಿ, ಮಾಡ್ ಡೂಪ್ಲೇಯ ಅಧಿಕಾರಿ (ಅಮಲ್ದಾರ) ರಾಜಗೋಪಾಲ್ ಪಂಡಿತ್ ಅನ್ನು ದೇವಸ್ಥಾನದ ಏಜೆಂಟರ ಬಳಿಗೆ ಕಳುಹಿಸಿ, ಫ್ರೆಂಚಿನವರಿಗೆ ದೇವಸ್ಥಾನವನ್ನು ಒಪ್ಪಿಸುವಂತೆ ಹೇಳಿ ಕಳುಹಿಸಿದರಂತೆ. ಆಗ ಆಂಗ್ಲರ ಪರವಾಗಿ ಏಜೆಂಟರಾಗಿದ್ದ ವಾಸುದೇವಾಚಾರಿ, ಫ್ರೆಂಚಿನವರ ಅಭ್ಯರ್ಥನೆಯನ್ನು ತಿರಸ್ಕರಿಸಿ, ಅವರನ್ನು ವಾಪಸ್ಸು ಕಳುಹಿಸಿದರಂತೆ.

ಇಂಗ್ಲಿಷಿನವರು, ಸೈನ್ಯದ ಸ್ವಲ್ಪ ಭಾಗವನ್ನು ದೇವಸ್ಥಾನದ ರಕ್ಷಣೆಗಾಗಿ ತರಕಂಬಾಡಿಯಲ್ಲಿ ಉಳಿಸುತ್ತಿದ್ದರಂತೆ. ಏನೇ ಆದರೂ ಇಂಗ್ಲಿಷರಾಗಲೀ, ಫ್ರೆಂಚರಾಗಲೀ, ನವಾಬರಾಗಲೀ, ಹಿಂದೂಗಳನ್ನೇ ತಮ್ಮ ಪ್ರತಿನಿಧಿಗಳಾಗಿ ಬೆಟ್ಟಕ್ಕೆ ಕಳುಹಿಸುತ್ತಿದ್ದರಂತೆ. ಅವರುಗಳು ತಮ್ಮ ಪರವಾಗಿ, ಬೆಟ್ಟ ಹತ್ತುವುದಕ್ಕೆ ಅರ್ಹರಲ್ಲದ ಜಾತಿಯವರನ್ನು, ಕುಲದವರನ್ನು ಎಂದೂ ಬೆಟ್ಟಕ್ಕೆ ಕಳುಹಿಸಿಲ್ಲವಂತೆ.

ಈ ಗಲಾಟೆಗಳ ಕಾರಣದಿಂದಾಗಿ ತಿರುಮಲೆಯ ಮೇಲೆ ದಾಳಿ ಮಾಡುವುದಕ್ಕೆ 'ಮುರಾರಿ' ಎಂಬಾತನು ಸಿದ್ಧನಾದರೆ, ಅವನನ್ನು ತಡೆಯುವುದಕ್ಕೆ ಕ್ರಿ.ಶ. 1753ರಲ್ಲಿ 'ನರಸಿಂಗರಾವ್' ಎಂಬಾತನು ಸಿದ್ಧನಾದ.

ಈ ಸಮಯದಲ್ಲಿ ಪೇಶ್ವೆಗಳು, ಕರ್ನಾಟಕದ ತಮ್ಮ 'ಭೌತ್' (4ನೆಯ ಭಾಗದ ಸುಂಕ) ವನ್ನು ವಸೂಲು ಮಾಡುವ ವಿಷಯದಲ್ಲಿ ಚರ್ಚೆ ನಡೆಸುವುದಕ್ಕೆ, ರಾಘವಾಚಾರಿ ಬಾಲಕೃಷ್ಣಶಾಸ್ತ್ರಿ ಎಂಬ ಇಬ್ಬರು ಮರಾಠರನ್ನು ಕಳುಹಿಸಿದರಂತೆ. ಅವರು ಕರಕಂಬಾಡಿಯ ಮೂಲಕ ತಿರುಪತಿಯನ್ನು ತಲಪಿದರು. ಅವರನ್ನು ದೇವಸ್ಥಾನದ ಜವಾಬ್ದಾರಿಯನ್ನು ವಹಿಸಿದ್ದ ಪ್ರತಿನಿಧಿ, ಕಂಪೆನಿಯವರ ಸೈನ್ಯದೊಂದಿಗೆ ಅಡ್ಡಹಾಕಿ ಯುದ್ಧ ಮಾಡಿದ, ಆ ಯುದ್ಧದಲ್ಲಿ ತಿರುಪತಿಯಲ್ಲಿ ರಾಘವಾಚಾರಿ ಮರಣಿಸಿದ.

ಒಬ್ಬ ಮರಾಠಾ ಸೈನ್ಯಾಧಿಕಾರಿ ಬಲವಂತರಾವು ಬೆಟ್ಟ ಹತ್ತುವ ಪ್ರಯತ್ನ ಮಾಡುತ್ತಿದ್ದಾಗ ಆತನನ್ನು ಅವನ ಸೈನ್ಯವನ್ನು ಅಡ್ಡ ಹಾಕಿದನಂತೆ. ಆದರವನು "ನಾನು, ನನ್ನ ಸೈನ್ಯ ದೇವರ ದರ್ಶನಕ್ಕೆಂದು ಹೋಗುತ್ತಿದ್ದೇವೆ. ಯುದ್ಧಕ್ಕಲ್ಲ" ಎಂದನಂತೆ. ದೇವಾಲಯದ ಏಜಂಟು ಅವನ ಸೈನ್ಯವನ್ನು ಕೆಳಗೇ ಬಿಟ್ಟು, ಅವನನ್ನು ಕೆಲವು ಅಂಗರಕ್ಷಕರೊಂದಿಗೆ ಮಾತ್ರ ಮೇಲೆ ಹೋಗುವುದಕ್ಕೆ ಅನುಮತಿಸಿದನಂತೆ. ತನ್ನ ಸೈನ್ಯಕ್ಕೆ ಈ ತಿರುಪತಿಯ ಪ್ರಾಂತ್ಯದಲ್ಲಿ ಯಾವ ರೀತಿಯ ಕಷ್ಟಗಳೂ ಉಂಟಾಗದಂತೆ ನೋಡಿಕೊಳ್ಳಬೇಕೆಂದು ಆದೇಶ ನೀಡಿ, ಅವರನ್ನು ಅಲ್ಲೇ ಬಿಟ್ಟು, ತಾನು ಮಾತ್ರ ದೇವರ ದರ್ಶನಕ್ಕೆ ಬೆಟ್ಟ ಹತ್ತಿದನಂತೆ. ಈ ಸಂಘಟನೆ ಕ್ರಿ.ಶ. 1757ರಲ್ಲಿ ನಡೆಯಿತು.

ಈ ನಡುವಿನ ಕಾಲದಲ್ಲಿ ಅಂದರೆ ಕ್ರಿ.ಶ. 1753ರಲ್ಲಿ ತಿರುಮಲೆಯ ಬೆಟ್ಟವನ್ನು ದೇವಸ್ಥಾನವನ್ನು ಕೊಳ್ಳೆ ಹೊಡೆಯುವುದಕ್ಕೆ ಇನ್ನೊಂದು ಪ್ರಯತ್ನ ನಡೆಯಿತು. ಆರ್ಕಾಟು ನವಾಬನೊಂದಿಗೆ ಯುದ್ಧದಲ್ಲಿ ಸೋತು ಛಿದ್ರಛಿದ್ರವಾದ ತಿರುಚಿರಾಪಲ್ಲಿಯ ರಾಜಾ ಸಾಹೇಬನ ಸೈನ್ಯವು, ಜೀವನಕ್ಕೆ ದಾರಿಯಿಲ್ಲದೇ ಮಹಮದ್ ಕಮಾಲ್ ಎಂಬ ಸೈನ್ಯಾಧಿಕಾರಿಯ ನೇತೃತ್ವದಲ್ಲಿ ಒಂದು ಚಿಕ್ಕ ಸೈನ್ಯದ ಗುಂಪಾಗಿ ಸಿದ್ಧವಾಗಿ, ಗ್ರಾಮಗಳ ಮೇಲೆ ದಂಡೆತ್ತಿ ಬಂದು, ಕೊಳ್ಳೆ ಹೊಡೆದು ಜೀವನವನ್ನು ನಡೆಸಲಾರಂಭಿಸಿದರು. ಆ ರೀತಿ ಅವರು ಬಲವಂತವಾಗಿ, ನೆಲ್ಲೂರು ಪ್ರಾಂತ್ಯವನ್ನು ಸೂರೆಗೊಂಡು ಕ್ರಿ.ಶ. 1763ರಲ್ಲಿ ತಿರುಪತಿಯ ಮೇಲೆ ದಾಳಿ ನಡೆಸುವುದಕ್ಕೆಂದು ಹೊರಟರು. ಈ ವಿಷಯ ತಿಳಿದು ಮದ್ರಾಸಿನಿಂದ ಸ್ವಲ್ಪ ಸೈನ್ಯವನ್ನು ಕಂಪೆನಿಯವರೇ ತಿರುಪತಿಗೆ ಕಳುಹಿಸಿ, ಕಮಾಲ್‌ನನ್ನು ತಡೆದರು. ಕಮಾಲ್ ಹತ್ತಿ ಬರುತ್ತಿದ್ದ ಆನೆಯನ್ನು ಕೊಂದು, ಕಮಾಲ್‌ನನ್ನು ಬಂಧಿಸಿ, ಅನಂತರ ಕೊಂದರು. ಆ ರೀತಿ ಆ ದಾಳಿಯನ್ನು ಕಂಪೆನಿಯವರು ತಡೆದರು.

ಅನಂತರ ಪುನಃ ಕ್ರಿ.ಶ. 1756ರಲ್ಲಿ ನವಾಬನ ಸೋದರನಾದ ನಜೀಬುಲ್ಲಾ, ನವಾಬನನ್ನು ಎದುರಿಸಿ, ನವಾಬನ ಕೋಟೆಯನ್ನು ಸ್ವಾಧೀನಪಡಿಸಿಕೊಂಡು, ಹಣಕ್ಕಾಗಿ ತಿರುಮಲೆಯ ಆಲಯವನ್ನು ಕೊಳ್ಳೆ ಹೊಡೆಯುವುದಕ್ಕಾಗಿ ಕ್ರಿ.ಶ. 1757ರಲ್ಲಿ ಪ್ರಯತ್ನಿಸಿದ. ವಿಷಯವನ್ನು ತಿಳಿದುಕೊಂಡ ಕಂಪೆನಿಯವರು ಮದರಾಸಿನಿಂದ ಕೂಡಲೇ ಸೈನ್ಯವನ್ನು ಕಳಿಸಿದ್ದರಿಂದ, ಅವರನ್ನು ಎದುರಿಸಲಾರದೇ ಈ ನಜೀಬುಲ್ಲಾ ಪರಾರಿಯಾದ. ಆದರೆ ಬೆಟ್ಟಕ್ಕೆ ಬರುವ ಯಾತ್ರಿಕರನ್ನು ದಾರಿಯಲ್ಲೇ ಅಡ್ಡಹಾಕಿ, ಅವರನ್ನು ದೋಚಿಕೊಂಡು ಕಳುಹಿಸಿದನಂತೆ. ಸೆಪ್ಟೆಂಬರ್, ಅಕ್ಟೋಬರ್ ಬ್ರಹ್ಮೋತ್ಸವಗಳಿಗೆ ಯಾತ್ರಿಕರು ಬಹಳ ಜನ ಬರುವಂತಹ ದಿನಗಳಲ್ಲಿ ಈ ನವಾಬನಿಗೆ, ಇಂಗ್ಲಿಷಿನವರಿಗೆ ಆದಾಯ ಬರದಿರುವಂತೆ ಮಾಡುವುದಕ್ಕೆ, ಆ ವರ್ಷ ಯಾತ್ರಿಕರು ಹೋಗದಂತೆ ತಡೆಯುವುದಕ್ಕೆ ಅವನು ಶತವಿಧಗಳಲ್ಲೂ ಪ್ರಯತ್ನಿಸಿದನಂತೆ.

ಆ ಸಮಯದಲ್ಲೇ ಪೇಶ್ವೆ ಬಾಲಾಜಿರಾವ್, ತನ್ನ ಕಮಾಂಡರ್ ಆಗಿದ್ದ ಗೋಪಾಲರಾವ್‌ನ ನೇತೃತ್ವದಲ್ಲಿ ಒಂದು ದೊಡ್ಡ ಮರಾಠ ಸೈನ್ಯವನ್ನು ಕಳುಹಿಸಿದ. ಆ ಸೈನ್ಯ ಮೊದಲು ಕಡಪ ಜಿಲ್ಲೆಯಲ್ಲಿ ಪ್ರವೇಶಿಸಿ, ಬೆಟ್ಟದ ಮೇಲಿನ ದೇವಸ್ಥಾನವನ್ನು ವಶಪಡಿಸಿಕೊಳ್ಳುವುದಕ್ಕಾಗಿ ಕ್ರಿ.ಶ. 1759ರಲ್ಲಿ ಪ್ರಯತ್ನಿಸಿದ. ಅದರ ಫಲವಾಗಿ



ತಿರುಮಲೆಯ ಚರಿತಾಮೃತ ಗ್ರಂಥ ಬರೆದಿರುವ ಶ್ರೀ ಪಿ.ವಿ.ಆರ್.ಕೆ. ಪ್ರಸಾದ್‌ರವರು ತಿರುಮಲೆಯ ಶ್ರೀನಿವಾಸ ದೇವರ ಮಹಾಭಕ್ತರು. ಉತ್ತಮ ಐಎಎಸ್ ಅಧಿಕಾರಿ ಎಂದು ಕೀರ್ತಿ ಗಳಿಸಿರುವವರು. ಅನೇಕ ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಿದ ಶ್ರೀಯುತರು ಪ್ರಧಾನಮಂತ್ರಿ ದಿವಂಗತ ಪಿ.ವಿ. ನರಸಿಂಹರಾಯರ ಪತ್ರಿಕಾ ಕಾರ್ಯದರ್ಶಿಗಳಾಗಿದ್ದವರು. ಅಂತೆಯೇ ತಿರುಮಲೆ ತಿರುಪತಿ ದೇವಸ್ಥಾನದ ನಿರ್ವಹಣಾ ಅಧಿಕಾರಿಗಳಾಗಿ ಅಪೂರ್ವ ಸೇವೆ ಸಲ್ಲಿಸಿರುವ ಶ್ರೀಯುತರು ತಮ್ಮನ್ನು 'ಶ್ರೀನಿವಾಸದಾಸ' ಎಂದು ಕರೆದುಕೊಳ್ಳುವಲ್ಲಿ ಹೆಮ್ಮೆ ಪಡುವ ಭಾಗವತರು. 'ತಿರುಮಲೆಯ ಚರಿತಾಮೃತ'ವನ್ನು ಕನ್ನಡಕ್ಕೆ ತಂದಿರುವ ಶ್ರೀಮತಿ ಸೂರ್ಯವಂಶಿ ಉತ್ತಮ ಅನುವಾದಕಿ. ತೆಲುಗಿನಿಂದ ಹಲವಾರು ಕಾದಂಬರಿಗಳನ್ನು ಕನ್ನಡಕ್ಕೆ ತಂದಿರುವವರು. ಟಿಟಿಡಿ ನಿರ್ವಹಣಾಧಿಕಾರಿಗಳಾಗಿದ್ದ ಶ್ರೀ ಪಿ.ವಿ.ಆರ್.ಕೆ. ಪ್ರಸಾದ್‌ರವರು ತಿರುಮಲೆ ಪತ್ರಾಗಾರದಲ್ಲಿ ದೊರೆತ ಅನೇಕ ದಸ್ತಾವೇಜುಗಳನ್ನು, ಪ್ರಾಚೀನ ದಾಖಲೆಗಳನ್ನು, ಹಳೆಯ ರೆಕಾರ್ಡ್‌ಗಳನ್ನು, ಶಿಲಾಶಾಸನಗಳನ್ನು ಅಧ್ಯಯನ ಮಾಡಿ ರಚಿಸಿರುವ 'ತಿರುಮಲೆಯ ಚರಿತಾಮೃತ' ಒಂದು ಅಧಿಕೃತ ಗ್ರಂಥ. ಈ ಇಬ್ಬರು ದೈವಭಕ್ತರಿಗೆ ಹಾರ್ದಿಕ ಕೃತಜ್ಞತೆಗಳನ್ನು ಅರ್ಪಿಸುತ್ತಾ 'ತಿರುಮಲೆಯ ಚರಿತಾಮೃತ'ವನ್ನು ಓದುಗರಿಗೆ ನೀಡುತ್ತಿದ್ದೇವೆ



–ಸಂ.

ಮಾರ್ಚ್ ತಿಂಗಳಿನಲ್ಲಿ ದೇವಾಲಯವನ್ನು ವಶಪಡಿಸಿಕೊಂಡ. ಏಪ್ರಿಲ್ ತಿಂಗಳಿನಲ್ಲಿ ನಡೆಯುವ ಬ್ರಹ್ಮೋತ್ಸವದ ಆದಾಯವನ್ನು ಕಬಳಿಸಬೇಕೆಂದು ಅವರ ಉದ್ದೇಶವಾಗಿತ್ತು.

ಆದರೆ ಪೇಶ್ವೆ ಬಾಲಾಜಿರಾವ್ ಕಷ್ಟದಲ್ಲಿ ಸಿಲುಕಿದ್ದರಿಂದ, ಈ ಗೋಪಾಲರಾವ್ ಕಳಿಸಿದ ಸೈನ್ಯವನ್ನು ಕೂಡಲೇ ಹಿಂದಕ್ಕೆ ಕರೆಸಿಕೊಂಡ. ಗೋಪಾಲರಾವ್ ಬಹಳ ಕಡಮೆ ಸಂಖ್ಯೆಯ ಸೈನ್ಯವನ್ನು ಬೆಟ್ಟದ ಮೇಲೆ ನಾರಾಯಣಶಾಸ್ತ್ರಿ ಎಂಬುವರ ಅಧೀನದಲ್ಲಿರಿಸಿ, ತಾನು ಉಳಿದ ಸೈನ್ಯದೊಂದಿಗೆ ಬಾಲಾಜಿರಾವ್‌ನ ಸಹಾಯಕ್ಕೆಂದು ಹೋದ. ಈ ವಿಷಯ ತಿಳಿದ ಅರ್ಕಾಟು ನವಾಬನ ಪರವಾಗಿದ್ದ ಚಂದ್ರಗಿರಿ ಕೋಟೆಯ ಸೈನ್ಯಾಧಿಕಾರಿ ಅಬ್ದುಲ್ ವಹಬಿ ತನ್ನ ಸೈನ್ಯವನ್ನು ಕಳಿಸಿ, ನಾರಾಯಣ ಶಾಸ್ತ್ರಿಯ ವಶದಲ್ಲಿದ್ದ ಮರಾಠ ಸೈನ್ಯದಿಂದ ಪುನಃ ಆಲಯವನ್ನು ತನ್ನ ವಶಕ್ಕೆ ತೆಗೆದುಕೊಂಡ. ಈ ವಹಾಬನಿಗೆ ತಾನೇ ಆಲಯದ ಆದಾಯವನ್ನು ತೆಗೆದುಕೊಳ್ಳಬೇಕೆಂಬ ಆಸೆಯಿದ್ದರೂ ಇಂಗ್ಲಿಷ್ ಕಂಪೆನಿಯವರಿಗೆ ಭಯಗೊಂಡು, ನಡೆದ ವಿಷಯವನ್ನು ಮದ್ರಾಸು ಕಂಪೆನಿಯವರಿಗೆ ತಿಳಿಸಿದ. ತಾನು ರಕ್ಷಿಸಿದ ಆಲಯದ ಆದಾಯ ತನಗೇ ಕೊಡಿಸಬೇಕೆಂದು ಕಂಪೆನಿಯವರನ್ನು ಬೇಡಿಕೊಂಡ. ಅವನ ಪ್ರಾರ್ಥನೆಯನ್ನು ಕಂಪೆನಿಯವರು ತಿರಸ್ಕರಿಸಿ, ಅಲ್ಲಿಯವರೆಗೂ ಕಂಪೆನಿಯ ಪರವಾಗಿ ಇದ್ದ ಏಜೆಂಟರನ್ನೇ ಪುನಃ ನೇಮಿಸಿದರು.

ಆಗ ವಹಾಬನಿಂದ ಸೋತ ನಾರಾಯಣಶಾಸ್ತ್ರಿ, ತಿರುಮಲೆಯಿಂದ ತನ್ನ ಉಳಿದ ಸೈನ್ಯದೊಂದಿಗೆ ಓಡಿಹೋಗಿ, ಕರಕಂಬಾಡಿಯನ್ನು ತಲಪಿ, ಅವರ ಸಹಾಯದಿಂದ, ಪುನಃ ಆಗಸ್ಟ್‌ನಲ್ಲಿ ಆಲಯವನ್ನು ತನ್ನ ವಶಕ್ಕೆ ತಂದುಕೊಂಡ. ಈ ಮರಾಠದಿಂದ ಆಲಯವನ್ನು ಪುನಃ ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಮದ್ರಾಸಿನಿಂದ ಕಂಪೆನಿಯವರು, 200 ಜನ ಸೈನಿಕರು, 15 ಜನ ಇಂಗ್ಲಿಷು ಅಧಿಕಾರಿಗಳನ್ನು ತಿರುಪತಿಗೆ ಕಳಿಸಿದರು.

ಅವರು ತಿರುಪತಿಗೆ ಬಂದ ಅನಂತರ, ಆ ಸೈನ್ಯದಲ್ಲಿ ಒಟ್ಟು ಎಂಬತ್ತು ಜನರನ್ನು ಮಾತ್ರ ಬೆಟ್ಟ ಹತ್ತುವುದಕ್ಕೆ ಅರ್ಹತೆಯಿರುವ ಹಿಂದೂ ಸೈನಿಕರನ್ನು ಗುರುತಿಸಿ, ಅವರನ್ನು ಮಾತ್ರ ಬೆಟ್ಟಕ್ಕೆ ಕಳಿಸಿದರು. ಆ ಸೈನಿಕರಲ್ಲಿ ಅನೇಕರು ಆಲಯದಲ್ಲೂ, ದೇವಸ್ಥಾನದ ಹೊರಗೆ ನಡೆದ ಯುದ್ಧದಲ್ಲಿ ಕೊನೆಯುಸಿರೆಳೆದರು. ಮರಣಿಸಿದವರಲ್ಲಿ ಎರಡೂ ಪಕ್ಷದವರೂ ಇದ್ದರು. ಬದುಕುಳಿದು ಓಡಿಹೋದ ಕಂಪೆನಿಯ ಸಿಪಾಯಿಗಳು ಕೆಳಗೆ ಬಂದರು. ಕೆಳಗೆ ಉಳಿದ ಸೈನ್ಯದೊಂದಿಗೆ ಇದ್ದ ಆಂಗ್ಲ ಕಮಾಂಡರು ಮೇಜರ್ ಕಲ್ಲಾಡ್ ಆಗ್ರಹಗೊಂಡು, ಮರಾಠರಿಗೆ ಸಹಾಯ ಮಾಡಿದ ಕರಕಂಬಾಡಿ ಸೈನಿಕ ಸ್ಥಾವರಕ್ಕೆ ಹೋಗಿ, ಎಲ್ಲರನ್ನೂ ಗುಂಡಿಟ್ಟು ಕೊಂದ, ಅಲ್ಲಿನ ಪಾಳೇಗಾರನನ್ನು ಕೊಂದುಹಾಕಿದ ಅನಂತರ ಪುನಃ ಸೈನ್ಯವನ್ನು ಒಗ್ಗೂಡಿಸಿಕೊಂಡು ತಿರುಮಲೆಯ ಆಲಯದ ಮೇಲೆ ದಂಡಯಾತ್ರೆ ನಡೆಸಿದ. ತನ್ನ ಸ್ಥಾವರ ಕರಕಂಬಾಡಿಯಲ್ಲಿ ನಾಶವಾದ ವಿಷಯವನ್ನು ತಿಳಿದುಕೊಂಡ ನಾರಾಯಣಶಾಸ್ತ್ರಿ, ಮರಾಠ ಸೈನ್ಯ ಅಸಹಾಯಕತೆಯಿಂದ ದೇವಸ್ಥಾನವನ್ನು ಬಿಟ್ಟು ಓಡಿ ಹೋದರು.

ಆ ರೀತಿ ಆಂಗ್ಲರು ಆಲಯವನ್ನು ಸ್ವಾಧೀನಪಡಿಸಿಕೊಂಡು ತಮ್ಮ ಏಜೆಂಟರಿಗೆ ಆಲಯದ ನಿರ್ವಹಣಾ ಜವಾಬ್ದಾರಿಯನ್ನು ಒಪ್ಪಿಸಿದರು.

ಆಂಗ್ಲರಿಗೆ ಅಭ್ಯರ್ಥನೆಯನ್ನು ಕಳುಹಿಸಿ ತಿರಸ್ಕರಿಸಲ್ಪಟ್ಟ ವಹಾಬು ಚಂದ್ರಗಿರಿ ಕೋಟೆಯನ್ನು ಆಕ್ರಮಿಸಿ, ಇಂಗ್ಲಿಷರ ಮೇಲೆ ಕೋಪದಿಂದ ಹರಿಹಾಯಲು ಹೊಂಚುಹಾಕುತ್ತಿದ್ದ. ಹೇಗಾದರೂ ದೇವಸ್ಥಾನದ ಆದಾಯ ತನಗೇ ಬರಬೇಕೆಂದು ನಿರೀಕ್ಷಿಸುತ್ತಿದ್ದ.

ಕ್ರಿ.ಶ. 1758ರ ಅಕ್ಟೋಬರ್‌ನಲ್ಲಿ ಫ್ರೆಂಚ್‌ನ ಕಮಾಂಡರ್ ಕಲ್ನಲ್ ಬುಸ್ಸೀ ಹೈದರಾಬಾದಿನಿಂದ ಅವರ ಸೈನ್ಯಾಧಿಕಾರಿ ಕೌಂಟುಡುಲಿಲ್ಲಿಯನ್ನು ಕರೆದುಕೊಂಡು ಮದ್ರಾಸಿನ ಇಂಗ್ಲಿಷ್ ಕಂಪೆನಿಯ ಮೇಲೆ ದಂಡಯಾತ್ರೆಗಾಗಿ ಹೊರಟು ದಾರಿಯಲ್ಲಿ ತಿರುಪತಿಯಲ್ಲಿ ತಂಗಿದ. ತಿರುಪತಿಯಲ್ಲಿದ್ದ ಇಂಗ್ಲಿಷರ ಏಜೆಂಟನ್ನು ಬಂಧಿಸಿ, ದೇವಾಲಯದ ನಿಧಿಗಳನ್ನು ತನಗೇ ಒಪ್ಪಿಸಬೇಕೆಂದು ಬಲವಂತ ಮಾಡಿದ. ಆರ್ಕಾಟು ನವಾಬು ಸೋದರರಿಬ್ಬರೂ ಚಂದ್ರಗಿರಿಯ ವಹಾಬು, ನೆಲ್ಲೂರಿನ ಮಹಮ್ಮದಾಲಿ ಈ ಬುಸ್ಸಿಯೊಂದಿಗೆ ಕೈಸೇರಿಸಿ, ಅವನೊಂದಿಗೆ ಹೊರಟರು. ಆದರೆ ಬುಸ್ಸಿಯ ಮನಸ್ಸೆಲ್ಲ ಮದ್ರಾಸಿನ ಇಂಗ್ಲಿಷು ಕಂಪೆನಿಯವರನ್ನು ಸೋಲಿಸುವುದರಲ್ಲಿ ಮಗ್ನವಾಗಿತ್ತು. ಬೆಟ್ಟದ ಮೇಲಿನ ಆಲಯದ ಮೇಲೆ ಅವನಿಗೆ ಆಸಕ್ತಿಯಿರಲಿಲ್ಲ. ಈ ವಿಷಯ ತಿಳಿದು ನವಾಬ ಚಂದ್ರಗಿರಿಗೆ ಹಿಂದಿರುಗಿ ಬಂದ.

ಕ್ರಿ.ಶ. 1763ರಲ್ಲಿ ತಿರುಪತಿಯಲ್ಲಿ ಇನ್ನೊಂದು ದೊಡ್ಡ ಯುದ್ಧ ನಡೆಯಬೇಕಾಗಿತ್ತು. ಡೆಕ್ಕನ್ ಸುಬೇದಾರನಿಂದ ನಿಜಾಂ ಆಲೀ, ಕರ್ನಾಟಕದ ನವಾಬನಾದ ಮಹಮ್ಮದ್ ಆಲಿಯ ಮೇಲೆ ದಂಡೆತ್ತಿ ಬಂದ. ಕರ್ನಾಟಕದ ನವಾಬ ಇಂಗ್ಲಿಷರ ಸಹಾಯವನ್ನು ಬಯಸಿದ. ಎರಡು ಸೈನ್ಯಗಳು ತಿರುಪತಿಯ ಹೊರಗೆ ಎದಿರು ಬದಿರಾದುವು. ಬ್ರಿಟಿಷರ ಸೈನ್ಯಗಳು ಕರ್ನಾಟಕದ ನವಾಬನ ಸಹಾಯಕ್ಕೆ ಬರುತ್ತಿರುವ ವಿಷಯ ತಿಳಿದ ನಿಜಾಂ ಆಲೀ, ರಾತ್ರಿಯಲ್ಲೇ ನಿಜಾಂ ಸೈನ್ಯವನ್ನು ತೆಗೆದುಕೊಂಡು ಕಾಳಹಸ್ತಿಯ ಮೂಲಕ ನೆಲ್ಲೂರಿಗೆ ಪರಾರಿಯಾದ.

ಎರಡನೆಯ ಮೈಸೂರು ಯುದ್ಧದಲ್ಲಿ ಹೈದರಾಲಿ ಕರ್ನಾಟಕದ ಮೇಲೆ ದಂಡೆತ್ತಿ–ಚಿತ್ತೂರು ಕೋಟೆಯನ್ನು ಗೆದ್ದುಕೊಂಡ. ಚಿತ್ತೂರಿನ ಪಾಳೆಗಾರ, ಕಾಳಹಸ್ತಿ, ಕಾರ್ವೇಟಿನಗರ, ವೇಂಕಟಗಿರಿಯ ಜಮೀನುದಾರರು ಹೈದರಾಲಿಗೆ ಬೆಂಬಲವಾಗಿ ನಿಂತರು. ಕ್ರಿ.ಶ. 1780ರಲ್ಲಿ ಚಂದ್ರಗಿರಿ ಕೋಟೆಯನ್ನು ಹೈದರಾಲಿಗೆ ನೀಡಿದ. ಹೈದರಾಲಿ ಬೆಟ್ಟಕ್ಕೆ ಹೋಗಿ ದೇವಾಲಯವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಅದೊಂದು ಒಳ್ಳೆಯ ಅವಕಾಶ ದೊರೆಯಿತು. ಆದರೆ ಹೈದರಾಲಿಗೆ ದೇವಾಲಯದ ಮೇಲೆ ದಾಳಿ ನಡೆಸುವುದು ಇಷ್ಟವಾಗಲಿಲ್ಲ.

ಚರಿತ್ರಕಾರರೆಲ್ಲರೂ ಈ ವಿಷಯದಲ್ಲಿ ಏಕಾಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಚರಿತ್ರಕಾರನಾದ ವಿಲ್ಕ್ಸ್ ತನ್ನ ಪುಸ್ತಕದಲ್ಲಿ "ಈ ಹೈದರಾಲಿ ಮುಕ್ಕಾಲು ಭಾಗ ಹಿಂದೂವೆಂದೇ ಹೇಳಬಹುದು. ದೇವಾಲಯಗಳನ್ನು ಮುತ್ತಿಗೆ ಹಾಕುವುದಾಗಲೀ, ದೇವರ ಹಣವನ್ನು ತೆಗೆದುಕೊಳ್ಳುವುದಕ್ಕೂ ಇಷ್ಟಪಡುತ್ತಿರಲಿಲ್ಲ. ತಾನು ಆಲಯವನ್ನು ವಶಕ್ಕೆ ತೆಗೆದುಕೊಂಡು ವರ್ಷಕ್ಕೆ ಎರಡು ಲಕ್ಷ ರೂಪಾಯಿಗಳ ಆದಾಯವನ್ನು ಸಂಪಾದಿಸಿಕೊಳ್ಳುವಂತಿದ್ದರೂ ದೇವಾಲಯವನ್ನು, ದೇವಾಲಯದ ವ್ಯವಸ್ಥೆಯನ್ನು, ದೇವಾಲಯದ ಆದಾಯವು ಹೇಗಿದೆಯೋ ಹಾಗೇ ಮುಂದುವರಿಯುವಂತೆ ನೋಡಿಕೊಂಡ. ಹೈದರಾಲಿಗೆ ಆ ದಿನಗಳಲ್ಲಿ ಆಲಯದ ಆದಾಯ ಬರುತ್ತಿತ್ತು. ಆದರೂ ಅವನು ಅದರ ತಂಟೆಗೆ ಹೋಗಲಿಲ್ಲ" ಎಂದು ಬರೆದಿದ್ದ.

ಡಾ. ಎಸ್.ಕೆ. ಅಯ್ಯಂಗಾರರೂ ಕೂಡ ಅವರ History of Tirupathiಯಲ್ಲಿ ಈ ವಿಷಯವನ್ನು ದೃಢಪಡಿಸಿದ್ದಾರೆ.

"ಈ ಹೈದರಾಲಿ ಒಬ್ಬನೇ. ಆ ಪ್ರಾಂತ್ಯಕ್ಕೆ ಬಂದ ಮುಸ್ಲಿಂ ನಾಯಕರೆಲ್ಲರಿಗಿಂತಲೂ ಭಿನ್ನ–ಮತಸಾಮರಸ್ಯಕ್ಕೆ ಪ್ರತೀಕನಾದವನು."

ಶ್ರೀ ವಿ.ಎನ್. ಶ್ರೀನಿವಾಸರಾವ್ ಬರೆದಿರುವ ಪುಸ್ತಕ

▶▶ 61ನೇ ಪುಟಕ್ಕೆ



# THE ETERNAL ELIXIR



ಈ ತಿಂಗಳಿನಿಂದ ಕೈವಾರ ಶ್ರೀ ಯೋಗಿನಾರೇಯಣ ತಾತಯ್ಯನವರು ರಚಿಸಿರುವ ತೆಲುಗು ಮತ್ತು ಕನ್ನಡ ಕೀರ್ತನೆಗಳನ್ನು ಇಂಗ್ಲಿಷ್ ಓದುವ ಓದುಗರಿಗೆ ಪರಿಚಯಿಸಲು ಆರಂಭಿಸುತ್ತಿದ್ದೇವೆ. ಕನ್ನಡ ಮೂಲ, ಇಂಗ್ಲಿಷ್ ಅಕ್ಷರಗಳಲ್ಲಿ ಕೀರ್ತನೆಯ ಮುದ್ರಣ ಹಾಗೂ ಇಂಗ್ಲಿಷ್‌ನಲ್ಲಿ ಕೀರ್ತನೆಯ ಅರ್ಥ. ಇವಿಷ್ಟು ಈ ಅಂಕಣದ ಉದ್ದಿಶ್ಯ. ಶ್ರೀಮತಿ ಅಂಬಿಕಾ ಅನಂತ್ ಮತ್ತು ಶ್ರೀ ವಿನಯ್ ವಾರಣಾಸಿ ತಾತಯ್ಯನವರ ಕೀರ್ತನೆಗಳನ್ನು ಈ ರೂಪದಲ್ಲಿ ಸಿದ್ಧಗೊಳಿಸಿದ್ದಾರೆ. ಅವರಿಬ್ಬರೂ ಸೇರಿ ಸಿದ್ಧಗೊಳಿಸಿರುವ The Eternal Elixir ಎಂಬ ಪುಸ್ತಕದಿಂದ ಇದನ್ನು ಆಯ್ಕೆ ಮಾಡಲಾಗಿದೆ. ಈ ಪುಸ್ತಕದ ಪ್ರಕಾಶಕರು 'ಶ್ರೀ ಯೋಗಿನಾರೇಯಣ ಮಠ, ಕೈವಾರ.' ಪ್ರಕಾಶಕರಿಗೂ ಇಬ್ಬರು ಲೇಖಕರಿಗೂ ಮಲ್ಲಾರದ ಧನ್ಯವಾದಗಳು.

## ಶ್ರೀ ಅಮರ ನಾರೇಯಣ ವೇದಾಂತ ಸಾರಾವಳಿ

### ಕೀರ್ತನೆಗಳು

**ಸೌರಾಷ್ಟ್ರ ರಾಗಂ-ಆದಿತಾಳಂ (ಅಷ್ಟಕಮು)**

ಏಕದಂತಾ–ಮೂಷಕವಾಹನ । ವೇದಮುನಿಗಣ ವಂದಿತಾ ।
ಸಕಲ ವಿದ್ಯಲಕಾದಿಕರ್ತವು– ಸನ್ಮುನೀ ವಿಘ್ನೇಶ್ವರಾ ॥
॥ ಶರಣು ಶರಣೂ ॥ ॥೧॥

ಮುಂದುಗಾ ಮಿಮು– ಪೂಜಸೇತುರು । ಮುಗ್ಗುರು ಮೂರ್ತುಲು ಮೊದಲುಗಾ ।
ಸಂಶಯಿಂಪಕ – ವಾಕ್ಕುಲೊಸಗುಮು । ಸರಸುಡೌ ವಿಘ್ನೇಶ್ವರಾ ॥
॥ ಶರಣು ಶರಣೂ॥ ॥ ೨ ॥

ಧರನು ಕೈವರಪುರ ವಿಹಾರುಡೈ । ವೆಲಸಿಯುನ್ನಾ ಹರುನಕೂ ।
ಪ್ರಿಯ ಸುತುಡವೈನಟ್ಟಿ ಗಜಮುಖ । ಧೀರುಡೌ ವಿಘ್ನೇಶ್ವರಾ॥
॥ಶರಣು ಶರಣೂ॥ ॥ ೩ ॥

## Sri Amara Nareyana Vedanta Saravali

### Kirthanagalu

Saurastra Ragam- Aditalam (Astakamu)
Ekadanta - Musakavahana. Vedamunigana Vandita.
Sakalavidyalakadikartavu Sanmuni Vighnesvara..
Saranu Saranu ..1.

Munduga Mimu- Puja Seturu.
Mugguru Murtulu Modaluga.
Samsayimpaka- Vakkulosagumu.
Sarasudau Vigneshvara. Saranu Saranu ..2..

Dharanu Kaivara- Puraviharudai.
Velasiyunna Harunaku.
Priya sutudavainatti Gajamukha.
Dhirudau Vighnesvara. Saranu Saranu ..3..

## Translation:

O Lord with one tusk, your vehicle is the mouse-
You are revered by the Vedas, seers and sages
You are the primal deity of all Knowledge
You are a benevolent Lord O Vighneswara
I surrender unto you.

It is to you first worship is offered- even by the divine trinity
Do not hold up; bless me with word power benevolently
O gracious Vighneswara

You are the dear son of shiva
Who is manifest in kaivara on this earth
O the elephant headed God O the all- powerful Vighneswara.
I surrender unto you.



## ೧. ಮಧ್ಯಮಾವತಿ–ಆಟತಾಳಂ

ಅಂಬನು ಚೂಡರಮ್ಮಾ–
ಮನ ಜಗದಂಬನು ಚೂಡರಮ್ಮಾ ॥ಪ॥
ಅಂಬನು ಚೂಡರೇ– ಅಖಿಲಾಂಡೇಶ್ವರಿ–
ಶಂಭುನಿ ಸತಿ ತಾ ಕೊಲುವೈಯುನ್ನದಿ ॥ ಅ.ಪ ॥
ಪಂಜುಲು ಕಮ್ಮಲು –ಪಾಪಟಬೊಟ್ಟುನು ।
ಥಳುಕು ಬುಗಡಲು – ತಾಳಿ ಪದಕಮು ।
ಚಕ್ಕನಿ ತಲ್ಲಿಕಿ – ಮುತ್ಯಪು ಮುಕ್ಕರ
ಪರಮೇಶ್ವರು ಸತಿ– ಕೊಲುವೈಯುನ್ನದಿ ॥ ॥ ೧ ॥

ಹಸ್ತಕಡಿಯಮುಲು –ಅದ್ದಪು ಗಾಜುಲು ।
ಪಾದಮುಲಂದೆಲು– ಪಾವಡಗೆಜ್ಜೆಲು ।
ಪಿಲ್ಲಣಿ ಮೆಟ್ಟೆಲು – ಬಿರುದುಮುದ್ರಿಕಲು ।
ಫಾಲಾಕ್ಷುನಿ ಸತಿ –ಕೊಲುವೈಯುನ್ನದಿ ॥ ॥ ೨ ॥

ನವರತ್ನಂಬುಲು– ನವ್ಯ ಹಾರಮುಲು ।
ನಡುಮುನ ನಾಗಾಭರಣಮು ವೊಪ್ಪುಗ ।
ವೆಲದುಲು ವಿಂಜಾಮರಮುಲು ವೀವಗ ।
ಭೃಂಗೀಶ್ವರು ಸತಿ ಕೊಲುವೈಯುನ್ನದಿ ॥ ॥ ೩ ॥

ಕರಮುನ ಖಡ್ಗ ತ್ರಿಶೂಲಮು ಬೂನಿ ।
ಕಾಟಿ ಗ್ರಹಮುಲ – ಖಂಡ್ರಿಂಚೆದನನಿ ।
ಅಖಿಲ ಜನಂಬುಲಕಭಯಮುಲಿಚ್ಚಿ ।
ವೃಷಭ ವಾಹನುನಿ ಸತಿ – ಕೊಲುವೈಯುನ್ನದಿ ॥ ॥ ೪ ॥

ವನಿತಲು ಶುಚಿವಸ್ತ್ರಂಬುಲು ಗಟ್ಟುಕ ।
ವರವೈಭವಮುಲು– ವೇಡೆದಮಂಚುನು ।
ದಿಕ್ಕುದೀಪಮುಲು – ದೆಚ್ಚಿರಿ ಚೂಡರೆ ।
ಸಾಂಬಶಿವುನಿ ಸತಿ – ಕೊಲುವೈಯುನ್ನದಿ ॥ ೫ ॥

ಭಕ್ತಿಗ ಕೊಲಚಿನ – ಭಕ್ತಲು ಕೆಲ್ಲನು ।
ಕೋರಿನ ಕೋರಿಕಲನ್ನಿಯು ನಿಚ್ಚುನು ।
ದಾಟು ಶೂನ್ಯಮುಲು – ಮೀಟುನು ತೃಣಮುಗ ।
ಮುಕ್ಕಂಟೀಶ್ವರು ಸತಿ– ಕೊಲುವೈಯುನ್ನದಿ ॥ ೬ ॥

ಕೈವರವಾಸುನಿ – ಕರುಣಗಲದು ಶ್ರೀ ।
ಅಮರ ನಾರೇಯಣ – ಸ್ವಾಮಿ ಸಹೋದರಿ।
ದಿನ ದಿನ ವೈಭವಮೇಮನವಚ್ಚುನು ।
ಶ್ರೀಕಂಠುನಿ ಸತಿ ಕೊಲುವೈಯುನ್ನದಿ ॥ ೭ ॥

## 1. Madhyamavathi–Atatalam

Ambanu Cudaramma
Mana Jagadambanu Cudramma
..Pa..
Ambanu Cudare -Akhilandesvari
Sambhuni Sathi Ta Koluvaiyunnadi..
..A..
Panjulu Kammalu- Papatabottunu .
Thaluku Bugadalu -Tali Padakamu.
Cakkani Talliki - Mutyapu Mukkara..
Paramesvaru Sati - Koluvaiyunnadi.. ..1..

Hastakadiyamulu -Addapu Gajulu.
Padamulandelu - Pavadagejjelu.
Pillani Mettelu - Birudumudrikalu .
Phalaksuni Sati - Koluvaiyunnadi.. ..2..

Navaratnambulu - Navya Haramulu.
Nadumuna Nagabharanamu Voppuga.
Veladulu Vinjamaramulu Vivaga.
Bhrngisvaru Sati Koluvaiyunnadi.. ..3..

Karamuna Khadga Trisulamu Buni .
Kati Grahamula -Khandrincedanani .
Akhila Janambulakabhayamulicci .
Vrsabha Vahanuni Sati - Koluvaiyunnadi.. ..4..

Vanitalu Sucivastrambulu Gattuka .
Varavaibhavamula -Vededamancunu.
Dikkudipamulu -Decciri Cudare .
Sambasivuni Sati - Koluvaiyunnadi..
..5..
Bhakthiga Kolacina - Bhaktulu Kellanu .
Korina Korikalanniyu Niccunu .
Datu Sunyamulu- Mitunu Trnamuga .
Mukkantisvaru Sati Koluvaiyunnadi ..
..6..
Kaivarasuni - Karunagaladu Sri .
Amara Nareyana – Svami Sahodari.
Dina Dina Vaibhavamemanavaccunu .
Srikanthuni Sati Koluvaiyunnadi.. ..೭..

## Translation:

Behold the mother, our universal mother
O behold the mother, Akhilandeshwari,
The consort of Shambhu, she is presiding here
She is adorned with ear studs, tiara gem in her hair parting
Glittering beads and the auspicious 'thaali' pendant*
Pearl nose-ring, the beautiful; mother has on her
The Consort of Parameshwara, she is presiding here

She has bracelets as also glass bangles on her arms
She has anklets as also jingling ornaments around her feet
She has dainty toe-rings and many insignia of praise
The consort of ' Phaalaksha' (the one with an eye in the forehead)
She is presiding here
She is adorned with the nine gems and fresh garlands
She has the serpent-shaped waist belt around her waist
As the hand-maids fanned her with whisk fans,
The consort of Bhrungeeshwara (the Lord of Bhrngi)'

She is presiding here
She is wielding a sword and trident in her arms
" I will cut asunder evil spirits' she vows an everlasting oath
Thus giving assurance to the people of the worlds
The consort of 'Vrishabhavahanu'
(the lord whose vehicle is a bull)
She is presiding here
The women folk wearing pure, clean clothes
Seeking all auspiciousness and glory
Have brought glowing lamps filling light in all direction
The consort of 'Sambasiva', (the ever propitious one)
She is presiding here
To those devotees who pray with devotion
She grants all the wish- fulfilling boons
She bestows the esoteric knowledge effortlessly
The consort of ' Mukkanteshwara' (the three-eyed lord),
She is presiding here
She has equal compassion as that of the deity of Kaivara
She is the sister of Sree Amaranareyana swami
How can we praise her eternal glory
The consort of 'Srikanttha' (the one who has poison in his throat)
She is presiding here.



# ಕರ್ಮ ಸಿದ್ಧಾಂತ

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

ನಮ್ಮ ಸಂಸ್ಕೃತಿಯ ಉದಾತ್ತ, ಉದಾರ ತತ್ತ್ವಗಳನ್ನು ಅರಿತು ಮಾನವೀಯ ಮೌಲ್ಯಗಳನ್ನು ಅನುಸರಿಸಿ, ಆಚರಣೆಯಲ್ಲಿನ ವಿಕೃತಿಗಳನ್ನು ಬದಿಗಿರಿಸಿ, ಆಧ್ಯಾತ್ಮಿಕ ಸ್ವರೂಪದ ಧರ್ಮವನ್ನು ಮರಳಿ ತರಬೇಕು. ತತ್ತ್ವಮಸಿ ಎಂದು ಎಲ್ಲ ಜೀವಾತ್ಮರನ್ನೂ ಪರಮಾತ್ಮನೆಂದೇ ಹೇಳಿದ ಈ ಧರ್ಮದಲ್ಲಿ ಸಾಮಾಜಿಕ ಉಚ್ಚ–ನೀಚ ಭಾವನೆಗಳು ನುಸುಳಿ ಬಂದದ್ದು ಒಂದು ದುರಂತವೇ ಸರಿ.

ಆದರೆ, ಈ ವಿಕೃತಿಗಳೆಲ್ಲ ತಾತ್ತ್ವಿಕವಾದ ಸನಾತನ ಧರ್ಮವಾಗುವುದಿಲ್ಲ. ಈಗ ಈ ದೋಷಗಳೆಲ್ಲ ಕ್ರಮೇಣ ಚರಿತ್ರೆಯ ಗರ್ಭಕ್ಕೆ ಜಾರುತ್ತಿವೆ. ಸನಾತನ ಧರ್ಮದ ವಿಶೇಷವೇ ಇದು. ಆಯಾಯ ಕಾಲಕ್ಕೆ ಅನುಗುಣವಲ್ಲದ ವಿಚಾರಗಳನ್ನು, ದೋಷಯುಕ್ತ ಆಚರಣೆಗಳನ್ನು ಚರಿತ್ರೆಯ ಭಾಗವನ್ನಾಗಿಸುತ್ತ, ಅದು ಹೊಸರೂಪದಲ್ಲಿ ಮುನ್ನಡೆಯುತ್ತಲೇ ಇರುತ್ತದೆ. ಸನಾತನ ಧರ್ಮದ ಅಪಾರವಾದ ಆಧ್ಯಾತ್ಮಿಕ ಸಂಪತ್ತಿಗೆ ಈ ಶಕ್ತಿಯಿದೆ. ಒಳ್ಳೆಯದನ್ನೆಲ್ಲ ಉಳಿಸಿಕೊಂಡು, ಬೇಡವಾದದ್ದನ್ನು ಬಿಸುಟು ನಡೆಯುವ ಈ ಧರ್ಮ ಯಾವುದೋ ಕಾಲದಲ್ಲಿ, ಯಾವುದೋ ಸನ್ನಿವೇಶದಲ್ಲಿ ಅಸ್ತಿತ್ವದಲ್ಲಿದ್ದ ನಂಬಿಕೆಗಳನ್ನೂ ಆಚರಣೆಗಳನ್ನೂ ಸಾರ್ವಕಾಲಿಕ ಎಂದು ಸಮರ್ಥಿಸುವುದಿಲ್ಲ. ಯೋಗಿಗಳ ಪ್ರಾಯೋಗಿಕವಾದ ಜ್ಞಾನಕ್ಕೆ ತರ್ಕದ ಬೆಂಬಲವನ್ನು ಕೊಟ್ಟಿರುವ ಈ ಪಾರದರ್ಶಕ ಧರ್ಮವು ಒಂದು ವಿಜ್ಞಾನದಂತೆ. ಅದರಿಂದಲೇ ಈ ಧರ್ಮದಲ್ಲಿ ಮುನ್ನಡೆಯು ಸಾಧ್ಯ. ಇಂತಹ ಅತ್ಯಂತ ಪ್ರಾಚೀನವಾದ, ಗತಿಶೀಲವಾದ, ಆಧ್ಯಾತ್ಮಿಕ ಜ್ಞಾನದ ಉತ್ತುಂಗ ಶಿಖರವನ್ನು ಹತ್ತು ಸಾವಿರ ವರ್ಷಗಳಷ್ಟು ಹಿಂದೆಯೇ ತಲಪಿದ ಸನಾತನ ಧರ್ಮವು ಇಂದಿನ ತಲೆಮಾರಿನ ಅವಜ್ಞೆಗೆ ಗುರಿಯಾಗಿದೆ ಎಂಬುದು ಕಳವಳಕಾರಿಯಾದ ವಿಷಯ. ಸನಾತನ ಧರ್ಮದ ಮಹೋನ್ನತ ಸಾಧನೆಗಳನ್ನೂ ವಿಚಾರಗಳನ್ನೂ ನಾವು ಯುವ ಜನಾಂಗದ ಅರಿವಿಗೆ ತರದೆ ಮತಾಂತರ ತಂತ್ರಕ್ಕೆ ಅವರನ್ನು ಬಲಿಯಾಗಿಸುತ್ತಿದ್ದೇವೆ. ಅಷ್ಟೇ ಅಲ್ಲದೆ ಜಾಗತಿಕ ಪ್ರಭಾವದಿಂದ ಪಾಶ್ಚಾತ್ಯರ ಅನುಕರಣೆಯಲ್ಲಿ ತಲ್ಲೀನವಾಗಿಹೋಗಿರುವ ನಮ್ಮ ಯುವಜನಾಂಗವು ಮಾನಸಿಕವಾಗಿ ತಮಗೆ ತಾವೇ ಪರಕೀಯವಾಗಿ ಹೋಗಿದೆ.

ಪಾಶ್ಚಾತ್ಯ ದೇಶಗಳಿಗೆ ಹೋಗುವ ನಮ್ಮ ಯುವಕರಿಗೆ ಅಲ್ಲಿಯವರು ಸನಾತನ ಧರ್ಮದ ಬಗ್ಗೆ ಅವಹೇಳನಕಾರಿಯಾಗಿ ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡಲು ಆಗುತ್ತಿಲ್ಲ. ಸನಾತನ ಧರ್ಮದ ಮೂಲಭೂತ ಸಿದ್ಧಾಂತಗಳ ಅರಿವೂ ಇಲ್ಲದ ಇಂತಹವರ ನಂಬಿಕೆ ಕೂಡ ಅದೇ ಕಾರಣಕ್ಕಾಗಿ ಶಿಥಿಲವಾಗಿರುವುದರಿಂದ ಅವರಿಗೆ ಉತ್ತರವಾದರೂ ಹೇಗೆ ಹೊಳೆದೀತು? ನಾಲ್ಕು ಕೈಗಳು, ಮೂರು ತಲೆಗಳು, ಆನೆಯ ತಲೆಯಿರುವ ದೇವರುಗಳೇ ನಿಮ್ಮ ದೇವರುಗಳಲ್ಲವೆ? ಎಂಬ ವ್ಯಂಗ್ಯದ ಪ್ರಶ್ನೆಗಳಿಗೆ 'ದೇವನೊಬ್ಬ ರೂಪ ಹಲವು' ಎಂದು ವಿವಿಧ ಶ್ರೇಣಿಯ ಸೃಷ್ಟಿಯ ಅಸ್ತಿತ್ವದ ಬಗ್ಗೆಯಾಗಲಿ, ಅವುಗಳ ಸಾಂಕೇತಿಕವಾದ ಅರ್ಥಗಳ ಬಗ್ಗೆಯಾಗಲಿ, ಅವುಗಳ ತಾಂತ್ರಿಕ ನೆಲೆಯ ಅರ್ಥವಾಗಲಿ, ಪೌರಾಣಿಕ ಕಥೆಗಳಿಗೆ ಇರುವ ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕ ಅರ್ಥಗಳ ಕಲ್ಪನೆಯಾಗಲಿ, ಯೋಗಿಗಳ ಅತಿಮಾನುಷ ಅನುಭವಗಳ ಬಗ್ಗೆಯಾಗಲಿ, ಸಾಕಾರದ ಕಲ್ಪನೆಯ ಹಿಂದೆ ಇರುವ ನಿರಾಕಾರ ಹಾಗೂ ವಿಭುತ್ವದ ಬಗ್ಗೆಯಾಗಲೀ ಅರಿವೇ ಇಲ್ಲದಿರುವ ಈ ಯುವಕರು ಲಘುವಾದ ಟೀಕೆಗಳಿಗೆ ಹೇಗೆ ತಾನೆ ಉತ್ತರವನ್ನು ಕೊಡಬಲ್ಲರು? ಅರವಿಂದರು, ವಿವೇಕಾನಂದರು, ದಯಾನಂದ ಸರಸ್ವತಿ ಮುಂತಾದ ಅನೇಕ ಜ್ಞಾನಿಗಳು ಸನಾತನ ಧರ್ಮದ ತಿರುಳನ್ನು ಎತ್ತಿ, ಅದನ್ನು ಪುನರ್ವ್ಯಾಖ್ಯಾನ ಮಾಡಿ, ಅದರ ಮಹತ್ತ್ವವನ್ನು ವಿಶ್ವಕ್ಕೆ ತೋರಿಸಿ ಬೆರಗುಗೊಳಿಸಿದರು. ಅವರ ಪ್ರತಿಪಾದನೆಗಳನ್ನು ನಮ್ಮ ಯುವಜನಾಂಗವು ಓದಿ, ತಿಳಿದು ಮನನ ಮಾಡಬೇಕಾಗಿದೆ. ಆಗ ಮಾತ್ರ ಅವರಿಗೆ ಸತ್ಯದ ಅರಿವಾಗಿ ತಮ್ಮ ಧರ್ಮದ ಬಗ್ಗೆ ಆತ್ಮವಿಶ್ವಾಸವು ಮೂಡಿ ಅದರ ಬಗ್ಗೆ ಅಭಿಮಾನ ಅರಳುತ್ತದೆ. ಹೀಗೆ ಸನಾತನ ಧರ್ಮದ ತತ್ತ್ವ ಮತ್ತು ಅನುಷ್ಠಾನಗಳ ಪರಿಚಯವು ಪ್ರತಿಯೊಬ್ಬ ಹಿಂದೂವಿಗೂ ಆಗಬೇಕಾಗಿದೆ. ಅಷ್ಟು ಮಾತ್ರವಲ್ಲದೆ ಸನಾತನ ಧರ್ಮದ ತತ್ತ್ವಗಳು ಹಾಗೂ ಅನುಷ್ಠಾನಗಳು ಪ್ರತಿಯೊಬ್ಬ ಹಿಂದೂವಿನ ಜೀವನದಲ್ಲಿ ಪ್ರಾಯೋಗಿಕವಾಗಿ ಸಮಾವೇಶಗೊಂಡು ಬದುಕು ಸುಂದರವಾಗಬೇಕಾಗಿದೆ. ಇಂದಿನ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪರಿಸ್ಥಿತಿಯಲ್ಲಿ ಕಂಡುಬರುತ್ತಿರುವ ಮತೀಯ ವೈಷಮ್ಯಗಳು ಹಾಗೂ ಸಂಕುಚಿತ ಭಾವನೆಗಳಿಂದ ಪಾರಾಗಲು ಸನಾತನ ಧರ್ಮದ ಬಗ್ಗೆ ಸರಿಯಾದ ಜ್ಞಾನವು ಈ ದೇಶದಲ್ಲಿರುವ ಹಾಗೂ ವಿದೇಶಗಳಲ್ಲಿ ನೆಲೆಸಿರುವ ಎಲ್ಲ ಹಿಂದೂಗಳಿಗೂ ಅಗತ್ಯವಾಗಿದೆ. ಚರಿತ್ರೆಯಲ್ಲಿ ಸಾವಿರಾರು ವರ್ಷಗಳ ಕಾಲ ಅವರ್ಣನೀಯವಾದ ದಾಳಿಗಳಿಂದ ಕಷ್ಟವನ್ನನುಭವಿಸಿದ ಹಿಂದುಗಳಲ್ಲಿ ಈಗ ಆತ್ಮಸ್ಥೈರ್ಯವು ಕುಗ್ಗಿ, ಕ್ಷಾತ್ರತೇಜವೇ ಇಲ್ಲದಂತಾಗಿದೆ. ಮೊದಲು ಅವರು ತಾವು ಯಾರು, ತಮ್ಮ ಧರ್ಮ ಯಾವುದು ಎಂಬುದನ್ನೆಲ್ಲ ತಿಳಿದುಕೊಂಡು ಆ ಧರ್ಮವನ್ನು ಉಳಿಸಲು ಹಿಂದಿನವರು ಮಾಡಿರುವ ತ್ಯಾಗ, ಬಲಿದಾನಗಳನ್ನು ಅರಿತು, ಸ್ಫೂರ್ತಿಗೊಂಡು, ಮೇಲೇಳಬೇಕು. ಸನಾತನ ಧರ್ಮವು ಇಷ್ಟೇ ಎಂದು ಕೆಲವೇ ವಾಕ್ಯಗಳಲ್ಲಿ ಅಥವಾ ಪುಟಗಳಲ್ಲಿ ಹೇಳಲು ಸಾಧ್ಯವಿಲ್ಲ. ಆಳವಾದ ಅಧ್ಯಯನ ಮಾಡಿ, ಈ ವಿಚಾರಗಳನ್ನು ತಿಳಿಯಬೇಕು. ಅದಕ್ಕೆ ಸಮಯವಿಲ್ಲದವರು ತಮ್ಮ ಧರ್ಮದ ಬಗ್ಗೆ ಸ್ಫೂರ್ತಿದಾಯಕವಾದ ವಿಚಾರಗಳನ್ನು ತಿಳಿದುಕೊಂಡು ಅದರ ಬಗ್ಗೆ ಸಾಮಾನ್ಯ ಜ್ಞಾನವನ್ನಾದರೂ ಹೊಂದಿರಬೇಕು.

ಭಾರತೀಯರೇ ಸನಾತನ ಧರ್ಮದ ಬಗ್ಗೆ ನಿಂದ್ಯವಾದ ಮಾತುಗಳನ್ನು ಆಡುತ್ತಿರುವ ಈ ಸಂದರ್ಭದಲ್ಲಿ ಅತ್ಯಂತ





ದಯಾನಂದ ಸರಸ್ವತಿ

ಪ್ರಾಚೀನವಾದ ಹಿಂದೂ ಸಂಸ್ಕೃತಿಯ ಮಹತ್ತ್ವವನ್ನೂ ಪ್ರಾಚೀನ ಭಾರತದ ಸಾಧನೆಗಳನ್ನೂ ಮುಕ್ತಕಂಠದಿಂದ ಪ್ರಶಂಸಿಸಿದ ಪಾಶ್ಚಾತ್ಯ ವಿದ್ವಾಂಸರೂ ಪ್ರವಾಸಿಗಳೂ ಇಲ್ಲದಿಲ್ಲ. ವಿಲ್ ಡ್ಯೂರಾಂಟ್‌ನಂತಹ ಶ್ರೇಷ್ಠ ಚರಿತ್ರಕಾರ ಹೇಳಿರುವ ಮಾತುಗಳನ್ನು ಗಮನಿಸಬೇಕು. ಭಾರತದ ಬಗ್ಗೆ ನೂರಾರು ಗ್ರಂಥಗಳನ್ನು ಶ್ರದ್ಧೆಯಿಂದ ಅಧ್ಯಯನ ಮಾಡಿ ಸಿದ್ಧತೆ ಮಾಡಿಕೊಂಡಷ್ಟೂ 5,000 ವರ್ಷಗಳಷ್ಟು ದೀರ್ಘಕಾಲದ ನಾಗರಿಕತೆ, ಕೊನೆಮೊದಲಿಲ್ಲದೆ ಸಮೃದ್ಧವಾಗಿ ಬೆಳೆದು ನಿಂತಿರುವ ತತ್ತ್ವಶಾಸ್ತ್ರ, ಸಾಹಿತ್ಯ, ಧರ್ಮಶಾಸ್ತ್ರ, ಕಲೆ ಹಾಗೂ ಭಗ್ನಾವಶೇಷಗಳಿಂದ ಮನಸೂರೆಗೊಳ್ಳುವ ವಾಸ್ತುಶಿಲ್ಪ, ಇವೆಲ್ಲವುಗಳ ಮುಂದೆ ತನ್ನ ತಿಳಿವಳಿಕೆ ಬಹಳ ಅತ್ಯಲ್ಪ ಹಾಗೂ ಅಪೂರ್ಣ ಎನ್ನುತ್ತ, ಭಾರತದೇಶವು ನಮ್ಮ (ಐರೋಪ್ಯರ) ಮೂಲ ಜನಾಂಗದ ತವರೂರು ಎಂತಲೂ ಹೇಳಬಹುದು, ಸಂಸ್ಕೃತ ಭಾಷೆಯು ಎಲ್ಲ ಐರೋಪ್ಯ ಭಾಷೆಗಳಿಗೆ ಮಾತೃಸ್ಥಾನದಲ್ಲಿದ್ದು, ತತ್ತ್ವಶಾಸ್ತ್ರಕ್ಕೆ ಹಾಗೂ ಅರಬ್ಬರ ಮುಖಾಂತರ ತಾವು ಪಡೆದುಕೊಂಡ ಗಣಿತಶಾಸ್ತ್ರಕ್ಕೂ ಭಾರತವೇ ಮೂಲ ಎನ್ನುತ್ತಾನೆ. ಅಷ್ಟೇ ಅಲ್ಲದೆ ಬುದ್ಧನ ನೀತಿಶಾಸ್ತ್ರಗಳು ಕ್ರೈಸ್ತಧರ್ಮದಲ್ಲಿ ಅಡಕಗೊಂಡಿರುವುದರಿಂದ ಭಾರತ ನಮ್ಮ ತಾಯಿನಾಡು ಎನ್ನುತ್ತಾನೆ. ತಮ್ಮ ಪ್ರಜಾಪ್ರಭುತ್ವಕ್ಕೂ ಭಾರತವೇ ಮೂಲ ಸ್ಫೂರ್ತಿ ಎನ್ನುವ ಆ ಇತಿಹಾಸಜ್ಞನು ಭಾರತಾಂಬೆಯು ಬಹಳಷ್ಟು ವಿಷಯಗಳಲ್ಲಿ ನಮ್ಮೆಲ್ಲರ ತಾಯಿ ಎಂದೇ ಹೇಳಬಹುದು ಎಂದು ಮುಕ್ತ ಮನಸ್ಸಿನಿಂದ ಹೇಳಿದ್ದಾನೆ. ವೇದಗಳಿಂದ ಶೋಪೆನ್‌ಹೋವರ್ ಮತ್ತು ಬರ್ಗ್‌ಸನ್‌ನಂತಹ ತತ್ತ್ವಶಾಸ್ತ್ರಜ್ಞರನ್ನು ಬೆಳೆಸಿದ ನಾಡು ಭಾರತ. ಅನೇಕ ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞರು ತಮ್ಮೆಲ್ಲ ಶ್ರೇಷ್ಠ ಸಾಧನೆಗಳಿಗೆ ಭಾರತವೇ ಪ್ರೇರಣೆ ಎಂದಿದ್ದಾರೆ. ಜಗತ್ತೇ ಬೆರಗಿನಿಂದ ನೋಡಿದ ಅತ್ಯಂತ ಶ್ರೇಷ್ಠವಾದ ಭಾರತೀಯ ಸಂಸ್ಕೃತಿಯ ಬಗ್ಗೆ ವಿದೇಶದ ವಿದ್ವಾಂಸರು ಹಾಗೂ ಇತಿಹಾಸಜ್ಞರು ಹಾಡಿ ಹೊಗಳಿರುವಾಗ ಆ ವಿಷಯದ ಬಗ್ಗೆ ಅವಜ್ಞೆಯನ್ನು ತೋರಿಸುತ್ತಿರುವ ಇಂದಿನವರನ್ನು ಭಾರತೀಯ ಸಂಸ್ಕೃತಿಗೆ ಅಭಿಮುಖರನ್ನಾಗಿ ಮಾಡುವುದು ಇಂದಿನ ಆದ್ಯ ಕರ್ತವ್ಯವಾಗಿದೆ.

ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ಈ ಮಾತುಗಳನ್ನು ಸ್ಮರಿಸಬೇಕು: "ತಿಳಿಯಿರಿ, ಯಾವಾಗ ಒಬ್ಬ ಮನುಷ್ಯ ತನ್ನನ್ನೇ ತಾನು ದ್ವೇಷಿಸಿಕೊಳ್ಳುವ ಸ್ಥಿತಿಗೆ ಬಂದಿದ್ದಾನೆಯೋ ಆಗ ಕೊನೆಯ ಹೊಡೆತವೂ ಬಿದ್ದಂತಾಗಿದೆ ಎಂದರ್ಥ. ಯಾವಾಗ ಒಬ್ಬಾತ ತನ್ನ ಪೂರ್ವಿಕರ ಬಗ್ಗೆ ನಾಚಿಕೊಳ್ಳಲು ತೊಡಗುತ್ತಾನೆಯೋ ಆಗ ಆತನ ಅಂತ್ಯ ಸನ್ನಿಹಿತವಾದಂತೆಯೇ. ಇಲ್ಲಿ ನೋಡಿ ನನ್ನನ್ನು. ಹಿಂದೂಗಳ ಪೈಕಿ ಕಟ್ಟಕಡೆಯವರಲ್ಲಿ ಒಬ್ಬ ನಾನು; ಆದರೆ ನನ್ನ ಜನಾಂಗದ ಬಗ್ಗೆ ಹೆಮ್ಮೆಪಡುವವ ನಾನು. ನನ್ನ ಪೂರ್ವಿಕರ ಬಗ್ಗೆ ನನಗೆ ಹೆಮ್ಮೆಯಿದೆ. ನನ್ನನ್ನೊಬ್ಬ ಹಿಂದೂವೆಂದು ಹೇಳಿಕೊಳ್ಳಲು ನನಗೆ ಹೆಮ್ಮೆ. ನಿಮ್ಮ ನಿಕೃಷ್ಟ ಸೇವಕರಲ್ಲಿ ನಾನು ಒಬ್ಬನೆಂದುಕೊಳ್ಳಲು ನನಗೆ ಹೆಮ್ಮೆ ನಿಮ್ಮೀ ದೇಶಕ್ಕೆ ಸೇರಿದವನೆಂಬ ಹೆಮ್ಮೆ ನನ್ನದು... ಈ ಜಗತ್ತು ಕಂಡಿರುವ ಅತ್ಯುಜ್ಜ್ವಲ ಋಷಿಗಳ ಸಂತಾನ ನೀವು! ಆದ್ದರಿಂದ, ನಿಮ್ಮಲ್ಲಿ ನೀವು ನಂಬಿಕೆ ತಾಳಿ. ನಿಮ್ಮ ಪೂರ್ವಜರ ಬಗ್ಗೆ ನಾಚಿಕೊಳ್ಳುವ ಬದಲು, ಅವರ ಕುರಿತಾಗಿ ಹೆಮ್ಮೆಪಟ್ಟುಕೊಳ್ಳಿ..."

"ಹಿಂದೂಗಳು ತಮ್ಮ ಪೂರ್ವಚರಿತ್ರೆಯನ್ನು ಮರೆತಿರುವವರೆಗೂ ನಮ್ಮ ಈ ರಾಷ್ಟ್ರ ಒಂದು ಮಂಕುಹಿಡಿದ ಸ್ಥಿತಿಯಲ್ಲೇ ಇತ್ತು. ಅವರು ತಮ್ಮ ಪೂರ್ವಚರಿತ್ರೆಯನ್ನು ಅವಲೋಕಿಸಿದೊಡನೆಯೇ ಎಲ್ಲೆಡೆಯೂ ಹೊಸ ಜೀವಂತಿಕೆಯ ದರ್ಶನವಾಯಿತು. ಈ ಗತಕಾಲದಿಂದಲೇ ಭವಿಷ್ಯವನ್ನು ರೂಪಿಸಬೇಕಾಗಿರುವುದು; ಈ ಭೂತಕಾಲವೇ ಭವಿಷ್ಯವಾಗಿ ಪರಿಣಮಿಸುತ್ತದೆ. ಆದಕಾರಣ ಹಿಂದೂಗಳು ಗತಕಾಲವನ್ನು ಅಧ್ಯಯನ ಮಾಡಿದಷ್ಟೂ, ಅವರ ಭವಿಷ್ಯವು ಹೆಚ್ಚು ಉಜ್ಜ್ವಲವಾಗುತ್ತದೆ ಮತ್ತು ಆ ಗತಕಾಲದ ವಾಸ್ತವಿಕತೆಯನ್ನು ಪ್ರತಿಯೊಬ್ಬರ ಮನೆಬಾಗಿಲೆಗೆ ತಲಪಿಸುವ ಯಾವನೇ ಆದರೂ ತನ್ನ ದೇಶದ ಪಾಲಿಗೆ ಪರಮ ಉಪಕಾರಿಯಾಗುತ್ತಾನೆ."

ನಂ. ೫೭೩, ೩ನೇ ಮಹಡಿ, ೨೦ನೇ ಮುಖ್ಯರಸ್ತೆ, ೮ನೇ ಬ್ಲಾಕ್,
ಕೋರಮಂಗಲ, ಬೆಂಗಳೂರು–೫೬೦೦೯೫.



ಉನ್ನತ ದರ್ಜೆಯ ಪೊಲೀಸ್ ಅಧಿಕಾರಿಯಾಗಿ (ಡಿ.ಜಿ.ಪಿ) ದುಡಿದು ಅನೇಕ ಪ್ರಶಸ್ತಿಗಳನ್ನು ಪಡೆದು ನಿವೃತ್ತರಾದ **ಡಾ.ಪಿ.ಎಸ್. ರಾಮಾನುಜಂ** I.P.S ಬಹುಮುಖ ಪ್ರತಿಭಾಶಾಲಿ. ವೃತ್ತಿಯಲ್ಲಿ ಪೊಲೀಸ್ ಅಧಿಕಾರಿಯಾದರೂ ಪ್ರವೃತ್ತಿಯಲ್ಲಿ ಶ್ರೇಷ್ಠ ಸಾಂಸ್ಕೃತಿಕ ಚಿಂತಕರು. ಹಲವು ಪುಸ್ತಕಗಳ, ಕವನ ಸಂಕಲನಗಳ ಕರ್ತೃ ಆಗಿರುವ ಉತ್ತಮ ವಾಗ್ಮಿ **ಡಾ. ಪಿ.ಎಸ್. ರಾಮಾನುಜಂ** ಸಂಸ್ಕೃತ ಎಂ.ಎ. ಮುಗಿಸಿ ವೈಶೇಷಿಕ ದರ್ಶನದ ಮೇಲೆ ಮಹಾ ಪ್ರಬಂಧ ಬರೆದು ಪಿಹೆಚ್.ಡಿ ಪಡೆದುಕೊಂಡಿದ್ದಾರೆ. ಆರು ಸಂಪುಟಗಳ 'ಕಥಾ ಸರಿತ್ಸಾಗರ'ದ ಸಂಪಾದಕರೂ ಭರತನ ನಾಟ್ಯಶಾಸ್ತ್ರದಂತಹ ಮಹೋನ್ನತ ಕೃತಿಯ ಅನುವಾದಕರೂ ಆಗಿರುವ ಇವರು ಸಂಸ್ಕೃತ ಮಹಾಕವಿ ಬಾಣಭಟ್ಟನ 'ಕಾದಂಬರಿ'ಯನ್ನು ಆಧರಿಸಿ 'ಮಹಾಶ್ವೇತೆ' ಎಂಬ ಕಾದಂಬರಿಯನ್ನು ರಚಿಸಿದ್ದಾರೆ. 'ಭಾರತೀಯ ಸಾಂಸ್ಕೃತಿಕ ಪರಿಷತ್ತು' ಪ್ರಕಟಿಸಿರುವ ಡಾ. ಪಿ.ಎಸ್. ರಾಮಾನುಜಂ ಸಂಪಾದಿಸಿರುವ 'ಭಾರತೀಯ ಸಂಸ್ಕೃತಿ ದರ್ಶನ' ಎಂಬ ಕೃತಿಯಿಂದ ಅವರೇ ಬರೆದ ಈ ಲೇಖನವನ್ನು ಕೃತಜ್ಞತೆಗಳೊಂದಿಗೆ ಆಯ್ಕೆ ಮಾಡಲಾಗಿದೆ.



ಧರ್ಮಾಧಿಕಾರಿ ದಂಪತಿಯಿಂದ ಶ್ರೀಕೃಷ್ಣಗಂಧೋತ್ಸವ ಸೇವೆ

# ಕೈವಾರದಲ್ಲಿ ವಿಜೃಂಭಣೆಯ ಅಮರನಾರೇಯಣಸ್ವಾಮಿ ಬ್ರಹ್ಮರಥೋತ್ಸವ

ಶ್ರೀಕ್ಷೇತ್ರ ಕೈವಾರದ ಅಮರನಾರೇಯಣಸ್ವಾಮಿ ಬ್ರಹ್ಮರಥೋತ್ಸವವು ಫಾಲ್ಗುಣಮಾಸದ ಹೋಳಿ ಹುಣ್ಣಿಮೆಯಂದು ವೈಭವವಾಗಿ ನಡೆಯಿತು. ದೇವಾಲಯವನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ಬೆಳಗಿನಿಂದಲೇ ದೂರದ ಊರಿನ ಭಕ್ತರು ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸುತ್ತಿದ್ದರು. ರಥೋತ್ಸವಕ್ಕೆ ಮೊದಲು ಅಲಂಕೃತ ಪಲ್ಲಕ್ಕಿಯಲ್ಲಿ ಭಜನೆಯೊಂದಿಗೆ ಸದ್ಗುರು ತಾತಯ್ಯನವರ ಉತ್ಸವ ಮೂರ್ತಿಯನ್ನು ತಂದು, ದೇವಾಲಯದ ಪ್ರಾಂಗಣದಲ್ಲಿ ಗುರುಗಳ ವತಿಯಿಂದ ಶ್ರೀಕೃಷ್ಣಗಂಧೋತ್ಸವ ವಿಶೇಷ ಸೇವೆಯನ್ನು ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ದಂಪತಿ ಶ್ರದ್ಧಾ ಭಕ್ತಿಗಳಿಂದ ನೇರವೇರಿಸಿದರು.

ರಥವನ್ನು ವಿವಿಧ ಬಗೆಯ ಹೂಗಳಿಂದ ಸರ್ವಾಂಗ ಸುಂದರವಾಗಿ ಅಲಂಕರಿಸಲಾಗಿತ್ತು. ರಥಶಾಂತಿ ಹೋಮ, ಪೂಜೆಗಳನ್ನು ನೆರವೇರಿಸಲಾಯಿತು. ಶ್ರೀಕೃಷ್ಣಗಂಧೋತ್ಸವ ಸೇವೆಯ ಅನಂತರ ಅಲಂಕೃತಗೊಂಡಿದ್ದ ಬ್ರಹ್ಮರಥಕ್ಕೆ ಶ್ರೀದೇವಿ ತ , ಭೂದೇವಿ ಸಮೇತ ಉತ್ಸವ ವಿಗ್ರಹಗಳನ್ನು ವೇದ ಘೋಷದಲ್ಲಿ ಕರೆತರಲಾಯಿತು. ರಥದಲ್ಲಿ ದೇವರ ವಿಗ್ರಹಗಳನ್ನು ಇಡುತ್ತಿದ್ದಂತೆಯೇ ಗೋವಿಂದ ನಾಮಸ್ಮರಣೆ ಮುಗಿಲು ಮುಟ್ಟಿತು. ಭಕ್ತರು ತೇರು ಬಾಳೆಹಣ್ಣು, ಧವನವನ್ನು ತೇರಿಗೆ ಅರ್ಪಿಸಿ ಹರಿಕೆ ಸಲ್ಲಿಸಿದರು. ಕೈವಾರದ ಬಲಜಿಗರ ಪೇಟೆಯಲ್ಲಿರುವ ನರಸಿಂಹಸ್ವಾಮಿ ದೇವಾಲಯದ ತೇರನ್ನು ಈ ಸಂದರ್ಭದಲ್ಲಿ ಎಳೆಯಲಾಯಿತು.

ಶ್ರೀ ಯೋಗಿನಾರೇಯಣ ಮಠದಲ್ಲಿಯೂ ಹುಣ್ಣಿಮೆ ಪ್ರಯುಕ್ತ ವಿಶೇಷ ಪೂಜೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಬೆಳಗ್ಗೆ ಘಂಟಾನಾದ, ಗೋಪೂಜೆ, ಸುಪ್ರಭಾತದೊಂದಿಗೆ ಪೂಜೆಗಳು ಆರಂಭವಾಗಿ, ಸದ್ಗುರು ತಾತಯ್ಯನವರಿಗೆ ವಿಶೇಷ ಅಭಿಷೇಕ, ಅಷ್ಟಾವಧಾನ ಸೇವೆ ಸಲ್ಲಿಸಲಾಯಿತು. ನಾದಸುಧಾರಸ ಸಾಂಸ್ಕೃತಿಕ ವೇದಿಕೆಯಲ್ಲಿ ಬೆಳಗಿನಿಂದಲೇ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ರಾತ್ರಿ ಮದನಪಲ್ಲಿಯ ರಮಾದೇವಿ ಭಾಗವತಾರಿಣಿರವರಿಂದ ಹರಿಕಥೆ, ವಿದ್ವಾನ್ ವೆಂಕಟಮುನಿಯಪ್ಪ ತಂಡದವರಿಂದ ಬುರ್ರಕಥೆ ನಡೆಯಿತು. ರಥೋತ್ಸವದಲ್ಲಿ ಕರ್ನಾಟಕ, ಆಂಧ್ರ, ತಮಿಳುನಾಡಿನಿಂದ ಸಹಸ್ರಾರು ಭಕ್ತರು ಆಗಮಿಸಿದ್ದರು. ಕೈವಾರ ಮತ್ತು ಸುತ್ತಮುತ್ತಲ ಗ್ರಾಮಸ್ಥರು ಉಪಸ್ಥಿತರಿದ್ದರು.



ಅಮರನಾರೇಯಣಸ್ವಾಮಿ ಬ್ರಹ್ಮರಥೋತ್ಸವದಲ್ಲಿ ಪಾಲ್ಗೊಂಡಿದ್ದ ಭಕ್ತಸಮೂಹ



# ಕೈವಾರ ತಾತಯ್ಯನವರ ರಥೋತ್ಸವ

ಶ್ರೀಕಾಲಜ್ಞಾನಿ, ವರಕವಿ, ಸದ್ಗುರು ಶ್ರೀ ಯೋಗಿನಾರೇಯಣ ಯತೀಂದ್ರ ತಾತಯ್ಯನವರ ರಥೋತ್ಸವವನ್ನು ಶ್ರದ್ಧಾಭಕ್ತಿಗಳಿಂದ ಆಚರಿಸಲಾಯಿತು. ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೇರವೇರಿಸಲಾಯಿತು.

ಶ್ರೀ ಯೋಗಿ ನಾರೇಯಣರ ಮಠದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀ ತಾತಯ್ಯನವರ ಮೂಲ ಬೃಂದಾವನವನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ಸದ್ಗುರುಗಳ ಉತ್ಸವ ವಿಗ್ರಹಕ್ಕೆ ವಿಶೇಷ ಅಭಿಷೇಕ ಮತ್ತು ವೇದಘೋಷದೊಂದಿಗೆ ಅಷ್ಟಾವಧಾನ ಸೇವೆಯನ್ನು ಸಮರ್ಪಿಸಲಾಯಿತು. ಅನಂತರ ಮಹಾಮಂಗಳಾರತಿಯನ್ನು ಸಮರ್ಪಿಸಲಾಯಿತು. ಈ ಪೂಜಾ ಕೈಂಕರ್ಯದಲ್ಲಿ ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ದಂಪತಿ ಉಪಸ್ಥಿತರಿದ್ದರು. ಧರ್ಮಾಧಿಕಾರಿಗಳ ನೇತೃತ್ವದಲ್ಲಿ ಸಾಮೂಹಿಕ ನಾಮ ಸಂಕೀರ್ತನೆಯನ್ನು ಸಮರ್ಪಿಸಲಾಯಿತು.

ಪೂಜಾನಂತರ ಅಲಂಕೃತ ಪಲ್ಲಕ್ಕಿಯಲ್ಲಿ ಮಂಗಳವಾದ್ಯಗಳೊಂದಿಗೆ ಸದ್ಗುರುಗಳ ಉತ್ಸವ ವಿಗ್ರಹವನ್ನು ರಥಕ್ಕೆ ಕರೆತರಲಾಯಿತು. ರಥವನ್ನು ವಿಶೇಷ ಹೂಗಳಿಂದ ಸಿಂಗರಿಸಲಾಗಿತ್ತು. ರಥಶಾಂತಿ ಮತ್ತು ಪೂಜೆಯನ್ನು ಸಲ್ಲಿಸಲಾಯಿತು. ಭಕ್ತರು ತೇರು ಬಾಳೆಹಣ್ಣನ್ನು ತೇರಿಗೆ ಅರ್ಪಿಸಿ ಹರಿಕೆ ಸಲ್ಲಿಸಿದರು. ಭಜನೆಯಲ್ಲಿ ಭಕ್ತರು ಭಕ್ತಿಯ ಪರಾಕಾಷ್ಠೆಯಲ್ಲಿ ಮಿಂದು ಮುಳುಗಿದರು. ರಥೋತ್ಸವಕ್ಕೆ ತಾತಯ್ಯನವರ ಭಕ್ತರು ಆಂಧ್ರ ತಮಿಳುನಾಡು ಮುಂತಾದ ಕಡೆಗಳಿಂದ ಸಾವಿರಾರು ಭಕ್ತರು ಬಂದು ಸೇರುತ್ತಾರೆ.



ಪೂಜೆಯಲ್ಲಿ ಪಾಲ್ಗೊಂಡಿರುವ ಧರ್ಮಾಧಿಕಾರಿ ದಂಪತಿ

ರಾತ್ರಿಯಿಡೀ ಅಖಂಡ ಭಜನೆಗಳನ್ನು ಭಕ್ತರು ಮಾಡಿದರು. ರಥೋತ್ಸವದಲ್ಲಿ ಶ್ರೀ ವಾನರಾಶಿ ಬಾಲಕೃಷ್ಣ ಭಾಗವತರ್, ಮಠದ ಟ್ರಸ್ಟ್ ಸಮಿತಿಯ ಸದಸ್ಯರುಗಳು, ಕೈವಾರ ಮತ್ತು ಸುತ್ತಮುತ್ತಲ ಗ್ರಾಮಸ್ಥರು ಭಾಗವಹಿಸಿದ್ದರು. ನಾದಸುಧಾರಸ ಸಾಂಸ್ಕೃತಿಕ ವೇದಿಕೆಯಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ರಾತ್ರಿ ನಾದಸುಧಾರಸ ವೇದಿಕೆಯಲ್ಲಿ ಕೋಲಾರದ ಮಂಜುಳ ಭಾಗವತಾರಿಣಿ ತಂಡದವರಿಂದ ಹಾಗೂ ಕದರಿಯ ದಸ್ತಗೀರ್ ಸಾಬ್ ತಂಡದವರಿಂದ ಹರಿಕಥೆಯನ್ನು ಏರ್ಪಡಿಸಲಾಗಿತ್ತು. ರಾತ್ರಿ ಸದ್ಗುರು ಯೋಗಿನಾರೇಯಣ ತಾತಯ್ಯನವರ ಮುತ್ತಿನ ಪಲ್ಲಕ್ಕಿಯ ಉತ್ಸವವನ್ನು ಹಮ್ಮಿಕೊಳ್ಳಲಾಗಿತ್ತು.



ಕೈವಾರ ತಾತಯ್ಯನವರ ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಭಕ್ತಸಮೂಹ

# ಇಂದ್ರಿಯಗಳು ಶತ್ರುಗಳಾಗಬಾರದು

"ಮಾನವರು ಮನಸ್ಸು ಮತ್ತು ಇಂದ್ರಿಯಗಳನ್ನು ಶತ್ರುಗಳಾಗದಂತೆ ನೋಡಿಕೊಳ್ಳಬೇಕು. ಮನಸ್ಸಿನ ಖಡ್ಗದಿಂದ ಮಾಯೆಯನ್ನು ಹೊಡೆದೊಡಿಸಿ ಗೆಲುವು ಸಾಧಿಸಬೇಕು" ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ಅಭಿಪ್ರಾಯಪಟ್ಟರು.

ಕೈವಾರದ ಶ್ರೀ ಯೋಗಿನಾರೇಯಣ ಮಠದ ವತಿಯಿಂದ ಚಿಂತಾಮಣಿ ತಾಲೂಕು ಕುರಟಹಳ್ಳಿ ಗ್ರಾಮದ ಶ್ರೀ ವೀರಾಂಜನೇಯಸ್ವಾಮಿ ದೇವಾಲಯದಲ್ಲಿ ಆಯೋಜಿಸಲಾಗಿದ್ದ ಆತ್ಮಬೋಧಾಮೃತ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.


ಧರ್ಮಾಧಿಕಾರಿ ದಂಪತಿಯಿಂದ ಕಾರ್ಯಕ್ರಮ ಉದ್ಘಾಟನೆ

"ಧೂಳು ಕವಿದ ಕನ್ನಡಿಯಲ್ಲಿ ಪ್ರತಿಬಿಂಬವು ಹೇಗೆ ಕಾಣುವುದಿಲ್ಲವೋ, ಹಾಗೆಯೇ ರಾಗ, ದ್ವೇಷಗಳಿಂದ ಕೂಡಿದ ಮನಸ್ಸಿಗೆ ಮಾನವನ ನಿಜಸ್ವರೂಪವೇನೆಂದು ಅರ್ಥವಾಗುವುದಿಲ್ಲ. ನಿಜಸ್ವರೂಪವನ್ನು ಅರ್ಥಮಾಡಿಕೊಳ್ಳುವಲ್ಲಿ ಮಾಯೆಯು ಅಡ್ಡ ಬರುತ್ತದೆ. ಈ ಕಲಿಯುಗದಲ್ಲಿ ಮಾಯೆಯನ್ನು ಹೊಡೆದೊಡಿಸಲು ಇರುವ ಏಕೈಕ ಸಾಧನವೆಂದರೆ ಗುರುವಿನ ಸ್ಮರಣೆ. ಗುರುಸ್ಮರಣೆಯಿಂದ ಅಂತರಂಗವು ಶುದ್ಧತೆಯನ್ನು ಪಡೆಯುತ್ತದೆ. ಗುರುಸ್ಮರಣೆಯಿಂದ ಆತ್ಮಜ್ಞಾನವು ಉಂಟಾಗುತ್ತದೆ. ಆತ್ಮಜ್ಞಾನದಿಂದ ತನ್ನ ಪೂರ್ವದ ಕರ್ಮಬಂಧಗಳಿಂದ ಮುಕ್ತನಾಗುತ್ತಾನೆ" ಎಂದರು.

"ಇಂದ್ರಿಯಗಳ ಆಕರ್ಷಣೆಯಿಂದ ಮನಸ್ಸು ಭೋಗಾಸಕ್ತವಾಗಿ ಮಲಿನವಾಗುತ್ತದೆ. ಅಂತ್ಯವಿಲ್ಲದ ಬಯಕೆಗಳಿಂದ ಅತೃಪ್ತಿ ಉಂಟಾಗುತ್ತದೆ. ಈ ಬಯಕೆಗಳನ್ನು ಪೂರೈಸಿಕೊಳ್ಳಲು ನಾವು ಮಾಡುವ ಕರ್ಮಗಳಿಂದ ಸ್ವರ್ಗ-ನರಕ, ಪುನರ್ಜನ್ಮಗಳು ಏರ್ಪಡುತ್ತದೆ. ನಾವು ಈಗ ಮಾಡುವ ಕರ್ಮಗಳು ನಮ್ಮ ಮುಂದಿನ ಜನ್ಮಗಳನ್ನು ನಿರ್ಧರಿಸುತ್ತದೆ. ಈ ಕಾರಣದಿಂದ ವಿವೇಕಯುತವಾದ ಬದುಕನ್ನು ನಡೆಸಬೇಕು. ಹುಟ್ಟು-ಸಾವುಗಳ ಚಕ್ರಕ್ಕೆ ಬದ್ಧನಾಗದೆ ಜನ್ಮರಾಹಿತ್ಯವನ್ನು ಪಡೆಯಬೇಕಾದರೆ ಇಂದ್ರಿಯಗಳನ್ನು ಜಯಿಸಬೇಕು. ಇಂದ್ರಿಯ ನಿಗ್ರಹಕ್ಕಾಗಿ ಭಕ್ತಿಯ ಸಾಧನಾ ಮಾರ್ಗವನ್ನು ಅನುಸರಿಸಬೇಕು. ಇಂದ್ರಿಯಗಳನ್ನು ಕೆಡುದಾರಿಗೆ ಹರಿಯದಂತೆ ಮತ್ತು ಮನಸ್ಸನ್ನು ನಿಶ್ಚಲವಾದ ಗುರುತತ್ತ್ವದಲ್ಲಿ ಲೀನವಾಗುವ ಚಿಂತನೆಯನ್ನು ಮಾಡುವುದೇ ಈ ಆತ್ಮಬೋಧಾಮೃತ ಕಾರ್ಯಕ್ರಮದ ಉದ್ದೇಶ" ಎಂದರು.

ಕಾರ್ಯಕ್ರಮದಲ್ಲಿ ತಾತಯ್ಯನವರ ಹಲವಾರು ಕೀರ್ತನೆಗಳನ್ನು ಹೇಳುತ್ತಾ, ಆತ್ಮಪೂಜಾಮೃತವನ್ನು ಸಭೆಗೆ ಮನವರಿಕೆಯಾಗುವಂತೆ ತಿಳಿಸಿದರು.

ಕಾರ್ಯಕ್ರಮಕ್ಕೂ ಮೊದಲು ಗ್ರಾಮದಲ್ಲಿರುವ ಶ್ರೀ ವೀರಾಂಜನೇಯಸ್ವಾಮಿ ದೇವಾಲಯದವರೆಗೂ ಶೋಭಾಯಾತ್ರೆಯಲ್ಲಿ ಬರಲಾಯಿತು. ಗರ್ಭಗುಡಿಯಲ್ಲಿರುವ ಶ್ರೀ ವೀರಾಂಜನೇಯಸ್ವಾಮಿಗೆ ವಿಶೇಷವಾಗಿ ವಿಳೆದೆಲೆ ಹಾಗೂ ಹೂಗಳಿಂದ ಅಲಂಕರಿಸಲಾಗಿತ್ತು. ದೇವಾಲಯದಲ್ಲಿ ವಿಶೇಷ ಪೂಜೆಗಳನ್ನು ಸಲ್ಲಿಸಲಾಯಿತು. ಅನಂತರ ವೇದಿಕೆಯಲ್ಲಿ ಆತ್ಮಬೋಧಾಮೃತ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ವೀರಾಂಜನೇಯಸ್ವಾಮಿ ದೇವಾಲಯ ಟ್ರಸ್ಟ್‌ನ ಅಧ್ಯಕ್ಷ ಹಾಗೂ ಪ್ರಗತಿಪರ ರೈತ ರಾಧಾಕೃಷ್ಣ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನು ನುಡಿದರು. ಎ.ಪಿ.ಎಂ.ಸಿ. ಅಧ್ಯಕ್ಷರಾದ ಕುರುಟಹಳ್ಳಿ ಕೃಷ್ಣಮೂರ್ತಿ ಪ್ರಾರ್ಥಿಸಿದರು. ಗ್ರಾಮಸ್ಥರ ಪರವಾಗಿ ಡಾ.ಎಂ.ಆರ್. ಜಯರಾಮ್ ಅವರನ್ನು ವೇದಿಕೆಯಲ್ಲಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮಾಜಿ ಸಚಿವರಾದ ಎ. ಚೌಡರೆಡ್ಡಿ, ಕೈವಾರ ಮಠದ ಉಪಾಧ್ಯಕ್ಷ ಜೆ. ವಿಭಾಕರರೆಡ್ಡಿ, ಖಜಾಂಚಿ ಆರ್.ಪಿ.ಎಂ .ಸತ್ಯನಾರಾಯಣ್, ಶ್ರೀ ಯೋಗಿನಾರೇಯಣ ಸಂಕೀರ್ತನಾ ಯೋಜನೆ ಸಂಚಾಲಕರಾದ ವಾನರಾಶಿ ಬಾಲಕೃಷ್ಣ ಭಾಗವತರ್, ಟಿಪಿಎಸ್ ಸದಸ್ಯ ಕೃಷ್ಣಪ್ಪ, ಅಧ್ಯಾತ್ಮ ಚಿಂತಕ ಗಡದಾಸನಹಳ್ಳಿ ಈರೇಗೌಡ, ಸಂಜೀವಪ್ಪನವರ ಸೀನಪ್ಪ, ಪ್ರಕಾಶ್‌ರೆಡ್ಡಿ, ಕುರಟಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮದಿಂದ ನೂರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಉಪಸ್ಥಿತರಿದ್ದರು.


ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ಅವರಿಂದ ಆತ್ಮಬೋಧನೆ





ವ್ಯಕ್ತಿತ್ವ ವಿಕಸನ ಅಧ್ಯಾತ್ಮ ಮಾಸಪತ್ರಿಕೆ
ಮಲ್ಲಾರ
ಚಂದಾ ಪತ್ರಕ
ನೀವು ಚಂದಾದಾರರಾಗಿ !
ನಿಮ್ಮ ಬಂಧು ಮಿತ್ರರನ್ನು
ಚಂದಾದಾರರನ್ನಾಗಿ ಮಾಡಿ !

**ಕೈವಾರ ಶ್ರೀ ಯೋಗಿ ನಾರೇಯಣರ** ವಿಚಾರಗಳಿಂದ ಪ್ರೇರಣೆ ಪಡೆದು, ಭಾರತೀಯ ಸನಾತನ ಧರ್ಮ, ಸಂಸ್ಕೃತಿ, ಪರಂಪರೆಗಳನ್ನು ಕುರಿತು ಅಪೂರ್ವ ಮಾಹಿತಿಯನ್ನು ನೀಡುತ್ತಿರುವ ಜನಪ್ರಿಯ ಮಾಸಪತ್ರಿಕೆ **ಮಲ್ಲಾರ**. ಸುಲಭ ಬೆಲೆಯ ಸಮೃದ್ಧ ಸಾಹಿತ್ಯದ ರೂವಾರಿ **ಮಲ್ಲಾರ**.

ಮಲ್ಲಾರ ಚಂದಾದಾರರಾಗಲು ಕೆಳಗಿನ ಪತ್ರಕವನ್ನು ತುಂಬಿ 'Sri Yogi Nareyana Study Centre' ಹೆಸರಿನಲ್ಲಿ ಡಿಡಿ ಅಥವಾ ಚೆಕ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಿ ಚಂದಾದಾರರಾಗಿ

For Subscription - Bank Transfer/ RTGS:
Sri Yogi Nareyana Study Centre
SB A/c No. 141201011016824,
IFSC Code: BARB0VJMSRI
After Transfer Please Contact No. 94480 85975

**ಮಲ್ಲಾರ ಕಳುಹಿಸಬೇಕಾದ ನನ್ನ ವಿಳಾಸ**
ಹೆಸರು:..........................................
ವಿಳಾಸ:..........................................
..........................................
..........................................
ಪಿನ್ ಕೋಡ್ ಸಂಖ್ಯೆ: ..........................................
ಮೊಬೈಲ್ /ಫೋನ್:..........................................

- ☐ ಆಜೀವ ಚಂದಾ ರೂ. 1500/-
- ☐ 5 ವರ್ಷಗಳ ಚಂದಾ ರೂ. 500/-
- ☐ ವಾರ್ಷಿಕ ಚಂದಾ ರೂ. 140/-

ನಾನು ಡಿಡಿ /ಚೆಕ್ /ಮನಿಯಾರ್ಡರ್ ಮೂಲಕ
(ಚೆಕ್ /ಡಿಡಿ ಸಂ..........................................
ಬ್ಯಾಂಕ್..........................................)
ಚಂದಾ ಹಣವನ್ನು ಕಳುಹಿಸಿದ್ದೇನೆ.
ಸಹಿ /-

**ನಿರ್ವಾಹಕ ಸಂಪಾದಕರು**
ಮಲ್ಲಾರ ಮಾಸಪತ್ರಿಕೆ, ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಸಂಕೀರ್ಣ, ಎಂ.ಎಸ್.ಆರ್.ಐ.ಟಿ. ಪೋಸ್ಟ್, ನ್ಯೂ ಬಿಇಎಲ್ ರಸ್ತೆ, ಬೆಂಗಳೂರು-560 054.

ಜಾಹೀರಾತು ನೀಡಲು ಮತ್ತು ಚಂದಾದಾರರಾಗಲು ಸಂಪರ್ಕಿಸಿ
ಮೊ: 9916854885



ಧರ್ಮಾಧಿಕಾರಿ ದಂಪತಿಯಿಂದ ಕಾರ್ಯಕ್ರಮ ಉದ್ಘಾಟನೆ

# ಶಾಸ್ತ್ರಗಳಿಗಿಂತಲೂ ಮಿಗಿಲಾದುದು ಆತ್ಮವಿದ್ಯೆ

"ಆತ್ಮವಿದ್ಯೆ ಮತ್ತು ಬ್ರಹ್ಮವಿದ್ಯೆ ಎರಡೂ ಒಂದೇ. ಸಕಲ ಶಾಸ್ತ್ರಗಳಿಗಿಂತಲೂ ಮಿಗಿಲಾದುದು ಆತ್ಮವಿದ್ಯೆ" ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ. ಎಂ.ಆರ್.ಜಯರಾಮ್ ಅಭಿಪ್ರಾಯಪಟ್ಟರು.

ಚಿಂತಾಮಣಿ ತಾಲೂಕು ಗಾಜಲಹಳ್ಳಿ ಶ್ರೀ ಯೋಗಿನಾರೇಯಣ ದೇವಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಆತ್ಮಬೋಧಾಮೃತ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

"ಜಗತ್ತಿನಲ್ಲಿ ಎಲ್ಲವೂ ಕ್ಷಣಿಕ ಹಾಗೂ ನಶ್ವರ ಆದರೆ ಆತ್ಮವೆನ್ನುವುದು ಮಾತ್ರ ಸತ್ಯವಾದುದು. ಇದನ್ನು ಕಲಿಯುಗದಲ್ಲಿ ಅರಿತುಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣವೆಂದರೆ ಮಾಯೆ. ಪ್ರಾಪಂಚಿಕವಾದ ಮಾಯೆಯಿಂದ ಆತ್ಮತತ್ತ್ವವನ್ನು ಅರಿತುಕೊಳ್ಳಲು ಸಾಧ್ಯವಾಗುತ್ತಿಲ್ಲ. ಆತ್ಮಜ್ಞಾನವನ್ನು ಪಡೆದುಕೊಳ್ಳಲು ಯಾವುದೇ ನಿರ್ಬಂಧನೆಯಿಲ್ಲ. ಜಾತಿ, ಮತ, ಪಂಥಗಳನ್ನು ಮೀರಿರುವುದು ಆತ್ಮವಿದ್ಯೆ. ಈ ಆತ್ಮವಿದ್ಯೆಯನ್ನು ಕೇವಲ ಅನುಭಾವಿಯಾದ ಸಂತರು ಮಾತ್ರ ಬೋಧಿಸಬಲ್ಲರು. ಆತ್ಮಬೋಧೆ ಸಂತರ ಅನುಭವದ ಮಾತು. ಸಂತರ ಅನುಭವದ ಸೂತ್ರವನ್ನು ಪಾಲಿಸಿದಾಗ ಮಾತ್ರ ಲೋಕದಲ್ಲಿ ಶಾಂತಿ, ನೆಮ್ಮದಿ, ಸಾಮರಸ್ಯ, ಸೌಹಾರ್ದತೆ ಉಂಟಾಗುತ್ತದೆ" ಎಂದರು.

"ನಶ್ವರವಾದ ಲೌಕಿಕ ಸುಖಗಳ ಭೋಗಕ್ಕಾಗಿ ಹಲವು ಪಾಪಗಳನ್ನು ಮಾಡುತ್ತಾ ಎಷ್ಟೇ ದಾನ ಧರ್ಮಗಳನ್ನು ಮಾಡಿದರೂ ಪಾಪದ ಕೆಟ್ಟ ಫಲವನ್ನು ಅನುಭವಿಸಲೇ ಬೇಕಾಗುತ್ತದೆ. ಜೀವನದಲ್ಲಿ ಅನೇಕ ಸಂಕಷ್ಟಗಳು ಎದುರಾಗುತ್ತದೆ. ಇವನ್ನು ಧೈರ್ಯವಾಗಿ ಎದುರಿಸಲು ಗುರುವಿನ ಬಲಬೇಕು. ಜನನ-ಮರಣದ ಸಂದರ್ಭದಲ್ಲಿ ನಿನ್ನ ಜೊತೆ ಯಾರೂ ಇರುವುದಿಲ್ಲ, ನೀನೊಬ್ಬನೇ ಇದರ ನೋವನ್ನು ಭರಿಸಬೇಕು. ತನ್ನ ಬಲ ಕುಸಿಯುತ್ತಾ ಸೊರಗಿದಾಗ ಬಂಧುಗಳೂ ಇಲ್ಲ, ನೆಂಟರ ಬಳಗವೂ ಇಲ್ಲ, ಕುಟುಂಬದ ಸದಸ್ಯರೇ ಬೇಸರಿಸಿಕೊಳ್ಳುತ್ತಾರೆ. ಇದು ಸತ್ಯ. ಸತ್ಯ ಹೀಗಿರುವಾಗ ಶರೀರದಲ್ಲಿ ಬಲವಿರುವಾಗ ಒಂದಿಷ್ಟು ಆತ್ಮಚಿಂತನೆಯನ್ನು ಮಾಡಿ ನಿಸ್ವಾರ್ಥಿಯಾಗು. ಇಲ್ಲದಿದ್ದರೆ ಮುಂದೊಂದು ದಿನ ಮೋಸಹೋದೆನಲ್ಲ ಎಂದು ಪಶ್ಚಾತ್ತಾಪ ಪಡಬೇಕಾಗುತ್ತದೆ" ಎಂದು ಹೇಳುತ್ತಾ ಕೈವಾರ ತಾತಯ್ಯನವರು ರಚಿಸಿರುವ ಆತ್ಮಬೋಧಾಮೃತದ ಸಂದೇಶವನ್ನು ಸಭೆಗೆ ವಿವರಿಸಿದರು.

ಕಾರ್ಯಕ್ರಮಕ್ಕೂ ಮೊದಲು ಗ್ರಾಮದಲ್ಲಿರುವ ಶ್ರೀ ಯೋಗಿನಾರೇಯಣ ದೇವಾಲಯದವರೆಗೂ ನಾದಸ್ವರದೊಂದಿಗೆ ಶೋಭಾಯಾತ್ರೆಯಲ್ಲಿ ಬರಲಾಯಿತು. ಗ್ರಾಮಸ್ಥರು ದಾರಿಯುದ್ದಕ್ಕೂ ರಂಗೋಲಿ ಹಾಕಿದ್ದರು. ತಳಿರು ತೋರಣಗಳನ್ನು ಕಟ್ಟಿದ್ದರು. ದೇವಾಲಯದಲ್ಲಿ ಶ್ರೀ ಯೋಗಿನಾರೇಯಣ ತಾತಯ್ಯನವರ ಮೂರ್ತಿಗೆ ವಿಶೇಷ ಅಲಂಕಾರವನ್ನು ಮಾಡಿ ಅಷ್ಟೋತ್ತರ ಸಹಿತ ಮಹಾಮಂಗಳಾರತಿಯನ್ನು ಬೆಳಗಲಾಯಿತು. ಅನಂತರ ವೇದಿಕೆಯಲ್ಲಿ ಆತ್ಮಬೋಧಾಮೃತ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಭಜನಾಮಂಡಲಿಯ ಮಹಿಳೆಯರು ಸಾಮೂಹಿಕ ಪ್ರಾರ್ಥನೆಯನ್ನು ಮಾಡಿದರು. ಗ್ರಾಮಪಂಚಾಯಿತಿ ಸದಸ್ಯ ರಾಮಮೂರ್ತಿ ಸ್ವಾಗತಿಸಿದರು. ಶ್ರೀ ವಾನರಾಶಿ ಬಾಲಕೃಷ್ಣ ಭಾಗವತರ್ ಪ್ರಾಸ್ತಾವಿಕ ನುಡಿಗಳನ್ನು ನುಡಿದರು. ಸುತ್ತಮುತ್ತಲಿನ ಗ್ರಾಮದಿಂದ ನೂರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಉಪಸ್ಥಿತರಿದ್ದರು. ಧರ್ಮಾಧಿಕಾರಿಗಳನ್ನು ಸನ್ಮಾನಿಸಿ ಗೌರವಿಸಿದರು. ಇಡೀ ರಾತ್ರಿ ಭಜನಾ ಭಕ್ತರಿಂದ ಸಾಮೂಹಿಕ ಭಜನೆಯನ್ನು ಏರ್ಪಡಿಸಲಾಗಿತ್ತು.



ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ಅವರಿಂದ ಆತ್ಮಬೋಧನೆ



# ಆತ್ಮಚಿಂತನೆ ಮೋಕ್ಷದ ದಾರಿ

"ಆತ್ಮವಿದ್ಯೆ ಬಹಳ ಶ್ರೇಷ್ಠವಾದ ವಿದ್ಯೆ. ಆತ್ಮಚಿಂತನೆಯಿಂದ ಮೋಕ್ಷದ ದಾರಿಯು ದೊರಕುತ್ತದೆ" ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ಅಭಿಪ್ರಾಯಪಟ್ಟರು.

ತುಮಕೂರು ಜಿಲ್ಲೆ ಪಾವಗಡ ಪಟ್ಟಣದ ವಿನಾಯಕ ನಗರದಲ್ಲಿರುವ ಶ್ರೀಯೋಗಿನಾರೇಯಣ ದೇವಸ್ಥಾನದಲ್ಲಿ ಹಮ್ಮಿಕೊಳ್ಳಲಾಗಿದ್ದ ಧರ್ಮಚಿಂತನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

"ನಮ್ಮ ನಮ್ಮ ಚಿಂತನೆಯನ್ನು ನಾವು ಮಾಡಬೇಕು. ಈ ಚಿಂತನೆಯಿಂದ ನಾನು ಯಾರು, ಎಲ್ಲಿಂದ ಬಂದಿದ್ದೇನೆ, ಸಮಾಜದಲ್ಲಿ ನನ್ನ ಪಾತ್ರವೇನು ಎಂಬುದರ ಅರಿವಾಗುತ್ತದೆ. ಅಜ್ಞಾನದಿಂದ ಜ್ಞಾನದ ಬೆಳಕನ್ನು ತೋರುವವರು ಗುರು ಒಬ್ಬರೇ. ಗುರುವನ್ನು ತಂದೆ, ತಾಯಿ, ಬಂಧು ಬಳಗ ಎಂದು ತಿಳಿದು ಆತ್ಮಪೂಜೆಯನ್ನು




ಧರ್ಮಾಧಿಕಾರಿಗಳಿಂದ ಧರ್ಮಸಂದೇಶ



ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಭಕ್ತ ಸಮೂಹ

ಮಾಡಬೇಕು ಆಗ ಮಾತ್ರ ಗುರು ಒಲಿಯುತ್ತಾನೆ. ಈ ಮಾನವ ಜನ್ಮವನ್ನು ಸಾರ್ಥಕಮಾಡಿಕೊಳ್ಳದೆ ಬಿಟ್ಟರೆ ಮತ್ತೆ ಇನ್ನೆಷ್ಟು ಜೀವರಾಶಿಗಳಲ್ಲಿ ಜನ್ಮವೆತ್ತಬೇಕೋ, ಮತ್ತೆ ಯಾವಾಗ ಮಾನವಜನ್ಮ ದೊರೆಯುತ್ತದೋ ತಿಳಿಯದು. ಈ ಕಾರಣದಿಂದ ಆತ್ಮಚಿಂತನೆಯನ್ನು ಮಾಡಬೇಕು" ಎಂದರು.

ಜ್ಞಾನವು ಭಕ್ತಿಯಲ್ಲಿ ಬೆರೆಯಬೇಕು: ಅಹಂಕಾರ ತೊಲಗದೆ ವೈರಾಗ್ಯ ಬರುವುದಿಲ್ಲ. ವೈರಾಗ್ಯ ದೊಡ್ಡ ತಪಸ್ಸು. ಜ್ಞಾನದ ಬೆಂಕಿಯಿಂದ ಅಂತರಂಗದಲ್ಲಿರುವ ಶತ್ರುಗಳನ್ನು ಸುಟ್ಟುಹಾಕಬಹುದು. ಜ್ಞಾನ ಮತ್ತು ಭಕ್ತಿ ಬೇರೆ ಬೇರೆಯಲ್ಲ. ಭಕ್ತಿಯೊಂದಿಗೆ ಜ್ಞಾನ ಬೆರೆತಾಗ ಎಲ್ಲರಲ್ಲಿಯೂ ಇರುವ ಪರಮಾತ್ಮನ ಸ್ವರೂಪದ ಚೇತನವು ಕಾಣುತ್ತದೆ. ಈ ಸಮಯವು ಬಹಳ ಮಹತ್ತ್ವಪೂರ್ಣವಾದುದು. ಮಾನವ ಜನ್ಮದಲ್ಲಿ ಪ್ರತಿಯೊಬ್ಬರೂ ಗುರುಭಕ್ತಿಯಲ್ಲಿ ತೊಡಗಬೇಕು. ಗುರುಭಕ್ತಿಯಿಂದ ಆತ್ಮಚಿಂತನೆ ಪ್ರಾರಂಭವಾಗುತ್ತದೆ. ಗುರುವಿಗೆ ಮಾತ್ರ ನಿನ್ನಲ್ಲಿರುವ ಕರ್ಮಗಳನ್ನು ನಾಶಮಾಡುವ ಶಕ್ತಿಯಿದೆ. ಗುರುವಿನ ಚಿಂತನೆ ಮಾಡದಹೊರತು ಆತ್ಮಜ್ಞಾನವು ಗೋಚರವಾಗುವುದಿಲ್ಲ. ಆತ್ಮಚಿಂತನೆಯಿಂದ ಆತ್ಮಜ್ಞಾನವು ಸಿಗುತ್ತದೆ. ಇಂದು ಧರ್ಮವು ಅವನತಿಯ ಕಡೆಗೆ ಹೋಗುತ್ತಿದೆ. ಎಲ್ಲರೂ ಎಚ್ಚೆತ್ತುಕೊಳ್ಳಬೇಕಾಗಿದೆ. ಸತ್ಯವಾದ ಧರ್ಮವನ್ನು ಅನುಷ್ಠಾನಗೊಳಿಸುವುದೇ ಧರ್ಮ ಚಿಂತನೆ ಕಾರ್ಯಕ್ರಮದ ಉದ್ದೇಶ" ಎಂದರು.

ಪಂಚ ಬೀಜಾಕ್ಷರ: ತಾತಯ್ಯನವರು ಭಕ್ತರ ಅನುಕೂಲಕ್ಕಾಗಿ ಪಂಚಬೀಜಾಕ್ಷರಗಳಿಂದ ಕೂಡಿರುವ ಕೀರ್ತನೆಯನ್ನು ರಚಿಸಿದ್ದಾರೆ. ಅದೆಂದರೆ "ರಾಮ ರಾಮ ಮುಕುಂದ ಮಾಧವ, ರಾಮ ಸದ್ಗುರು ಕೇಶವ ರಾಮ ದಶರಥ ತನಯದೇವಾ ರಾಮ ಶ್ರೀನಾರೇಯಣ". ಈ ಪಂಚ ಬೀಜಾಕ್ಷರಗಳಿಂದ ಕೂಡಿರುವ ಸ್ಮರಣೆಯನ್ನು ಪ್ರತಿನಿತ್ಯ 108 ಬಾರಿ ಪಠಣೆ ಮಾಡಿದರೆ ಅದು ಸಹಸ್ರನಾಮವನ್ನು ಜಪಿಸಿದಷ್ಟು ಫಲ ಬರುತ್ತದೆ. ಎಲ್ಲೇ ಇರಿ, ಹೇಗೆ ಇರಿ, ಮನಸ್ಸಿನಲ್ಲಿ ಈ ಪಂಚಬೀಜಾಕ್ಷರದ ಪಠಣೆ ಮಾನಸಿಕವಾಗಿ ನಡೆಯುತ್ತಿರಲಿ. ಮಾನಸಿಕ ಸ್ಮರಣೆ ಮಾನಸಪೂಜೆಯಿದ್ದಂತೆ. ಎಲ್ಲಾ ಬಾಹ್ಯ ಪೂಜೆಗಳಿಗಿಂತಲೂ ಮಾನಸಪೂಜೆ ಶ್ರೇಷ್ಠವಾದುದು" ಎಂದರು. ತಾತಯ್ಯನವರು ರಚಿಸಿರುವ ಆತ್ಮಪೂಜೆಯನ್ನು ಸಭೆಗೆ ಮನವರಿಕೆಯಾಗುವಂತೆ ವಿವರಿಸಿದರು.





# ತಾತಯ್ಯನವರ ಸಂದೇಶಗಳು ಸತ್ಯದ ಸಂಕೇತಗಳು

ಹಿರಿಯ ಆಧ್ಯಾತ್ಮಿಕ ಚಿಂತಕ ಡಾ. ಬಾಬುಕೃಷ್ಣಮೂರ್ತಿ ಮಾತನಾಡಿ, "ಕೈವಾರ ತಾತಯ್ಯನವರ ಅಧ್ಯಾತ್ಮದ ಸಾಹಿತ್ಯಕ್ಕೆ ಒಂದು ವೈಶಿಷ್ಟ್ಯವಿದೆ. ಆಧ್ಯಾತ್ಮಿಕದ ಬೋಧಾಮೃತವನ್ನು ಎಲ್ಲರಿಗೂ ಅರ್ಥವಾಗುವಂತೆ ಸರಳಭಾಷೆಯಲ್ಲಿ ರಚಿಸಿ ಹಂಚಿದ್ದು ಅವರ ಮಹತ್ತ್ವದ ಕೊಡುಗೆಯಾಗಿದೆ. ತಾತಯ್ಯನವರ ಸಂದೇಶಗಳು ಎಲ್ಲರಿಗೂ ಮುಟ್ಟಬೇಕು. ತಾತಯ್ಯನವರು ಹೇಳಿರುವ ಸರಳವಾದ ಅಧ್ಯಾತ್ಮ ಜೀವನ ಪದ್ಧತಿಯನ್ನು ಸರ್ವರೂ ಅಳವಡಿಸಿಕೊಳ್ಳಬೇಕು. ತಾತಯ್ಯನವರ ಸಂದೇಶಗಳು ಸತ್ಯದ ಸಂಕೇತಗಳಾಗಿವೆ" ಎಂದರು.




ಡಾ. ಬಾಬು ಕೃಷ್ಣಮೂರ್ತಿ ಅವರಿಂದ ಧರ್ಮಸಂದೇಶ

ತಾತಯ್ಯನವರು ರಚಿಸಿರುವ ಅಮರನಾರೇಯಣ ಶತಕದ 99ನೇ ಪದ್ಯದಲ್ಲಿ ನಾಮಮುದ್ರೆಯ ಬಗ್ಗೆ ಸ್ಪಷ್ಟವಾಗಿ ತಿಳಿಸಿದ್ದಾರೆ. ಶತಕವನ್ನು ಬರೆಯುವಂತೆ ಪರಮಾತ್ಮನು ಅಪ್ಪಣೆಯನ್ನು ನೀಡಿದರು. ನಿಮ್ಮ ನಾಮಮುದ್ರೆಯನ್ನು ಅನುಗ್ರಹಿಸಿರೆಂದು ನಾನು ಬೇಡಿದೆನು. "ನಾರೇಯಣ" ಎಂಬ ನಾಲ್ಕು ಅಕ್ಷರಗಳನ್ನು ಬರೆಯೆಂಬುದಾಗಿ ಪರಮಾತ್ಮನು ಉಪದೇಶವನ್ನು ನೀಡಿದರು.

ಪರಮಾತ್ಮನ ಉಪದೇಶವನ್ನು ಮನಸ್ಸಿನಲ್ಲಿ ಊಹಿಸಿಕೊಂಡು ಗುರಿ ನೋಡಿದೆನು. ಗುಟ್ಟೆಲ್ಲವೂ ತಿಳಿಯಿತು. "ರಾ" ಎಂಬ ವರ್ಣಕ್ಕೆ ಏತ್ವವನ್ನು ಕೊಟ್ಟವರುಂಟೆ? ರಸಿಕರು ಮೆಚ್ಚುವುದಿಲ್ಲ ಎಂಬುದಾಗಿ ಪ್ರಜೆಗಳಲ್ಲಿ ಕೆಲವರು ಹೇಳಿಕೊಳ್ಳುತ್ತಾರೆ. ಆದರೆ ಶಬರಿಯ ರಕ್ಷಕನೂ ಶಾಂತಾತ್ಮನೂ ಆಗಿರುವ ಶ್ರೀರಾಮಚಂದ್ರನೇ ನಿಮ್ಮ ಮಹಾ ಮಹಿಮೆಗಳನ್ನು ತಿಳಿದುಕೊಳ್ಳಲು ಜನ ಎಷ್ಟು ಮಾತ್ರದವರು ಎಂದು ತಾತಯ್ಯನವರು ಪದ್ಯದಲ್ಲಿ ಹೇಳಿದ್ದಾರೆ" ಎಂದರು.

"ನಾಮಮುದ್ರೆಗೆ "ನಾರೇಯಣ" ಎಂಬ ನಾಲ್ಕು ಅಕ್ಷರಗಳನ್ನು ಬಳಸುವಂತೆ ಇಷ್ಟದೈವ, ಅರಾಧ್ಯದೈವವಾದ ಅಮರನಾರೇಯಣ ಸ್ವಾಮಿ ಸ್ವತಃ ಹೇಳಿದರೆಂದು, ತಾತಯ್ಯನವರು ಈ ಪದ್ಯದಲ್ಲಿ ರಚಿಸಿ ತಿಳಿಸಿದ್ದಾರೆ. "ನಾರೇಯಣ" ಎಂದಾಗ ಅದು ಬೀಜಾಕ್ಷರವಾಯಿತು. "ನಾರಾಯಣ" ಎಂದು ಉಚ್ಚರಿಸಿದಾಗ ಜಪಮಂತ್ರಪ್ರಭಾವದಲ್ಲಿ ಸಾಧನೆಯ ಬಿಗಿ ತಪ್ಪಿಹೋಯಿತು, ಪರಮಾತ್ಮನೇ ಈ ರೀತಿ ನನ್ನ ಬಾಯಲ್ಲಿ ನುಡಿಸಿದ್ದಾರೆ" ಎಂದು ಸ್ಪಷ್ಟವಾಗಿ ತಾತಯ್ಯನವರು ತಿಳಿಸಿದ್ದಾರೆ ಎಂದರು.

"ಪರಮಾತ್ಮನಿಂದ "ನಾರೇಯಣ" ಎಂಬ ನಾಮಮುದ್ರೆಯನ್ನು ಪಡೆದ ಅನಂತರ ತಾತಯ್ಯನವರು ಎಂದಿಗೂ ತಮ್ಮ ಜೀವನದಲ್ಲಿ ನಾರಾಯಣ ಪದವನ್ನು ಬಳಕೆ ಮಾಡಿಲ್ಲ. ಅವರ ಎಲ್ಲ ರಚನೆಗಳಲ್ಲಿಯೂ ಕೀರ್ತನೆ, ಶತಕಗಳಲ್ಲಿಯೂ ಅಮರನಾರೇಯಣ ಅಂಕಿತವನ್ನು ಹಾಕಿ ರಚಿಸಿದ್ದಾರೆ. "ರಾ" ಅಕ್ಷರವನ್ನು "ರೇ" ಎಂದು ಮಾಡಿದರೆ ಕೆಲವು ರಸಿಕರು ಮೆಚ್ಚದಿದ್ದರೂ ಹಾಗೂ ಆಕ್ಷೇಪ ಮಾಡಿದರೂ ತಾತಯ್ಯನವರು ಅಂಜಲಿಲ್ಲ. ಭಗವಂತ್ರನು ದಯಪಾಲಿಸಿದ "ನಾರೇಯಣ" ಬೀಜಾಕ್ಷರವನ್ನು ಉಳಿಸಿಕೊಂಡರು. ಯಾವುದೇ ಆಕ್ಷೇಪಗಳಿಗೆ ತಾತಯ್ಯನವರು ಸೊಪ್ಪುಹಾಕದೆ ತಮ್ಮ ಎಲ್ಲ ರಚನೆಗಳಿಗೆ ಆ ಪರಮಾತ್ಮನೇ ಕವಿಯೆಂದು ಘೋಷಿಸಿ ಅದೇ ನಾಮಮುದ್ರೆಯಲ್ಲಿ ಗ್ರಂಥಗಳನ್ನು ಆ ಸ್ವಾಮಿಗೆ ಅಂಕಿತ ಮಾಡಿ ಅರ್ಪಿಸಿದ್ದಾರೆ" ಎಂದರು.

ಕಾರ್ಯಕ್ರಮಕ್ಕೂ ಮೊದಲು ಶ್ರೀ ಯೋಗಿನಾರೇಯಣ ದೇವಾಲಯದಲ್ಲಿ ವಿಶೇಷ ಪೂಜೆಗಳನ್ನು ಸಲ್ಲಿಸಲಾಯಿತು. ದೇವಾಲಯವನ್ನು ವಿವಿಧ ಬಗೆಯ ಹೂಗಳಿಂದ ಅಲಂಕರಿಸಲಾಗಿತ್ತು. ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಎಸ್.ಎಸ್.ಕೆ. ಸಂಘದ ಅಧ್ಯಕ್ಷರಾದ ಜಿ.ಎಸ್. ಧರ್ಮಪಾಲ್, ದೇವಾಲಯದ ಅಧ್ಯಕ್ಷರಾದ ಗುರಪ್ಪ, ಶ್ರೀ ವಾನರಾಶಿ ಬಾಲಕೃಷ್ಣ ಭಾಗವತರ್, ಜೆ. ವಿಭಾಕರರೆಡ್ಡಿ, ಆರ್.ಪಿ.ಎಂ. ಸತ್ಯನಾರಾಯಣ್ ಮುಂತಾದವರು ಉಪಸ್ಥಿತರಿದ್ದರು.

● ವರದಿ: ಟಿ.ಎಲ್. ಆನಂದ್, ತಳಗವಾರ

■ ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ



# ‘ದಿಟವಾಗಿ ಹಸು ತಾಯಿಗಿಂತಲೂ ಹೆಚ್ಚು’

ಶೃಂಗೇರಿ ಶಾರದಾಪೀಠದ ಜಗದ್ಗುರು ಚಂದ್ರಶೇಖರ ಭಾರತೀ ಸ್ವಾಮಿಗಳು ಒಂದು ಸಂಜೆ ಬಹಳ ಹೊತ್ತು ಮೌನವಾಗಿದ್ದು, ಬಳಿಕ ಹತ್ತಿರವಿದ್ದ ಶಿಷ್ಯರೊಬ್ಬರನ್ನು ಕುರಿತು ಹೀಗೆ ಪ್ರಶ್ನಿಸಿದರು:

"ನಿಮ್ಮ ಜಿಲ್ಲೆಯ ಹಳ್ಳಿಯೊಂದರಲ್ಲಿ ಬ್ರಾಹ್ಮಣರ ಮನೆಗಳಿದ್ದು, ದನ ಕರು ಮುಂತಾದ ಪ್ರಾಣಿಗಳ ಮೃತದೇಹಗಳನ್ನು ಕೊಂಡೊಯ್ಯಲು ಅಂತ್ಯಜರು ನಿರಾಕರಿಸಿದರೆಂದೂ ಕಡೆಗೆ ಬ್ರಾಹ್ಮಣರೇ ಅವನ್ನು ಗಾಡಿಗಳಲ್ಲಿ ಹಾಕಿಕೊಂಡು ನದಿಯ ದಡದಲ್ಲಿ ತಾವೇ ಸಂಸ್ಕಾರ ನಡೆಸಿದರೆಂದೂ ಕೇಳಿದೆ. ಇದು ನಿಜವೇ?"

ಈ ಸುದ್ದಿ ಸ್ವಾಮಿಗಳವರೆಗೆ ಬಂದದ್ದು ತಿಳಿದು ಆಶ್ಚರ್ಯಪಟ್ಟು, ಆ ಶಿಷ್ಯರು "ನಿಜ, ಮಹಾಸ್ವಾಮಿ" ಎಂದರು.

ಮುಂದೆ ಈ ಸಂಭಾಷಣೆ ಹೀಗೆ ಮುನ್ನಡೆಯಿತು:

ಸ್ವಾಮಿಗಳು: "ಅನೂಚಾನವಾಗಿ ಬಂದ ಪದ್ಧತಿಯನ್ನು ಬಿಟ್ಟು ತಾವೇ ಮೃತ ಪ್ರಾಣಿಗಳ ಸಂಸ್ಕಾರ ನಡೆಸಬೇಕಾಗಿ ಬಂದುದಕ್ಕೆ ಆ ಬ್ರಾಹ್ಮಣರು ತುಂಬ ಅಸಮಾಧಾನ ಪಟ್ಟಿರಬೇಕಲ್ಲವೇ?"

ಶಿಷ್ಯರು: "ಹೌದು ಸ್ವಾಮಿ, ಅವರು ಕೋಪಗೊಂಡದ್ದು ನಿಜ."

ಸ್ವಾಮಿಗಳು: "ಅದಕ್ಕಾಗಿ ಅವರು ಪಶ್ಚಾತ್ತಾಪ ಪಡಬೇಕಾಗಿಲ್ಲವೆಂದೂ ಅದನ್ನು ಸತ್ಕಾರ್ಯವೆಂದೇ ತಿಳಿಯಬೇಕೆಂದೂ ನನ್ನ ಪರವಾಗಿ ಅವರಿಗೆ ತಿಳಿಸುತ್ತೀರಾ?"

ಶಿಷ್ಯರು: "ಅದು ಸತ್ಕಾರ್ಯ ಹೇಗಾದೀತು?"

ಸ್ವಾಮಿಗಳು: "ನೋಡಿ, ಈ ಕಾಲದಲ್ಲಿ ತಾಯಂದಿರು ತಮ್ಮ ಮಕ್ಕಳ ಪೋಷಣೆಗೆ ಸಾಕಾಗುವಷ್ಟು ಸ್ತನ್ಯವನ್ನು ಪಡೆಯುತ್ತಿಲ್ಲ. ಆದ್ದರಿಂದ ಈಗ ಮಕ್ಕಳಲ್ಲಿ ಹೆಚ್ಚಾಗಿ ಹಸುವಿನ ಹಾಲನ್ನೇ ಅವಲಂಬಿಸಿರುವುದು ಎಲ್ಲರಿಗೂ ತಿಳಿದ ವಿಷಯ. ಚಿಕ್ಕವರು, ದೊಡ್ಡವರು ಎಲ್ಲರಿಗೂ ಈಗ ಹಾಲು ಅವರ ಆಹಾರದಲ್ಲಿ ಮುಖ್ಯ ಪದಾರ್ಥ. ಹಸು ಪೂಜೆಗೂ ಅಭಿಷೇಕಕ್ಕೂ ಹಾಲು ಕೊಡುತ್ತದೆ. ಹಸುವನ್ನು ಶಾಸ್ತ್ರಗಳು ಪವಿತ್ರವೆಂದು ಸಾರಿರುವುದಿರಲಿ, ದಿಟವಾಗಿ ಹಸು ತಾಯಿಗಿಂತಲೂ ಹೆಚ್ಚು. ಆ ಪ್ರಾಣಿಯು ಸತ್ತಾಗ ಅಂತ್ಯಸಂಸ್ಕಾರ ಮಾಡುವ ಅವಕಾಶ ದೊರಕಿದರೆ, ನಾವು ಕೃತಜ್ಞರಾಗಿರಬೇಡವೇ? ಅದನ್ನು ತುಂಬ ಶ್ರೇಷ್ಠವಾದ ಕೆಲಸವೆಂದೇ ಭಾವಿಸಿ ನಾವು ಮಾಡಬೇಕು."

ಶಿಷ್ಯರು: "ಹಿಂದಿನಿಂದ ರೂಢವಾಗಿರುವ ಆಚಾರ, ಅಭ್ಯಾಸ ಮೈಗೂಡಿ ಹೋಗಿರುವುದರಿಂದ ಬದಲಾವಣೆಗೆ ಹೊಂದಿಕೊಳ್ಳುವುದು ಕಷ್ಟವಾಗುತ್ತದೆ."

ಸ್ವಾಮಿಗಳು: "ಕಷ್ಟವಾಗಬಹುದು. ಆದರೆ ಯಶಸ್ಕರವಾದಲ್ಲಿ ಖಂಡಿತ ಪ್ರಯತ್ನ ಮಾಡುವುದು ಒಳ್ಳೆಯದು. ಅಲ್ಲದೆ ಅಂತ್ಯಜರು ಮೃತಪ್ರಾಣಿಯನ್ನು ತೆಗೆದುಕೊಂಡು ಹೋಗಿ ಅದರ ಮಾಂಸವನ್ನು ತಿನ್ನುವರೆಂಬುದು ಬ್ರಾಹ್ಮಣರಿಗೆ ತಿಳಿದ ವಿಷಯ."

ಶಿಷ್ಯರು: "ನಿಜ, ನಿಜ."


ಸ್ವಾಮಿಗಳು: "ಮೃತಪ್ರಾಣಿಯನ್ನು ತೆಗೆದುಕೊಂಡು ಹೋಗುವಂತೆ ಅಂತ್ಯಜರಿಗೆ ಹೇಳುವುದರಿಂದ ಬ್ರಾಹ್ಮಣರೇ ಪರೋಕ್ಷವಾಗಿ ಅದರ ಮಾಂಸವನ್ನು ತಿನ್ನುವಂತೆ ಅಂತ್ಯಜರನ್ನು ಪ್ರಚೋದಿಸುವಂತೆ ಆಗುವುದಿಲ್ಲವೇ? ಆ ಪಾಪಕಾರ್ಯದಲ್ಲಿ ತಾವೇ ಭಾಗಿಗಳಾಗುವುದಿಲ್ಲವೇ? ಮೃತವಾದ ಗೋವುಗಳನ್ನು ಸಮಾಧಿ ಮಾಡುವುದರಿಂದ ಬೇರೆಯವರಿಗೆ ಮಾಂಸಭಕ್ಷಣೆಗೆ ಅವಕಾಶ ಮಾಡಿಕೊಡುವ ಸಂದರ್ಭವೇ ಬರುವುದಿಲ್ಲ. ಇದೇ ಒಂದು ದೊಡ್ಡ ಪ್ರಮಾದವಲ್ಲವೇ? ನೀವು ಮತ್ತೊಮ್ಮೆ ಆ ಗ್ರಾಮದ ಜನರನ್ನು ಭೇಟಿಯಾದಾಗ, ಈ ಎರಡು ದೃಷ್ಟಿಗಳನ್ನೂ ಅವರಿಗೆ ವಿವರಿಸಿರಿ. ಇಂತಹ ಸಂದರ್ಭ ಒದಗಿರುವುದು ಪರಿಣಾಮದಲ್ಲಿ ಒಳ್ಳೆಯದನ್ನೇ ಉಂಟುಮಾಡುವುದೆಂದೂ ಅದಕ್ಕಾಗಿ ಅವರು ಪಶ್ಚಾತ್ತಾಪಪಡಬೇಕಾಗಿಲ್ಲವೆಂದೂ ತಿಳಿಸಿರಿ."

'ಬ್ರಾಹ್ಮಿ', ೬೮ಬಿ, ಆಶ್ರಮ ರಸ್ತೆ, ೩ನೇ ಬ್ಲಾಕ್,
ಜಯಲಕ್ಷ್ಮೀಪುರಂ, ಮೈಸೂರು – ೫೭೦ ೦೧೨.





# ಆಶಾಪಾಶ



ಅಲ್ಲೊಂದು ಸುಂದರ ಮಂದಿರ. ಅದರಲ್ಲಿ ಒಬ್ಬ ಪಂಡಿತ ಪೂಜಾರಿ, ಎರಡು ಮೂರು ದಶಕಗಳ ಕಾಲ ನಿಷ್ಠೆಯಿಂದ ದೇವರ ಪೂಜಾಸೇವೆ ಮಾಡಿಕೊಂಡಿದ್ದ. ಈಗ ಆತನಿಗೆ 50–60 ವರ್ಷಗಳ ಮಧ್ಯಮ ವಯಸ್ಸು.

ಒಂದು ದಿನ ಒಬ್ಬ ಬಡಭಕ್ತ ಮಂದಿರಕ್ಕೆ ಬಂದ. ಆತನ ತಾಯಿ ದೈವಭಕ್ತಳಾಗಿದ್ದಳು. ಅವಳು ತನ್ನ ಆಯುಷ್ಯದ ಉದ್ದಕ್ಕೂ ಕೂಲಿ–ನಾಲಿ ಮಾಡಿ ಗಳಿಸಿದ್ದರಲ್ಲಿ ಒಂದಿಷ್ಟು ಹಣ ಉಳಿಸಿದ್ದಳು. ಅದನ್ನು ಮಗನ ಕೈಗೆ ಕೊಟ್ಟು ಹೇಳಿದಳು, "ಮಗನೇ, ಇದರಿಂದ ಮಂದಿರದ ಮಹಾದೇವನಿಗೆ ಚಿನ್ನದ ಕಿರೀಟ ಮಾಡಿಸಿ ಹಾಕು." ಹಾಗೆ ಹೇಳಿ ಮಗನಿಂದ ವಚನವನ್ನು ಪಡೆದು ಆ ಮಹಾತಾಯಿ ಅಸುನೀಗಿದಳು.

ಅವಳಿತ್ತ ಹಣ ಚಿನ್ನದ ಕಿರೀಟಕ್ಕೆ ಸಾಲದಾಗಿತ್ತು. ಮಾತೆಯ ಮಾತನ್ನು ಪೂರೈಸುವುದು ಮಗನ ಕರ್ತವ್ಯ. ಅವನಾದರೂ ಹತ್ತಾರು ವರ್ಷ ಶ್ರದ್ಧೆಯಿಂದ ದುಡಿದು ಗಳಿಸಿದ. ತಾಯಿಯ ಹಣಕ್ಕೆ ತನ್ನ ಭಕ್ತಿಯನ್ನೂ ಸೇರಿಸಿದ. ಚಿನ್ನದ ಕಿರೀಟ ಮಾಡಿಸಿದ.

ಒಂದು ದಿನ ಸಂಜೆ ಮಂದಿರಕ್ಕೆ ಬಂದು ಪೂಜಾರಿಗೆ ಹೇಳಿದ, "ಇದು ನನ್ನ ತಾಯಿಯ ಅಂತಿಮ ಆಶೆ. ಈ ಕಿರೀಟ ತೆಗೆದುಕೊಳ್ಳಿ, ದೇವರ ತಲೆಗಿಡಿ. ಒಂದು ಕ್ಷಣ ನಾನದನ್ನು ಕಣ್ತುಂಬ ನೋಡಬೇಕು" ಎಂದು ಸುಂದರವಾದ ಆ ಚಿನ್ನದ ಕಿರೀಟವನ್ನು ಪೂಜಾರಿಯ ಕೈಗಿತ್ತು ವಂದಿಸಿದ.

ಪಂಡಿತ ಪೂಜಾರಿಗೆ ಅಪಾರ ಸಂತಸ, ಭಕ್ತನನ್ನು ಮಂದಿರದ ಒಳಗೆ ಕರೆದೊಯ್ದು, ಆ ಚಿನ್ನದ ಕಿರೀಟವನ್ನು ದೇವರ ತಲೆಗಿಟ್ಟು, ಪೂಜಿಸಿ, ತೀರ್ಥ ಪ್ರಸಾದ ಕೊಟ್ಟ. ಭಕ್ತನು ಭಾವಪರವಶನಾಗಿ ಕಿರೀಟಧಾರಿ ದೇವರ ಮೂರ್ತಿಯನ್ನು ನೋಡಿದ. ಹಲವು ದಿನಗಳ ಭಕ್ತಿಯ ಕನಸು ನನಸಾಗಿತ್ತು. ತಾಯಿಯ ಆತ್ಮಕ್ಕೆ ಶಾಂತಿ ದೊರಕಿತೆಂಬ ಭರವಸೆ ಮೂಡಿತ್ತು. ಆತ ದೇವರಿಗೆ, ಪೂಜಾರಿಗೆ ಸಂತಸದಿಂದ ವಂದಿಸಿ ಹಿಂದಿರುಗಿದ.

ಹೊತ್ತು ಮುಳುಗಿತ್ತು, ಪೂಜಾರಿಯ ಮನಸ್ಸು ಹೊಯ್ದಾಡಿತ್ತು. ಈ ಕಿರೀಟವನ್ನು ಯಾರೂ ನೋಡಿಲ್ಲ. ಭಕ್ತನೂ ಹೊರಟುಹೋಗಿದ್ದಾನೆ. ಅವನಾಶೆ ಈಡೇರಿದೆ. ಅವನಿನ್ನು ತಿರುಗಿ ಬರುವ ಪ್ರಶ್ನೆಯೇ ಇಲ್ಲ. ಮಂದಿರದ ಲೆಕ್ಕಕ್ಕೂ ಸೇರಿಲ್ಲ. ಹೀಗಿರುವಾಗ ನಾನು ಇದನ್ನೇಕೆ ನನ್ನದಾಗಿಸಿಕೊಳ್ಳಬಾರದು? ಇಪ್ಪತ್ತೈದು ವರ್ಷಗಳ ಅನಂತರ ಇಂಥ ಅವಕಾಶ ದೊರಕಿದೆ ಎನ್ನುತ್ತ ಮಂದಿರದ ಬಾಗಿಲು ಹಾಕಿ ಮನೆಗೆ ನಡೆದ.

ರಾತ್ರಿ ನಿದ್ರೆ ಬರಲಿಲ್ಲ. ಮನಸ್ಸೆಲ್ಲ ಮಂದಿರದಲ್ಲೇ, ದೇವರ ಮೇಲಲ್ಲ! ದೇವರ ತಲೆಯ ಕಿರೀಟದ ಮೇಲೆ! ಮಧ್ಯರಾತ್ರಿ ಒಂದು ಗಂಟೆಗೆ ಎದ್ದ. ಮಂದಿರಕ್ಕೆ ಬಂದ. ಭಗವಂತ ನಸುನಗುತ್ತಲಿದ್ದ. ಅತ್ತ ಈತ ಗಮನಿಸಲಿಲ್ಲ. ಚಿನ್ನದ ಕಿರೀಟ ಎತ್ತಿಕೊಂಡು ಹೊರಬಿದ್ದ. ಎಂದೆಂದೂ ಹರಿಯದ ಆಶಾಪಾಶಕ್ಕೆ ಸಂಸಾರದ ಬಂಧನಕ್ಕೆ ಒಳಗಾಗಿದ್ದ.

ಸಂಗ್ರಹ: ಡಾ|| ಶ್ರದ್ಧಾನಂದಸ್ವಾಮಿ

▶▶ 46ನೇ ಪುಟದಿಂದ

Tirupati Sri Venkateshwara Balajiಯಲ್ಲಿ ಈ ಅಭಿಪ್ರಾಯದೊಂದಿಗೆ ಏಕೀಭವಿಸಿದ್ದರು.

"ಹೈದರಾಲಿ ಆಲಯಗಳ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದಿರುವುದು, ಆಸಕ್ತಿ ತೋರದಿರುವುದು ಶ್ಲಾಘನೀಯ ಎನ್ನುತ್ತಾ ಆತ ಆ ರೀತಿ ಏಕೆ ಮಾಡಿದನೆಂದೂ ವಿನಂತಿಸಿದ್ದಾರೆ.

ಹೈದರಾಲಿಯ ಪರವಾಗಿ ತಿರುಮಲೆಯ ಆಲಯದ ವಿಷಯಗಳನ್ನು ಅನಿಕಾಲ ನರಸಯ್ಯ ಎಂಬಾತ ಎರಡು ವರ್ಷಗಳ ಕಾಲ ಅಂದರೆ, ಕ್ರಿ.ಶ. 1782ರಿಂದ 1784ರವರೆಗೂ ನೋಡಿಕೊಳ್ಳುತ್ತಿದ್ದರೆಂದೂ ಅದಕ್ಕೆ ಆಧಾರವೆಂದರೆ–


ಹೈದರಾಲಿ ನೇಮಿಸಿದ 'ಅಮಲುದಾರರ' ಪಟ್ಟಿಯಲ್ಲಿ ಈ ಅನಿಕಾಲ ನರಸಯ್ಯನ ಹೆಸರೂ ಇದೆಯೆಂದು ಬರೆದಿದ್ದಾರೆ. ಇನ್ನೊಂದೆಡೆ ಪ್ಲವನಾಮ ಸಂವತ್ಸರದಿಂದ ಶುಭತ್ರೋತ ಸಂವತ್ಸರದವರೆಗೂ (1781–83)ರವರೆಗೂ ಹೈದರಾಲಿಯ ಪರವಾಗಿ ಅನಿಕಾಲ ನರಸಯ್ಯ ದೇವಸ್ಥಾನದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು" (Makenzie, vol.XXV,P.76 as June 10) ಎಂದಿದೆ.


ಇದರಿಂದ ತಿಳಿಯುವುದೇನೆಂದರೆ ಹೈದರಾಲೀ, ಆಲಯಗಳನ್ನು ನಾಶಮಾಡದೇ, ಇತರ ಮುಸ್ಲಿಂರಂತೆ ಪ್ರವರ್ತಿಸದಿದ್ದರೂ ಆತನ ಅಮಲುದಾರರ ಮೂಲಕ ಆಲಯದ ಆದಾಯ ಹೆಚ್ಚು ಕಡಮೆ ಲಕ್ಷ ರೂಪಾಯಿಗಳವರೆಗೂ ಪ್ರತೀ ವರ್ಷ ಪಡೆದಿರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ.

(ಮುಂದುವರಿಯುವುದು)

# ಮಹಾಭಾರತ–6

ಕಥೆ: ಕುಮಾರ ಮೋಹನ್ ಚಲಮ್
ಕಲೆ: ಅಜಯನ್ ಸಂತೂ









Licensed to post without prepayment-WPP-102 MALLARA Monthly, APRIL-2020,
64 pages and cost Rs. 12/- RNI. No. KARBIL/2009/30225 Reg. KA/BGW-492/2018-2020
Published and Posted at Bengaluru PSO, Bengaluru-560026 on 30th of every month.

